ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331

ಡಿಸಿಎಫ್ ವಿರುದ್ಧ ಕ್ರಮ: ಸೂಚನೆ

ಮರಗಳ ರೆಂಬೆ ತೆರವು ಬಿಲ್ ಪಾವತಿಸಲು ಲಂಚದ ಬೇಡಿಕೆ ಇಟ್ಟ ಆರೋಪ

ಪ್ರಜಾವಾಣಿ ವಾರ್ತೆ

ಶಿವಕುಮಾರ್

ಬೆಂಗಳೂರು: ಬಿಬಿಎಂಪಿ ಅರಣ್ಯ ಘಟಕದ ಉಪ ಅರಣ್ಯ ಸಂರಕ್ಷಣಾಧಿಕಾರಿ (ಡಿಸಿಎಫ್) ಬಿ.ಎಲ್.ಜಿ. ಸ್ವಾಮಿ ವಿರುದ್ಧ ಹಲವು ದೂರುಗಳು ಬರುತ್ತಿದ್ದು, ಈ ಬಗ್ಗೆ ಪರಿಶೀಲಿಸಿ ಕ್ರಮ ತೆಗೆದುಕೊಳ್ಳುವಂತೆ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರಿಗೆ ಬೆಂಗಳೂರು ಅಭಿವೃದ್ಧಿ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನಿರ್ದೇಶನ ನೀಡಿದ್ದಾರೆ.

‘ಯಲಹಂಕ ವಲಯ, ಹೆಬ್ಬಾಳ ಮತ್ತು ಶಿವಾಜಿನಗರ ವಿಧಾನಸಭಾ ಕ್ಷೇತ್ರಗಳಲ್ಲಿ ‘ಕಳೆದ ಮೇ 7ರಿಂದ ಜೂನ್ 25ರ ಅವಧಿಯಲ್ಲಿ ಭಾರಿ ಮಳೆ ಗಾಳಿಗೆ ಮುರಿದು ಬಿದ್ದ ಮರದ ರೆಂಬೆ, ಕೊಂಬೆಗಳನ್ನು ತೆರವುಗೊಳಿಸುವ ಕಾಮಗಾರಿಯ ಗುತ್ತಿಗೆ ಹಣ ಪಾವತಿಸಲು ಬಿಲ್ ಅನ್ನು ಹಿರಿಯ ಅಧಿಕಾರಿಗಳಿಗೆ ಸಲ್ಲಿಸುವಂತೆ ಮನವಿ ಮಾಡಿದಾಗ ಬಿ.ಎಲ್.ಜಿ. ಸ್ವಾಮಿ ಶೇ 15ರಷ್ಟು ಕಮಿಷನ್‌ಗೆ ಬೇಡಿಕೆ ಇಟ್ಟದ್ದಾರೆ’ ಎಂದು ಆರೋಪಿಸಿ ಗುತ್ತಿಗೆದಾರ ವಿ. ಶ್ರೀನಿವಾಸ ಅವರು ಉಪ ಮುಖ್ಯಮಂತ್ರಿಗೆ ದೂರು ನೀಡಿದ್ದರು.

‘ದಲಿತ ಕುಟುಂಬದವನಾಗಿರುವ ನಾನು ಆರ್ಥಿಕ ಸಂಕಷ್ಟದಲ್ಲಿದ್ದೇನೆ. ಉಪ ಅರಣ್ಯ ಸಂರಕ್ಷಣಾಧಿಕಾರಿ ಕಚೇರಿಗೆ ಬಿಲ್ ಅನ್ನು ಈ ಹಿಂದೆಯೇ ಸಲ್ಲಿಸಿದ್ದು, ನ. 22ರಂದು ಬಿ.ಎಲ್.ಜಿ. ಸ್ವಾಮಿ ಅವರನ್ನು ಭೇಟಿ ಮಾಡಿದ್ದೆ. ಕಮಿಷನ್ ಕೊಡಲು ಆಗುವುದಿಲ್ಲ ಎಂದು ನಾನು ಹೇಳಿದಾಗ ಏರುಧ್ವನಿಯಲ್ಲಿ ಕೂಗಾಡಿದ ಅವರು, ನನ್ನನ್ನು ಕಚೇರಿಯಿಂದ ಹೊರಗೆ ಹಾಕಿದ್ದರು. ಅಲ್ಲದೆ, ಆ ನಂತರ ಕರ್ತವ್ಯಕ್ಕೆ ಅಡ್ಡಿಪಡಿಸಿದೆನೆಂದು ನನ್ನ ವಿರುದ್ಧವೇ ಹಲಸೂರು ಗೇಟ್ ಪೊಲೀಸ್ ಠಾಣೆಯಲ್ಲಿ ಡಿ. 2ರಂದು ಸುಳ್ಳು ಪ್ರಕರಣ ದಾಖಲಿಸಿದ್ದಾರೆ. ನಾನು ನಿರ್ವಹಿಸಿದ ಕಾಮಗಾರಿಯ ಬಿಲ್ ಪಾವತಿಸಲು ಸಂಬಂಧಪಟ್ಟ ಅಧಿಕಾರಿಗೆ ಸೂಚಿಸಬೇಕು. ಬಿಲ್ ಪಾವತಿ ಆಗದೇ ಇದ್ದರೆ ನಾನು ಆತ್ಮಹತ್ಯೆ ಮಾಡಿಕೊಳ್ಳುವ ಸ್ಥಿತಿ ಬರಬಹುದು. ಇದಕ್ಕೆ ಬಿ.ಎಲ್.ಜಿ. ಸ್ವಾಮಿಯೇ ನೇರ ಹೊಣೆಯಾಗುತ್ತಾರೆ’ ಎಂದೂ ದೂರಿನಲ್ಲಿ ಉಲ್ಲೇಖಿಸಿದ್ದರು.

ದೂರಿನ ಪ್ರತಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ, ಗೃಹ ಸಚಿವ ಜಿ. ಪರಮೇಶ್ವರ, ಬಿಬಿಎಂಪಿ ಮುಖ್ಯ ಆಯುಕ್ತರಿಗೂ ಶ್ರೀನಿವಾಸ್ ನೀಡಿದ್ದಾರೆ.

ಮರ ಕಡಿದ ಆರೋಪ- ವರದಿ ನೀಡಲು ಖಂಡ್ರೆ ಸೂಚನೆ

ಈಶ್ವರ ಖಂಡ್ರೆ

ರಾಜರಾಜೇಶ್ವರಿ ನಗರದಲ್ಲಿ ನಾಲ್ಕು ದಶಕಗಳಿಂದ ಬೆಳೆದಿದ್ದ ಮರವನ್ನು ವಿನಾ ಕಾರಣ ಕಡಿದ ಕುರಿತು ‘ಆರೋಗ್ಯಕರ ಮರ ಧರೆಗೆ: ಉಪ ಅರಣ್ಯ ಸಂರಕ್ಷಾಧಿಕಾರಿ ವಿರುದ್ಧ ದೂರು’ ಎಂಬ ಶೀರ್ಷಿಕೆಯಡಿ ‘ಪ್ರಜಾವಾಣಿ’ಯಲ್ಲಿ ಆಗಸ್ಟ್ 19ರಂದು ವರದಿ ಪ್ರಕಟವಾಗಿತ್ತು.

ಈ ವರದಿಯನ್ನು ಗಂಭೀರವಾಗಿ ಪರಿಗಣಿಸಿದ್ದ ಅರಣ್ಯ ಸಚಿವ ಈಶ್ವರ ಖಂಡ್ರೆ, ಸಂಬಂಧಿಸಿದ ಅಧಿಕಾರಿ ಮತ್ತು ಸಿಬ್ಬಂದಿ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ಸೂಚಿಸಿದ್ದರು. ಸಚಿವರ ಸೂಚನೆಯಂತೆ ಬಿಬಿಎಂಪಿ ಮುಖ್ಯ ಆಯುಕ್ತರಿಗೆ ನವೆಂಬರ್ 11ರಂದು ಪತ್ರ ಬರೆದಿರುವ ಹೆಚ್ಚುವರಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಈ ಬಗ್ಗೆ ತೆಗೆದುಕೊಂಡ ಕ್ರಮದ ಬಗ್ಗೆ ವರದಿ ನೀಡುವಂತೆ ಸೂಚಿಸಿದ್ದಾರೆ.

ಕಣಿಮಿಣಿಕೆಯಲ್ಲಿ ನಡೆದ ಫ್ಲ್ಯಾಟ್ ಮೇಳಕ್ಕೆ ಉತ್ತಮ ಪ್ರತಿಕ್ರಿಯೆ

ಬಿಡಿಎ: 175 ಫ್ಲ್ಯಾಟ್‌ಗಳ ಮಾರಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿಡಿಎ) ಕಣಿಮಿಣಿಕೆಯಲ್ಲಿ ಶನಿವಾರ ಆಯೋಜಿಸಿದ್ದ ಫ್ಲ್ಯಾಟ್ ಮೇಳಕ್ಕೆ ಉತ್ತಮ ಪ್ರತಿಕ್ರಿಯೆ ದೊರೆತಿದೆ.

ಫ್ಲ್ಯಾಟ್ ಮೇಳದಲ್ಲಿ ಸುಮಾರು 500ಕ್ಕೂ ಹೆಚ್ಚು ಸಾರ್ವಜನಿಕರು ಭಾಗವಹಿಸಿದ್ದು, 175 ಮಂದಿ ಫ್ಲ್ಯಾಟ್ ಖರೀದಿಸಿದರು. ಈ ಪೈಕಿ 75 ಮಂದಿ ಫ್ಲ್ಯಾಟ್‌ನ ಪ್ರಾರಂಭಿಕ ಠೇವಣಿಯನ್ನು ಸ್ಥಳದಲ್ಲಿಯೇ ಪಾವತಿಸಿ, ಹಂಚಿಕೆ ಪತ್ರ ಪಡೆದುಕೊಂಡರು. 25 ಮಂದಿ ಚೆಕ್ ನೀಡಿದ್ದು, ಸೋಮವಾರ ಆರ್.ಟಿ.ಜಿ.ಎಸ್. ಮೂಲಕ ಹಣ ಪಾವತಿಸಿದ ನಂತರ ಹಂಚಿಕೆ ಪತ್ರವನ್ನು ನೀಡಲಾಗುವುದು.

‘ಕಳೆದ ತಿಂಗಳು ಆಯೋಜಿಸಿದ್ದ ಮೇಳದಲ್ಲಿ 200 ಮಂದಿ ಫ್ಲ್ಯಾಟ್‌ಗಳನ್ನು ಖರೀದಿಸಿದ್ದರು. 2 ಮತ್ತು 3 ಬಿಎಚ್‌ಕೆ ಫ್ಲ್ಯಾಟ್ ಗಳನ್ನು ಹಂಚಿಕೆ ಮಾಡಲಾಯಿತು. ಫ್ಲ್ಯಾಟ್‌ಗಳಿರುವ ಸ್ಥಳ ಬೆಂಗಳೂರು–ಮೈಸೂರು ಹೆದ್ದಾರಿಯಿಂದ 1 ಕಿ.ಮೀ. ಮತ್ತು ಚಲ್ಲಘಟ್ಟ ‘ನಮ್ಮ ಮೆಟ್ರೊ’ ನಿಲ್ದಾಣದಿಂದ 3 ಕಿ.ಮೀ.ಗೆ ದೂರವಿದೆ’ ಎಂದು ಬಿಡಿಎ ಅಧಿಕಾರಿಗಳು ತಿಳಿಸಿದ್ದಾರೆ.

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಸೌತ್ ಇಂಡಿಯನ್ ಬ್ಯಾಂಕ್, ಎಕ್ಸಿಸ್ ಬ್ಯಾಂಕ್, ಕೆನರಾ ಬ್ಯಾಂಕ್, ಬ್ಯಾಂಕ್ ಆಫ್ ಬರೋಡಾ, ಎಚ್‌ಡಿಎಫ್‌ಸಿ ಬ್ಯಾಂಕ್ ಮತ್ತು ಪಂಜಾಬ್ ನ್ಯಾಷನಲ್ ಬ್ಯಾಂಕ್‌ಗಳ ಪ್ರತಿನಿಧಿಗಳು ಸ್ಥಳದಲ್ಲಿ ಹಾಜರಿದ್ದು, ಸಾಲ ಸೌಲಭ್ಯ ಒದಗಿಸಿದರು.

ಪ್ರಾಧಿಕಾರದ ಆರ್ಥಿಕ ಸದಸ್ಯರಾದ ಎ. ಲೋಕೇಶ್, ಮುಖ್ಯ ಲೆಕ್ಕಾಧಿಕಾರಿಯಾದ ಶ್ರೀನಿವಾಸಮೂರ್ತಿ, ಉಪ ಕಾರ್ಯದರ್ಶಿ ಕೃಷ್ಣಮೂರ್ತಿ, ಸಹಾಯಕ ಕಾರ್ಯಪಾಲಕ ಎಂಜಿನಿಯರ್‌ಗಳಾದ ಇಂಬವಳ್ಳಿ, ಬಸವರೆಡ್ಡಿ ಹಾಗೂ ಮತ್ತಿತರ ಅಧಿಕಾರಿಗಳು ಭಾಗವಹಿಸಿದ್ದರು.

ಕಣಿಮಿಣಿಕೆಯಲ್ಲಿ ಆಯೋಜಿಸಿದ್ದ ಮೇಳದಲ್ಲಿ ಫ್ಲ್ಯಾಟ್ ಖರೀದಿಸಿದ ಗ್ರಾಹಕರಿಗೆ ಬಿಡಿಎ ಅಧಿಕಾರಿಗಳು ‘ಹಂಚಿಕೆ ಪತ್ರ’ ವಿತರಿಸಿದರು

ಮುಖ್ಯಾಂಶಗಳು

- ಮೇಳದಲ್ಲಿ 500ಕ್ಕೂ ಅಧಿಕ ಮಂದಿ ಭಾಗಿ
- ವಿವಿಧ ಬ್ಯಾಂಕುಗಳಿಂದ ಸಾಲ ಸೌಲಭ್ಯ ವ್ಯವಸ್ಥೆ
- ಕೆಲವರಿಗೆ ಸ್ಥಳದಲ್ಲಿಯೇ ಹಂಚಿಕೆ ಪತ್ರ ವಿತರಣೆ

ಚಿಕ್ಕಜಾಲ ಗ್ರಾ.ಪಂಗೆ ಆಯ್ಕೆ

ಪ್ರಜಾವಾಣಿ ವಾರ್ತೆ

ಯಲಹಂಕ: ಚಿಕ್ಕಜಾಲ ಗ್ರಾಮ ಪಂಚಾಯಿತಿಯ ನೂತನ ಅಧ್ಯಕ್ಷರಾಗಿ ರಚನ್‌ಕುಮಾರ್.ಎಂ ಆಯ್ಕೆಯಾಗಿದ್ದಾರೆ. ಅನಂತಕುಮಾರ್ ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ಶನಿವಾರ ಚುನಾವಣೆ ನಡೆಯಿತು.

ಒಟ್ಟು 16 ಸದಸ್ಯಬಲ ಹೊಂದಿರುವ ಪಂಚಾಯಿತಿಯಲ್ಲಿ, ರಚನ್‌ಕುಮಾರ್ ಒಂಬತ್ತು, ಲಕ್ಷ್ಮೀಪತಿ ಏಳು ಮತಗಳನ್ನು ಪಡೆದರು.

ರಚನ್‌ಕುಮಾರ್

ತಾ.ಪಂ. ಮಾಜಿ ಸದಸ್ಯ ಉದಯಶಂಕರ್, ಜಾಲಾ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎನ್.ಕೆ.ಮಹೇಶ್ ಕುಮಾರ್, ಉಪಾಧ್ಯಕ್ಷ ಜಯಕುಮಾರ್, ಗ್ರಾಮ ಪಂಚಾಯಿತಿ ಅಧ್ಯಕ್ಷ ವಸಂತ್, ಉಪಾಧ್ಯಕ್ಷೆ ಗೌರಿ, ಸದಸ್ಯರಾದ ಅನಂತಕುಮಾರ್, ರವಿಕುಮಾರ್, ವಿನುತ.ಎಸ್, ಲತಾ.ಎನ್, ಅಮರಾವತಿ ಎಚ್.ಎಂ, ಮಂಜುಳ.ಆರ್.ಎಚ್, ಭವ್ಯ. ಜಿ ಹಾಗೂ ಮಂಜುಳ ಉಪಸ್ಥಿತರಿದ್ದರು.

ರೈಲು ಗಾಲಿ ಕಾರ್ಖಾನೆ
ಯಲಹಂಕ, ಬೆಂಗಳೂರು - 560 064
ವೆಬ್‌ಸೈಟ್: www.rwf.indianrailways.gov.in

ಟೆಂಡರ್ ನೋಟೀಸ್ ನಂ.
ಆರ್‌ಡಬ್ಲ್ಯೂಎಫ್/ಡಬ್ಲ್ಯೂ/ 24–25/09 ದಿನಾಂಕ: 16.01.2025

ಇ–ಟೆಂಡರ್‌ಗಳು: ಭಾರತದ ರಾಷ್ಟ್ರಪತಿಗಳ ಪರವಾಗಿ ಉಪ ಮುಖ್ಯ ಇಂಜಿನಿಯರ್ ಈ ಕೆಳಕಂಡ ಕೆಲಸಗಳಿಗಾಗಿ ಆನ್‌ಲೈನ್ ವೆಬ್‌ಸೈಟ್ (http://www.ireps.gov.in (Works) ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ

ಟೆಂಡರ್ ನಂ.: ಡಬ್ಲ್ಯೂ. 496/ಆರ್‌ಡಬ್ಲ್ಯೂಎಫ್/ವೈಎನ್‌ಕೆ 1040
ಕೆಲಸದ ವಿವರ: **ಎಸ್‌ಡಬ್ಲ್ಯೂ–1:** ಆರ್‌ಡಬ್ಲ್ಯೂಎಫ್ ಪಶ್ಚಿಮ ಕಾಲೋನಿಯಲ್ಲಿ {ಪಿಹೆಚ್–51 (ಕ್ಯಾಪ್)} ಟೈಪ್ –2 ಕ್ವಾರ್ಟಸ್ (221–234) 78 ಯುನಿಟ್‌ಗಳಲ್ಲಿ ಹೆಚ್ಚುವರಿ ಬೆಡ್ ರೂಂ ನಿರ್ಮಾಣ ಕಾಮಗಾರಿ. **ಅಂದಾಜು ಮೌಲ್ಯ :** ರೂ. 3,76,95,156.81. **ಎಸ್‌ಡಬ್ಲ್ಯೂ–2:** ಆರ್‌ಡಬ್ಲ್ಯೂಎಫ್ ಪಶ್ಚಿಮ ಕಾಲೋನಿಯಲ್ಲಿ {ಪಿಹೆಚ್–51 (ಕ್ಯಾಪ್)} ಟೈಪ್–2 ಕ್ವಾರ್ಟಸ್ (14 ಯುನಿಟ್)ಗಳ ನಿರ್ಮಾಣ ಕಾಮಗಾರಿ. **ಅಂದಾಜು ಮೌಲ್ಯ :** ರೂ. 4,48,55,488.78, **ಒಟ್ಟು ಅಂದಾಜು ಮೌಲ್ಯ :** 8,25,50,645.27. **ಕೊನೆಯ ದಿನಾಂಕ & ಸಮಯ:** 06.02.2025, 11.00 ಗಂಟೆಯವರೆಗೆ.

ಉಪ ಮುಖ್ಯ ಇಂಜಿನಿಯರ್

ನೈಋತ್ಯ ರೈಲ್ವೆ

ಇ–ಟೆಂಡರು ಸೂಚನೆ ಪ್ರಕಟಣೆ ಸಂ.:
SWRTMYPR2025WT01 ದಿನಾಂಕ: 13.01.2025

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ನೈಋತ್ಯ ರೈಲ್ವೆಯ ಟ್ರ್ಯಾಕ್ ಮಶೀನ್ ಸಂಸ್ಥೆಯಲ್ಲಿ ಸಿಎಸ್‌ಎಂ 09–3ಎಕ್ಸ್ ಯಂತ್ರಗಳನ್ನು ಒಳಗೊಂಡಿರುವ ಟ್ಯಾಂಪಿಂಗ್ ಘಟಕಗಳನ್ನು ಓವರ್‌ಹಾಲಿಂಗ್ ಮಾಡುವುದು.	ರೂ. 2,51,40,000/-

ಪೂರ್ಣಗೊಳಿಸುವಿಕೆಯ ಅವಧಿ: 24 ತಿಂಗಳುಗಳು.

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **10.02.2025, 11:00 ಗಂಟೆಯವರೆಗೆ**

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಕೊನೆಯ ದಿನಾಂಕದವರೆಗೆ ಯಾವುದಾದರೂ ತಿದ್ದುಪಡಿ ಇದ್ದಲ್ಲಿ ವೆಬ್‌ಸೈಟ್‌ಅನ್ನು ನೋಡುತ್ತಲೇ ಇರಿ

ಕಾರ್ಯನಿರ್ವಾಹಕ ಇಂಜಿನಿಯರ್/ಟ್ರ್ಯಾಕ್ ಮಶೀನ್ಸ್
ಯಶವಂತಪುರ, ಬೆಂಗಳೂರು
PUB/716/AAF/PRB/SWR/2024-25
South Western Railway - SWR | SWRRLY | SWRRLY

SBI ಭಾರತೀಯ ಸ್ಟೇಟ್ ಬ್ಯಾಂಕ್, ಪ್ರಾದೇಶಿಕ ವ್ಯವಹಾರ ಕಚೇರಿ - 02
ಬಾಣಸವಾಡಿ, ನಂ.253, 4ನೇ ಮಹಡಿ, ಡಾಲ್ಫಿನ್ ಮ್ಯಾನ್ಷನ್, ಹೆಣ್ಣೂರು ರಸ್ತೆ
ಹೆಣ್ಣೂರು ಬಸ್ ಡಿಪೋ ಎದುರು, ಎಚ್ ಬಿಆರ್ ಲೇಔಟ್, ಬೆಂಗಳೂರು - 560043
ದೂರವಾಣಿ: 080-25944208 /25944212

ಗುತ್ತಿಗೆಗೆ ಅಗತ್ಯವಿರುವ ಆವರಣ

ಎಸ್‌ಬಿಐ ಪರವಾಗಿ ಪ್ರಾದೇಶಿಕ ವ್ಯವಸ್ಥಾಪಕರು, ಆರ್ ಬಿಒ-02, ಬಾಣಸವಾಡಿಯವರು, ಎಸ್‌ಬಿಐ ಬಿಳೇಶಿವಲೆ ಮುಖ್ಯ ರಸ್ತೆ ಶಾಖೆಗೆ ಮುಖ್ಯ ರಸ್ತೆಯಲ್ಲಿ ನೆಲಮಹಡಿಯಲ್ಲಿ ಇರುವ ಸುಮಾರು 232 ಚದರ ಮೀಟರ್ (2500 ಚದರ ಅಡಿ +/- 25%) ಕಾರ್ಪೆಟ್ ಪ್ರದೇಶವನ್ನು ಹೊಂದಿರುವ ವಾಣಿಜ್ಯ / ಕಚೇರಿ ಬಳಕೆಗಾಗಿ ಗುತ್ತಿಗೆ ಆಧಾರದ ಮೇಲೆ ಆವರಣಕ್ಕಾಗಿ ಮಾಲೀಕರು / ಪವರ್ ಆಫ್ ಅಟಾರ್ನಿ ಮಾಲೀಕರಿಂದ ಅರ್ಜಿಗಳನ್ನು ಆಹ್ವಾನಿಸಿದ್ದಾರೆ. ವಿವರವಾದ ನಿಯತಾಂಕಗಳು, ಸಲ್ಲಿಕೆಗಳ ಸ್ಥಳ, ಷರತ್ತುಗಳ ನಿಯಮಗಳು ಮತ್ತು ಬೆಲೆ ಬಿಡ್ ಅನ್ನು ಒಳಗೊಂಡ ತಾಂತ್ರಿಕ ಬಿಡ್ ಗಳನ್ನು ಸಲ್ಲಿಸುವ ನಮೂನೆಯನ್ನು ಎಸ್‌ಬಿಐ ವೆಬ್ ಸೈಟ್ www.sbi.co.in ನ SBI in the news / Procurement News ಅಡಿಯಲ್ಲಿ 21.01.2025 ರಿಂದ 11.02.2025 ರವರೆಗೆ ಡೌನ್ ಲೋಡ್ ಮಾಡಬಹುದು. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 11.02.2025 3.00 ಗಂಟೆಗೆ ಒಳಗಾಗಿ ಅಥವಾ ಅದಕ್ಕೂ ಮುಂಚಿತವಾಗಿ. ದಲ್ಲಾಳಿಗಳಿಗೆ ಅವಕಾಶ ನೀಡಲಾಗುವುದಿಲ್ಲ.

ಸ್ಥಳ: ಬೆಂಗಳೂರು
ದಿನಾಂಕ: 19.01.2025

ಸಹಿ/-
ಪ್ರಾದೇಶಿಕ ವ್ಯವಸ್ಥಾಪಕರು
ಪ್ರಾದೇಶಿಕ ವ್ಯವಹಾರ ಕಚೇರಿ-02
ಬಾಣಸವಾಡಿ

SBI ಭಾರತೀಯ ಸ್ಟೇಟ್ ಬ್ಯಾಂಕ್, ಪ್ರಾದೇಶಿಕ ವ್ಯವಹಾರ ಕಚೇರಿ - 02
ಬಾಣಸವಾಡಿ, ನಂ.253, 4ನೇ ಮಹಡಿ, ಡಾಲ್ಫಿನ್ ಮ್ಯಾನ್ಷನ್, ಹೆಣ್ಣೂರು ರಸ್ತೆ
ಹೆಣ್ಣೂರು ಬಸ್ ಡಿಪೋ ಎದುರು, ಎಚ್ ಬಿಆರ್ ಲೇಔಟ್, ಬೆಂಗಳೂರು - 560043
ದೂರವಾಣಿ: 080-25944208 /25944212

ಗುತ್ತಿಗೆಗೆ ಅಗತ್ಯವಿರುವ ಆವರಣ

ಎಸ್‌ಬಿಐ ಪರವಾಗಿ ಪ್ರಾದೇಶಿಕ ವ್ಯವಸ್ಥಾಪಕರು, ಆರ್ ಬಿಒ-02, ಬಾಣಸವಾಡಿಯವರು, ಎಸ್‌ಬಿಐ ಬೂದಿಗೆರೆ ಕ್ರಾಸ್ ಶಾಖೆಗೆ ಮುಖ್ಯ ರಸ್ತೆಯಲ್ಲಿ ನೆಲಮಹಡಿಯಲ್ಲಿ ಇರುವ ಸುಮಾರು 232 ಚದರ ಮೀಟರ್ (2500 ಚದರ ಅಡಿ +/- 25%) ಕಾರ್ಪೆಟ್ ಪ್ರದೇಶವನ್ನು ಹೊಂದಿರುವ ವಾಣಿಜ್ಯ / ಕಚೇರಿ ಬಳಕೆಗಾಗಿ ಗುತ್ತಿಗೆ ಆಧಾರದ ಮೇಲೆ ಆವರಣಕ್ಕಾಗಿ ಮಾಲೀಕರು / ಪವರ್ ಆಫ್ ಅಟಾರ್ನಿ ಮಾಲೀಕರಿಂದ ಅರ್ಜಿಗಳನ್ನು ಆಹ್ವಾನಿಸಿದ್ದಾರೆ. ವಿವರವಾದ ನಿಯತಾಂಕಗಳು, ಸಲ್ಲಿಕೆಗಳ ಸ್ಥಳ, ಷರತ್ತುಗಳ ನಿಯಮಗಳು ಮತ್ತು ಬೆಲೆ ಬಿಡ್ ಅನ್ನು ಒಳಗೊಂಡ ತಾಂತ್ರಿಕ ಬಿಡ್ ಗಳನ್ನು ಸಲ್ಲಿಸುವ ನಮೂನೆಯನ್ನು ಎಸ್‌ಬಿಐ ವೆಬ್ ಸೈಟ್ www.sbi.co.in ನ SBI in the news / Procurement News ಅಡಿಯಲ್ಲಿ 21.01.2025 ರಿಂದ 11.02.2025 ರವರೆಗೆ ಡೌನ್ ಲೋಡ್ ಮಾಡಬಹುದು. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 11.02.2025 3.00 ಗಂಟೆಗೆ ಒಳಗಾಗಿ ಅಥವಾ ಅದಕ್ಕೂ ಮುಂಚಿತವಾಗಿ. ದಲ್ಲಾಳಿಗಳಿಗೆ ಅವಕಾಶ ನೀಡಲಾಗುವುದಿಲ್ಲ.

ಸ್ಥಳ: ಬೆಂಗಳೂರು
ದಿನಾಂಕ: 19.01.2025

ಸಹಿ/-
ಪ್ರಾದೇಶಿಕ ವ್ಯವಸ್ಥಾಪಕರು
ಪ್ರಾದೇಶಿಕ ವ್ಯವಹಾರ ಕಚೇರಿ-02
ಬಾಣಸವಾಡಿ

SBI ಭಾರತೀಯ ಸ್ಟೇಟ್ ಬ್ಯಾಂಕ್, ಪ್ರಾದೇಶಿಕ ವ್ಯವಹಾರ ಕಚೇರಿ - 02
ಬಾಣಸವಾಡಿ, ನಂ.253, 4ನೇ ಮಹಡಿ, ಡಾಲ್ಫಿನ್ ಮ್ಯಾನ್ಷನ್, ಹೆಣ್ಣೂರು ರಸ್ತೆ
ಹೆಣ್ಣೂರು ಬಸ್ ಡಿಪೋ ಎದುರು, ಎಚ್ ಬಿಆರ್ ಲೇಔಟ್, ಬೆಂಗಳೂರು - 560043
ದೂರವಾಣಿ: 080-25944208 /25944212

ಗುತ್ತಿಗೆಗೆ ಅಗತ್ಯವಿರುವ ಆವರಣ

ಎಸ್‌ಬಿಐ ಪರವಾಗಿ ಪ್ರಾದೇಶಿಕ ವ್ಯವಸ್ಥಾಪಕರು, ಆರ್ ಬಿಒ-02, ಬಾಣಸವಾಡಿಯವರು, ಎಸ್‌ಬಿಐ ಕಲ್ಕೆರೆ ಶಾಖೆಗೆ ಮುಖ್ಯ ರಸ್ತೆಯಲ್ಲಿ ನೆಲಮಹಡಿಯಲ್ಲಿ ಇರುವ ಸುಮಾರು 232 ಚದರ ಮೀಟರ್ (2500 ಚದರ ಅಡಿ +/- 25%) ಕಾರ್ಪೆಟ್ ಪ್ರದೇಶವನ್ನು ಹೊಂದಿರುವ ವಾಣಿಜ್ಯ / ಕಚೇರಿ ಬಳಕೆಗಾಗಿ ಗುತ್ತಿಗೆ ಆಧಾರದ ಮೇಲೆ ಆವರಣಕ್ಕಾಗಿ ಮಾಲೀಕರು / ಪವರ್ ಆಫ್ ಅಟಾರ್ನಿ ಮಾಲೀಕರಿಂದ ಅರ್ಜಿಗಳನ್ನು ಆಹ್ವಾನಿಸಿದ್ದಾರೆ. ವಿವರವಾದ ನಿಯತಾಂಕಗಳು, ಸಲ್ಲಿಕೆಗಳ ಸ್ಥಳ, ಷರತ್ತುಗಳ ನಿಯಮಗಳು ಮತ್ತು ಬೆಲೆ ಬಿಡ್ ಅನ್ನು ಒಳಗೊಂಡ ತಾಂತ್ರಿಕ ಬಿಡ್ ಗಳನ್ನು ಸಲ್ಲಿಸುವ ನಮೂನೆಯನ್ನು ಎಸ್‌ಬಿಐ ವೆಬ್ ಸೈಟ್ www.sbi.co.in ನ SBI in the news / Procurement News ಅಡಿಯಲ್ಲಿ 21.01.2025 ರಿಂದ 11.02.2025 ರವರೆಗೆ ಡೌನ್ ಲೋಡ್ ಮಾಡಬಹುದು. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 11.02.2025 3.00 ಗಂಟೆಗೆ ಒಳಗಾಗಿ ಅಥವಾ ಅದಕ್ಕೂ ಮುಂಚಿತವಾಗಿ. ದಲ್ಲಾಳಿಗಳಿಗೆ ಅವಕಾಶ ನೀಡಲಾಗುವುದಿಲ್ಲ.

ಸ್ಥಳ: ಬೆಂಗಳೂರು
ದಿನಾಂಕ: 19.01.2025

ಸಹಿ/-
ಪ್ರಾದೇಶಿಕ ವ್ಯವಸ್ಥಾಪಕರು
ಪ್ರಾದೇಶಿಕ ವ್ಯವಹಾರ ಕಚೇರಿ-02
ಬಾಣಸವಾಡಿ

THE BANGALORE CITY INSTITUTE®
Estd 1902
No.8, Pampa Mahakavi Road,
Opposite Makkala Koota,
Basavanagudi, Bangalore 560004
Phone No: 080-26678472 Email: office@nammabci.in

NOTICE INVITING TENDER

Tenders are invited by The Bangalore City Institute, No.8, Pampa Mahakavi Road, Basavanagudi, Bangalore 560004, for the following works:

DESCRIPTION OF WORK

1. Renovation of Guest Rooms (15 No's totally out of which – 13 executive rooms and 2 suite Rooms) and Renovation of corridor including furniture
2. Office Bearers Cabins and Administrative Office Renovation
3. Renovation of Tennis Lounge Area
4. Renovation of Amphitheatre at Lawn Area

For more details, please contact Sukumar Kuna, President, BCI @ **Mobile No. 9663376136** and collect the tender documents before **27th January 2025, 6.00 pm.**

Sd/-
Hon. Secretary
The Bangalore City Institute

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಪ್ರತಿಯೊಬ್ಬರಿಗೂ ಉಪಯುಕ್ತ

ಪ್ರಜಾವಾಣಿ
ಕ್ಲಾಸಿಫೈಡ್ಸ್

REAL ESTATE SELLING

Commerical

M G Road And Around

SALE COMMERCIAL Church Street 60x80 With old House Close to MG Road Ct: 9844134068 8073859758

Old Madras Road

PRIME OFFICE/ Showroom Sale 1638sft, 1`Floor, on Old Madras`Road, Opp.RMZ Infinity,Near Gopalan Signature Mall`& Metro-Station, inside ORR: -9948661379

Seshadripuram

SHALIMAR GALAXY Sheshdripuram 675sft Office Space For Sale 110 Lacs 2nd Floor Sunil: 9845201710

Flat

Basavanagudi

BASAVANAGUDI SALE FLAT BRAND NEW 2050 SFT NEAR KR-PARK OC-CC 3.4 Corer NEGO. SHIVU 9880004149

Jayanagar

"SALE FLAT Jayanagar 8th`Block`3BHK posh location 2660`Sft super built 1750`carpet`area 650`sft undivided land`share 2Car-park 4`crore, only genuine`buyers "Sri.Ganesh Estate" 9845286505"

JAYANAGAR 1ST BLOCK 3FLATS available East facing- 3BHK-1448 Sft +undivided 602 Sft 1st, 2nd, 3rd Floor Each Flat 2.15 Crores. Full cheque payment, negotiate direct owner ESHWARI ENTERPRISES: 98454-97163

Uttarahalli

2/3/4 BHK New FLATS SALE, A Khatha, Ready-move, 40L/ 75L/ 1Cr. Carparking, Cauvery, Vaasthu. 9945224058, 6360501159.

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

DH DECCAN HERALD Classifieds More value, more impact
ಪ್ರಜಾವಾಣಿ
PUBLIC NOTICE
BOOK YOUR PUBLIC NOTICE ADS IN DH ALL + PRAJAVANI BENGALURU CITY, ON ALL DAYS
www.dhclassifieds.com
@550/-* PER SQCM
BOOK NOW
*Conditions apply
For more details contact:
+91 9886213331 | +91 9845114560
+91 9731810277 | 080- 45557163/164

REAL ESTATE BUYING

Sites

Anjanapura

WANTED BDA Site Anjanapura, Banashankari 6th Stage,Vishweshwaraia h layout & any BDA Katha & Mysore MUDA Sites, immediate settlement, genuine Sellers Contact:9902038118, 9449060605

Banashankari

BDA SITES WANTED ARKAVATHY ANJANAPURA BANASHANKARI 6TH STAGE VISHWESHWARAIA KEMPEGOWDA ANY BDA LAYOUT: 9845062822/ 8660751654

BANASHANKARI 6TH Stage, Anjanapura, Kanakapura Road, All Measurement, Buying and Selling. Brokers Excuse. Call: 9731814437.

Multiple Locations

WANTED BDA SITES Anjanapura- Arkavathi Banashankari 6th.Stage, Vishweswaraiah, Kempegowda, Dr.Shivaramkaranth Layout.Contact: SAPTHAGIRI. 9900268073 9448068073.

Vishweshwariah Layout

BUYING/ SELLING 20x30,30x40,40x60 50x80 BDA sites at VISHVESHWARAIAH LAYOUT, BSK 6th-stage. Contact: 9844533371/ 9341733480

REQUIRED 20X30SQFT Site at M Visveshwaraiah Layout at 1st, 2nd, 3rd, 7th & 9th Block, single payment, Direct Owners Contact 9845765559, 9845043282

RENTAL PROPERTIES

Accommodation Available

Commercial

LONG TERM Office Rental Old Airport Road VDB TOUCHDOWN Next to HAL Museum. 7447Sqft Fully Fitted Out Office with 96 Work Stations 5 Cabins 3 Meeting 1 Board, 1 MD Cabin, 1 Cafeteria. WhatsApp Msg Only: 9845031550

FOR RENT Commercial Building, First Floor Measurement: 5400 Sq. ft, Carpet Area 4000 Sq. ft, No.6, West of Chord Main Road Near Navarang Circle Next to Swathi Restaurant Bangalore-10, Contact: 8970435166/ 9945079235

OFFICE SPACE For Rent16,000 sqft HBR layout 4th Block Facing Ring Road Contact: 8861817913/ 9008025761

Industrial And Factory

RENT VACANT Industrial. Converted land 4 Acres Near Nelamangala. 1 km from the state highway 74, 40ft Wide Road with a compound wall North Facing Property as per Vastu 9845038343 reddymrr@gmail.com

AVAILABLE OF Industrial Shed of 170000`sqft at Soukya Road, Whitefield. Available Built-to-Suit Warehouse 160000 sqft.`Vijipura Hoskote Contact: 9341234288/ 9663224353/ 9845417487.

Flats

FOR IMMEDIATE Rent/ Sale 2 BHK Flat, 5th Phase, J.P.Nagar. Negotiable. 9108523435/ 9448451122/ 7760804890.

JOB OPPORTUNITIES

Receptionist/ Secretary

BANGALORE REGIONAL CONFERENCE
(Methodist Church In India)
WE ARE HIRING!!!!

PERSONAL SECRETARY

For the Bishop's Office - Bangalore Regional Conference & Chairman of Baldwin Methodist Educational Society.

Qualification: Any Bachelor's degree from a reputed University

Experience:
- 3-5 years of relevant experience
- Proficient in verbal & written Communication Skills
- Processes Correspondence
- Knowledge of MS Office & good Computer Skills
- Calendar Management, Meeting Coordination & Appointments
- Managing Travel Arrangements

Skills:
- Impeccable communication skills in English & Confidentiality
- A systematic person with attention to detail
- Ability to multitask & prioritize tasks efficiently
- Good communication in Kannada will be an advantage
- Flexibility & Adaptability

Age: 30-40 years

If you meet the requirements, email your application with a recent passport size photograph to hrhead.bmes@gmail.com on or before 25th January, 2025

Teachers/ Professors

BHARATIYA SIKSHANA SAMITHI
(STATE'S SYLLABUS)
REQUIRES
Trained Graduate / Post Graduate Teachers
T.C.H / D.Ed / B.Ed / Arts / Science and Maths / Hindi / English, N.T.T. with Montessori for Nursery
GANDHINAGAR HIGHER SECONDARY SCHOOL & VISHWAKALAANIKETHAN MODEL ENGLISH PRIMARY SCHOOL
Kumara Park West Subramanya Swamy Temple Street Bangalore-560 020
Enquiry to: 9980566880
Or email your CV to: hmghss1942@gmail.com

RAMAN EDUCATION SOCIETY
WANTED
RAMAN PU COLLEGE
LECTURER for SCIENCE / COMMERCE
RAMAN DEGREE COLLEGE
PRINCIPAL
LECTURER / PROFFESSOR for BBA / BCA / BCOM
Apply to: ramandegree college@gmail.com
Call: 8050488623
Note: Perks will be as per qualification & experience.
RMN-24503

ST. CHARLES HIGH SCHOOL
(Affiliated to CISCE), Kammanahalli, Bengaluru
Invites application from Experienced, Qualified & Innovative Educators for the following posts:
PGT / TGT - Mathematics, Chemistry & Computer Applications
PRT / TGT - English, Hindi, Kannada & Computer Science
Art & Craft Teacher
Dance Teacher
Graphic Designer
Apply with detailed resume and latest photograph to Email ID : stcharleskammanahalli @yahoo.co.in
Contact No.: 7259867189

WANTED B.ED & D.Ed Trained Graduates with Teaching experience in SOCIAL STUDIES for High School Classes. Salary negotiable. Apply/Contact in person immediately. PRINCIPAL- HOLY CHILD CONVENT, 1133/44, 9th Cross, Ashoknagar, Near VidyaPeeta Circle, Bangalore- 560050. Ph: 26608485. Drop your resume or mail to: hcchs1371@yahoo.com

Aureus University
SCHOOL OF MEDICINE

Rank: Lecturer, Associate Professor, Assistant Professor and Professor

Aureus University School of Medicine has currently openings for the faculty in the basic medical sciences at our Aruba campus, Dutch West Indies. We are searching for dedicated and innovative professionals who are committed to collaborating with our team to educate and train the future generation of physicians. Our mission is founded on the principles of excellence in education, research, clinical care, and community service.

Candidates must possess a terminal degree (MD or PhD) and demonstrate a strong interest in teaching medical students. We are particularly seeking faculty members for courses in Anatomy, Physiology, Pathology, Pharmacology, Psychiatric Medicine and Microbiology.

Apply to:
careers@aureusuniversity.com

NEW MILLENNIUM SCHOOL
Horamavu Agara, Bangalore-560043.
[Affiliated to CISCE New Delhi]
Invites application for the following positions from suitably qualified and experienced full time Teachers.
English Teacher
Middle and Senior School
Kannada Teacher
Middle and Senior School
Mathematics:
Middle and Senior School
Physics
Middle and Senior School
Music Teacher & Dance Teacher
Send your CV to newmillenniumschool@gmail.com
Walk in interview between 8am to 12.30 pm on a working day.
Contact: 8660541421/ 7892839366
Visit:www.newmillenniumschool.com

HOLY ANGEL'S High School Hampinagar,Vijayanagar, Bengaluru-560104. Phone: 23404465, 23202042 E-mail : holyangels.highschoolr pclayout@gmail.com Requires Experienced Trained Teachers for Academic year 2025-2026 for Nursery, Primary, High-School, Music Teacher & P.E.Teacher. State & ICSE. Qualification : B.A/B.Sc.,B.Ed. M.A/M.Sc.,M.Ed, N.T.T, CP.Ed. Only English medium candidates need to apply.

Drivers

WANTED IMMEDIATELY Experienced CAR DRIVER, from Bannergatta Road nearby places. Good Salary. Call: 98450-15353

DRIVER WANTED Marathahalli, Age 25-45, English, Hindi, Kannada, Good Salary, Call: 9845837386

Multiple Vacancy

REQUIRED LADIES below35 years, Part/ Full Time for our office for3/5/8 hours, Salary:100 to 200Rs. per hour (17,000- 40,000Rs.) Contact: 9845134371, 7022538710

Engg/ Production Technical

JOB VACANCY
2D/3D CAD DESIGNER
For Sheet Metal Fabrication Company
JIGANI, BANGALORE
7760707777
9902030007

WANTED TECHNICIANS: ITI/Diploma Electronics (Male) with 3-5 years Experience. PURCHASE MANAGER: (Male) 2-3 years Experience in Manufacturing Industry. Immediate appointment Industry at Peenya. 9972410541 9845915484

MECHANICAL ENGINEER or Diploma with 6 to 7 years experience in QC for ISO engineering company in Peenya call 6360471436

General

D.N.M ASSOCIATES required Junior Advocates having experience of 2-3 years, fluency in languages, hardworking and interested in profession, both trial and High Court work. 9845081411, dnmanjunathadvocate@gmail.com

MARBLE AND Granite factory in Bangalore requires Head of sales, sales representatives. pharma14g@gmail.com

Wanted

MARKET RESEARCH Field Agency or Supervisors wanted for field work in Bangalore and other centres in Karnataka. If interested, Contact fkmr@franciskanoi.com or 044-26163303 /6374175665

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

HINDUSTAN PHARMA Distributor Pvt. Ltd. Required for DELIVERY BOYS, Attractive Salary with P.F. and E.S.I. Address: 76/1, Aruna Complex, above Union Bank, J.C. Road, Bangalore-560002. Contact: 9980120613.

Manager

MANAGER REQUIRED for`a LPG gas agency in`Sarjapur. Minimum 2`years of experience in same`field. Call: 9892037167 bharatgas4u@gmail.com

Hospital & Medical Jobs

LEADING MULTISPECIALTY HOSPITAL IN BANGALORE AND VIJAYAPURA
which state-of-the-art, having facilities and equipments
Hiring Doctors in the Department of Emergency Response/ Critical Care Unit and other Departments.
Experienced Doctors to apply.
Apartment accommodation provided.
Attractive Salary package offered.
Kindly apply to: ibc2@ibc.co.in.
Contact: Dr. Mohammed Azmath 9513011191
Hurry to setup interview and apply for openings.

ADMISSION CORNER

ಕ್ಲಾಸಿಫೈಡ್ಸ್

REGISTRATION FOR ADMISSION OPEN FOR THE ACADEMIC YEAR 2025-26

NURSERY to IX Std

PRASIDDHI SCHOOL, (situated amidst lush greenery, in the spacious premises of The Bangalore Palace) imparting quality education and a complete learning experience to enable your child to learn and grow with positive attitude and ethical values.

- A perfect school campus with safe and Green Environment, and zero pollution far away from hustle - bustle.
- Small classes with latest technology and individual attention.
- Preparing the children for the real world by nurturing their critical thinking, hands on learning and social interaction.
- Emphasis on extracurricular activities, Sports, Aerobics, Music, Dance, Arts and Bhagavad Gita classes to learn and retain our cultural values.
- GPS enabled buses, close circuit surveillance throughout the campus.
- Well qualified and trained facilitators who have been associated with the school for more than 15 years.

PRASIDDHI SCHOOL
(Recognised by the Govt. of Karnataka)
Bangalore Palace Compound, Vasanthnagar, Bangalore - 560 052
email:prasiddhischool1991@gmail.com

Log in to www.prasiddhischool.org FOR ONLINE APPLICATION FORM
www.prasiddhischool.org
Call 99809 99065 /080-23447687

AUTOMOTIVE

Four Wheelers Selling

Maruti

MARUTI ALTO 800 Std. Model 2010, 85000 kms, good condition. Price : 2Lakhs. 9342330918/9341059620

EDUCATION
To Place your Classified Ads Contact:
9845114560

BUSINESS

Business Offers

Business For Sale

BREWERY & RESTAURANT for Sale in JPNagar 5HL Brewing Capacity 11,200sqft G+5 Premium Floors in prime location licensed & Ready-to-operate Call:6361237545

TOURS & TRAVEL

Travel

VISIT BHUTAN, the most Wonderful Country with Expert Guide and Best Arrangements. GANESH SHENOY 8310028157

MATRIMONIAL

Brides Wanted

Kannada

93' BORN IRS boy from Bangalore seeks a suitable qualified match for early marriage. Father is retired RTI commissioner (Caste is a no bar for family) (080-69074927)

Muslim

MUSLIM BOY 1994 Boy 5'10/ Masters from Standford University Working in USA/ Resident of Bangalore/ Is looking for a Match (9743700029)

MUSLIM BOY 1992 Born MBBS MS/ Doctor / Bangalore Resident Family is looking for a suitable match (080-69072093)

Bride Required Others

ENGINEER, 52, 6 feet, own company, Bangalore, unmarried seeks graduate below 47. Mob 8698966952.

Second Marriage

WANTED BRIDE
Ph. D. Holder, Smart, 41 years -Mudaliar boy, Divorcee, **Well settled in Bangalore** is looking for a girl below 40 years, Good looking, **Graduate, Caste no bar and divorcee may also.**
Contact: 9964563703

Telugu

TELUGU BOY 1994 / 5'11/ Networth 500 Cr/ Businessman/ Bangalore Resident/ is looking for a Match (080-69074927)

Grooms Wanted

Muslim

MUSLIM BEAUTIFUL Girl 2003 Born 5'4 / Bangalore/ Is looking for a Match (080-69072093)

Telugu

TELUGU BEAUTIFUL Girl 1999 Born/ 5'5/ Studying/from a Affluent Family (Net Worth 300 to 400 Cr) of Bangalore is looking for match (080-69074927)

Matrimonial Bureaus

CONNECT WITH esteemed matches from Industrialist and Elite Class families with Gathbandhan Matrimony (9062033999)

DH DECCAN HERALD Classifieds More value, more impact
ಪ್ರಜಾವಾಣಿ
RECRUITMENT
BOOK YOUR JOB ADS IN DH ALL KARNATAKA + PRAJAVANI BENGALURU CITY ON WEDNESDAY + SUNDAY
@ 550/-* PER SQCM
SINGLE / DOUBLE / MULTIPLE COLUMN
www.dhclassifieds.com
BOOK NOW
* Conditions apply
For more details contact:
+91 9901641752 | +91 9845114560
+91 9900428036 | +91 9731810277
+91 9886213331 | 080- 45557163/164

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

FURNITURE WAREHOUSE SALE

DIVISION OF SME TRADING

121/3 - 121/8, Near Alanoville Villa, Kannur Village & Post Bengaluru East Bengaluru - 560077.

LOCATE US

LIVING ROOM • BEDROOM • DINING ROOM • OFFICE • OUTDOOR • MATTRESSES • HOME DECOR & MORE

7 DAYS REPUBLIC DAY SALE

FREE DELIVERY FREE INSTALLATION

PAY IN EASY INSTALLMENTS AT NO EXTRA COST

HDFC BANK We understand your world BAJAJ FINSERV EMI FINANCE

+91 9742522839 / 9901018963 / 8197131010

ಕೃಷಿ – ಪಂಚಾಯತ್‌ರಾಜ್ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಭರವಸೆ

‘ಬಳಕೆ ಪ್ರಮಾಣಪತ್ರ ಸಲ್ಲಿಸಿದ ತಕ್ಷಣ ಅನುದಾನ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಒದಗಿಸಿದ ಅನುದಾನ ಸಂಪೂರ್ಣ ವೆಚ್ಚ ಮಾಡಿ, ಬಳಕೆ ಪ್ರಮಾಣಪತ್ರ ಸಲ್ಲಿಸಿದ ತಕ್ಷಣ ಕೃಷಿ ಹಾಗೂ ಇತರ ಇಲಾಖೆಗಳಿಗೆ ಹೆಚ್ಚುವರಿ ಅನುದಾನ ನೀಡಲಾಗುವುದು. ಆತ್ಮ ಯೋಜನೆಯಡಿ ಅಗತ್ಯ ಪ್ರಮಾಣದ ಸಿಬ್ಬಂದಿಯನ್ನೂ ಒದಗಿಸಲಾಗುವುದು’ ಎಂದು ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಭರವಸೆ ನೀಡಿದರು.

ನಗರದ ಕುಮಾರಕೃಪಾ ಅತಿಥಿ ಗೃಹದಲ್ಲಿ ಚೌಹಾಣ್ ಅವರನ್ನು ಭೇಟಿ ಮಾಡಿದ ಕೃಷಿ ಸಚಿವ ಎನ್. ಚಲುವ-ರಾಯಸ್ವಾಮಿ, ರಾಜ್ಯದಲ್ಲಿ ಕೃಷಿ ಕ್ಷೇತ್ರದ ಬಲವರ್ಧನೆ ಹಾಗೂ ಮೂಲಸೌಕರ್ಯ ಅಭಿವೃದ್ಧಿಗೆ ಅಗತ್ಯವಾದ ವಿವಿಧ ಸಹಾಯ ಮತ್ತು ಆರ್ಥಿಕ ನೆರವು ಶೀಘ್ರ ಒದಗಿಸುವಂತೆ ಮನವಿ ಮಾಡಿದರು.

ಅದಕ್ಕೆ ಪ್ರತಿಕ್ರಿಯಿಸಿದ ಚೌಹಾಣ್, ‘ರಾಜ್ಯಕ್ಕೆ ಎಲ್ಲ ರೀತಿಯ ನೆರವು ಒದಗಿಸಲು ಕೇಂದ್ರ ಸರ್ಕಾರ ಸಿದ್ಧವಿದೆ’ ಎಂದರು.

ಕಂದಾಯ ಸಚಿವ ಕೃಷ್ಣ ಬೈರೇಗೌಡ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಕೂಡಾ ಚೌಹಾಣ್ ಅವರನ್ನು ಭೇಟಿ ಮಾಡಿ ರಾಜ್ಯದ ಬೇಡಿಕೆಗಳನ್ನು ಮಂಡಿಸಿದರು.

‘ರಾಜ್ಯದಲ್ಲಿ ಕೃಷಿ ಇಲಾಖೆ ಶೇ 99ರಷ್ಟು ಆರ್ಥಿಕ ಹಾಗೂ ಭೌತಿಕ ಗುರಿ ಸಾಧನೆ ಮಾಡಿದೆ. ಕೇಂದ್ರ ಪುರಸ್ಕೃತ ಯೋಜನೆಗಳಲ್ಲೂ ಅನುದಾನ ಬಳಸಿಕೊಂಡಿದೆ. ಹೀಗಾಗಿ ಈ ಬಾರಿಯೂ ಕೃಷಿ ಯಾಂತ್ರೀಕರಣ ಸೇರಿದಂತೆ ವಿವಿಧ ಯೋಜನೆಗಳಿಗೆ ಆರ್ಥಿಕ ನೆರವು ಒದಗಿಸಬೇಕು, ಆನೇಕಲ್ ತಾಲ್ಲೂಕಿನ ಕಾಚನಾಯಕನ-ಹಳ್ಳಿ ಗ್ರಾಮದಲ್ಲಿ 20 ಎಕರೆ ಪ್ರದೇಶದಲ್ಲಿ ಪೆಸ್ಟಿಸೈಡ್ಸ್ ಫಾರ್ಮುಲೇಷನ್ ಟೆಕ್ನಾಲಜಿ ಸಂಸ್ಥೆ ಆರಂಭಿಸಲು ಅನುಮೋದನೆ ನೀಡಬೇಕು, ಜೋಳಕ್ಕೆ ಹಿಂಗಾರು ಅವಧಿಯಲ್ಲಿ ನೀಡುತ್ತಿರುವ ಬೆಂಬಲ ಬೆಲೆ ಸೌಲಭ್ಯವನ್ನು ಮುಂಗಾರು ಅವಧಿಯಲ್ಲೂ ನೀಡಬೇಕು, ರಾಗಿ, ಜೋಳಗಳಂತೆ ಇತರ ಸಿರಿಧಾನ್ಯಗಳನ್ನೂ ಕನಿಷ್ಠ ಬೆಂಬಲ ಬೆಲೆ ಯೋಜನೆಯ ವ್ಯಾಪ್ತಿಗೆ ಸೇರಿಸಬೇಕು’ ಎಂದು ಕೇಂದ್ರ ಕೃಷಿ ಸಚಿವರಿಗೆ ಚಲುವರಾಯಸ್ವಾಮಿ ಮನವಿ ಮಾಡಿದರು.

‘ಆತ್ಮ ಯೋಜನೆಯಡಿ ಹೊಸದಾಗಿ 177 ಸಹಾಯಕ ತಾಂತ್ರಿಕ ನಿರ್ವಾಹಕರ ನೇಮಕಕ್ಕೆ ಮಂಜೂರಾತಿ ಮತ್ತು ಅನುದಾನ ನೀಡಬೇಕು, ರಾಜ್ಯದಲ್ಲಿ ಇನ್ನೂ 59.69 ಹೆಕ್ಟೇರ್ ಪ್ರದೇಶವನ್ನು ಜಲಾನಯನ ಅಭಿವೃದ್ಧಿ ಯೋಜನೆಯ ವ್ಯಾಪ್ತಿಗೆ ಸೇರಿಸಿ ಹೊಸದಾಗಿ 92 ಯೋಜನೆಗಳಿಗೆ ಸಂಬಂಧಿಸಿದಂತೆ ಸಲ್ಲಿಸಿರುವ ಪ್ರಸ್ತಾವಕ್ಕೆ ಅನುಮೋದನೆ ಮತ್ತು ಅನುದಾನ ನೀಡಬೇಕು, ಗುಣಮಟ್ಟ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಹಾಲಿ ಇರುವ ವಿವಿಧ ಕಾಯ್ದೆಗಳಿಗೆ ತಿದ್ದುಪಡಿ ತರಬೇಕು’ ಎಂದೂ ಚಲುವರಾಯಸ್ವಾಮಿ ಕೋರಿದರು.

ಸಂಸದ ಬಿ.ವೈ. ರಾಘವೇಂದ್ರ ಮತ್ತು ವಿವಿಧ ಇಲಾಖೆಗಳ ಅಧಿಕಾರಿಗಳೂ ಇದ್ದರು.

ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರಿಗೆ ರಾಜ್ಯದ ಕೃಷಿ ಸಚಿವ ಎನ್‌. ಚಲುವರಾಯಸ್ವಾಮಿ ಮನವಿ ಸಲ್ಲಿಸಿದರು. ಸಚಿವರಾದ ಪ್ರಿಯಾಂಕ್ ಖರ್ಗೆ ಮತ್ತು ಕೃಷ್ಣ ಬೈರೇಗೌಡ ಇದ್ದರು

‘ಕೇಂದ್ರ ಯೋಜನೆ: ನಿಯಮ ಬದಲಿಸಿ’

ಬೆಂಗಳೂರು: ‘ರಾಜ್ಯದಲ್ಲಿ ಕೇಂದ್ರ ಯೋಜನೆಗಳ ಜಾರಿಗೆ ಸಂಬಂಧಿಸಿದಂತೆ ನಿಯಮಾವಳಿಗಳಲ್ಲಿ ಕೆಲವು ಬದಲಾವಣೆ ಮಾಡಬೇಕು’ ಎಂದು ಪ್ರಿಯಾಂಕ್ ಖರ್ಗೆ ಮನವಿ ಮಾಡಿದರು.

ಪ್ರಧಾನಮಂತ್ರಿ ಗ್ರಾಮ ಸಡಕ್ ಮಾರ್ಗಸೂಚಿಯಡಿ 500ಕ್ಕಿಂತಲೂ ಕಡಿಮೆ ಜನಸಂಖ್ಯೆ ಹೊಂದಿರುವ ವಸತಿಗಳನ್ನು ಪರಿಗಣಿಸಬೇಕು, ನರೇಗಾ ಯೋಜನೆಯಡಿ ಅಂಗನವಾಡಿ ಕಟ್ಟಡಗಳು ಮತ್ತು ಸರ್ಕಾರಿ ಕಟ್ಟಡಗಳಿಗೆ ಆವರಣ ಗೋಡೆ ನಿರ್ಮಾಣ, ಗ್ರಾಮ ಪಂಚಾಯತ್ ಗ್ರಂಥಾಲಯ ನಿರ್ಮಾಣಕ್ಕೆ ಅವಕಾಶ, ರೈತರಿಗೆ ಕೃಷಿ ನಂತರದ ಕೊಯ್ಲು ಶೇಖರಣಾ ಘಟಕಗಳ ನಿರ್ಮಾಣಕ್ಕೆ ಅವಕಾಶ, ರೇಷ್ಮೆ ಕೃಷಿ ಘಟಕದ ನಿರ್ಮಾಣಕ್ಕೆ ಅವಕಾಶ ನೀಡಬೇಕು ಎಂದು ಪ್ರಿಯಾಂಕ್ ಮನವಿ ಸಲ್ಲಿಸಿದರು.

ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿಷನ್ ಅಡಿ ಕೈಗೊಳ್ಳುವ ಸಮುದಾಯ ಆಧಾರಿತ ಕಾಮಗಾರಿಗಳಿಗೆ ವಿಧಿಸಿರುವ ಮಿತಿಯನ್ನು ಹಿಂಪಡೆಯಬೇಕು. ಸ್ಥಳೀಯ ಪರಿಸ್ಥಿತಿ ಮತ್ತು ಅವಶ್ಯಕತೆಗಳ ಆಧಾರದಲ್ಲಿ ಮಾದರಿ ವೆಚ್ಚಗಳನ್ನು ನಿರ್ಧರಿಸಲು ರಾಜ್ಯ ಸರ್ಕಾರಗಳಿಗೇ ಅವಕಾಶ ನೀಡಬೇಕು. ನರೇಗಾದಡಿ ಉದ್ಯೋಗ ಅವಕಾಶವನ್ನು 150 ದಿನಗಳವರೆಗೆ ಹೆಚ್ಚಿಸಲು ರಾಜ್ಯ ಸರ್ಕಾರಗಳಿಗೆ ಅವಕಾಶ ನೀಡಬೇಕು ಸೇರಿದಂತೆ ವಿವಿಧ ಬೇಡಿಕೆಗಳನ್ನು ಅವರು ಕೇಂದ್ರ ಸಚಿವರ ಮುಂದಿಟ್ಟರು.

ಸುದ್ದಿ 2 ನಿಮಿಷ

21ರಂದು ಶಿವಕುಮಾರ ಸ್ವಾಮೀಜಿ ಸ್ಮರಣೋತ್ಸವ

ತುಮಕೂರು: ಸಿದ್ಧಗಂಗಾ ಮಠದ ಶಿವಕುಮಾರ ಸ್ವಾಮೀಜಿ ಅವರ 6ನೇ ವರ್ಷದ ಸಂಸ್ಮರಣೋತ್ಸವ ಕಾರ್ಯಕ್ರಮ ಜ.21ರಂದು ಮಠದಲ್ಲಿ ನಡೆಯಲಿದೆ.

ಮಠದಲ್ಲಿ ಬೆಳಗ್ಗೆ 5 ಗಂಟೆಯಿಂದ ಸಿದ್ಧಲಿಂಗ ಸ್ವಾಮೀಜಿ ನೇತೃತ್ವದಲ್ಲಿ ವಿವಿಧ ಧಾರ್ಮಿಕ ಕಾರ್ಯಕ್ರಮ ನೆರವೇರಲಿದೆ. ನಂತರ ರುದ್ರಾಕ್ಷಿ ಮಂಟಪದಲ್ಲಿ ಶಿವಕುಮಾರ ಸ್ವಾಮೀಜಿ ಮೂರ್ತಿಯ ಮೆರವಣಿಗೆ ಏರ್ಪಡಿಸಲಾಗಿದೆ.

ಬೆಳಗ್ಗೆ 11 ಗಂಟೆಗೆ ವೇದಿಕೆ ಕಾರ್ಯಕ್ರಮ ನಡೆಯಲಿದೆ. ಸಾಹಿತಿ ಗೊ.ರು.ಚನ್ನಬಸಪ್ಪ ಅವರಿಗೆ ‘ಸಿದ್ಧಗಂಗಾಶ್ರೀ ಪ್ರಶಸ್ತಿ’ ಪ್ರದಾನ ಮಾಡಲಾಗುತ್ತದೆ. ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್, ಮೇಘಾಲಯ ರಾಜ್ಯಪಾಲ ಸಿ.ಎಚ್.ವಿಜಯಶಂಕರ್ ಅಧ್ಯಕ್ಷತೆ ವಹಿಸಲಿದ್ದಾರೆ. ಸುತ್ತೂರು ಸಂಸ್ಥಾನ ಮಠದ ಶಿವರಾತ್ರಿ ದೇಶೀಕೇಂದ್ರ ಸ್ವಾಮೀಜಿ, ಶ್ರವಣಬೆಳಗೊಳದ ಅಭಿನವ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ಹಾಜರಾಗಲಿದ್ದಾರೆ.

ಮಧ್ಯಾಹ್ನ 3 ಗಂಟೆಗೆ ಮಠದ ಹಳೆಯ ವಿದ್ಯಾರ್ಥಿಗಳ ಹಾಗೂ ಹಿತೈಷಿ ಸಂಘದ 68ನೇ ಸರ್ವ ಸದಸ್ಯರ ಮಹಾಧಿವೇಶನ ಹಮ್ಮಿ-ಕೊಳ್ಳಲಾಗಿದೆ. ಸಾಹಿತಿ ಟಿ.ಎಚ್. ಶೈಲಜಾ, ಜಿ.ಎನ್.ಬಸವರಾಜಪ್ಪ ಅವರಿಗೆ ‘ಸಿದ್ಧಗಂಗಾ ಶಿವಕುಮಾರಶ್ರೀ’ ಪ್ರಶಸ್ತಿ, ಎಸ್. ಶಿವಾನಂದ ಶರ್ಮಾ, ಎಸ್.ಆರ್. ರೇಣುಕಾರಾಧ್ಯ, ಶಿವಕುಮಾರ ಮೂರ್ತಿ, ವೆಂಕಟೇಗೌಡ, ಬಿ.ಎಂ. ಪರಮೇಶ್ವರಪ್ಪ (ಮರಣೋತ್ತರ) ಅವರಿಗೆ ‘ಸಂಘಸಿರಿ’ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ. ಸಂಜೆ 6 ಗಂಟೆಗೆ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲಾಗಿದೆ’ ಎಂದು ಮಠದ ಆಡಳಿತಾಧಿಕಾರಿ ಎಸ್.ವಿಶ್ವನಾಥಯ್ಯ ತಿಳಿಸಿದ್ದಾರೆ.

ಮಾಂಸ ಮಾರಾಟ ನಿಷೇಧ

ಬೆಂಗಳೂರು: ಏರೋ ಇಂಡಿಯಾ ವೈಮಾನಿಕ ಪ್ರದರ್ಶನ ನಡೆಯುವ ಸಂದರ್ಭದಲ್ಲಿ ಯಲಹಂಕ ವಾಯುನೆಲೆ ಸುತ್ತಮುತ್ತಲಿನ 13 ಕಿ.ಮೀ ವ್ಯಾಪ್ತಿಯಲ್ಲಿ ಮಾಂಸ ಮಾರಾಟ, ಮಾಂಸಾಹಾರ ತಯಾರಿಕೆಯನ್ನು ಬಿಬಿಎಂಪಿ ನಿಷೇಧಿಸಿದೆ.

23ನೇ ಏರೋ ಇಂಡಿಯಾ ವೈಮಾನಿಕ ಪ್ರದರ್ಶನ ಫೆಬ್ರುವರಿ 10ರಿಂದ 14ರವರೆಗೆ ನಡೆಯಲಿದ್ದು, ಜನವರಿ 23ರಿಂದ ಫೆಬ್ರುವರಿ 17ರವರೆಗೆ ಯಲಹಂಕ ವಾಯುನೆಲೆ ಸುತ್ತಮುತ್ತ ಮಾಂಸ ಮಾರಾಟ ನಿಷೇಧಿಸಲಾಗಿದೆ ಎಂದು ಬಿಬಿಎಂಪಿ ಯಲಹಂಕ ವಲಯದ ಜಂಟಿ ಆಯುಕ್ತ ಮೊಹ್ಮದ್ ನಯೀಮ್ ಮೊಮಿನ್ ತಿಳಿಸಿದ್ದಾರೆ.

ಯಲಹಂಕ ವಲಯದ ಏರ್‌ಫೋರ್ಸ್ ಸ್ಟೇಷನ್‌ನಿಂದ 13 ಕಿ.ಮೀ ವ್ಯಾಪ್ತಿಯಲ್ಲಿರುವ ಎಲ್ಲಾ ಮಾಂಸ ಮಾರಾಟದ ಉದ್ದಿಮೆಗಳನ್ನು ಮುಚ್ಚಬೇಕು. ಹೋಟೆಲ್ ಮತ್ತು ಡಾಬಾಗಳಲ್ಲಿ ಮಾಂಸಾಹಾರ ತಯಾರಿಕೆ ಮತ್ತು ಮಾರಾಟವನ್ನು ನಿಷೇಧಿಸಲಾಗಿದೆ. ಇದನ್ನು ಉಲ್ಲಂಘಿಸಿದರೆ, ಕಾನೂನು ಕ್ರಮ ಜರುಗಿಸಲಾಗುವುದು ಎಂದಿದ್ದಾರೆ.

ಕ್ರೇನ್ ಸ್ಥಗಿತ: ಯಲಹಂಕ ವಾಯುನೆಲೆಯಿಂದ 10 ಕಿ.ಮೀ ವ್ಯಾಪ್ತಿಯಲ್ಲಿ ನಿರ್ಮಾಣ ಹಂತದಲ್ಲಿರುವ ಬೃಹತ್ ಕಟ್ಟಡಗಳಲ್ಲಿ ಉಪಯೋಗಿಸುವ ಕ್ರೇನ್‌ಗಳನ್ನು ಫೆಬ್ರುವರಿ 1ರಿಂದ 14ರವರೆಗೆ ತಗ್ಗಿಸಲು ಮತ್ತು ಕ್ರೇನ್ ಚಟುವಟಿಕೆಗಳನ್ನು ಸ್ಥಗಿತಗೊಳಿಸಲು ಸೂಚಿಸಲಾಗಿದೆ ಎಂದು ಬಿಬಿಎಂಪಿ ನಗರ ಯೋಜನೆ– ಉತ್ತರ ವಿಭಾಗದ ಜಂಟಿ ನಿರ್ದೇಶಕ ವಿ. ರಾಕೇಶ್ ಕುಮಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿಶ್ವ ಮಾನವ ದಿನಾಚರಣೆ

ಪ್ರಜಾವಾಣಿ ವಾರ್ತೆ

ನವದೆಹಲಿ: ‘ನಾವು ಯಾವುದನ್ನು ಪರಮ ಸತ್ಯ ಅಂತ ತಿಳಿದುಕೊಂಡಿರುತ್ತೇವೆಯೋ ಅದನ್ನು ಪ್ರಶ್ನಿಸಲು ಕಲಿಸುವವರು ನಮ್ಮ ಪ್ರಜ್ಞೆಯನ್ನು ರೂಪಿಸುತ್ತಾರೆ. ಭಾಷೆಯೇ ನಮ್ಮ ಪ್ರಜ್ಞೆಯನ್ನು ರೂಪಿಸುತ್ತದೆ’ ಎಂದು ಚಿಂತಕ ಪ್ರೊ. ಓ. ಎಲ್. ನಾಗಭೂಷಣ ಸ್ವಾಮಿ ಹೇಳಿದರು.

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ದೆಹಲಿ ಘಟಕವು ದೆಹಲಿ ಕರ್ನಾಟಕ ಸಂಘದಲ್ಲಿ ಆಯೋಜಿಸಿದ್ದ ವಿಶ್ವ ಮಾನವ ಕುವೆಂಪು ದಿನಾಚರಣೆ ಮತ್ತು ಪರಿಷತ್ತಿನ ವಾರ್ಷಿಕೋತ್ಸವದಲ್ಲಿ ಅವರು ವಿಶೇಷ ಉಪನ್ಯಾಸ ನೀಡಿದರು.

12ನೇ ಶತಮಾನದಲ್ಲಿ ಬಸವಣ್ಣ ಮತ್ತು 21ನೇ ಶತಮಾನದಲ್ಲಿ ಕುವೆಂಪು ನಮ್ಮ ಪ್ರಜ್ಞೆಯನ್ನು ಬದಲಾಯಿಸುವ ಮೂಲಕ ಸಾಮಾಜಿಕ ಸುಧಾರಣೆಗೆ ನಾಂದಿ ಹಾಡಿದರು ಎಂದರು. ಕಾರ್ಯಕ್ರಮ ಉದ್ಘಾಟಿಸಿದ ಡಾ. ಈಶ್ವರ ಬಸವ ರಡ್ಡಿ, ಪರಿಷತ್‌ನ ಚಟುವಟಿಕೆ ಮುಂದಿನ ದಿನಗಳಲ್ಲಿ ಇನ್ನಷ್ಟು ವಿಸ್ತರಿಸಲಿ ಎಂದು ಹಾರೈಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪರಿಷತ್ತಿನ ಅಧ್ಯಕ್ಷ ಚಂದ್ರಶೇಖರ್, ‘ಬಸವಣ್ಣ ಮತ್ತು ಕುವೆಂಪು ಕನ್ನಡ ಭಾಷೆಗೆ ಕಸುವು ತುಂಬಿದರು. ಜನರ ಆಡು ನುಡಿಯಾಗಿದ್ದ ಕನ್ನಡವನ್ನು ನಾಡು ನುಡಿಯನ್ನಾಗಿ ಮಾಡಿದರು’ ಎಂದರು.

ಇವರಿಬ್ಬರ ಭಾಷಾ ಪ್ರೇಮವನ್ನು ಮಾದರಿಯಾಗಿರಿಸಿಕೊಂಡು ಕನ್ನಡೇ-ತರರನ್ನು ಹಾಗೂ ಹೊಸ ತಲೆಮಾರಿನ ಯುವ ಕನ್ನಡಿಗರನ್ನು ಆಕರ್ಷಿಸಬೇಕಾದ ಅಗತ್ಯ ಇದೆ ಎಂದು ಅಭಿಪ್ರಾಯಪಟ್ಟರು.

ಬ್ರಾಹ್ಮಣರ ಮಹಾ ಸಮ್ಮೇಳನದಲ್ಲಿ ಸಮುದಾಯದ ಸಮಸ್ಯೆಗಳ ಚಿಂತನ ಮಂಥನ

ಒಂದೇ ಸೂರಿನಡಿ ವಿಪ್ರರ ಸಮಾಗಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಂದೆಡೆ ಬ್ರಾಹ್ಮಣ ಸಮುದಾಯದವರು ಪ್ರಸ್ತುತ ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಚಿಂತನ ಮಂಥನ ನಡೆದರೆ, ಇನ್ನೊಂದೆಡೆ ಸಂಗೀತ–ನೃತ್ಯಗಳ ಪ್ರದರ್ಶನ, ಮತ್ತೊಂದೆಡೆ ಕೈ ಬೀಸಿ ಕರೆಯುವ ಆಹಾರ ಹಾಗೂ ಕರಕುಶಲ ಮಳಿಗೆಗಳು..

ಈ ದೃಶ್ಯ ಕಂಡು ಬಂದದ್ದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾವು ಸುವರ್ಣ ಮಹೋತ್ಸವದ ಪ್ರಯುಕ್ತ ನಗರದ ಅರಮನೆ ಮೈದಾನದಲ್ಲಿ (ತ್ರಿಪುರವಾಸಿನಿ) ಹಮ್ಮಿಕೊಂಡಿರುವ ಬ್ರಾಹ್ಮಣ ಮಹಾ ಸಮ್ಮೇಳನದಲ್ಲಿ. ಎರಡು ದಿನಗಳ ಈ ಸಮ್ಮೇಳನಕ್ಕೆ ಶನಿವಾರ ಚಾಲನೆ ದೊರೆಯಿತು.

ಬೆಳಿಗ್ಗೆ 5.30ರಿಂದಲೇ ಗಾಯತ್ರಿ ಮಹಾಯಾಗ ಸೇರಿ ಧಾರ್ಮಿಕ ಚಟುವಟಿಕೆಗಳನ್ನು ನಡೆಸಲಾಯಿತು. ಮುಂಜಾನೆಯಿಂದಲೇ ರಾಜ್ಯದ ವಿವಿಧೆಡೆಯಿಂದ ಸಾವಿರಾರು ಸಂಖ್ಯೆಯಲ್ಲಿ ಬಂದಿದ್ದ ವಿಪ್ರರು, ಅರಮನೆ ಮೈದಾನವನ್ನು ಆವರಿಸಿಕೊಂಡಿದ್ದರು.

ವಿವಿಧ ಮಠಾಧೀಶರನ್ನು ಭವ್ಯ ಮೆರವಣಿಗೆ ಮೂಲಕ ಬರಮಾಡಿಕೊಳ್ಳಲಾಯಿತು. ಸಮ್ಮೇಳನದ ವೇದಿಕೆಯ ಪ್ರವೇಶ ದ್ವಾರದಲ್ಲಿನ ಯಕ್ಷಗಾನದ ಬೃಹತ್ ಮುಖವರ್ಣಿಕೆ ನೆರೆದಿದ್ದವರ ಗಮನ ಸೆಳೆಯಿತು. ಎಡ ಭಾಗದಲ್ಲಿ ಗಾಯನ–ನೃತ್ಯ ಪ್ರದರ್ಶನಕ್ಕೆ ಪ್ರತ್ಯೇಕ ವೇದಿಕೆ ನಿರ್ಮಿಸಲಾಗಿತ್ತು.

ಬ್ರಾಹ್ಮಣ ಮಹಾ ಸಮ್ಮೇಳನದಲ್ಲಿ ಸಮುದಾಯದ ಸಾವಿರಾರು ಮಂದಿ ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರ

ಬಲಭಾಗದಲ್ಲಿ ಪಾಣಿಗ್ರಾಹಿ ವಿವಾಹ ವೇದಿಕೆ (ವಧು–ವರ ಅನ್ವೇಷಣಾ ಕೇಂದ್ರಗಳು) ನಿರ್ಮಿಸಲಾಗಿತ್ತು. ಅಲ್ಲಿ ಮದುವೆಯ ಮಂಟಪ ವನ್ನೂ ನಿರ್ಮಿಸಿರುವುದು ವಿಶೇಷ.

ಪುಸ್ತಕಗಳ ಬಿಡುಗಡೆ: ಸಮ್ಮೇಳನದಲ್ಲಿ ಪಾಣಿಗ್ರಹಣ ವೇದಿಕೆ, ವಾಣಿಜ್ಯ ಹಾಗೂ ಆಹಾರ ಮೇಳವನ್ನು ಪೇಜಾವರ ಮಠದ ವಿಶ್ವಪ್ರಸನ್ನತೀರ್ಥ ಸ್ವಾಮೀಜಿ ಉದ್ಘಾಟಿಸಿದರು.

ಇದೇ ವೇಳೆ ಸ್ವಾಮಿ ಶಿವ ಪ್ರಕಾಶಾನಂದ ಸ್ವರಸ್ವತಿ ಅವರ ‘ವೇದಾಂತ ತತ್ವ ಚಿಂತನಂ’ ಕೃತಿಯನ್ನು ಬಸವನಗುಡಿ ಶಾಸಕ ಎಲ್.ಎ. ರವಿ ಸುಬ್ರಹ್ಮಣ್ಯ ಬಿಡುಗಡೆ ಮಾಡಿದರು. ಛಾಯಾಪತಿ ಕೆ.ಎನ್. ಅವರ ‘ಸ್ವಾತಂತ್ರ ಹೋರಾಟದಲ್ಲಿ ಬ್ರಾಹ್ಮಣರ ಪಾತ್ರ’, ಸುರೇಶ್‌ಮೂನ ಅವರ ‘ಮರೆಯಲಾಗದ ಮಹನೀಯರು’ ಕೃತಿಯನ್ನು ಜಯನಗರ ಶಾಸಕ ಸಿ.ಕೆ. ರಾಮಮೂರ್ತಿ ಬಿಡುಗಡೆ ಮಾಡಿದರು. ಹಾನಗಲ್ ವಿರೂಪಾಕ್ಷ ಶಾಸ್ತ್ರಿ ಅವರ ‘ಧ್ಯಾನಬಿಂದೂಪನಿ-ಷದರ್ಥವು’ ಕೃತಿಯೂ ಇದೇ ವೇಳೆ ಲೋಕಾರ್ಪಣೆಯಾಯಿತು.

ರಾಜಸ್ಥಾನದ ಮುಖ್ಯಮಂತ್ರಿ ಭಜನ್‌ಲಾಲ್ ಶರ್ಮ ಅವರು ಸಮ್ಮೇಳನದಲ್ಲಿ ಭಾಗವಹಿಸಿ, ಬ್ರಾಹ್ಮಣ ಸಮುದಾಯದ ಕೊಡುಗೆಗಳು ಹಾಗೂ ಬೆಂಗಳೂರಿನ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಮಧ್ಯಾಹ್ನದ ಬಳಿಕ ಕರ್ನಾಟಕ ಶಾಸ್ತ್ರೀಯ ಸಂಗೀತದ ದಿಗ್ಗಜರಿಗೆ ಯುವ ಕಲಾವಿದರಿಂದ ನಾದ ನಮನ ಸಲ್ಲಿಸಲಾಯಿತು. ಬಳಿಕ ವಿಪ್ರ ಸಾಧಕರಿಗೆ ‘ಬ್ರಹ್ಮತೇಜ ಪ್ರಶಸ್ತಿ’ ಪ್ರದಾನ ಮಾಡಲಾಯಿತು.

ಉತ್ತರಾದಿ ಮಠದ ಸತ್ಯಾತ್ಮತೀರ್ಥ ಸ್ವಾಮೀಜಿ ಅವರಿಂದ ಆಶೀರ್ವಚನ ನಡೆಯಿತು. ನೃತ್ಯಗುರು ವಿದ್ಯಾ ರವಿಶಂಕರ್ ಅವರ ತಂಡದಿಂದ ‘ಶ್ರೀ ಕೃಷ್ಣ’ ನೃತ್ಯ ರೂಪಕ ಪ್ರದರ್ಶನವಾಯಿತು. ಬಳಿಕ ಪ್ರಭಾತ್ ಆರ್ಟ್ ಇಂಟರ್ ನ್ಯಾಷನಲ್ ತಂಡದವರು ‘ಆ 18 ದಿನಗಳು–ಯುಗಾಂತ್ಯ ಆರಂಭ’ ನೃತ್ಯ ನಾಟಕ ಪ್ರಸ್ತುತಪಡಿಸಿದರು.

ಎಲ್ಲರ ಒಳಿತನ್ನು ಬಯಸುವವರು ಬ್ರಾಹ್ಮಣರು. ಸಮಾಜದಲ್ಲಿ ಎಷ್ಟೇ ಜಾತಿಗಳಿದ್ದರೂ ಅವೆಲ್ಲವು ನಮ್ಮ ಧರ್ಮ, ಸಂಸ್ಕೃತಿ ರಕ್ಷಣೆಯ ಕೋಟೆಯಾಗಲಿ
ವಿಶ್ವಪ್ರಸನ್ನತೀರ್ಥ ಸ್ವಾಮೀಜಿ ಪೇಜಾವರ ಮಠ

ಬ್ರಾಹ್ಮಣರು ಒಗ್ಗಟ್ಟಾಗಿ ಸಾಗುವ ಅಗತ್ಯವಿದೆ. ಸಮುದಾಯ ಒಡೆದರೆ ಬೇರೆಯವರು ಅದರ ಲಾಭ ಪಡೆದುಕೊಳ್ಳುತ್ತಾರೆ. ನಮ್ಮ ಧರ್ಮ, ಸಂಸ್ಕೃತಿ ಕಾಪಾಡಬೇಕು
ಶೋಭಾ ಕರಂದ್ಲಾಜೆ, ಕೇಂದ್ರ ಸಚಿವೆ

ಸನಾತನ ಧರ್ಮವನ್ನು ಬ್ರಾಹ್ಮಣ ಸಮುದಾಯವು ಉಳಿಸಿ, ಬೆಳೆಸುವ ಕೆಲಸ ಮಾಡುತ್ತಿದೆ. ಎಲ್ಲ ಕ್ಷೇತ್ರಗಳಲ್ಲಿ ಬ್ರಾಹ್ಮಣರು ಕೊಡುಗೆ ನೀಡುತ್ತಿದ್ದಾರೆ
ಬಿ.ವೈ. ವಿಜಯೇಂದ್ರ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

ಚಿತ್ರಾವಳಿ

ಶನಿವಾರ ನಡೆದ ಮೈಸೂರು ವಿಶ್ವವಿದ್ಯಾಲಯದ 105ನೇ ಘಟಿಕೋತ್ಸವದಲ್ಲಿ ರಾಜ್ಯಸಭಾ ಸದಸ್ಯೆ ಸುಧಾ ಮೂರ್ತಿ, ಮಾಜಿ ಸಂಸದ ಎ.ಸಿ. ಷಣ್ಮುಗಂ ಹಾಗೂ ಉದ್ಯಮಿ ಶಾಹೀನ್ ಮಜೀದ್ ಅವರಿಗೆ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಲಾಯಿತು. ಕುಲಸಚಿವೆ ಪ್ರೊ.ವಿ.ಆರ್‌. ಶೈಲಜಾ, ನವದೆಹಲಿಯ ಅಖಿಲ ಭಾರತ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ನಿರ್ದೇಶಕ ಪ್ರೊ.ಟಿ.ಪಿ. ಸಿಂಗ್, ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್, ಕುಲಪತಿ ಪ್ರೊ.ಎನ್‌.ಕೆ. ಲೋಕನಾಥ್ ಹಾಗೂ ಕುಲಸಚಿವ ಪ್ರೊ.ಎನ್. ನಾಗರಾಜ್ ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರ

ಸಪ್ತಕ ಬೆಂಗಳೂರು ಶನಿವಾರ ಆಯೋಜಿಸಿದ್ದ ಯಕ್ಷ ವೈಭವ ಕಾರ್ಯಕ್ರಮದಲ್ಲಿ ಯಕ್ಷಗಾನ ಭಾಗವತ ಕೊಳಗಿ ಕೇಶವ ಹೆಗಡೆ ಅವರನ್ನು ಸನ್ಮಾನಿಸಲಾಯಿತು. ಸಪ್ತಕ ಸಂಸ್ಥೆಯ ಸಂಚಾಲಕ ಜಿ.ಎಸ್. ಹೆಗಡೆ, ಎಂಇಎಸ್ ಕಾಲೇಜಿನ ಸಿಇಒ ಕೆ.ಎಂ. ರಾಘವೇಂದ್ರನ್, ಯಕ್ಷಗಾನ ಕಲಾವಿದ ದತ್ತಮೂರ್ತಿ ಭಟ್ ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರ

ರೈತರ ಜತೆ ಫೆ. 14 ರಂದು ಸಭೆ: ಕೇಂದ್ರ ಪ್ರಸ್ತಾವ

ಚಂಡೀಗಢ (ಪಿಟಿಐ): ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಪ್ರತಿಭಟಿಸುತ್ತಿರುವ ರೈತರ ಜತೆ ಚಂಡೀಗಢದಲ್ಲಿ ಫೆ. 14 ರಂದು ಸಭೆ ನಡೆಸಲು ಕೇಂದ್ರ ಸರ್ಕಾರ ಮುಂದಾಗಿದೆ ಎಂದು ಹಿರಿಯ ಅಧಿಕಾರಿಗಳು ಶನಿವಾರ ತಿಳಿಸಿದರು.

ಇದರ ಬೆನ್ನಲ್ಲೇ, ರೈತ ನಾಯಕರು ಉಪವಾಸ ನಿರತ ರೈತ ಮುಖಂಡ ಜಗಜಿತ್ ಸಿಂಗ್ ಡಲ್ಲೆವಾಲ್ ಅವರನ್ನು ಭೇಟಿ ಮಾಡಿ ಚರ್ಚಿಸಿ, ಉದ್ದೇಶಿತ ಸಭೆಯಲ್ಲಿ ಭಾಗವಹಿಸಲು ವೈದ್ಯಕೀಯ ನೆರವು ಪಡೆದುಕೊಳ್ಳುವಂತೆ ಕೋರಿದರು.

ಡಲ್ಲೆವಾಲ್ ಅವರು ಕೈಗೊಂಡಿರುವ ಆಮರಣಾಂತ ಉಪವಾಸ ನಿರಶನ ಶನಿವಾರ 54ನೇ ದಿನ ಪೂರೈಸಿದೆ.

ನಗರದಲ್ಲಿ ಇಂದು

ಸಿರಿಧಾನ್ಯ ಓಟ: ಅತಿಥಿಗಳು: ಅರ್ಚನಾ ಜೋಯಿಸ್, ಭರತ್ ಚಿಪ್ಲಿ, ಆಯೋಜನೆ: ಕೃಷಿ ಇಲಾಖೆ, ಸ್ಥಳ: ಕಬ್ಬನ್ ಉದ್ಯಾನದ ಬ್ಯಾಂಡ್ ಸ್ಟ್ಯಾಂಡ್‌ನಿಂದ ಪ್ರಾರಂಭ, ಬೆಳಿಗ್ಗೆ 6ರಿಂದ

ಬ್ರಾಹ್ಮಣ ಮಹಾ ಸಮ್ಮೇಳನ: ಬೆಳಿಗ್ಗೆ 8ರಿಂದ ವಿವಿಧ ಕಲಾ ತಂಡಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು, ಬೆಳಿಗ್ಗೆ 10ಕ್ಕೆ ‘ಸನಾತನ ಧರ್ಮಕ್ಕೆ ಆಚಾರತ್ರಯರ ಕೊಡುಗೆ’ ಎಂಬ ವಿಷಯದ ಮೇಲೆ ವಿಚಾರಗೋಷ್ಠಿ, ಬೆಳಿಗ್ಗೆ 11.30ಕ್ಕೆ ಸಭಾ ಕಾರ್ಯಕ್ರಮ: ದೇವೇಂದ್ರ ಫಡಣವೀಸ್, ಡಿ.ಕೆ.ಶಿವಕುಮಾರ್, ಮಧ್ಯಾಹ್ನ 3ಕ್ಕೆ ಧರ್ಮ ಸಭೆ: ಶಂಕರವಿಜಯೇಂದ್ರ ಸರಸ್ವತೀ ಸ್ವಾಮೀಜಿ, ರಾಘವೇಶ್ವರಭಾರತೀ ಸ್ವಾಮೀಜಿ, ಸ್ವಯಂ ಪ್ರಕಾಶ ಸಚ್ಚಿದಾನಂದ ಸರಸ್ವತಿ ಸ್ವಾಮೀಜಿ, ಸುಬುಧೇಂದ್ರತೀರ್ಥ ಸ್ವಾಮೀಜಿ, ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ, ಯದುಗಿರಿ ಯತಿರಾಜ ನಾರಾಯಣ ರಾಮಾನುಜ ಜೀಯರ ಸ್ವಾಮೀಜಿ, ಕೃಷ್ಣ ಎಸ್. ದೀಕ್ಷಿತ್ ಸಂಜೆ 6.30ರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು, ಆಯೋಜನೆ: ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ, ಸ್ಥಳ: ತ್ರಿಪುರವಾಸಿನಿ ಸಭಾಂಗಣ, ಅರಮನೆ ಮೈದಾನ, ಬಳ್ಳಾರಿ ರಸ್ತೆ

‘ಎಸ್.ಎಲ್. ಭೈರಪ್ಪ ಸಾಹಿತ್ಯ ಪ್ರತಿಷ್ಠಾನ ಪ್ರಶಸ್ತಿ ಪ್ರದಾನ: ಎಸ್.ಎಲ್. ಭೈರಪ್ಪ, ಪ್ರಶಸ್ತಿ ಪುರಸ್ಕೃತರು: ಉಮಾ ಕುಲಕರ್ಣಿ, ಆಯೋಜನೆ: ಎಸ್.ಎಲ್. ಭೈರಪ್ಪ ಸಾಹಿತ್ಯ ಪ್ರತಿಷ್ಠಾನ, ಸ್ಥಳ: ನ್ಯಾಷನಲ್ ಕಾಲೇಜು, ಬಸವನಗುಡಿ, ಬೆಳಿಗ್ಗೆ 10.30

ಉಮಾ ಕುಲಕರ್ಣಿ

ಪ್ರಭಾ ಅತ್ರೆ ಅವರ ನೆನಪಿನಲ್ಲಿ ಸ್ವರಾಂಜಲಿ ಸಂಗೀತ ಕಾರ್ಯಕ್ರಮ: ಅತಿಥಿಗಳು: ಚಂದ್ರಶೇಖರ ಕಂಬಾರ, ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತದ ಗಾಯನ: ಎಂ. ವೆಂಕಟೇಶ್ ಕುಮಾರ್, ತಬಲಾ: ರವೀಂದ್ರ ಯಾವಗಲ್, ಹಾರ್ಮೋನಿಯಂ: ಸತೀಶ್ ಕೊಳ್ಳಿ, ಕುಚಿಪುಡಿ ನೃತ್ಯ ಪ್ರದರ್ಶನ: ವೈಜಯಂತಿ ಕಾಶಿ, ಆಯೋಜನೆ: ಶ್ರೀರಾಮ ಕಲಾ ವೇದಿಕೆ, ಸ್ವರಾಮಯಿ, ಸ್ಥಳ: ಖಿಂಚಾ ಸಭಾಂಗಣ, ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಸಂಜೆ 5.30



ಚಂದ್ರಶೇಖರ ಕಂಬಾರ

ಮಹಿಳಾ ಸಮಾವೇಶ–ಸಮಾರೋಪ ಕಾರ್ಯಕ್ರಮದ ಉದ್ಘಾಟನೆ: ಸೀತಾ ಅನ್ನದಾನಂ, ಚಂದ್ರಕಾಂತ ದೇವಿ, ಮಂಜುಳಾ ಚೆಲ್ಲೂರು, ಅಧ್ಯಕ್ಷತೆ: ಕೆ. ರತ್ನಪ್ರಭ, ಅತಿಥಿಗಳು: ಗೀತಾ ಗುಂಡೆ, ಲಿಂಗರಾಜ ಗಾಂಧಿ, ಉಪನ್ಯಾಸ: ಗೀತಾ ರಾಮಾನುಜಂ, ಸಾಕ್ಷ್ಯಚಿತ್ರ ಬಿಡುಗಡೆ: ನಾ. ತಿಪ್ಪೇಸ್ವಾಮಿ, ‘ಲೋಕಮಾತಾ ಅಹಲ್ಯಾದೇವಿ ಇಂದಿಗೂ ಪ್ರಸ್ತುತತೆ’, ‘ಲೋಕಮಾತಾ ಅಹಲ್ಯಾದೇವಿ ಪ್ರೇರಣೆ ಮತ್ತು ನನ್ನ ಪಾತ್ರ’ ಗೋಷ್ಠಿಗಳು, ಆಯೋಜನೆ: ಲೋಕಮಾತಾ ಅಹಲ್ಯಾದೇವಿ ಹೋಳ್ಕರ್‌ರವರ ಜನ್ಮ ತ್ರಿಶತಮಾನೋತ್ಸವ ಸಮಿತಿ, ಸ್ಥಳ: ಜ್ಞಾನಜ್ಯೋತಿ ಸಭಾಂಗಣ, ಸೆಂಟ್ರಲ್ ಕಾಲೇಜಿನ ಆವರಣ, ಬೆಳಿಗ್ಗೆ 9.30ರಿಂದ

ಸುಮಾ ರಮೇಶ್ ಅವರ ‘ಅಮಟೆ... ಎಸ್’, ನಳಿನಿ ಟಿ. ಭೀಮಪ್ಪ ಅವರ ‘ಚಿತ್ತ–ಬಕ್ಕ’, ‘ಐಸ್ ಪೈಸ್’ ಪುಸ್ತಕಗಳ ಬಿಡುಗಡೆ: ಪುಸ್ತಕಗಳ ಪರಿಚಯ: ಭುವನೇಶ್ವರಿ ಹೆಗಡೆ, ಧಾರಿಣಿ ಮಾಯಾ, ಅಣಕು ರಾಮನಾಥ್, ಅಧ್ಯಕ್ಷತೆ: ಬಿ.ಆರ್. ಲಕ್ಷ್ಮಣರಾವ್, ಆಯೋಜನೆ: ನ್ಯೂವೇವ್ ಬುಕ್ಸ್, ಸ್ಥಳ: ಅಶ್ವತ್ಥ್ ಕಲಾಭವನ, ಎನ್.ಆರ್. ಕಾಲೊನಿ, ಬೆಳಿಗ್ಗೆ 10

ರೋಹಿತ್ ಕಾಯ್ದೆಗಾಗಿ ಜನಾಂದೋಲನದ ಕುರಿತು ಸಮಾಲೋಚನಾ ಸಭೆ: ಭಾಗವಹಿಸುವವರು: ರಾಧಿಕಾ ವೇಮುಲ, ಮಾವಳ್ಳಿ ಶಂಕರ್, ಸ್ಥಳ: ಸೇಂಟ್ ಜೋಸೆಫ್ ಕಾನೂನು ಕಾಲೇಜು, ರೆಸಿಡೆನ್ಸಿ ರಸ್ತೆ, ಬೆಳಿಗ್ಗೆ 10ರಿಂದ

ಮಹಾಯೋಗಿ ವೇಮನ ಜಯಂತಿಯ ಉದ್ಘಾಟನೆ: ಸಿದ್ದರಾಮಯ್ಯ, ಸಾನ್ನಿಧ್ಯ: ವೇಮನಾನಂದ ಸ್ವಾಮೀಜಿ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಶಿವರಾಜ ತಂಗಡಗಿ, ಅಧ್ಯಕ್ಷತೆ: ಉದಯ್ ಬಿ. ಗರುಡಾಚಾರ್, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 4

32ನೇ ವಾರ್ಷಿಕೋತ್ಸವದ ಅಂಗವಾಗಿ ಜಯಂತ್ ಕಾಯ್ಕಿಣಿ ಅವರ ಸಾಹಿತ್ಯದ ಕುರಿತು ಮಾತುಕತೆ: ಭಾಗವಹಿಸುವವರು: ಜಯಂತ್ ಕಾಯ್ಕಿಣಿ, ಸಚ್ಚಿದಾನಂದ ಹೆಗಡೆ, ಸಿಂಧು ರಾವ್ ಟಿ., ‘ವೀರ ಅಭಿಮನ್ಯು’ ಯಕ್ಷಗಾನ ಪ್ರದರ್ಶನ: ಪ್ರಸ್ತುತಿ: ಯಕ್ಷೇಶ್ವರಿ ಯಕ್ಷಗಾನ, ಆಯೋಜನೆ: ಶಿವರಾಮ ಕಾರಂತ ವೇದಿಕೆ, ವಿನಾಯಕ ದೇವಸ್ಥಾನ ಸಮಿತಿ, ಸ್ಥಳ: ವಿನಾಯಕ ದೇವಸ್ಥಾನ ಸಭಾಂಗಣ, ಆರ್.ಟಿ. ನಗರ, ಸಂಜೆ 4ರಿಂದ

ಸಮರ್ಪಣಾ ಕಾರ್ಯಕ್ರಮ: ಆಯೋಜನೆ ಮತ್ತು ಸ್ಥಳ: ಸತ್ಯಸಾಯಿ ಆಶ್ರಮ, ಸಾಯಿ ರಮೇಶ್ ಹಾಲ್, ಬೃಂದಾವನ, ವೈಟ್‌ಫೀಲ್ಡ್, ಸಂಜೆ 4

‘ನದಿ ಮತ್ತು ಮರದ ಪಿಸುಮಾತುಗಳು’ ಪಶ್ಚಿಮವಾಹಿನಿ ಕೃಷ್ಣನ ಒಂದು ಅದ್ಭುತ ಕಥೆ ಆಧಾರಿತ ಭರತನಾಟ್ಯ ಪ್ರದರ್ಶನ: ಆಯೋಜನೆ: ಗೋಬ್ರಹ್ಮ ಪ್ರೊಡಕ್ಷನ್ಸ್, ಸ್ಥಳ: ಪ್ರೆಸ್ಟಿಜ್ ಸೆಂಟರ್ ಫಾರ್ ಪರಫಾರ್ಮಿಂಗ್ ಆರ್ಟ್ಸ್, ಕೋಣನಕುಂಟೆ, ಕನಕಪುರ ರಸ್ತೆ, ಸಂಜೆ 6.30ರಿಂದ

ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ಕನಕಪುರ ಯೋಜನಾ ಪ್ರಾಧಿಕಾರ

ಖಾತಾ ನಂ. 469/CA/ ಸಹಕಾರಿ ವಸತಿ ಬಡಾವಣೆ, ಅಗ್ರಹಾರ ನ್ಯೂ ಕಾಲೋನಿ, ತುಂಗಣಿ ಅಂಚೆ, ಕನಕಪುರ ತಾ॥ ರಾಮನಗರ ಜಿಲ್ಲೆ
ಇ–ಮೇಲ್: kkpaplan@gmail.com ದೂ: 080-29762005, 29762006

ಸಂಖ್ಯೆ: ಕಯೋಪ್ರಾ/69(2) ಭೂಉ/09/2024–25 ದಿನಾಂಕ :

ಸಾರ್ವಜನಿಕ ಪ್ರಕಟಣೆ

ಕನಕಪುರ ಯೋಜನಾ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶಕ್ಕೆ ತಯಾರಿಸಿರುವ ಮಹಾಯೋಜನೆಗೆ ಸರ್ಕಾರದ ಆದೇಶ ದಿನಾಂಕ 07–08–2015 ರಂದು ಅನುಮೋದನೆ ನೀಡಲಾಗಿದ್ದು, ಐದು ವರ್ಷಗಳ ಅವಧಿಯು ಈಗಾಗಲೇ ಪೂರ್ಣಗೊಂಡಿರುತ್ತದೆ. ಈ ಕೆಳಕಂಡ ಅರ್ಜಿದಾರರು ಮಹಾಯೋಜನೆಯಲ್ಲಿ ನಿಗಧಿಪಡಿಸಿರುವ ಭೂ ಉಪಯೋಗಗಳನ್ನು ಮರುನಿಗಧಿಪಡಿಸಲು ಕೆಟಿಸಿಪಿ ಕಾಯ್ದೆ 1961ರ ಕಲಂ 69 ರಡಿಯಲ್ಲಿ ಕೋರಿರುತ್ತಾರೆ. ಪರಿಶೀಲಿಸಲಾಗಿ, ಸದರಿ ಸರ್ವೆ ನಂಬರ್‌ಗಳನ್ನು ಕೋಷ್ಟಕದಲ್ಲಿ ವಿವರಿಸಿರುವಂತೆ ಭೂ ಉಪಯೋಗಗಳನ್ನು ಮಹಾಯೋಜನೆಯಲ್ಲಿ ನಿಗಧಿಪಡಿಸಲಾಗಿದ್ದು, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69 (2) ರಂತೆ ಭೂ ಉಪಯೋಗ ರದ್ದಾಗಿರುತ್ತದೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 69 (3) ರನ್ವಯ ಭೂ ಉಪಯೋಗ ಮರುನಿಗಧಿಪಡಿಸಲು ಅರ್ಜಿದಾರರು ಕೋರಿರುವಂತೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 69 (4) ಅಡಿಯಲ್ಲಿ ಪ್ರಸ್ತುತ ಪ್ರಕರಣಕ್ಕೆ ಸಂಬಂಧಿಸಿದಂತೆ, ಭೂ ಉಪಯೋಗ ಮರುನಿಗಧಿಪಡಿಸಲು ಯಾರಿಂದಲಾದರೂ ಆಕ್ಷೇಪಣೆ/ಸಲಹೆಗಳಿದ್ದರೆ. ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಕನಕಪುರ ಯೋಜನಾ ಪ್ರಾಧಿಕಾರ, ಕನಕಪುರ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

: ಕೋಷ್ಟಕ :

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ / ಗುಂ.	ಮಹಾಯೋಜನೆಯ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ ಮದನ್ ಆರ್. ಮತ್ತು ಶ್ರೀಮತಿ ಮಂಗಳಮದನ್	ಹಾರೋಹಳ್ಳಿ	ಹಾರೋಹಳ್ಳಿ	ಮೇಡಮಾರನಹಳ್ಳಿ	8/5	2–35.08 ಪೈಕಿ 0–38	ಉದ್ಯಾನವನ ಮತ್ತು ಬಯಲು ಜಾಗ	ವಸತಿ
2					20/1	1–17 ಪೈಕಿ 1–13		
3					20/2	1–26 ಪೈಕಿ 1–21		
4.					20/4	1–02 ಪೈಕಿ 0–24		
5.					20/6	0–28.08 ಪೈಕಿ 0–07		
					ಒಟ್ಟು	4–23		

ಸಹಿ/– ಜಂಟಿ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನೆ ಹಾಗೂ ಸದಸ್ಯ–ಕಾರ್ಯದರ್ಶಿ,
ಕನಕಪುರ ಯೋಜನಾ ಪ್ರಾಧಿಕಾರ, ಕನಕಪುರ.

ಹೈಸ್ಕೂಲು ದಿನಗಳ ನೆನಪುಗಳನ್ನು ಹಂಚಿಕೊಂಡ ನಟ ರಜನಿಕಾಂತ್

ಎಪಿಎಸ್‌ನಿಂದಲೇ ನಟನೆ ವೃತ್ತಿ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನನ್ನ ನಟನೆಯ ವೃತ್ತಿ ಆರಂಭವಾಗಿದ್ದೇ ಎಪಿಎಸ್‌ನಿಂದ’ ಎಂದಿರುವ ನಟ ರಜನಿಕಾಂತ್ ನಗರದಲ್ಲಿ ಕಳೆದ ಹೈಸ್ಕೂಲು ದಿನಗಳ ನೆನಪುಗಳನ್ನು ಮೆಲುಕು ಹಾಕಿಕೊಂಡಿದ್ದಾರೆ.

ಸದ್ಯ ಬ್ಯಾಂಕಾಕ್‌ನಲ್ಲಿ ಸಿನಿಮಾವೊಂದರ ಚಿತ್ರೀಕರಣದಲ್ಲಿ ರಜನಿಕಾಂತ್ ತೊಡಗಿಸಿಕೊಂಡಿದ್ದಾರೆ. ಈ ನಡುವೆ ಬಸವನಗುಡಿಯ ಎಪಿಎಸ್ (ಆಚಾರ್ಯ ಪಾಠ ಶಾಲಾ) ಸಂಸ್ಥೆಯ ಹಳೆ ವಿದ್ಯಾರ್ಥಿಗಳ ಸಮ್ಮಿಲನ ಕಾರ್ಯಕ್ರಮ-ಕ್ಕಾಗಿ ವಿಡಿಯೊವೊಂದನ್ನು ಕಳುಹಿಸಿ ಕನ್ನಡದಲ್ಲೇ ಶುಭಕೋರಿದ್ದಾರೆ.

‘ಎಪಿಎಸ್ ಶಾಲೆಯ ಹಳೆ ವಿದ್ಯಾರ್ಥಿಗಳ ಸಮ್ಮಿಲನ ಕಾರ್ಯಕ್ರಮದಲ್ಲಿ ಭಾಗವಹಿಸಲು ಸಾಧ್ಯವಾಗುತ್ತಿಲ್ಲ. ಜೊತೆಗಿದ್ದಿದ್ದರೆ ಸಂತೋಷವಾಗುತ್ತಿತ್ತು. ಎಪಿಎಸ್ ಹೈಸ್ಕೂಲ್ ಹಾಗೂ ಕಾಲೇಜಿನಲ್ಲಿ ನಾನು ಓದಿದ್ದೇನೆ ಎಂದು ಹೇಳಲು ಹೆಮ್ಮೆ ಪಡುತ್ತೇನೆ. ಗವಿಪುರಂನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಾನು ಪ್ರಾಥಮಿಕ ಶಿಕ್ಷಣ ಪೂರ್ಣಗೊಳಿಸಿದ್ದೆ. ಅದು ಕನ್ನಡ ಮಾಧ್ಯಮ. ತುಂಬಾ ಚೆನ್ನಾಗಿ ಓದುತ್ತಿದ್ದೆ. ತರಗತಿಗೆ ನಾನೇ ಮೊದಲು. ನಾನೇ ತರಗತಿಯ ನಾಯಕನಾಗಿದ್ದೆ. ಶೇ 98 ಅಂಕ ಪಡೆದು ಉತ್ತೀರ್ಣನಾಗಿದ್ದೆ’ ಎಂದು ನೆನಪಿಸಿಕೊಂಡಿದ್ದಾರೆ.

ಹೈಸ್ಕೂಲ್ ಶಿಕ್ಷಣದ ನಂತರ ನಾನು ಎಪಿಎಸ್ ಕಾಲೇಜಿಗೆ ಸೇರ್ಪಡೆಯಾದೆ. ನಂತರ ನಾನಾ ಕಾರಣಗಳಿಂದ ನನಗೆ ಶಿಕ್ಷಣ ಮುಂದುವರಿಸಲು ಸಾಧ್ಯವಾಗಿಲ್ಲ’ ಎಂದು ಮೆಲುಕು ಹಾಕಿದ್ದಾರೆ.

ನಾಟಕ, ಅಭಿನಯ ಮೆಲುಕು...

ಹೈಸ್ಕೂಲ್‌ನಲ್ಲಿದ್ದಾಗ ಆಡಿದ್ದ ನಾಟಕವೊಂದನ್ನು ರಜನಿಕಾಂತ್ ನೆನಪಿಸಿಕೊಂಡಿದ್ದಾರೆ. ‘ಎಪಿಎಸ್ ಹೈಸ್ಕೂಲ್‌ನಲ್ಲಿ ಓದುತ್ತಿದ್ದಾಗ ಅಂತರ್‌ಶಾಲಾ ನಾಟಕ ಸ್ಪರ್ಧೆ ನಡೆಯುತ್ತಿತ್ತು. ಹತ್ತು ಹದಿನೈದು ಶಾಲೆಗಳು ಅದರಲ್ಲಿ ಭಾಗವಹಿಸುತ್ತಿದ್ದವು. ನಾನು ಆಗ ತರಗತಿಗೆ ಶಿಕ್ಷಕರು ಬರುವುದು ವಿಳಂಬವಾದರೆ ನಟನೆ ಮಾಡುತ್ತಾ ಸ್ನೇಹಿತರಿಗೆ ಕಥೆಗಳನ್ನು ಹೇಳುತ್ತಿದ್ದೆ. ಈ ವಿಷಯ ಟೀಚರ್‌ಗಳ ಕಿವಿಗೂ ಬಿದ್ದಿತ್ತು. ಅವರು ನನಗೆ ನಾಟಕವೊಂದ ರಲ್ಲಿ ಅವಕಾಶ ನೀಡಿದರು. ಆದಿಶಂಕರ ಮತ್ತು ಚಾಂಡಾಲ ಭೇಟಿಯ ನಾಟಕವದು. ಈ ದೃಶ್ಯದಲ್ಲಿ ನಾನು ಚಾಂಡಾಲನ ಪಾತ್ರ ನಿರ್ವಹಿಸಿದ್ದೆ. ನೋಡಲು ಚಾಂಡಾಲನಂತೆ ಕಾಣುತ್ತಿದ್ದುದರಿಂದ ನನ್ನನ್ನು ಆ ಪಾತ್ರಕ್ಕೆ ಆಯ್ಕೆ ಮಾಡಿದ್ದರು ಎನ್ನಿಸುತ್ತದೆ. ಈ ನಾಟಕಕ್ಕಾಗಿ ನಮ್ಮ ತಂಡಕ್ಕೆ ಪ್ರಶಸ್ತಿ ಸಿಕ್ಕಿತು. ನನಗೆ ಅತ್ಯುತ್ತಮ ನಟ ಎಂಬ ದೊಡ್ಡ ಕಪ್ ಕೊಟ್ಟರು. ಆಗಿನಿಂದಲೇ ನನ್ನನ್ನು ನಟ ಎಂದು ಅಂಗೀಕಾರ ಮಾಡಿ, ನಟನೆಯನ್ನೇ ವೃತ್ತಿಯನ್ನಾಗಿ ತೆಗೆದುಕೊಳ್ಳುವಂತೆ ಮಾಡಿದ್ದು ಎಪಿಎಸ್ ಎಂದು ಹೇಳಿಕೊಳ್ಳಲು ಹೆಮ್ಮೆಯಾಗುತ್ತಿದೆ. ಆ ಹೈಸ್ಕೂಲ್, ಕಲ್ಲಿನ ಕಟ್ಟಡ, ಮೈದಾನ, ಅಲ್ಲಿ ಆಡಿದ ಆಟಗಳನ್ನು ಮರೆಯಲು ಸಾಧ್ಯವಿಲ್ಲ’ ಎಂದು ನೆನಪು ಮಾಡಿಕೊಂಡಿದ್ದಾರೆ.

₹8 ಕೋಟಿ ವಂಚನೆ: ಮಾರಾಟ ಪ್ರತಿನಿಧಿ ವಿರುದ್ಧ ದೂರು • ಹಲಸೂರು ಗೇಟ್ ಠಾಣೆಯಲ್ಲಿ ಪ್ರಕರಣ ದಾಖಲು

ಮಾರಾಟಕ್ಕೆ ಕೊಟ್ಟಿದ್ದ ಚಿನ್ನದೊಂದಿಗೆ ಪರಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಲಸ ಮಾಡುತ್ತಿದ್ದ ಆಭರಣ ಅಂಗಡಿ ಹಾಗೂ ಪರಿಚಿತರ ಅಂಗಡಿಗಳ ಮಾಲೀಕರು ಮಾರಾಟ ಮಾಡಲು ನೀಡಿದ್ದ ₹8 ಕೋಟಿ ಮೌಲ್ಯದ ಸುಮಾರು 9 ಕೆ.ಜಿ 462 ಗ್ರಾಂ ತೂಕದ ಚಿನ್ನಾಭರಣದೊಂದಿಗೆ ಮಾರಾಟ ಪ್ರತಿನಿಧಿ ಪರಾರಿಯಾಗಿರುವ ಘಟನೆ ನಡೆದಿದೆ.

ವಿಕ್ರಮ್ ಜ್ಯುವೆಲರ್ಸ್ ಮಾಲೀಕ ವಿಕ್ರಮ್ ಕಾರ್ಯ ಅವರ ದೂರಿನ ಮೇರೆಗೆ ಹಲಸೂರು ಗೇಟ್ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಆರೋಪಿಗಾಗಿ ಶೋಧ ನಡೆಸುತ್ತಿದ್ದಾರೆ.

ವಿಕ್ರಮ್ ಅವರ ಅಂಗಡಿಯಲ್ಲಿ ಆರೋಪಿ, ಚೆನ್ನೈನನರೇಶ್ ಶರ್ಮಾ ಅವರು ನಾಲ್ಕು ವರ್ಷದಿಂದ ಕೆಲಸ ಮಾಡುತ್ತಿದ್ದರು. ಈತನ ಮೂಲಕ ವಿಕ್ರಮ್ ಅವರು ಹಲವು ಗ್ರಾಹಕರಿಗೆ ಮತ್ತು ಅಂಗಡಿಗಳಿಗೆ ಚಿನ್ನಾಭರಣ ಮಾರಾಟ ಮಾಡಿಸಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

‘ಒಂದು ವಾರದ ಹಿಂದೆ ವಿಕ್ರಮ್ ಅವರು ಬೇರೆ ಅಂಗಡಿಗಳಿಂದ ಸುಮಾರು 7 ಕೆ.ಜಿ. 732 ಗ್ರಾಂ ತೂಕದ ಚಿನ್ನ ಖರೀದಿಸಿ ನರಶ್ ಶರ್ಮಾಗೆ ನೀಡಿ ಮಾರಾಟ ಮಾಡಿಕೊಂಡು ಬರುವಂತೆ ಜನವರಿಗೆ 2 ರಂದು ಸೂಚಿಸಿದ್ದರು. ಚಿನ್ನಾಭರಣ ತೆಗೆದುಕೊಂಡು ಕೊಯಮತ್ತೂರಿಗೆ ಹೋಗಿ ಕೆಲ ಆಭರಣ ಮಾರಾಟ ಮಾಡಿ ನರೇಶ್ ವಾಪಸ್ ಬಂದಿದ್ದ. ಮತ್ತೆ ಜನವರಿ 8ರಂದು ಉಳಿದ ಚಿನ್ನಾಭರಣ ಮಾರಾಟ ಮಾಡಲು ಹೊರ ರಾಜ್ಯಕ್ಕೆ ಹೋಗಿದ್ದ. ಬಳಿಕ ಆತನ ಮೊಬೈಲ್ ಸ್ವಿಚ್ಡ್‌ಆಫ್ ಆಗಿದ್ದು ಸಂಪರ್ಕಕ್ಕೆ ಸಿಕ್ಕಿಲ್ಲ’ ಎಂದು ಹೇಳಿದ್ದಾರೆ.

‘ವಿಕ್ರಮ್ ಅವರು ನರೇಶ್ ಬಗ್ಗೆ ಪರಿಚಿತರ ಅಂಗಡಿಗಳಲ್ಲಿ ವಿಚಾರಿಸಿದಾಗ, ರಬಿ ಶಂಕರ್ ಪಾಲ್ ಅವರ ಪಾಲ್‌ಗೋಲ್ಡ್ ಅಂಗಡಿಯಿಂದ ಜ. 3 ರಂದು 676 ಗ್ರಾಂ ಚಿನ್ನ ಹಾಗೂ ಜ. 5 ರಂದು ಸುಮಾರು 1 ಕೆ.ಜಿ. 53 ಗ್ರಾಂ ಚಿನ್ನ ಮಾರಾಟ ಮಾಡಲು ತೆಗೆದುಕೊಂಡು ಹೋಗಿರು ವುದು ಗೊತ್ತಾಗಿದೆ. ಆರೋಪಿ ಒಟ್ಟಾರೆ ₹ 8 ಕೋಟಿ ಮೌಲ್ಯದ ಸುಮಾರು 9 ಕೆ.ಜಿ. 462 ಗ್ರಾಂ ತೂಕದ ಆಭರಣದೊಂದಿಗೆ ಪರಾರಿಯಾಗಿರುವ ಬಗ್ಗೆ ವಿಕ್ರಮ್ ದೂರು ನೀಡಿದ್ದಾರೆ’ ಎಂದು ಮಾಹಿತಿ ನೀಡಿದರು.

ಆರೋಪಿ ಪತ್ತೆಗೆ ಪೊಲೀಸರ ಎರಡು ತಂಡಗಳು ರಚಿಸಿದ್ದು, ಪತ್ತೆ ಕಾರ್ಯ ನಡೆಯುತ್ತಿದೆ. ಆರೋಪಿಯು ಜಮ್ಮು ಮತ್ತು ಕಾಶ್ಮೀರದ ಶ್ರೀನಗರದಲ್ಲಿರುವ ಬಗ್ಗೆ ಮಾಹಿತಿ ಲಭ್ಯವಾಗಿದ್ದು, ಅಲ್ಲಿಗೆ ಒಂದು ತಂಡ ತೆರಳಿದೆ.

ಗಮನ ಬೇರೆಡೆ ಸೆಳೆದು ₹ 23 ಲಕ್ಷ ಚಿನ್ನ ಕಳವು

ಚಿನ್ನಾಭರಣ ವಿನ್ಯಾಸ ಕೆಲಸ ಮಾಡುವ ವ್ಯಕ್ತಿಯ ಗಮನ ಬೇರೆಡೆ ಸೆಳೆದು ₹23 ಲಕ್ಷ ಮೌಲ್ಯದ ಆಭರಣ ಕಳ್ಳತನ ಮಾಡಲಾಗಿದೆ.

ಅಶೋಕ್ ನಗರದ ನಿವಾಸಿ ವಸಂತ್ ಕುಮಾರ್ ಅವರ ದೂರಿನ ಮೇರೆಗೆ ಹಲಸೂರು ಗೇಟ್ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ತನಿಖೆ ಕೈಗೊಂಡಿದ್ದಾರೆ.

ಸಹೋದರರಾದ ಸುಧೀರ್ ಕುಮಾರ್ ಮತ್ತು ವಸಂತ್ ಕುಮಾರ್ ಅವರು ಸಿ.ಟಿ.ಸ್ಟ್ರೀಟ್‌ನಲ್ಲಿ ಮೆಲೇಚಾ ಡೈಮಂಡ್ಸ್ ಅಂಗಡಿಗೆ ಚಿನ್ನಾಭರಣ ವಿನ್ಯಾಸ ಮಾಡಿಕೊಡುತ್ತಿದ್ದರು. ಕೆಲ ದಿನಗಳ ಹಿಂದೆ ಪ್ರಕಾಶ್ ಜ್ಯುವೆಲ್ಲರಿ ಮಾಲೀಕರು ಇವರಿಗೆ 115.64 ಗ್ರಾಂ ಹಾಗೂ 85 ಗ್ರಾಂ ತೂಕದ ಚಿನ್ನದ ಆಭರಣವನ್ನು ವಿನ್ಯಾಸ ಮಾಡಿಕೊಡುವಂತೆ ನೀಡಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಅದರಂತೆ ಅಂಗಡಿಯಲ್ಲಿ ಡಿಸೈನ್ ಮಾಡಿರುವ 94 ಗ್ರಾಂ ಮತ್ತು 27 ಗ್ರಾಂ ಚಿನ್ನದ ಆಭರಣ ಸೇರಿ ಒಟ್ಟು 314 ಗ್ರಾಂ ಆಭರಣವನ್ನು ಬ್ಯಾಗ್‌ನಲ್ಲಿ ಇಟ್ಟುಕೊಂಡು ಪ್ರಕಾಶ್ ಜ್ಯುವೆಲ್ಲರಿ ಅಂಗಡಿಗೆ ಕೊಡಲು ಹೊರಟಿದ್ದರು. ಚಿನ್ನಾಭರಣದ ಬ್ಯಾಗ್ ಅನ್ನು ವಸಂತ್ ಕುಮಾರ್ ದ್ವಿಚಕ್ರ ವಾಹನ ಮೇಲೆ ಇಟ್ಟಿದ್ದರು. ಆ ವೇಳೆ ಮೂವರು ಇವರ ಬಳಿ ಬಂದು ವಿಳಾಸ ಕೇಳುವ ನೆಪದಲ್ಲಿ ಗಮನವನ್ನು ಬೇರೆಡೆ ಸೆಳೆದು ಬ್ಯಾಗ್‌ನಲ್ಲಿದ್ದ 314 ಗ್ರಾಂ ಚಿನ್ನ ಲಪಟಾಯಿಸಿದ್ದರು ಎಂದು ಹೇಳಿದ್ದಾರೆ.

ವಿದೇಶಿ ಡ್ರಗ್ಸ್ ಪೆಡ್ಲರ್ ಬಂಧನ

ಬೆಂಗಳೂರು: ನಗರದಲ್ಲಿ ಕಾಲೇಜು ವಿದ್ಯಾರ್ಥಿಗಳಿಗೆ ಮಾದಕ ವಸ್ತು ಮಾರಾಟ ಮಾಡುತ್ತಿದ್ದ ವಿದೇಶಿ ಡ್ರಗ್ಸ್ ಪೆಡ್ಲರ್ ನನ್ನು ಸೋಲದೇವನಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ

ಆಫ್ರಿಕಾದ ಕ್ರಿಸ್ಟೋಫರ್ ಒಕ್ವಿಡಿಲಿ ಅವರನ್ನು ಬಂಧಿಸಿ, ₹ 48 ಲಕ್ಷ ಮೌಲ್ಯದ 250 ಗ್ರಾಂ ತೂಕದ ಹೈಡ್ರೋ ಗಾಂಜಾ, 165 ಗ್ರಾಂ ಎಂಡಿಎಂಎ ವಶಪಡಿಸಿಕೊಳ್ಳಲಾಗಿದೆ.



ಬೆಂಗಳೂರು ಉತ್ತರ ತಾಲ್ಲೂಕಿನ ಚಿಕ್ಕಬಾಣಾವ-ರದ ವಿನಾಯಕ ನಗರ ಬಳಿ ಆರೋಪಿಯು ಹೊರ ರಾಜ್ಯದ ಕಾಲೇಜು ವಿದ್ಯಾರ್ಥಿಗಳಿಗೆ ಮಾದಕ ವಸ್ತುಗಳನ್ನು ಮಾರಾಟ ಮಾಡುತ್ತಿದ್ದ. ವಿಷಯ ತಿಳಿದ ಪೊಲೀಸರು ಕಾರ್ಯಾಚರಣೆ ನಡೆಸಿ, ಮಾದಕ ವಸ್ತುಗಳ ಸಮೇತ ಆರೋಪಿಯನ್ನು ಬಂಧಿಸಿದ್ದಾರೆ.

ಆರೋಪಿಯು ಹೆಬ್ಬಾಳದಲ್ಲಿ ಕಡಿಮೆ ಬೆಲೆಗೆ ಮಾದಕ ವಸ್ತುಗಳನ್ನು ಖರೀದಿಸಿ, ಹೆಚ್ಚಿನ ಬೆಲೆಗೆ ಕಾಲೇಜು ವಿದ್ಯಾರ್ಥಿಗಳು ಹಾಗೂ ಗ್ರಾಹಕರಿಗೆ ಮಾರಾಟ ಮಾಡುತ್ತಿದ್ದ. ಎಲ್ಲಿಂದ ಮಾದಕ ವಸ್ತು ನಗರಕ್ಕೆ ಪೂರೈಕೆ ಆಗುತ್ತಿತ್ತು ಎಂಬುದರ ಕುರಿತು ತನಿಖೆ ನಡೆಯುತ್ತಿದೆ ಎಂದು ಪೊಲೀಸರು ತಿಳಿಸಿದರು.

ಸ್ಪೇನ್ ಪ್ರಜೆ ನಿವಾಸದಲ್ಲಿ ಕಳ್ಳತನ

ಬೆಂಗಳೂರು: ಅಶೋಕನಗರ ಠಾಣೆ ವ್ಯಾಪ್ತಿಯ ಲ್ಯಾಂಗ್‌ಫೋರ್ಡ್ ಟೌನ್‌ನಲ್ಲಿರುವ ನಾಯ್ಡುಸ್ ಅಪಾರ್ಟ್‌ಮೆಂಟ್‌ನ ಸ್ಪೇನ್ ಪ್ರಜೆಯ ನಿವಾಸದಲ್ಲಿ ಕಳ್ಳತನ ನಡೆದಿದೆ.

ಜನವರಿ 14ರ ರಾತ್ರಿ 2 ಗಂಟೆ ಸುಮಾರಿಗೆ ಸ್ಪೇನ್ ಪ್ರಜೆ ಜೀಸಸ್ ಅಬ್ರಿಲ್ ಅವರು ಬಾಡಿಗೆಗೆ ವಾಸವಿದ್ದ ನಿವಾಸದ ಶೌಚಗೃಹದ ಕಿಟಿಕಿ ಗಾಜು ಒಡೆದು ಇಬ್ಬರು ಕಳ್ಳರು ನುಗ್ಗಿದ್ದಾರೆ. ಈ ವೇಳೆ ಆತಂಕಗೊಂಡ ಜೀಸಸ್ ಅಬ್ರಿಲ್, ಮತ್ತೊಂದು ರೂಮ್‌ಗೆ ಹೋಗಿ ಚಿಲಕ ಹಾಕಿಕೊಂಡಿದ್ದಾರೆ.

ಅಷ್ಟರಲ್ಲಿ ಕಳ್ಳರು ₹10 ಸಾವಿರ ನಗದು, ಲ್ಯಾಪ್‌ಟಾಪ್, ಪ್ಲಾಟಿನಂ ಉಂಗುರ, ಸ್ಪೇನ್‌ನ ಐಡಿ ಕಾರ್ಡ್, ಚಾಲನಾ ಪರವಾನಗಿ, ಡೆಬಿಟ್ ಕಾರ್ಡ್, ಭಾರತದ ಡೆಬಿಟ್ ಕಾರ್ಡ್‌ಗಳು ಸೇರಿದಂತೆ ₹82 ಸಾವಿರ ಮೌಲ್ಯದ ವಸ್ತುಗಳನ್ನು ಕದ್ದು ಪರಾರಿಯಾಗಿದ್ದಾರೆ. ಖಾಸಗಿ ಕಂಪನಿಯೊಂದರ ಉದ್ಯೋಗಿಯಾಗಿರುವ ಜೀಸಸ್ ಅಬ್ರಿಲ್ ಅವರು ಎರಡು ವರ್ಷಗಳಿಂದ ನಗರದಲ್ಲಿ ವಾಸವಿದ್ದರು. ಫ್ಲ್ಯಾಟ್ ಮಾಲೀಕ ಸುಧೀರ್ ಅವರಿಗೆ ಕರೆ ಮಾಡಿ ಕಳ್ಳತನ ವಿಷಯ ತಿಳಿಸಿದ್ದಾರೆ.

ಜನವರಿ 15ರ ಬೆಳಿಗ್ಗೆ 9.17ಕ್ಕೆ ಸಹಾಯವಾಣಿ 112ಕ್ಕೆ ಕರೆ ಮಾಡಿದ ಜೀಸಸ್, ಮಾಹಿತಿ ನೀಡದೆ ಕರೆ ಸ್ಥಗಿತಗೊಳಿಸಿದ್ದಾರೆ. ಬಳಿಕ 9.19ಕ್ಕೆ ಮತ್ತೆ 112ಕ್ಕೆ ಕರೆ ಮಾಡಿ, ಘಟನೆಗೆ ಬಗ್ಗೆ ಸ್ವಲ್ಪ ಮಾಹಿತಿ ನೀಡಿದ್ದಾರೆ. 10.08ಕ್ಕೆ ಜೀಸಸ್ ಅವರ ಪಕ್ಕದ ಮನೆಯ ನಿವಾಸಿ ಸೈಯದ್ ಅಶಫ್ ಅವರು ಕರೆ ಮಾಡಿ ಘಟನೆ ಬಗ್ಗೆ ಸಂಪೂರ್ಣ ಮಾಹಿತಿ ನೀಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಹೊಯ್ಸಳ ವಾಹನ ಸಿಬ್ಬಂದಿ ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿ, ಸಮೀಪದ ಠಾಣೆಗೆ ಮಾಹಿತಿ ನೀಡಿದ್ದಾರೆ. ಅಶೋಕ ನಗರ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಪ್ರಕರಣ ದಾಖಲಿಸಿಕೊಂಡು ಆರೋಪಿ ಪತ್ತೆಗೆ ಶೋಧ ಆರಂಭಿಸಿದ್ದಾರೆ.

ಬುದ್ಧಿ ಹೇಳಿದ ತಂದೆಯ ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬುದ್ಧಿವಾದ ಹೇಳಿದ ತಂದೆಯನ್ನೇ ಕೊಲೆ ಮಾಡಿದ ಮಗನನ್ನು ರಾಜಾಜಿನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ರಘು ಬಂಧಿತ ವ್ಯಕ್ತಿ. ಈತ ತನ್ನ ತಂದೆ ರಾಮಚಂದ್ರ ಅವರ ತಲೆಗೆ ಕಬ್ಬಿಣದ ಸಲಾಕೆಯಿಂದ ಹೊಡೆದು ಕೊಲೆ ಮಾಡಿದ್ದಾನೆ.

‘ಮೃತ ರಾಮಚಂದ್ರ ಅವರು ಲಾರಿ ಚಾಲಕರಾಗಿದ್ದರು. ಅನಾರೋಗ್ಯ ಪೀಡಿತರಾಗಿದ್ದ ತನ್ನ ಪತ್ನಿಯನ್ನು ನೋಡಿಕೊಳ್ಳುತ್ತಿದ್ದರು. ಆದರೆ ಮಗ ಕೆಲಸಕ್ಕೆ ಹೋಗದೆ ನಿತ್ಯ ಮದ್ಯ ಸೇವಿಸಿ ಬಂದು ಹಣ ನೀಡುವಂತೆ ಪೋಷಕರ ಜತೆ ಜಗಳವಾಡುತ್ತಿದ್ದ. ಜನವರಿ 10ರ ರಾತ್ರಿ ಕುಡಿದು ಬಂದು ಗಲಾಟೆ ಮಾಡುತ್ತಿದ್ದ ಮಗನಿಗೆ ತಂದೆ ಬೈದು ಬುದ್ಧಿವಾದ ಹೇಳಿದ್ದರು’ ಎಂದು ಪೊಲೀಸರು ತಿಳಿಸಿದರು.

‘ಈ ವೇಳೆ ಕೋಪಗೊಂಡ ರಘು ಕಬ್ಬಿಣದ ಸಲಾಕೆಯಿಂದ ಅವರ ತಲೆಗೆ ಹೊಡೆದಿದ್ದಾನೆ. ತೀವ್ರ ರಕ್ತಸ್ರಾವದಿಂದ ಅವರು ಸ್ಥಳದಲ್ಲೇ ಕುಸಿದು ಬಿದ್ದು ಮೃತಪಟ್ಟರು’ ಎಂದು ಹೇಳಿದರು.

ಕಟ್ಟಡದ 5ನೇ ಮಹಡಿಯಿಂದ ಜಿಗಿದು ವಿದ್ಯಾರ್ಥಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಖಾಸಗಿ ಎಂಜಿನಿಯರಿಂಗ್ ಕಾಲೇಜು ಕಟ್ಟಡದ 5ನೇ ಮಹಡಿಯಿಂದ ಜಿಗಿದು ವಿದ್ಯಾರ್ಥಿಯೊಬ್ಬ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಹನುಮಂತನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಆನೇಕಲ್ ನಿವಾಸಿ ಆರ್.ಆಕರ್ಷ್(22) ಮೃತ ವಿದ್ಯಾರ್ಥಿ.

‘ಬಸವನಗುಡಿಯ ಕಾಲೇಜೊಂದರಲ್ಲಿ ಏರೋಸ್ಪೇಸ್ ಎಂಜಿನಿಯರಿಂಗ್ ಕೋರ್ಸ್‌ನ 7ನೇ ಸೆಮಿಸ್ಟರ್‌ನಲ್ಲಿ ಓದುತ್ತಿದ್ದ ಆಕರ್ಷ, ಮಧ್ಯಾಹ್ನ ಇಂಟರ್‌ನಲ್ ಪರೀಕ್ಷೆಗೆ ಹಾಜರಾಗಿದ್ದ. ಆದರೆ, ಸಂಜೆ ಸುಮಾರು 5 ಗಂಟೆಗೆ ಕಾಲೇಜು ಕಟ್ಟಡದ 5ನೇ ಮಹಡಿಯಿಂದ ಜಿಗಿದಿದ್ದಾನೆ. ತೀವ್ರವಾಗಿ ಗಾಯಗೊಂಡಿದ್ದ ಆಕರ್ಷ್‌ನನ್ನು ಸ್ನೇಹಿತರು ಹಾಗೂ ಕಾಲೇಜು ಸಿಬ್ಬಂದಿ ಸಮೀಪದ ಕಿಮ್ಸ್ ಆಸ್ಪತ್ರೆಗೆ ಕರೆದೊಯ್ದಿದ್ದಾರೆ. ಪರೀಕ್ಷಿಸಿದ ವೈದ್ಯರು ಆಕರ್ಷ್ ಮೃತ ಪಟ್ಟಿರುವುದಾಗಿ ಘೋಷಿಸಿದ್ದಾರೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಹನುಮಂತನಗರ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಆಕರ್ಷ್ ಆತ್ಮಹತ್ಯೆಗೆ ನಿಖರ ಕಾರಣ ತಿಳಿದು ಬಂದಿಲ್ಲ. ಈ ಸಂಬಂಧ ಹನುಮಂತನಗರ ಪೊಲೀಸ್ ಠಾಣೆಯಲ್ಲಿ ಅಸಹಜ ಸಾವು ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುವರೆದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ವಿಷ ನೀಡಿ ಪ್ರೇಯಸಿ ಕೊಂದ ಟೆಕಿ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದೇಶಿ ಯುವಕನ ಜತೆ ಮದುವೆಗೆ ಸಿದ್ದವಾಗಿದ್ದ ಪ್ರೇಯಸಿಗೆ ವಿಷ ನೀಡಿ ಕೊಲೆ ಮಾಡಿ, ಬಳಿಕ ಆತ್ಮಹತ್ಯೆಗೆ ಯತ್ನಿಸಿದ ವ್ಯಕ್ತಿಯನ್ನು ಎಚ್‌ಎಎಲ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಡಿಸೆಂಬರ್ 31ರಂದು ಕುಂದಲಹಳ್ಳಿಯ ದೀಪಂ ನಿವಾಸ್ ಅಪಾರ್ಟ್‌ಮೆಂಟ್‌ನಲ್ಲಿ ನಡೆದಿದ್ದ ಉಜ್ಮಾ ಖಾನ್ (45) ಕೊಲೆ ಆರೋಪಕ್ಕೆ ಸಂಬಂಧಿಸಿದಂತೆ ಆಕೆಯ ಪ್ರಿಯಕರ ಇಮ್ಮಾದ್ ಬಾಷಾ (53) ಅವರನ್ನು ಬಂಧಿಸಲಾಗಿದೆ ಎಂದು ವೈಟ್ ಫೀಲ್ಡ್ ವಿಭಾಗದ ಡಿಸಿಪಿ ಡಾ.ಶಿವಕುಮಾರ್ ಗುಣಾರೆ ಮಾಹಿತಿ ನೀಡಿದ್ದಾರೆ.

‘ಸಾಫ್ಟ್‌ವೇರ್ ಎಂಜಿನಿಯರ್ ಆಗಿದ್ದ ಇಮ್ಮಾದ್ ಬಾಷಾ ಹಾಗೂ ಸಂಬಂಧಿ ಉಜ್ಮಾ ಖಾನ್ ಆತ್ಮೀಯ ಸ್ನೇಹಿತರು. ಇಬ್ಬರಿಗೂ ಮದುವೆ ಮಾಡಲು ಹಿರಿಯರು ನಿರ್ಧರಿಸಿದ್ದರು. ಆದರೆ, ಕಾರಣಾಂತರಗಳಿಂದ ಸಾಧ್ಯವಾಗಿರಲಿಲ್ಲ.

ಇಮ್ಮಾದ್ ಬಾಷಾ

ಹಾಗಾಗಿ ಆರೋಪಿ ಮುಂಬೈಗೆ ತೆರಳಿ ಯುವತಿಯೊಬ್ಬಳನ್ನು ಮದುವೆಯಾಗಿದ್ದ. ಆದರೆ, ಕೌಟುಂಬಿಕ ಕಾರಣಗಳಿಂದ ಪತ್ನಿಗೆ ಕೆಲ ವರ್ಷಗಳ ಹಿಂದೆ ವಿಚ್ಛೇದನ ನೀಡಿದ್ದ’ ಎಂದು ಪೊಲೀಸರು ತಿಳಿಸಿದ್ದಾರೆ.

‘ಉಜ್ಮಾಖಾನ್ ಸಹ ಬೇರೊಬ್ಬನ ಯುವಕನ ಜತೆ ವಿವಾಹವಾಗಿದ್ದರು. ಇವರು ಕೂಡ 2017ರಲ್ಲಿ ಪತಿಗೆ ವಿಚ್ಛೇದನ ನೀಡಿದ್ದರು. ಹಾಗಾಗಿ ಇವರ ಪೋಷಕರು, ಆಸ್ಟ್ರಿಯಾದಲ್ಲಿ ನೆಲಸಿರುವ ಪಾಕಿಸ್ತಾನ ಮೂಲದ ಅರ್ಶದ್ ಜತೆ ಮದುವೆ ಮಾಡಲು ನಿರ್ಧರಿಸಿದ್ದರು. ಮೊದಲೇ ಉಜ್ಮಾಳ ಮೊಬೈಲ್ ಫೋನ್ ಕ್ಲೋನಿಂಗ್ ಮಾಡಿಕೊಂಡಿದ್ದ ಇಮ್ಮಾದ್‌ಗೆ ಈ ವಿಚಾರ ಗೊತ್ತಾಗಿತ್ತು’ ಎಂದು ಪೊಲೀಸರು ತಿಳಿಸಿದ್ದಾರೆ.

ಉಜ್ಮಾ ಎಚ್‌ಬಿಆರ್ ಲೇಔಟ್‌ನಲ್ಲಿ ಫ್ಲ್ಯಾಟ್‌ನಲ್ಲಿ ಒಬ್ಬರೇ ವಾಸವಿದ್ದರು. ಬೆಂಗಳೂರಿಗೆ ಮರಳಿದ್ದ ಇಮ್ಮಾದ್, ಕುಂದಲಹಳ್ಳಿಯ ದೀಪಂ ನಿವಾಸ್ ಅಪಾರ್ಟ್‌ಮೆಂಟ್‌ನಲ್ಲಿ ವಾಸಿಸಲಾರಂಭಿಸಿದ್ದ. ಉಜ್ಮಾ ಸಹ ಆಗಾಗ ಇಮ್ಮಾದ್ ಮನೆಗೆ ಬಂದು ಹೋಗುತ್ತಿದ್ದರು’ ಎಂದು ಹೇಳಿದ್ದಾರೆ.

ಡಿಸೆಂಬರ್ 31 ರಂದು ಮಧ್ಯಾಹ್ನ 12 ಗಂಟೆಗೆ ‘ಎರಡನೇ ಮದುವೆಗೆ ನನ್ನ ಮೊದಲ ಪತ್ನಿ ಅಡ್ಡ ಬರುತ್ತಿದ್ದಾಳೆ, ಹೀಗಾಗಿ ನಾವಿಬ್ಬರೂ ಆತ್ಮಹತ್ಯೆಗೆ ಶರಣಾಗುತ್ತಿದ್ದೇವೆ’ ಎಂದು ಸಂಬಂಧಿಕರಿಗೆ ಇಮ್ಮಾದ್ ಮೆಸೇಜ್ ಕಳಿಸಿದ್ದರು. ತಕ್ಷಣ ಆತನ ಸಂಬಂಧಿ ಪೊಲೀಸ್ ಸಹಾಯವಾಣಿಗೆ ಕರೆ ಮಾಡಿ ವಿಷಯ ತಿಳಿಸಿದ್ದರು. ಮಧ್ಯಾಹ್ನ 1 ಗಂಟೆಗೆ ಎಚ್‌ಎಎಲ್ ಠಾಣೆ ಪೊಲೀಸರು ಸ್ಥಳಕ್ಕೆ ಹೋಗಿ ನೋಡಿದಾಗ ಉಜ್ಮಾ ಖಾನ್ ಮೃತಪಟ್ಟಿದ್ದರು. ಅಸ್ವಸ್ಥನಾಗಿದ್ದ ಇಮ್ಮಾದ್‌ನನ್ನು ತಕ್ಷಣ ಪೊಲೀಸರು ಆಸ್ಪತ್ರೆಗೆ ದಾಖಲಿಸಿದ್ದರು.

ಪೊಲೀಸರು ಅಸಹಜ ಸಾವು ಪ್ರಕರಣ ದಾಖಲಿಸಿಕೊಂಡು ಪರಿಶೀಲಿಸಿದಾಗ ಉಜ್ಮಾ ಖಾನ್ ಮೃತಪಟ್ಟು ಅದಾಗಲೇ 10 ರಿಂದ 12 ಗಂಟೆ ಆಗಿದೆ ಎಂಬುದು ಗೊತ್ತಾಯಿತು. ಅಲ್ಲದೆ, ಆಕೆಯ ಮೊಬೈಲ್ ಫೋನ್‌ನಲ್ಲಿದ್ದ ಕೆಲ ಚಾಟ್ ಹಿಸ್ಟರಿ ಸಹ ಡಿಲೀಟ್ ಮಾಡಲಾಗಿತ್ತು. ಅನುಮಾನಗೊಂಡ ಪೊಲೀಸರು ಇಮ್ಮಾದ್‌ನನ್ನು ವಿಚಾರಣೆಗೊಳಪ-ಡಿಸಿದಾಗ ಕೊಲೆ ಮಾಡಿರುವುದು ಗೊತ್ತಾಗಿದೆ.ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಇಮ್ಮಾದ್‌ನನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ಉಜ್ಮಾ ಅವರ ಸಾವಿಗೆ ನಿಖರ ಕಾರಣವೇನು ಎಂಬುದು ಮರಣೋತ್ತರ ಪರೀಕ್ಷೆ ವರದಿ ಕೈಸೇರಿದ ಬಳಿಕ ತಿಳಿಯಲಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮೃತಳ ಸಹೋದರ ಹಿಮಾಯತ್ ಖಾನ್ ಅವರ ದೂರು ಆಧರಿಸಿ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದರು.

ಕೊಳವೆ ಬಾವಿಗೆ ಚಾಲನೆ

ಕೊಮ್ಮಘಟ್ಟ ಬಳಿಯ ಬಿಡಿಎ ಸಮುಚ್ಚಯಗಳಿಗೆ ಕುಡಿಯುವ ನೀರು ಸರಬರಾಜು ಮಾಡುವ ಕೊಳವೆ ಬಾವಿಗೆ ಶಾಸಕ ಎಸ್.ಟಿ. ಸೋಮಶೇಖರ್ ಚಾಲನೆ ನೀಡಿದರು. ಮುಖಂಡ ತಿಮ್ಮೇಗೌಡ, ಗ್ರಾ.ಪಂ. ಸದಸ್ಯರಾದ ಶಿವು, ಶೋಭಾ ತಿಮ್ಮೇಗೌಡ, ಅಧ್ಯಕ್ಷೆ ಶಾಂತಮ್ಮ, ಸದಸ್ಯ ಎಸ್.ಆರ್. ಮೋಹನ್ ಕುಮಾರ್ ಉಪಸ್ಥಿತರಿದ್ದರು

ಆಟೊ ಚಾಲಕ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ನೆಲಮಂಗಲ: ಬೆಂಗಳೂರು ಉತ್ತರ ತಾಲ್ಲೂಕಿನ ನಾರಾಯಣಪ್ಪನಪಾಳ್ಯ ನಿವಾಸಿ, ಆಟೊ ಚಾಲಕ ವೆಂಕಟೇಶ್(28) ನೇಣು ಬಿಗಿದುಕೊಂಡು ಶುಕ್ರವಾರ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಗುರುವಾರ ರಾತ್ರಿ ಕೆಲಸ ಮುಗಿಸಿಕೊಂಡು ಮನೆಗೆ ಬಂದ ವೆಂಕಟೇಶ್, ಶುಕ್ರವಾರ ಎಷ್ಟು ಹೊತ್ತಾದರು ಬಾಗಿಲು ತೆಗೆದಿರಲಿಲ್ಲ. ಇದರಿಂದ ಚಿಂತಿತರಾದ ಗ್ರಾಮಸ್ಥರು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಪೊಲೀಸರು ಬಾಗಿಲು ಒಡೆದು ಒಳಗೆ ಹೋಗಿ ನೋಡಿದಾಗ ವೆಂಕಟೇಶ್ ನೇಣು ಬಿಗಿದುಕೊಂಡ ಸ್ಥಿತಿಯಲ್ಲಿದ್ದರು. ಮಾದ-ನಾಯಕನಹಳ್ಳಿ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಕರ್ತವ್ಯಕ್ಕೆ ಅಡ್ಡಿ: ಟಿಪ್ಪು ನಗರ ಮಸೀದಿ ಸಮಿತಿ ಅಧ್ಯಕ್ಷ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೊಲೀಸರ ಕರ್ತವ್ಯಕ್ಕೆ ಅಡ್ಡಿಪಡಿಸಿದ ಆರೋಪಕ್ಕೆ ಸಂಬಂಧಿಸಿದಂತೆ ಚಾಮರಾಜಪೇಟೆಯ ಟಿಪ್ಪು ನಗರ ಮಸೀದಿ ಸಮಿತಿ ಅಧ್ಯಕ್ಷ ಮೆಹಬೂಬ್ ಖಾನ್ ಸೇರಿ 40 ಮಂದಿ ವಿರುದ್ಧ ಚಾಮರಾಜಪೇಟೆ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಚಾಮರಾಜಪೇಟೆಯ ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ಅನಿಲ್ ಕುಮಾರ್ ಅವರ ದೂರಿನ ಮೇರೆಗೆ ಟಿಪ್ಪು ನಗರ ಮಸೀದಿ ಸಮಿತಿ ಅಧ್ಯಕ್ಷ ಮೆಹಬೂಬ್ ಖಾನ್, ಶಬ್ಬೀರ್, ಮಸೂದ್, ಸಿದ್ದಿಖಿ ಹಾಗೂ ಇತರರ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

‘ಜನವರಿ 14 ರಂದು ಪ್ರಕರಣವೊಂದರ ತನಿಖೆಯ ಭಾಗವಾಗಿ ದೂರದಾರರಾದ ನಯಾಮತ್ ಪಾಷಾ ಮತ್ತು ಸಿಬ್ಬಂದಿ ಜತೆ ಕೃತ್ಯ ನಡೆದ ಟಿಪ್ಪು ನಗರದ ಖುದಾದತ್ ಮಸೀದಿ ದರ್ಗಾದ ಬಳಿ ಹೋಗಿ ಮಹಜರ್ ನಡೆಸಿ, ವಾಪಸ್ ಠಾಣೆಗೆ ಬಂದು ಗಸ್ತಿಗೆ ತೆರಳಿದ್ದೆ’ ಎಂದು ಪಿಎಸ್‌ಐ ಅನಿಲ್ ಕುಮಾರ್ ದೂರಿನಲ್ಲಿ ತಿಳಿಸಿದ್ದಾರೆ.

‘ಆ ಸಂದರ್ಭದಲ್ಲಿ ಠಾಣೆಯ ಪೊಲೀಸ್ ಕಾನ್‌ಸ್ಟೆಬಲ್ ಶರಣಬಸು ಪೂಜಾರಿ ಅವರು ಕರೆ ಮಾಡಿ, ‘ಟಿಪ್ಪು ನಗರದ ಮಹಿಳೆಯರು ಸೇರಿ ಸುಮಾರು 40 ಮಂದಿ ಠಾಣೆಗೆ ಬಂದು, ನಯಾಮತ್ ಅವರನ್ನು ಏಕೆ ಬಂಧಿಸಿಲ್ಲ? ಏಕೆ ಬಿಟ್ಟು ಕಳುಹಿಸಿದ್ದೀರಾ’ ಎಂದು ಗಲಾಟೆ ಮಾಡುತ್ತಿದ್ದಾರೆ ಎಂದು ಹೇಳಿದರು. ಠಾಣೆ ಬಳಿ ಬಂದ ನನಗೂ ನಯಾಮತ್‌ನನ್ನು ಏಕೆ ಬಂಧಿಸಿಲ್ಲ ಎಂದು ಆರೋಪಿಗಳು ಏರುದನಿಯಲ್ಲಿ ಪ್ರಶ್ನಿಸಿದರು. ಎಷ್ಟೇ ಸಮಾಧಾನ ಮಾಡಿದರೂ ಕೇಳದೇ, ನನ್ನನ್ನು ಮತ್ತು ಸಿಬ್ಬಂದಿಯನ್ನು ತಳ್ಳಾಡಿ ಕರ್ತವ್ಯಕ್ಕೆ ಅಡ್ಡಿ ಪಡಿಸಿದರು. ಹಾಗಾಗಿ ಆರೋಪಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು’ ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ನೇಣು ಹಾಕಿಕೊಂಡು ವಿದ್ಯಾರ್ಥಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ತಾಲ್ಲೂಕಿನ ಮುದ್ದೇನಹಳ್ಳಿ ಹೊರವಲಯದ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲ-ಯದ ಕೇಂದ್ರದಲ್ಲಿ ಶನಿವಾರ ದ್ವಿತೀಯ ವರ್ಷದ ಎಂಬಿಎ ವಿದ್ಯಾರ್ಥಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಶ್ರೀನಿವಾಸಪುರ ತಾಲ್ಲೂಕಿನ ಕೊಂಡಮರಿ ಗ್ರಾಮದ ಬಾಬುನಾಯಕ್ ಆತ್ಮಹತ್ಯೆ ಮಾಡಿಕೊಂಡ ವಿದ್ಯಾರ್ಥಿ. ಬೆಳಗ್ಗೆ ತಿಂಡಿ ತಿಂದು ಕೊಠಡಿಗೆ ತೆರಳಿ ನೇಣು ಹಾಕಿಕೊಂಡಿದ್ದಾನೆ.

ವಿದ್ಯಾರ್ಥಿ ನಿಲಯದ ಕೊಠಡಿಯಲ್ಲಿ ಬಾಬು ನಾಯಕ್ ಜೊತೆ ಮೂವರು ವಿದ್ಯಾರ್ಥಿಗಳಿದ್ದರು. ಇಬ್ಬರು ವಿದ್ಯಾರ್ಥಿಗಳು ಶುಕ್ರವಾರ ಸಂಜೆ ಸ್ವಗ್ರಾಮಕ್ಕೆ ತೆರಳಿದ್ದರು. ಪಕ್ಕದ ಕೊಠಡಿ ವಿದ್ಯಾರ್ಥಿಗಳು ಆತ್ಮಹತ್ಯೆ ಮಾಹಿತಿ ನೀಡಿದರು. ಆತ್ಮಹತ್ಯೆಗೆ ಕಾರಣ ತಿಳಿದು ಬಂದಿಲ್ಲ ಎಂದು ಪ್ರಾಂಶುಪಾಲರು ಜಿ.ಎಸ್.ವೆಂಕಟೇಶ್ ತಿಳಿಸಿದ್ದಾರೆ.

ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಮಾಹಿತಿ ಸಂಗ್ರಹಿಸಿದರು.

ಡಾ.ಬಿ.ಆರ್.ಅಂಬೇಡ್ಕರ್ ಅವರಿಗೆ ಅವಮಾನ ಆರೋಪ

ಸಚಿವ ಅಮಿತ್ ಶಾ ಹೇಳಿಕೆ ಖಂಡಿಸಿ 23ಕ್ಕೆ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಡಾ.ಬಿ.ಆರ್. ಅಂಬೇಡ್ಕರ್ ಅವರಿಗೆ ಅವಮಾನ ಮಾಡಿದ್ದಾರೆ. ಕೂಡಲೇ ಅವರನ್ನು ಕೇಂದ್ರ ಸಚಿವ ಸಂಪುಟದಿಂದ ವಜಾಗೊಳಿಸಬೇಕು’ ಎಂದು ಆಗ್ರಹಿಸಿ ಇದೇ 23ರಂದು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ದಲಿತ ಸಂಘರ್ಷ ಸಮಿತಿಗಳ ಒಕ್ಕೂಟ ತಿಳಿಸಿದೆ.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಒಕ್ಕೂಟಗಳ ಮುಖಂಡರಾದ ಇಂದೂಧರ ಹೊನ್ನಾಪುರ, ಗುರುಪ್ರಸಾದ್ ಕೆರಗೋಡು, ವಿ. ನಾಗರಾಜ್, ಜೀವನಹಳ್ಳಿ ವೆಂಕಟೇಶ್, ಮಾವಳ್ಳಿ ಶಂಕರ್, ‘ಅಮಿತ್ ಶಾ ಅವರು ಸಂಸತ್ತಿನಲ್ಲಿಯೇ ಅಂಬೇಡ್ಕರ್, ಅಂಬೇಡ್ಕರ್,

ಅಮಿತ್ ಶಾ

ಅಂಬೇಡ್ಕರ್ ಎಂದು ಹೇಳುವುದು ಈಗ ಫ್ಯಾಶನ್ ಆಗಿದೆ. ಇಷ್ಟು ಬಾರಿ ದೇವರ ಹೆಸರನ್ನು ಹೇಳಿದ್ದರೆ ಏಳೇಳು ಜನ್ಮಕ್ಕೂ ಸ್ವರ್ಗ ಪ್ರಾಪ್ತವಾಗುತ್ತಿತ್ತು ಎಂದು ಹೇಳುವ ಮೂಲಕ ಅಂಬೇಡ್ಕರ್ ಅವರಿಗೆ ಅವಮಾನಿಸಿದ್ದಾರೆ’ ಎಂದು ದೂರಿದರು.

‘ಪ್ರಧಾನಿ ನರೇಂದ್ರ ಮೋದಿ ಅವರು ಅಮಿತ್ ಶಾ ಬೆನ್ನಿಗೆ ನಿಂತಿದ್ದಾರೆ. ಸಂಘ ಪರಿವಾರ ಹಿಂದಿನಿಂದಲೂ ಅಂಬೇಡ್ಕರ್ ಅವರನ್ನು ಹೀಯಾಳಿಸುತ್ತಲೇ ಬಂದಿದೆ. ಅಂಬೇಡ್ಕರ್ ಅವರಿಗೆ ಮಾಡಿದ ಅವಮಾನವನ್ನು ನಾವು ಶತಮಾನಗಳವರೆಗೆ ನೆನಪಿನಲ್ಲಿ ಇಟ್ಟುಕೊಳ್ಳುತ್ತೇವೆ. ಅಮಿತ್ ಶಾ ಅವರು ಬಿ.ಆರ್. ಅಂಬೇಡ್ಕರ್ ಅವರ ಪ್ರತಿಮೆ ಮುಂಭಾಗದಲ್ಲಿ ಮಂಡಿಯೂರಿ ಕ್ಷಮೆ-ಯಾಚಿಸುವವರೆಗೆ ನಮ್ಮ ಹೋರಾಟ ಮುಂದುವರಿಯಲಿದೆ’ ಎಂದರು.

‘ಅಹಿಂದ ಸಮುದಾಯಗಳ ನಾಯಕರಾದ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಸಚಿವ ಪ್ರಿಯಾಂಕ್ ಖರ್ಗೆ ಅವರ ವಿರುದ್ಧ ಬಿಜೆಪಿ ಸುಳ್ಳು ಪ್ರಕರಣ-ಗಳನ್ನು ದಾಖಲಿಸುತ್ತಿದೆ. ಕುತಂತ್ರದಿಂದ ಅವರ ತೇಜೋವಧೆ ಮಾಡಲು ಯತ್ನಿಸುತ್ತಿರುವುದನ್ನು ಕೂಡಲೇ ನಿಲ್ಲಿಸಬೇಕು’ ಎಂದು ಆಗ್ರಹಿಸಿದರು.

‘ರಾಜ್ಯ ಸರ್ಕಾರ ಕಾಂತರಾಜ ಆಯೋಗದ ಜಾತಿವಾರು ಜನಗಣತಿ ವರದಿಯನ್ನು ಮುಂದಿನ ಸಚಿವ ಸಂಪುಟದಲ್ಲಿ ಮಂಡಿಸಿ, ಅನುಷ್ಠಾನ-ಗೊಳಿಸಬೇಕು. ದಲಿತ ಸಮುದಾಯಗಳ ಸಮಸ್ಯೆಗಳ ಕುರಿತು ಚರ್ಚಿಸಲು ಸಿದ್ದರಾಮಯ್ಯ ಅವರು ಕೂಡಲೇ ದಲಿತ ಸಂಘಟನೆಗಳ ಸಭೆ ಆಯೋಜಿಸಬೇಕು’ ಎಂದು ಒತ್ತಾಯಿಸಿದರು.

ಅತುಲ್ ತಾಯಿ ಅರ್ಜಿ ‘ಸುಪ್ರೀಂ’ನಲ್ಲಿ ನಾಳೆ ವಿಚಾರಣೆ

ನವದೆಹಲಿ (ಪಿಟಿಐ): ಆತ್ಮಹತ್ಯೆ ಮಾಡಿಕೊಂಡ ಟೆಕಿ ಅತುಲ್ ಸುಭಾಷ್ ಅವರ ಮಗುವನ್ನು ತಮ್ಮ ಸುಪರ್ದಿಗೆ ನೀಡಬೇಕು ಎಂದು ಅತುಲ್ ಅವರ ತಾಯಿಯು ಕೋರಿರುವ ಅರ್ಜಿಯನ್ನು ಸುಪ್ರೀಂ ಕೋರ್ಟ್ ಸೋಮವಾರ ವಿಚಾರಣೆ ನಡೆಸಲಿದೆ.

ನ್ಯಾಯಮೂರ್ತಿಗಳಾದ ಬಿ.ವಿ. ನಾಗರತ್ನ ಮತ್ತು ಸತೀಶ್ ಚಂದ್ರ ಶರ್ಮಾ ಅವರನ್ನು ಒಳಗೊಂಡ ನ್ಯಾಯ ಪೀಠವು ಅರ್ಜಿಯ ವಿಚಾರಣೆ ನಡೆಸುವ ಸಾಧ್ಯತೆ ಇದೆ.ಸುಭಾಷ್ ಅವರ ತಾಯಿ ಅಂಜು ದೇವಿ ಅವರು ನಾಲ್ಕು ವರ್ಷ ವಯಸ್ಸಿನ ಮೊಮ್ಮಗನನ್ನು ತಮ್ಮ ಸುಪರ್ದಿಗೆ ನೀಡಬೇಕು ಎಂದು ಕೋರಿ ಹೇಬಿಯಸ್ ಕಾರ್ಪಸ್ ಅರ್ಜಿ ಸಲ್ಲಿಸಿದ್ದಾರೆ. ಜ.7ರಂದು ಅರ್ಜಿ ವಿಚಾರಣೆ ನಡೆಸಿದ್ದ ಕೋರ್ಟ್, ಮಗುವಿನ ಪಾಲಿಗೆ ಅರ್ಜಿದಾರರು ಅಪರಿಚಿತರು ಎಂದು ಹೇಳಿ ಮನವಿಯನ್ನು ತಿರಸ್ಕರಿಸಿತ್ತು.

ಅತುಲ್ ಅವರು ಡಿಸೆಂಬರ್ 9ರಂದು ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದರು. ಪತ್ನಿ ಮತ್ತುಆಕೆ ಕುಟುಂಬದವರ ಕಿರುಕುಳದಿಂದ ಬೇಸತ್ತು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದಾಗಿ ಅತುಲ್ ಅವರು ವಿಡಿಯೊದಲ್ಲಿ ದಾಖಲಿಸಿದ್ದರು.

ನಿಧನವಾರ್ತೆ

ಬಿ.ಕೆ.ಕೃಷ್ಣಪ್ಪ

ರಾಜರಾಜೇಶ್ವರಿನಗರ: ಹೇರೋಹಳ್ಳಿ ಬಳಿಯ ಕೆಂಪೇಗೌಡನಗರ ನಿವಾಸಿ, ಐಟಿಐ ನಿವೃತ್ತ ಅಧಿಕಾರಿ ಬಿ.ಕೆ.ಕೃಷ್ಣಪ್ಪ (78) ಅನಾರೋಗ್ಯದಿಂದ ಶನಿವಾರ ಮುಂಜಾನೆ ನಿಧನರಾದರು.

ಅವರಿಗೆ ಪತ್ನಿ, ಪುತ್ರ, ಇಬ್ಬರು ಪುತ್ರಿಯರಿದ್ದಾರೆ. ಅಂತ್ಯಕ್ರಿಯೆ ಶನಿವಾರ ಸಂಜೆ ಸುಮನಹಳ್ಳಿಯ ಚಿತಾಗಾರದಲ್ಲಿ ನಡೆಯಿತು.

ಗುತ್ತಿಗೆದಾರನ ಬಟ್ಟೆ ಬಿಚ್ಚಿಸಿ ಆಭರಣ, ಹಣ ಸುಲಿಗೆ

ಮಹಿಳೆ ಸೇರಿ ಇಬ್ಬರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿವಿಲ್ ಗುತ್ತಿಗೆದಾರರೊಬ್ಬರನ್ನು ಬೆದರಿಸಿ ಹಣ, ಚಿನ್ನಾಭರಣ ಸುಲಿಗೆ ಮಾಡಿ ತಲೆಮರೆಸಿಕೊಂಡಿದ್ದ ಮಹಿಳೆ ಸೇರಿ ಇಬ್ಬರನ್ನು ಬ್ಯಾಡರಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಮಾಗಡಿ ಮುಖ್ಯರಸ್ತೆ ತುಂಗಾನಗರ ನಿವಾಸಿ ನಯನಾ (26) ಮತ್ತು ಆಕೆಯ ಸ್ನೇಹಿತ ಮೋಹನ್ (30) ಬಂಧಿತರು. ಈ ಹಿಂದೆ ಇವರ ಸಹಚರರಾದ ಅಜಯ್, ಸಂತೋಷ್ ಮತ್ತು ಜಯರಾಜ್ ಎಂಬುವವರನ್ನು ಬಂಧಿಸಲಾಗಿತ್ತು. ಈ ಪ್ರಕರಣ-ದಲ್ಲಿ ಬಂಧಿತರ ಸಂಖ್ಯೆ ಐದಕ್ಕೆ ಏರಿಕೆಯಾಗಿದೆ.

ಆರೋಪಿಗಳು ಡಿಸೆಂಬರ್ 9ರಂದು ಮಾಗಡಿ ರಸ್ತೆ ತುಂಗಾನಗರದ ಮನೆಯೊಂದಕ್ಕೆ ಗುತ್ತಿಗೆದಾರ ರಂಗನಾಥ ಅವರನ್ನು ಕರೆಸಿಕೊಂಡು ಬೆದರಿಸಿ, ನಗದು ಹಾಗೂ ಚಿನ್ನಾಭರಣ ಸುಲಿಗೆ ಮಾಡಿದ್ದರು. ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿದ್ದರು.

‘ರಂಗನಾಥ್ ಅವರಿಗೆ ಆರು ತಿಂಗಳ ಹಿಂದೆ ಸ್ನೇಹಿತ ಶಿವು ಮುಖಾಂತರ ನಯನಾಳ ಪರಿಚಯವಾಗಿದೆ. ಬಳಿಕ ಈಕೆ ತನ್ನ ಮಗುವಿಗೆ ಹುಷಾರಿಲ್ಲ, ಆಸ್ಪತ್ರೆಗೆ ತೋರಿಸಬೇಕು ಎಂದು ಯುಪಿಐ ಪಾವತಿ ಮೂಲಕ ₹14 ಸಾವಿರ ಪಡೆದಿದ್ದಳು. ಬಳಿಕ ನಿತ್ಯ ರಂಗನಾಥಗೆ ಕರೆ ಮಾಡಿ ಆತ್ಮೀಯವಾಗಿ ಮಾತನಾಡಿ, ಮನೆಗೆ ಕರೆಯುತ್ತಿದ್ದಳು’ ಎಂದು ಪೊಲೀಸರು ತಿಳಿಸಿದ್ದಾರೆ.

‘ನಯನಾ ಮನೆಗೆ ರಂಗನಾಥ್ ಭೇಟಿ ನೀಡಿದ ವೇಳೆ ಆರೋಪಿಗಳಾದ ಸಂತೋಷ್, ಅಜಯ್, ಜಯರಾಜ್ ಏಕಾಏಕಿ ಮನೆಗೆ ನುಗ್ಗಿ, ಕ್ರೈಂ ಪೊಲೀಸರು ಎಂದು ಪರಿಚ-ಯಿಸಿಕೊಂಡಿದ್ದರು. ಮನೆಯಲ್ಲಿ ವ್ಯಭಿಚಾರ ಮಾಡುತ್ತಿದ್ದೀರಾ? ಕೆಳಗೆ ಜೀಪಿನಲ್ಲಿ ಮೇಡಂ ಇದ್ದಾರೆ ಎಂದು ರಂಗನಾಥ್ ಮೇಲೆ ಹಲ್ಲೆ ಮಾಡಿದ್ದಾರೆ. ಬಳಿಕ ಅವರ ಬಟ್ಟೆ ಬಿಚ್ಚಿಸಿ ಮೊಬೈಲ್‌ನಲ್ಲಿ ಫೋಟೊ ತೆಗೆದು ವಿಡಿಯೊ ಮಾಡಿದ್ದರು’ ಎಂದು ಪೊಲೀಸರು ಹೇಳಿದ್ದಾರೆ.

‘ಬಳಿಕ ಆರೋಪಿಗಳು ರಂಗನಾಥ ಅವರ ಬಳಿ ₹29 ಸಾವಿರ ನಗದು, ₹5 ಲಕ್ಷ ಮೌಲ್ಯದ ಚಿನ್ನಾಭರಣ ಕಿತ್ತುಕೊಂಡಿದ್ದರು. ಯುಪಿಐ ಪಾವತಿ ಮುಖಾಂತರ ₹26 ಸಾವಿರ ಹಣ ವರ್ಗಾವಣೆ ಮಾಡಿಕೊಂಡು ಆಟೋದಲ್ಲಿ ಪರಾರಿಯಾಗಿದ್ದರು. ನಯನಾ ಸಹ ದ್ವಿಚಕ್ರ ವಾಹನದಲ್ಲಿ ಆರೋಪಿಗಳನ್ನು ಹಿಂಬಾಲಿಸಿದ್ದಳು’ ಎಂದು ತಿಳಿಸಿದರು.

ಶ್ರೀಮಂತರಿಗೆ ಬಲೆ

‘ನಗರದಲ್ಲಿ ನೆಲಸಿರುವ ಹಾಸನದ ನಯನಾ ಅವರು ಪತಿಯಿಂದ ದೂರವಾಗಿದ್ದಾರೆ. ಸುಲಭವಾಗಿ ಹಣ ಗಳಿಸುವ ಉದ್ದೇಶದಿಂದ ಆರೋಪಿಗಳ ಜತೆಗೆ ಸೇರಿ ಹಣವಂತರನ್ನು ಪರಿಚಯಿಸಿಕೊಂಡು, ಮನೆಗೆ ಆಹ್ವಾನಿಸಿ ಬೆದರಿಸಿ, ಸುಲಿಗೆ ಮಾಡುತ್ತಿದ್ದರು’ ಎಂಬುದು ತನಿಖೆ ವೇಳೆ ಗೊತ್ತಾಗಿದೆ.

ನಯನಾ

ಮೋಹನ್

ಪೊಲೀಸ್ ಗಸ್ತು ಹೆಚ್ಚಳ, ಸಾರ್ವಜನಿಕರಿಗೆ ನಿರಂತರ ಜಾಗೃತಿ

ಅಪರಾಧ ಪ್ರಕರಣಗಳ ಸಂಖ್ಯೆ ಇಳಿಕೆ

• ಕೆ.ಎಸ್.ಸುನಿಲ್

ಬೆಂಗಳೂರು: ನಗರದಲ್ಲಿ ಪೊಲೀಸರು ಕೈಗೊಂಡ ಕಟ್ಟುನಿಟ್ಟಿನ ಕ್ರಮದಿಂದಾಗಿ ಅಪರಾಧಗಳ ಪ್ರಕರಣಗಳ ಸಂಖ್ಯೆಯಲ್ಲಿ ಇಳಿಮುಖವಾಗಿದೆ. 2023ಕ್ಕೆ ಹೋಲಿಸಿದರೆ, 2024ರಲ್ಲಿ ಕೊಲೆ, ಕೊಲೆ ಯತ್ನ, ಡಕಾಯಿತಿ, ಅಪಹರಣ ಪ್ರಕರಣಗಳು ತುಸು ಕಡಿಮೆಯಾಗಿದೆ.

ಮನೆ ಸೇವಕರಿಂದ ಮನೆಗಳ ಕಳ್ಳತನ ಹೊರತುಪಡಿಸಿದರೆ ಗಂಭೀರ ಅಪರಾಧ ಪ್ರಕರಣಗಳು ನಿಯಂತ್ರಣ ಬಂದಿರುವುದು ಅಂಕಿ ಅಂಶಗಳಿಂದ ಗೊತ್ತಾಗಿದೆ.

2023ರಲ್ಲಿ ಪ್ರತಿ ತಿಂಗಳು ಸರಾಸರಿ 22 ಮನೆ ಕಳ್ಳತನದ ಪ್ರಕರಣಗಳು ವರದಿಯಾದರೆ, ಈ ವರ್ಷ 182ರಷ್ಟಿದೆ. ಇದರಲ್ಲಿ ಸೇವಕರಿಂದ ಮನೆ ಕಳ್ಳತನದ ಪ್ರಮಾಣ ಶೇಕಡ 25ರಷ್ಟು ಹೆಚ್ಚಾಗಿದೆ.

ಪೊಲೀಸ್ ಸಿಬ್ಬಂದಿ ಹಾಗೂ ಹೊಯ್ಸಳ ವಾಹನ ಗಸ್ತು ಹೆಚ್ಚಳ, ಪ್ರಮುಖ ಸ್ಥಳಗಳಲ್ಲಿ ಸಿಸಿಟಿವಿ ಕ್ಯಾಮೆರಾಗಳ ಅಳವಡಿಕೆ, ಪೊಲೀಸ್ ಸಹಾಯವಾಣಿ 112 ಸಮರ್ಪಕ ಬಳಕೆ, ಹಳೇ ಪ್ರಕರಣದ ಆರೋಪಿಗಳ ಬಂಧನ, ರೌಡಿಗಳ ಮೇಲೆ ನಿಗಾ ಹಾಗೂ ಸಾರ್ವಜನಿಕರಿಗೆ ನಿರಂತರ ಜಾಗೃತಿ ಮೂಡಿಸಿದ ಪರಿಣಾಮ ಅಪರಾಧ ಚಟುವಟಿಕೆಗಳು ನಿಯಂತ್ರಣಕ್ಕೆ ಬಂದಿವೆ ಎಂದು ಪೊಲೀಸರು ಹೇಳುತ್ತಾರೆ.

ಪ್ರಕರಣಗಳು	2023	2024
ಕೊಲೆ	206	186
ಕೊಲೆ ಯತ್ನ	537	440
ಕಳ್ಳತನ ಹಗಲು	264	182
ಕಳ್ಳತನ ರಾತ್ರಿ	878	728
ಸೇವಕನಿಂದ ಕಳ್ಳತನ	320	362
ಅಪಹರಣ	1,151	1,147
ಡಕಾಯಿತಿ	37	33
ಬೈಕ್ ಕಳ್ಳತನ	5,908	5,248
ಸರಗಳ್ಳತನ	1,139	1,185
ಗಲಭೆ	164	82

ಅಲ್ಲದೇ ರೌಡಿ ಶೀಟರ್‌ಗಳ ಮೇಲೆ ನಿಗಾ, ಅಪರಾಧ ಕೃತ್ಯಗಳಲ್ಲಿ ಭಾಗಿಯಾಗುವ ಆರೋಪಿಗಳ ಮೇಲೆ ಗೂಂಡಾ ಕಾಯ್ದೆ ಜಾರಿ, ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗಿ ಜಾಮೀನಿನ ಮೇಲೆ ಹೊರಬಂದು ನ್ಯಾಯಾಲಯಕ್ಕೆ ಗೈರು ಹಾಜರಾಗಿದ್ದ ಆರೋಪಿಗಳ ಬಂಧನದ ಪರಿಣಾಮ ಅಪರಾಧ ಸಂಖ್ಯೆ ಕಡಿಮೆಯಾಗಲು ಕಾರಣವಾಗಿದೆ ಎಂಬುದು ಅವರ ಅಭಿಪ್ರಾಯ.

ದ್ವಿಚಕ್ರ ವಾಹನಗಳ ಕಳ್ಳತನದಲ್ಲೂ ಇಳಿಕೆಯಾಗಿದೆ. ಆದರೆ, ಕದ್ದ ವಾಹನಗಳ ವಿಲೇವಾರಿಗಾಗಿ ಕಳ್ಳರು ನಾನಾ ಮಾರ್ಗ ಕಂಡುಕೊಂಡಿದ್ದಾರೆ. ಕಳವು ಮಾಡಿದ ವಾಹನಗಳ ಭಾಗಗಳನ್ನು ಬೇರ್ಪಡಿಸಿ, ವಾಹನದ ಎಂಜಿನ್ ಮತ್ತು ಚಾಸ್ಸಿ ಸಂಖ್ಯೆಯನ್ನು ತಿದ್ದುಪಡಿ ಮಾಡಿ ಆನ್‌ಲೈನ್‌ನಲ್ಲಿ ಮಾರಾಟ ಮಾಡಲಾಗುತ್ತಿದೆ. ಹೀಗಾಗಿ ಪೊಲೀಸರಿಗೆ ವಾಹನಗಳ ಪತ್ತೆಗೆ ಸವಾಲಾಗಿದೆ. ಕದ್ದ ವಾಹನಗಳನ್ನು ಸರಗಳ್ಳತನ ಹಾಗೂ ಗಂಭೀರ ಅಪರಾಧ ಪ್ರಕರಣಗಳಿಗೆ ಬಳಕೆ ಮಾಡಿರುವುದು ಪೊಲೀಸ್ ತನಿಖೆಯಿಂದ ಗೊತ್ತಾಗಿದೆ.

ಮನೆಗೆ ನಿಯೋಜಿಸಿಕೊಳ್ಳುವ ಸೇವಕರಿಂದ ಮನೆಗಳ್ಳತನ ಪ್ರಕರಣದಲ್ಲಿ ಏರಿಕೆಯಾಗಿದೆ. ಕಡಿಮೆ ಸಂಬಳಕ್ಕೆ ಕೆಲಸ ಮಾಡುತ್ತಾರೆ ಎಂಬ ಕಾರಣಕ್ಕೆ ಹೊರ ರಾಜ್ಯ ಹಾಗೂ ನೇಪಾಳ ದೇಶದ ವ್ಯಕ್ತಿಗಳ ಹಿನ್ನೆಲೆ ವಿಚಾರಿಸದೇ ಕೆಲಸಕ್ಕೆ ನೇಮಿಸಿಕೊಳ್ಳಲಾಗುತ್ತಿದೆ.

ಕೆಲ ತಿಂಗಳ ಹಿಂದೆ ವಿಜಯನಗರದ ಅರಿಹಂತ್ ಚಿನ್ನಾಭರಣ ಅಂಗಡಿ ಮಾಲೀಕ ಅವರ ಮನೆಯಲ್ಲಿ ಕೆಲಸ ಮಾಡುತ್ತಿದ್ದ ನೇಪಾಳ ದಂಪತಿ, ಚಿನ್ನಾಭರಣ ಸೇರಿದಂತೆ ₹15.15 ಕೋಟಿ ಮೌಲ್ಯದ ವಸ್ತುಗಳನ್ನು ದೋಚಿ ಪರಾರಿಯಾಗಿರುವುದು ಇದಕ್ಕೆ ಉದಾಹರಣೆ. ಈ ರೀತಿ ಮನೆ ಹಾಗೂ ಕಚೇರಿಗಳಲ್ಲಿ ಕೆಲಸಕ್ಕೆ ಸೇರಿದ ಸ್ಥಳೀಯರು ಹಾಗೂ ಹೊರಗಿನವರು ಕಳ್ಳತನ ಮಾಡಿರುವ ಹಲವು ಪ್ರಕರಣಗಳು ನಗರದಲ್ಲಿ ವರದಿಯಾಗಿವೆ.

‘ಕಡಿಮೆ ಸಂಬಳಕ್ಕೆ ಕೆಲಸ ಮಾಡುತ್ತಾರೆ ಎಂಬ ಕಾರಣಕ್ಕೆ ಅಪರಿಚಿತರನ್ನು ಮನೆಗೆಲಸಕ್ಕೆ ನೇಮಕ ಮಾಡಿಕೊಳ್ಳಲಾಗುತ್ತಿದೆ. ಇಂಥವರು ಮನೆಯಲ್ಲಿ ಚಿನ್ನಾಭರಣ, ನಗದು ಕಳ್ಳತನ ಮಾಡಿಕೊಂಡು ಹೋಗುತ್ತಾರೆ’ ಎಂದು ಪೊಲೀಸರು ತಿಳಿಸಿದರು.

ಕಳ್ಳತನ ತಡೆಗೆ ಕ್ರಮ

‘ನಗರದಲ್ಲಿ ಕಳ್ಳತನ ತಡೆಗೆ ಹೊಯ್ಸಳ ವಾಹನದ ಗಸ್ತು ವ್ಯವಸ್ಥೆ ಹೆಚ್ಚು ಮಾಡಲಾಗಿದೆ. ದೂರದ ಊರಿಗೆ ಹೋಗುವವರು ಸಮೀಪದ ಠಾಣೆಗೆ ಮಾಹಿತಿ ನೀಡಿದರೆ ಪೊಲೀಸರು ಮನೆ ಮೇಲೆ ನಿಗಾವಹಿಸುತ್ತಾರೆ. ಅಪರಿಚಿತ ವ್ಯಕ್ತಿಗಳ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡಿದರೆ ಅಪರಾಧ ತಡೆಯಬಹುದು’ ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ತಿಳಿಸಿದರು.

‘ಉದ್ಯೋಗ ನೀಡುವ ಮುನ್ನ ಅವರ ಆಧಾರ್ ಕಾರ್ಡ್ ಹಾಗೂ ಪೊಲೀಸ್ ಪರಿಶೀಲನೆ ನಡೆಸಬೇಕು. ಮನೆಗಳ ಬೀಗದ ಕೀಲಿಯನ್ನು ಶೂ ರ್‍ಯಾಕ್, ಹೂವು ಕುಂಡದ ಕೆಳಗೆ ಇಡಬಾರದು’ ಎಂದು ಸಲಹೆ ನೀಡಿದ್ದಾರೆ.

ಸಾಲದ 'ಶೂಲ'ಕ್ಕೆ ಕಂಗಾಲು

ಒಂದನೇ ಪುಟದಿಂದ..

ದೊಡ್ಡ ಬ್ಯಾಂಕ್‌ಗಳು ಸಾಲ ನೀಡಲು ಕೇಳುವ ದಾಖಲೆಗಳನ್ನು ಪೂರೈಸಲು ಸಾಧ್ಯವಾಗದೇ ಮೈಕ್ರೋ ಫೈನಾನ್ಸ್ ಹಾಗೂ ಸ್ವ-ಸಹಾಯ ಸಂಘಗಳತ್ತ ಗ್ರಾಮೀಣ ಪ್ರದೇಶದ ಜನರು ಮುಖ ಮಾಡಿದ್ದಾರೆ. ಅಲ್ಲಿ ಸಾಲ ಪಡೆದವರು ವಾಪಸ್ ಕೊಡಲಾಗದೆ, ಬಡ್ಡಿಯೂ ಕಟ್ಟಲಾಗದೆ ರಾತ್ರೋರಾತ್ರಿ ಊರು ಬಿಡುವ ಪರಿಸ್ಥಿತಿ ನಿರ್ಮಾಣವಾಗಿದೆ.

ವ್ಯಾಪಾರ, ಮಕ್ಕಳ ವಿದ್ಯಾಭ್ಯಾಸ, ಕೃಷಿ, ಮದುವೆಗೆಂದು ಫೈನಾನ್ಸ್ ಸಂಸ್ಥೆಗಳಲ್ಲಿ ಸಾಲ ಪಡೆದವರು ಸಾಲ ತೀರಿಸಲಾಗದೆ ಮನೆ ತೊರೆಯುತ್ತಿದ್ದಾರೆ. ಹಲವು ಊರುಗಳಲ್ಲಿ ದಂಪತಿ ನಡುವೆ ಜಗಳ ನಡೆದು ಬೇರೆ ಆಗಿರುವ ನಿದರ್ಶನಗಳಿವೆ. ರಾಜ್ಯದ ಬೀದರ್‌ನಿಂದ ಚಾಮರಾಜನಗರ ಜಿಲ್ಲೆಯವರೆಗೂ ಈ ಸಮಸ್ಯೆ ಚಾಚಿಕೊಂಡಿದೆ.

'ಮನೆಯಲ್ಲಿ ಹೆಣ್ಣು ಮಕ್ಕಳಿದ್ದರೂ ವಸೂಲಾತಿದಾರ ಒಳಕ್ಕೆ ನುಗುತ್ತಾನೆ. ಅಂಗಳ ಬಿಟ್ಟು ಕದಲುವುದಿಲ್ಲ, ಕೆಟ್ಟ ಪದಗಳಿಂದ ಬೈಯುತ್ತಾರೆ. ಅವರ ಬೈಗುಳಗಳನ್ನು ಕೇಳಲಾಗದು, ಹೇಳಲು ಆಗದು' ಎಂದು ಹಲವರು ನೊಂದು ನುಡಿಯುತ್ತಾರೆ.

'ಮೈಕ್ರೋ ಫೈನಾನ್ಸ್ ಸಂಸ್ಥೆಗಳು ಸಾಲ ವಸೂಲಾತಿ ವೇಳೆ ನಿಯಮಾವಳಿ ಮೀರುವಂತಿಲ್ಲ. ಆದರೆ, ಅವರ ದೌರ್ಜನ್ಯ ಮಿತಿಮೀರಿದ್ದು, ಪೊಲೀಸರಿಗೆ ದೂರು ನೀಡಿದರೂ ನ್ಯಾಯ ಸಿಗುತ್ತಿಲ್ಲ' ಎಂದು ರೈತ ಮುಖಂಡರು ಹೇಳಿದ್ದಾರೆ.

'ಈ ರೀತಿ ಸಂಸ್ಥೆಗಳಲ್ಲಿ ಸಾಲ ಪಡೆದುಕೊಳ್ಳಲು ಹೆಚ್ಚಿನ ದಾಖಲೆಗಳನ್ನು ಒದಗಿಸುವ ಅಗತ್ಯವಿಲ್ಲ. ಆಧಾರ್ ಕಾರ್ಡ್, ಸಹಿ ನೀಡಿದರೆ ಸಾಕು. ₹5 ಸಾವಿರದಿಂದ ₹3 ಲಕ್ಷದ ವರೆಗೆ ಸಾಲ ತಕ್ಷಣವೇ ದೊರೆಯುತ್ತದೆ. ಹೆಚ್ಚಿನ ಬಡ್ಡಿಯಾದರೂ ತೊಂದರೆ ಇಲ್ಲ ಎಂದು ಭಾವಿಸಿ ಸಾಲ ಪಡೆದವರು ಆಪತ್ತಿಗೆ ಸಿಲುಕುತ್ತಿದ್ದಾರೆ. ಗುಂಪು ಸಾಲ ಸಹ ವಿತರಣೆ ಮಾಡುತ್ತಾರೆ. ಸಾಲ ವಸೂಲಾತಿಗೇ ಪ್ರತ್ಯೇಕ ಪ್ರತಿನಿಧಿಗಳನ್ನು ನೇಮಿಸಿಕೊಂಡಿದ್ದು, ಅವರು ಹೊತ್ತಲ್ಲದ ಹೊತ್ತಿನಲ್ಲಿ, ತಡರಾತ್ರಿಯೂ ಮನೆಗೆ ನುಗ್ಗುತ್ತಾರೆ. ಅವರ ಕಿರುಕುಳ ನಿಲ್ಲಿಸಲು ರಾಜ್ಯ ಸರ್ಕಾರ ಕಠಿಣ ನಿಯಮ ಜಾರಿಗೆ ತರಬೇಕು ' ಎಂದು ಕಬ್ಬು ಬೆಳೆಗಾರರ ಸಂಘದ ರಾಜ್ಯ ಅಧ್ಯಕ್ಷ ಕುರುಬೂರು ಶಾಂತಕುಮಾರ್ ಆಗ್ರಹಿಸಿ, ಈ ಕೆಟ್ಟ ವ್ಯವಸ್ಥೆ ವಿರುದ್ಧ ಹೋರಾಟ ಮಾಡುತ್ತೇನೆ ಎಂದು ಎಚ್ಚರಿಸಿದರು.

'ವಾಹನ ಸಾಲ, ಕೈಸಾಲ, ಗುಂಪು ಸಾಲ ಸೇರಿದಂತೆ 12 ಬಗೆಯ ಸಾಲ ವಿತರಣೆ ಮಾಡುತ್ತಿದ್ದಾರೆ. ಪ್ರತಿಯೊಂದು ಫೈನಾನ್ಸ್ ಸಂಸ್ಥೆಯೂ ಬೇರೆ ಬೇರೆ ಬಡ್ಡಿ ವಿಧಿಸುತ್ತಾರೆ. ನಿಯಮದಂತೆ ಬಡ್ಡಿ ಪಡೆಯಬೇಕು. ಕೆಲವು ಸಂಸ್ಥೆಗಳು ಶೇ 22ರಿಂದ ಶೇ 26ರಷ್ಟು, ಇನ್ನೂ ಕೆಲವು ಸಂಸ್ಥೆಗಳು ಶೇ 30ರಿಂದ 36ರಷ್ಟು ಬಡ್ಡಿ ತೆಗೆದುಕೊಳ್ಳುತ್ತಿವೆ. ಇವರಿಗೆ ಯಾವುದೇ ಕಾಯ್ದೆ ಅನ್ವಯ ಆಗುವುದಿಲ್ಲವೇ' ಎಂದು ಕುರುಬೂರು ಶಾಂತಕುಮಾರ್ ಪ್ರಶ್ನಿಸಿದರು.

ಈ ಫೈನಾನ್ಸ್ ಸಂಸ್ಥೆಗಳು ಕಾಡಿನ ಆದಿವಾಸಿಗಳನ್ನು ಬಿಟ್ಟಿಲ್ಲ. ಅವರ ಅಗತ್ಯವನ್ನೇ ಬಂಡವಾಳ ಮಾಡಿಕೊಂಡು ಬಡ್ಡಿಗೆ ಸಾಲ ಕೊಡುತ್ತಿರುವ ಮೈಕ್ರೋ ಫೈನಾನ್ಸ್ ಸಂಸ್ಥೆಗಳು, ನಂತರ ಸಾಲ ಮರುಪಾವತಿಗೆ ನೀಡುತ್ತಿರುವ ಒತ್ತಡಕ್ಕೆ ಆದಿವಾಸಿಗಳು ಊರು ಬಿಡುತ್ತಿದ್ದಾರೆ. ಅದರಲ್ಲೂ ರಾಮನಗರ ಜಿಲ್ಲೆಯ ಇರುಳಿಗ ಸಮುದಾಯವರು ಸಹ ಫೈನಾನ್ಸ್ ಸಾಲದ ಶೂಲಕ್ಕೆ ಸಿಲುಕಿ ನರಳುತ್ತಿದ್ದಾರೆ.

'ಕೋವಿಡ್ ಕಾಲದಲ್ಲೇ ಕಷ್ಟಕ್ಕೆ ಸಿಕ್ಕಿದ್ದೇವೆ. ಇನ್ನೂ ಚೇತರಿಸಿಕೊಳ್ಳಲಾಗಿಲ್ಲ. ಕೂಲಿ ಕೆಲಸ ಸಿಗದಿರುವುದು, ಕುಟುಂಬದಲ್ಲಿ ಯಾರಿಗಾದರೂ ಅನಾರೋಗ್ಯ, ಹಬ್ಬ-ಹರಿದಿನದ ಕಾರಣಕ್ಕೆ ಕೆಲವೊಮ್ಮೆ ಸಾಲದ ಕಂತು ಪಾವತಿಸಲು ಆಗುವುದಿಲ್ಲ. ಆದರೆ, ಫೈನಾನ್ಸ್‌ನವರು ಅದ್ಯಾವುದನ್ನೂ ಕೇಳದೆ ವಸೂಲಿಗೆ ನಿಲ್ಲುತ್ತಾರೆ. ಇವರಿಂದ ಸಾಲ ಪಡೆದು ನಾವೀಗ ಸಂಕಷ್ಟಕ್ಕೆ ಸಿಲುಕಿದ್ದೇವೆ' ಎಂದು ರಾಮನಗರ ಜಿಲ್ಲೆಯಲ್ಲಿ ಸಾಲ ಪಡೆದವರು ಹೇಳಿದರು.

ಹಸುಳೆ, ಬಾಣಂತಿ ಹೊರಹಾಕಿದ ಸಿಬ್ಬಂದಿ: ಸಾಲ ಮರುಪಾವತಿಸಲು ವಿಳಂಬ ಮಾಡಿದ್ದಕ್ಕೆ ಬೆಳಗಾವಿ ಜಿಲ್ಲೆಯ ನಾಗನೂರು ಪಟ್ಟಣದಲ್ಲಿ ಫೈನಾನ್ಸ್ ಪ್ರತಿನಿಧಿಗಳು ಕುಟುಂಬದ ಏಳು ಸದಸ್ಯರನ್ನು ಹೊರಗೆ ಹಾಕಿ, ಮನೆಗೆ ಬೀಗ ಹಾಕಿರುವ ಘಟನೆ ನಡೆದಿದೆ. ಮನೆಯಲ್ಲಿದ್ದ ಹಸಿ ಬಾಣಂತಿ, ಒಂದೂವರೆ ತಿಂಗಳ ಕಂದಮ್ಮ, ಎರಡು ಪುಟಾಣಿ ಮಕ್ಕಳನ್ನೂ ಹೊರಗೆ ಹಾಕಲಾಗಿದೆ.

ರೈತ ಶಂಕರೆಪ್ಪ ಗದ್ದಾಡಿ ಚೆನ್ನೈ ಮೂಲದ ಫೈನಾನ್ಸ್ ಕಂಪನಿಯೊಂದರಿಂದ ಹೈನುಗಾರಿಕೆಗೆ ₹5 ಲಕ್ಷ ಸಾಲ ಪಡೆದಿದ್ದರು. ಅದರಲ್ಲಿ ₹3.16 ಲಕ್ಷ ತೀರಿಸಿದ್ದರು. ಸಾಲದ ಹಣದಿಂದ ಖರೀದಿಸಿದ್ದ ಎರಡು ಹಸು, ಎರಡು ಎಮ್ಮೆಗಳು ರೋಗದಿಂದ ಸತ್ತ ಕಾರಣದಿಂದ ಸಾಲ ಪಾವತಿಸಲು ವರ್ಷ ವಿಳಂಬವಾಗಿತ್ತು. ಫೈನಾನ್ಸ್‌ನವರು ಬಡ್ಡಿ, ಚಕ್ರಬಡ್ಡಿ ಸೇರಿಸಿ ₹4.35 ಲಕ್ಷ ಸಾಲದ ಬಾಬ್ತು ಕಟ್ಟುವಂತೆ ಸೂಚಿಸಿದ್ದರು. ಹಣ ಹೊಂದಿಸಲಾಗದೆ ರೈತ ಸಾಲ ಪಾವತಿಸಲು ಆಗಲಿಲ್ಲ. ನ್ಯಾಯಾಲಯದ ಮೂಲಕ ಆದೇಶ ಪಡೆದ ಫೈನಾನ್ಸ್ ಸಿಬ್ಬಂದಿ, ಏಕಾಏಕಿ ಎಲ್ಲರನ್ನೂ ಮನೆಯಿಂದ ಹೊರಹಾಕಿದ್ದರು. ಆ ರೈತ ಕುಟುಂಬ ನ್ಯಾಯಕ್ಕಾಗಿ ನ್ಯಾಯಾಲಯದ ಮೆಟ್ಟಿಲೇರಲು ಸಿದ್ಧತೆ ಮಾಡಿಕೊಂಡಿದೆ.

'ಲಾಡ್ಜ್‌ಗೆ ಬಾ...': 'ಸಾಲ ಕಟ್ಟಲಾಗದಿದ್ದರೆ ಲಾಡ್ಜ್‌ಗೆ ಬಾ, ಗಿರಾಕಿಗಳು ಕೊಡುವ ಹಣದಲ್ಲಿ ಸಾಲ ಮರು ಪಾವತಿಸಬಹುದು' ಎಂದು ಮೈಕ್ರೋ ಫೈನಾನ್ಸ್ ವ್ಯವಸ್ಥಾಪಕ ಹಾಗೂ ಸಾಲ ವಸೂಲಿಗಾರರು ಮಾನಹಾನಿ ಮಾಡಿದ್ದಾರೆ ಎಂದು ಮನನೊಂದ ಕಲಬುರ್ಗಿಯ ಮಿಲತ್ ನಗರದ ಮಹಿಳೆಯೊಬ್ಬರು ಆತ್ಮಹತ್ಯೆಗೆ ಯತ್ನಿಸಿದ್ದರು. ಈ ಕುರಿತು ಸ್ಥಳೀಯ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಲಬುರಗಿಯ ಶಹಾಬಾದ್‌ನ ಬಸವೇಶ್ವರ ನಗರದ ಇಮ್ರಾನ್ ಲೇಡೀಸ್ ಕಾರ್ನರ್ ಅಂಗಡಿ ತೆರೆಯಲು ಮೈಕ್ರೋ ಫೈನಾನ್ಸ್‌ನಿಂದ ₹40 ಸಾವಿರ ಸಾಲ ಪಡೆದಿದ್ದರು, ಅಂಗಡಿ ಸರಿಯಾಗಿ ನಡೆಯದಿದ್ದಾಗ ಬಂದ್ ಮಾಡಬೇಕಾಯಿತು. ಕೂಲಿ ಮಾಡಿ ಅರ್ಧ ಸಾಲ ತೀರಿಸಿದರೂ ವಸೂಲಿಗಾರರ ಕಾಟ ತಾಳಲಾರದೆ ಊರು ಬಿಟ್ಟು, ಹೈದರಾಬಾದ್‌ನಲ್ಲಿ ಕೆಲಸ ಹುಡುಕಿಕೊಂಡಿದ್ದಾರೆ. ಕೆಲವು ತಿಂಗಳು ಅಲ್ಲಿ ದುಡಿದು ಉಳಿದರ್ಧ ಸಾಲ ತೀರಿಸುತ್ತೇನೆ ಎನ್ನುತ್ತಾರೆ ಇಮ್ರಾನ್.

ನಂಜನಗೂಡು ತಾಲ್ಲೂಕಿನ ಶಿರಮಹಳ್ಳಿ, ಹುಲ್ಲಹಳ್ಳಿ, ಹೆಗ್ಗಡದಹಳ್ಳಿ, ರಾಂಪುರ, ಕುರಿಹುಂಡಿ, ಕಗ್ಗಲೂರು ಗ್ರಾಮಗಳಲ್ಲಿ ಸಾಲದ ಬಾಧೆಯಿಂದ ಹಲವು ಕುಟುಂಬಗಳು ಊರು ಬಿಟ್ಟಿವೆ.

ನ್ಯಾಯಕ್ಕಾಗಿ ಆಗ್ರಹಿಸಿ ಸಚಿವ ಸತೀಶ ಜಾರಕಿಹೊಳಿ ಅವರಿಗೆ ಬೆಳಗಾವಿಯಲ್ಲಿ ಮನವಿ ಸಲ್ಲಿಸಿದ ಮಹಿಳೆಯರು

ಹೇಗೆ ನಡೆಯುತ್ತೆ 'ಜಾಲ'?: 'ಹಳ್ಳಿಗಳಿಗೆ ಭೇಟಿ ನೀಡುವ ಮೈಕ್ರೋ ಫೈನಾನ್ಸ್ ಪ್ರತಿನಿಧಿಗಳು, ಸ್ತ್ರೀಶಕ್ತಿ ಸ್ವಸಹಾಯ ಸಂಘಗಳ ಪ್ರತಿನಿಧಿಗಳನ್ನು ಸಂಪರ್ಕಿಸಿ ಕಡಿಮೆ ಬಡ್ಡಿಯಲ್ಲಿ ಸಾಲ ನೀಡುವುದಾಗಿ ಆಸೆ ತೋರಿಸುತ್ತಾರೆ. ವಾಸ್ತವವಾಗಿ ರಾಷ್ಟ್ರೀಕೃತ ಬ್ಯಾಂಕ್‌ಗಳಿಗೆ ಹೋಲಿಕೆ ಮಾಡಿದರೆ ಬಡ್ಡಿಯ ದರ ಕಡಿಮೆ ಏನೂ ಇರುವುದಿಲ್ಲ. ಕಂತು ಕಟ್ಟಲಾಗದವರಿಗೆ ಮಾನಸಿಕ ಹಿಂಸೆ ಶುರುಮಾಡುತ್ತಾರೆ. ಬಡ್ಡಿಗೆ ಬಡ್ಡಿ ಬೆಳೆದು ಸಾಲದ ವಿಷವರ್ತುಲದಲ್ಲಿ ಸಿಲುಕಿದವರು ಕಿರುಕುಳ ತಾಳಲಾರದೆ ಆತ್ಮಹತ್ಯೆ ಮಾಡಿಕೊಳ್ಳುವ, ಊರು ಬಿಟ್ಟು ಹೋಗುವ ಘಟನೆಗಳು ನಡೆಯುತ್ತಿವೆ' ಎಂದು ವಾಸ್ತವ ತೆರೆದಿಡುತ್ತಾರೆ ಕರ್ನಾಟಕ ಪ್ರಾಂತ ರೈತ ಸಂಘದ ಮಳವಳ್ಳಿ ತಾಲ್ಲೂಕು ಕಾರ್ಯದರ್ಶಿ ಎನ್. ಲಿಂಗರಾಜ ಮೂರ್ತಿ.

ಬೆಳಗಾವಿ ತಾಲ್ಲೂಕಿನ ಹಾಲಭಾವಿ ಗ್ರಾಮದಲ್ಲಿ ಮೈಕ್ರೋ ಫೈನಾನ್ಸ್‌ವೊಂದು ₹100 ಕೋಟಿಗೂ ಹೆಚ್ಚು ಹಣ ವಂಚಿಸಿರುವ ಪ್ರಕರಣ ಈಚೆಗೆ ಬಯಲಾಗಿದ್ದು, ಫೈನಾನ್ಸ್‌ಗಳಲ್ಲಿ ಸಾಲ ಪಡೆದಿರುವ 15 ಸಾವಿರಕ್ಕೂ ಹೆಚ್ಚು ಮಹಿಳೆಯರು ಸಂಕಷ್ಟಕ್ಕೆ ಸಿಲುಕಿದ್ದಾರೆ.

ಯಮನಾಪುರ ಗ್ರಾಮದಲ್ಲಿ ನಾಲ್ವರು ಮಹರ್ಷಿ ವಾಲ್ಮೀಕಿ ಮಹಿಳಾ ಸ್ವ-ಸಹಾಯ ಸಂಘ ರಚಿಸಿ ಬೆಳಗಾವಿ, ಬೈಲಹೊಂಗಲ, ಗೋಕಾಕ, ಯಮಕನಮರಡಿ ಸೇರಿದ ಹತ್ತಾರು ಹಳ್ಳಿಗಳ 7,000ಕ್ಕೂ ಹೆಚ್ಚು ಮಹಿಳೆಯರ ಆಧಾರ್, ರೇಷನ್ ಕಾರ್ಡ್, ಫೋಟೊ ದಾಖಲೆ ಪಡೆದು ₹ 200 ಕೋಟಿ ಸಾಲ ಮಂಜೂರಾತಿ ಮಾಡಿಸಿಕೊಂಡಿದ್ದಾರೆ. ಸಾಲದಲ್ಲಿ ಅರ್ಧ ಮಾತ್ರ ಮಹಿಳೆಯರಿಗೆ ಕೊಟ್ಟಿರುವ ಆರೋಪ ಇದ್ದು ಉಳಿದ ಹಣವನ್ನು ಮಹಿಳೆಯರಿಗೆ ನೀಡಿಲ್ಲ .

ಹಣ ಪಡೆದ ಆರೋಪಿಗಳು ತಲೆ ಮರೆಸಿಕೊಂಡಾಗ ಸಾಲ ನೀಡಿದ ಹಣಕಾಸು ಸಂಸ್ಥೆಗಳ ಪ್ರತಿನಿಧಿಗಳು ಮಹಿಳೆಯರ ಮನೆಗೆ ಬಂದು ಪೀಡಿಸಲು ಶುರುಮಾಡಿದಾಗ ಕಂಗಾಲಾದ ಮಹಿಳೆಯರು ಆರೋಪಿಗಳ ವಿರುದ್ಧ ಜನವರಿ 6ರಂದು ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ಬಂಧನಕ್ಕೆ ಒಳಗಾದ ಒಂದೇ ದಿನದಲ್ಲಿ ಆರೋಪಿಗಳು ಜಾಮೀನು ಮೇಲೆ ಹೊರಬಂದಿದ್ದಾರೆ. ಆದರೆ, ಸಾಲದ ಹೊರೆ ಹೊತ್ತ ಮಹಿಳೆಯರಿಗೆ ಮಾತ್ರ ತಲೆಮರೆಸಿಕೊಂಡು ಓಡಾಡುವ ಸ್ಥಿತಿ ಬಂದಿದೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಮೀಟರ್ ಬಡ್ಡಿ ದಂಧೆ ಅವ್ಯಾಹತವಾಗಿದ್ದು ಬಡ ರೈತರು, ಮೀನು ಮಾರಾಟಗಾರರು, ಕೂಲಿಕಾರ್ಮಿಕರು ತೊಂದರೆ ಅನುಭವಿಸುತ್ತಿದ್ದಾರೆ. ಕಾರವಾರ, ಅಂಕೋಲಾ ಸೇರಿ ವಿವಿಧೆಡೆ ದಿನದ ಬಡ್ಡಿಯಲ್ಲಿ ಸಾಲ ನೀಡಲಾಗುತ್ತಿದೆ. ₹1 ಸಾವಿರ ಸಾಲಕ್ಕೆ ನಿತ್ಯ ₹100 ಬಡ್ಡಿ. ಒಂದು ದಿನ ವಿಳಂಬವಾದರೂ ದುಪ್ಪಟ್ಟು ಪಾವತಿಸಬೇಕು.

ಮುಂಡಗೋಡ ತಾಲ್ಲೂಕಿನಲ್ಲಿ ಅನಧಿಕೃತ ಬಡ್ಡಿ ವ್ಯವಹಾರದ ದೂರುಗಳ ಕಾರಣದಿಂದ ಪೊಲೀಸರು ಇಬ್ಬರ ಮೇಲೆ ಪ್ರಕರಣ ದಾಖಲಿಸಿದ್ದಾರೆ. ಬಡ್ಡಿ, ಸಾಲ ತೀರಿಸಲಾಗದ ವ್ಯಕ್ತಿಯೊಬ್ಬರ ಬೈಕ್ ಜಪ್ತಿ ಮಾಡಿ ಬೆದರಿಕೆ ಹಾಕಿದ ಸಂಬಂಧ ಮುಂಡಗೋಡ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಹೀಗೆ ಕಿರುಕುಳ ನೀಡಿದ ಪ್ರಕರಣಗಳ ಪಟ್ಟಿ ಸಾಗುತ್ತಾ ಹೋಗುತ್ತದೆ.

ಕರಾವಳಿಯಲ್ಲೂ ಸಕ್ರಿಯ: ಕರಾವಳಿಯಲ್ಲಿ ಅಸಂಘಟಿತ ವಲಯಗಳಲ್ಲಿ ಕೆಲಸ ಮಾಡುವ ಕಾರ್ಮಿಕರೇ ಹೆಚ್ಚಾಗಿದ್ದು ಸಣ್ಣ ಹಣಕಾಸು ಸಂಸ್ಥೆಗಳಿಂದ ಶೇ 40ರ ವರೆಗೂ ಬಡ್ಡಿ ದರದಲ್ಲಿ ಸಾಲ ಪಡೆಯುತ್ತಿದ್ದಾರೆ ಎಂಬ ಆರೋಪಗಳಿವೆ.

ಮಂಗಳೂರು ನಗರದ ಯುವತಿ ಲೋನ್ ಆ್ಯಪ್‌ನಲ್ಲಿ ₹10 ಸಾವಿರ ಸಾಲಕ್ಕೆ ಅರ್ಜಿ ಹಾಕಿದರೆ ಅವರಿಗೆ ಬಡ್ಡಿ ಕಡಿತಗೊಳಿಸಿ ನೀಡಿದ್ದು ₹7,500. ಸಾಲ ಮರುಪಾವತಿ ಮಾಡಿದ ಬಳಿಕವೂ ಯುವತಿಯ ಮುಖವನ್ನು ನಗ್ನ ಚಿತ್ರಕ್ಕೆ ಜೋಡಿಸಿ ಬಹಿರಂಗಗೊಳಿಸುವ ಬೆದರಿಕೆಯೊಡ್ಡಿ ₹51 ಸಾವಿರ ಹಣ ಕೀಳಲಾಗಿದೆ. ವಂಚನೆ ಸಂಬಂಧ ಯುವತಿ ನಗರದ ಸೆನ್ ಕ್ರೈಂ ಠಾಣೆಗೆ ದೂರು ನೀಡಿದ್ದು ಪ್ರಕರಣ ದಾಖಲಾಗಿದೆ.

ಪರ- ವಿರೋಧ ಅಭಿಪ್ರಾಯ: ಚಾಮರಾಜನಗರ ತಾಲ್ಲೂಕಿನ ಹೆಗ್ಗವಾಡಿಪುರ ಹಾಗೂ ದೇಶವಳ್ಳಿಯಲ್ಲಿ ಮೈಕ್ರೋ ಫೈನಾನ್ಸ್‌ಗಳ ಕಿರುಕುಳದಿಂದ ಗ್ರಾಮಸ್ಥರು ಊರು ಬಿಟ್ಟಿದ್ದಾರೆ ಎಂಬ ಸುದ್ದಿ ಮಾಧ್ಯಮ ಹಾಗೂ ಸಾಮಾಜಿಕ ಜಾಲತಾಣದಲ್ಲಿ ಪ್ರಕಟವಾದ ಬಳಿಕ ಗ್ರಾಮಸ್ಥರು ಸಿಟ್ಟಿಗೆದ್ದಿದ್ದಾರೆ.

'ಘಟನೆ ಬಳಿಕ ಉಭಯ ಗ್ರಾಮದವರಿಗೆ ಮೈಕ್ರೋ ಫೈನಾನ್ಸ್‌ಗಳು ಸಾಲ ನೀಡಲು ಹಿಂದೇಟು ಹಾಕುತ್ತಿದ್ದಾರೆ. ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಸಾಲ ಪಡೆಯಲು ಸಾಧ್ಯವಾಗದವರು ಮೈಕ್ರೋ ಫೈನಾನ್ಸ್‌ಗಳಿಂದ ಸಾಲ ಪಡೆದು ಸ್ವಾವಲಂಬಿಗಳಾಗಿದ್ದಾರೆ. ಮರುಪಾವತಿ ಸಾಮರ್ಥ್ಯ ಮೀರಿ ಸಾಲ ಮಾಡಿದವರು ಮಾತ್ರ ಸಮಸ್ಯೆಗೆ ಸಿಲುಕಿದ್ದಾರೆ' ಎಂದು ಗ್ರಾಮದ ಕೆಲವು ಮುಖಂಡರು ಅಭಿಪ್ರಾಯಪಟ್ಟರು.

ಸಾಲ ಪಡೆದವರು ಮರುಪಾವತಿ ಮಾಡಲೇಬೇಕು. ಆದರೆ ಮಹಿಳೆಯರಿಗೆ ನಿಂದಿಸುವುದು, ದೌರ್ಜನ್ಯ ನಡೆಸುವುದು, ವಸೂಲಿ ಮಾಡಲು ಹಲ್ಲೆ ನಡೆಸುವುದು ತರವಲ್ಲ. ಸಾಲ ಪಡೆದು ಕೃಷಿ ಉತ್ಪನ್ನ ವಹಿವಾಟು ನಡೆಸಿ ನಷ್ಟವಾದರೆ ವಿಮೆ ರಕ್ಷಣೆ ಬೇಕು ಎನ್ನುವ ಆಗ್ರಹ ಹಲವು ಗ್ರಾಮಗಳ ಹಿರಿಯರದ್ದಾಗಿದೆ.

ಪೂರಕ ಮಾಹಿತಿ: ಜಿಲ್ಲಾ ವರದಿಗಾರರಿಂದ

ಆತ್ಮಹತ್ಯೆ ಪ್ರಕರಣಗಳು

- ತುಮಕೂರು ಜಿಲ್ಲೆಯ ತಿಪಟೂರಿನ ಭೋವಿ ಕಾಲೋನಿಯ ನಿವಾಸಿ ಸಾದೀಕ್ ಬೇಗಂ (42) ಅವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಆತ್ಮಹತ್ಯೆಗೂ ಮುನ್ನ ಮೈಕ್ರೋ ಫೈನಾನ್ಸ್‌ನವರ ಒತ್ತಡದಿಂದ ಬೇಸತ್ತು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದಾಗಿ ವಿಡಿಯೊ ಮಾಡಿ ಸಾಮಾಜಿಕ ಮಾಧ್ಯಮದಲ್ಲಿ ಹಾಕಿದ್ದರು
- ಮಂಡ್ಯ ಜಿಲ್ಲೆ ಮಳವಳ್ಳಿಯ ಕಿರುಗಾವಲು ಪೊಲೀಸ್ ಠಾಣಾ ವ್ಯಾಪ್ತಿಯ ಮಲಿಯೂರು ಗ್ರಾಮದಲ್ಲಿ ಕಂತಿನ ಹಣ ಕಟ್ಟುವುದು ತಡವಾಯಿತು ಎಂದು ಸಾಲ ವಸೂಲಾತಿ ಏಜೆಂಟರು ನಿಂದಿಸಿದ್ದ ಕಾರಣಕ್ಕೆ ಮಹಿಳೆಯೊಬ್ಬರು ಇತ್ತೀಚೆಗೆ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.
- ಕನಕಪುರ ತಾಲ್ಲೂಕಿನ ಕೂತಗಾನಹಳ್ಳಿಯಲ್ಲಿ ವ್ಯಕ್ತಿಯೊಬ್ಬರು ಇತ್ತೀಚೆಗೆ ಆತ್ಮಹತ್ಯೆಗೆ ಶರಣಾಗಿದ್ದರ ಹಿಂದೆ, ಮೈಕ್ರೋಫೈನಾನ್ಸ್ ಸಾಲ ವಸೂಲಿಯ ಒತ್ತಡ ಕಾರಣ ಎಂದು ಗ್ರಾಮಸ್ಥರು ಆರೋಪಿಸಿದ್ದಾರೆ
- ಬಾಗಲಕೋಟೆಯಲ್ಲಿ ಖಾಸಗಿ ಫೈನಾನ್ಸ್ ಸಿಬ್ಬಂದಿ ಸಾಲ ವಸೂಲಾತಿ ನೆಪದಲ್ಲಿ ಮಹಿಳೆಯರಿಗೆ ಕಿರುಕುಳ, ಹಲ್ಲೆ, ನಿಂದನೆ ಮಾಡಿದ ಸಂಬಂಧ ಶಹರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ
- ಹಾವೇರಿ ಜಿಲ್ಲೆಯ ತಡಸ ಗ್ರಾಮದಲ್ಲಿ ಫೈನಾನ್ಸ್‌ನವರ ಒತ್ತಡದಿಂದ ಬೇಸತ್ತು ಮಹಮ್ಮದ್ ಸಾಹೀದ್ ಮೌಲಾಸಾಬ ಮೀಟಾಯಿಗಾರ (37) ಆತ್ಮಹತ್ಯೆ ಮಾಡಿದ್ದಾರೆ.

ನಿಯಮಗಳು ಏನು ಹೇಳುತ್ತವೆ...

ಸಾರ್ವಜನಿಕರ ಅಗತ್ಯತೆಗಳಿಗೆ ಅನುಗುಣವಾಗಿ ಹಲವು ಪ್ರಕಾರಗಳ ಬ್ಯಾಂಕೇತರ ಹಣಕಾಸು ಸಂಸ್ಥೆ (ಎನ್‌ಬಿಎಫ್‌ಸಿ) ಗಳು ಸಾಲ ವಿತರಿಸುತ್ತಿದ್ದು ಅವುಗಳಲ್ಲಿ ಮೈಕ್ರೋ ಫೈನಾನ್ಸ್ ಕೂಡ ಒಂದು. ಮೈಕ್ರೋ ಫೈನಾನ್ಸ್‌ಗಳು ಕಡಿಮೆ ಆದಾಯ ಹೊಂದಿರುವವನ್ನು ಗುರಿಯಾಗಿಸಿ ಸಣ್ಣ ಪ್ರಮಾಣದ ಸಾಲ ವಿತರಿಸುತ್ತವೆ. ಸಾಲ ವಿತರಣೆಗೂ ಮುನ್ನ ಕಂಪೆನಿ ಕಾಯ್ದೆಯಡಿ ನೋಂದಣಿ ಮಾಡಿಕೊಂಡು ಆರ್‌ಬಿಐನಿಂದ ಸಾಲ ವಿತರಣೆಗೆ ಕಡ್ಡಾಯವಾಗಿ ಪರವಾನಗಿ ಪಡೆದಿರಬೇಕು. ಸಾಲ ವಿತರಣೆ ಹಾಗೂ ಸಾಲ ವಸೂಲಾತಿ ಪ್ರಕ್ರಿಯೆಯಲ್ಲಿ ಗ್ರಾಹಕರೊಂದಿಗೆ ನ್ಯಾಯಯುತ ವ್ಯವಹಾರ ನಡೆಸಬೇಕು ಎನ್ನುತ್ತವೆ ನಿಯಮಗಳು.

ಮೈಕ್ರೋ ಫೈನಾನ್ಸ್‌ಗಳು ಆರ್‌ಬಿಐ ನಿಯಂತ್ರಣಗಳಿಗೆ ಒಳಪಡುವುದಿಲ್ಲ. ಕೈಗಾರಿಕಾ ಕಾಯ್ದೆಯ ನೀತಿಸಂಹಿತೆಗೊಳಪಟ್ಟು ರಚನೆಯಾಗಿರುವ ಸ್ವಯಂ ನಿಯಂತ್ರಣ ಸಂಘಟನೆಯಾಗಿರುವ ಮೈಕ್ರೋ ಫೈನಾನ್ಸ್ ಇಂಡಸ್ಟ್ರಿ ನೆಟ್‌ವರ್ಕ್ ಅಡಿ ಮೈಕ್ರೋ ಫೈನಾನ್ಸ್‌ಗಳು ಕಾರ್ಯನಿರ್ವಹಿಸುತ್ತವೆ. ಆದರೆ, ಸಾಲ ವಿತರಣೆ ಮಾಡುವಾಗ ಆರ್‌ಬಿಐ ನಿಗದಿಪಡಿಸಿರುವ ಬಡ್ಡಿಯ ಮಾನದಂಡ ಅನುಸರಿಸಬೇಕು.

ಸಾಲ ವಸೂಲಾತಿ ಪ್ರಕ್ರಿಯೆಗೆ ಅಗತ್ಯಬಿದ್ದರೆ ಹೊರಗುತ್ತಿಗೆ ಸಿಬ್ಬಂದಿ ನೇಮಕ ಮಾಡಿಕೊಳ್ಳಲು ಅವಕಾಶ ಇದ್ದರೂ ಸಾಲ ವಸೂಲಾತಿ ಸಿಬ್ಬಂದಿಗೆ ಸಾಲ ವಸೂಲು ಮಾಡುವಾಗ ಅನುಸರಿಸಬೇಕಾದ ನಿಯಮಗಳ ಕುರಿತು ಕಡ್ಡಾಯವಾಗಿ ತರಬೇತಿ ನೀಡಿರಬೇಕು.

ಬಲವಂತದಿಂದ ಸಾಲ ವಸೂಲಾತಿ ಮಾಡುವಂತಿಲ್ಲ. ಸಾಲ ಪಡೆದವರು ಅಥವಾ ಕುಟುಂಬ ಸದಸ್ಯರು ಗಂಭೀರ ಅನಾರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದು ಆರ್ಥಿಕ ಸಮಸ್ಯೆಯಲ್ಲಿ ಸಿಲುಕಿದ್ದರೆ ಸಾಲ ಮರುಪಾವತಿ ಅವಧಿಯನ್ನು ವಿಸ್ತರಿಸಬೇಕು, ಅಗತ್ಯವಿದ್ದರೆ ಹೆಚ್ಚುವರಿ ಸಾಲ ನೀಡಬೇಕು. ಆಗಲೂ ಸಾಲ ಮರುಪಾವತಿ ಮಾಡದಿದ್ದರೆ ಅಂತಹ ಸಾಲವನ್ನು 'ವಸೂಲಾಗದ ಸಾಲ'ದ ಪಟ್ಟಿಗೆ ಸೇರಿಸಬೇಕು.

ಸಾಲ ಪಡೆದವರು ಆರ್ಥಿಕವಾಗಿ ಶಕ್ತರಾಗಿದ್ದು ಉದ್ದೇಶಪೂರ್ವಕವಾಗಿ ಮರುಪಾವತಿ ಮಾಡದಿದ್ದರೆ ಅಂಥವರಿಗೆ ಸಾಲ ಕಟ್ಟುವಂತೆ ಹಲವು ಬಾರಿ ಸೂಚನೆ ನೀಡಬಹುದು. ಅಡಮಾನ ರಹಿತ ಸಾಲ ನೀಡಿರುವುದರಿಂದ ಮೈಕ್ರೋ ಫೈನಾನ್ಸ್‌ಗಳು ವಸೂಲಾಗದ ಸಾಲ ಎಂದೇ ಪರಿಗಣಿಸಬೇಕಾಗುತ್ತದೆ ಎನ್ನುತ್ತವೆ ನಿಯಮಗಳು.

ಸಹಾಯವಾಣಿ ಆರಂಭ

ಚಾಮರಾಜನಗರ ಜಿಲ್ಲಾ ವ್ಯಾಪ್ತಿಯಲ್ಲಿ ಖಾಸಗಿ ಫೈನಾನ್ಸ್‌ಗಳು ಸಂಘ-ಸಂಸ್ಥೆಗಳು, ಮೈಕ್ರೋ ಫೈನಾನ್ಸ್‌ಗಳು ಹಾಗೂ ಇತರೆ ಬ್ಯಾಂಕ್‌ಗಳ ಸಾಲ ವಸೂಲಾತಿ ಪ್ರತಿನಿಧಿಗಳು ದೌರ್ಜನ್ಯ, ಕಿರುಕುಳ, ಮಾನಸಿಕ ಹಿಂಸೆ ನೀಡಿದರೆ ಜಿಲ್ಲಾಧಿಕಾರಿಗಳ ಕಚೇರಿ ದೂರವಾಣಿ **08226-223160** ಹಾಗೂ ವಾಟ್ಸ್ ಆ್ಯಪ್ ಸಂಖ್ಯೆ **9740942901**, ಇ ಮೇಲ್- **ffmcchamarajanagar@gmail.com** ಮತ್ತು ಪೊಲೀಸ್ ಕಂಟ್ರೋಲ್ ರೂಂ **9480804600**ಗೆ ದೂರು ನೀಡಬಹುದು ಎಂದು ಜಿಲ್ಲಾಧಿಕಾರಿ ಶಿಲ್ಪಾ ನಾಗ್ ತಿಳಿಸಿದ್ದಾರೆ.

'ಕಿಡ್ನಿ ಮಾರುತ್ತೇನೆ, ಅವಕಾಶ ಕೊಡಿ'

ಚಾಮರಾಜನಗರ ಜಿಲ್ಲೆಯ ಹೆಗ್ಗವಾಡಿಪುರ ಗ್ರಾಮದ ಬಾಲಕನೊಬ್ಬ, ಪೋಷಕರ ಪಡೆದಿದ್ದ ಸಾಲ ತೀರಿಸಲು ಮೂತ್ರಪಿಂಡ ಮಾರಾಟ ಮಾಡುವುದಾಗಿ ಹೇಳಿಕೆ ನೀಡಿ ಸಮಸ್ಯೆಯ ಗಂಭೀರತೆ ತೆರೆದಿಟ್ಟಿದ್ದಾನೆ.

'ಮೈಕ್ರೋ ಫೈನಾನ್ಸ್‌ವೊಂದರಲ್ಲಿ ಪರಿಚಿತರಿಗೆ ಸಾಲ ಕೊಡಿಸಿರುವ ಪೋಷಕರು ಕಂತು ಕಟ್ಟಲಾಗದೆ ನಿತ್ಯ ಕಿರುಕುಳ ಅನುಭವಿಸುತ್ತಿದ್ದು ಆತ್ಮಹತ್ಯೆ ನಿರ್ಧಾರಕ್ಕೆ ಬಂದಿದ್ದಾರೆ. ಅವರಿಲ್ಲದೆ ಬದುಕುವ ಶಕ್ತಿ ಇಲ್ಲ. ಸರ್ಕಾರ ಒಂದು ಕಿಡ್ನಿ ಮಾರಾಟ ಮಾಡಲು ಅವಕಾಶ ಕೊಟ್ಟರೆ ಎಲ್ಲ ಸಾಲವನ್ನೂ ತೀರಿಸಿಬಿಡುತ್ತೇನೆ' ಎಂದು ಬಾಲಕ ಹೇಳಿದ್ದಾನೆ. ಇದರಿಂದ ವಸೂಲಾತಿದಾರರ ದೌರ್ಜನ್ಯ ತೀವ್ರತೆ ಅರಿವಾಗುತ್ತಿದೆ.

ಚಾಮರಾಜನಗರ ತಾಲ್ಲೂಕಿನ ಹೆಗ್ಗವಾಡಿಪುರದಲ್ಲಿ ಮೈಕ್ರೋ ಫೈನಾನ್ಸ್ ಸಾಲ ವಸೂಲಿಗಾರರ ಒತ್ತಡಕ್ಕೆ ಬೆದರಿ ಮನೆ ಖಾಲಿ ಮಾಡಿರುವ ಸಂತ್ರಸ್ತರು

ಇದೇ ರೀತಿ ತಾಲ್ಲೂಕಿನ ದೇಶವಳ್ಳಿ ಹಾಗೂ ಹೆಗ್ಗವಾಡಿಪುರ ಗ್ರಾಮದ ಶೋಭಾ, ಸುಮಾ, ನಾಗಮ್ಮ ಮೈಕ್ರೋ ಫೈನಾನ್ಸ್ ಪ್ರತಿನಿಧಿಗಳ ಒತ್ತಡ ತಾಳಲಾರದೆ ಊರು ತೊರೆದಿರುವ ಮಾಹಿತಿ ಜಿಲ್ಲಾಡಳಿತಕ್ಕೆ ತಹಶೀಲ್ದಾರ್ ಸಲ್ಲಿರುವ ವರದಿಯಲ್ಲಿ ಸ್ಪಷ್ಟವಾಗಿ ನಮೂದಾಗಿದೆ. ವಿಳಾಸ ಪತ್ತೆಯಾಗಬಹುದು ಎಂಬ ಭಯದಲ್ಲಿ ನಾಪತ್ತೆಯಾದವರು ಮಾಧ್ಯಮದವರ ಜೊತೆ ಮಾತನಾಡಲು ನಿರಾಕರಿಸಿದ್ದು, ಮತ್ತೆ ಊರಿಗೆ ಬರಲೂ ಹಿಂದೇಟು ಹಾಕುತ್ತಿದ್ದಾರೆ.

'ಬಲವಂತದ ವಸೂಲಾತಿ ನಿಲ್ಲಲಿ'

ಸಾಲ ವಸೂಲಾತಿ ಏಜೆಂಟರು ಗ್ರಾಮದೊಳಗೆ ಬಂದರೆ ಮರ್ಯಾದೆಗೆ ಅಂಜಿ ಓಡಿಹೋಗುವ, ಅವಿತುಕೊಳ್ಳುವ ಪರಿಸ್ಥಿತಿ ಗ್ರಾಮಗಳಲ್ಲಿ ನಿರ್ಮಾಣವಾಗಿದೆ. ಮನೆಗಳಿಗೆ ನುಗ್ಗುವುದು, ತಡರಾತ್ರಿ ವಸೂಲಿಗೆ ಬರುವುದು, ಅವಾಚ್ಯ ಶಬ್ದಗಳಿಂದ ನಿಂದಿಸುವುದು ಸಾಮಾನ್ಯವಾಗಿದೆ. ಸಾಲ ಪಡೆದವರು ಆಕಸ್ಮಿಕವಾಗಿ ಆರ್ಥಿಕ ನಷ್ಟ ಅನುಭವಿಸಿದರೆ ಮರುಪಾವತಿಗೆ ಕಾಲಾವಕಾಶ, ವಿಮೆಯಂತಹ ಸೌಲಭ್ಯಗಳನ್ನು ಕೊಡಬೇಕು. ಬಲವಂತದಿಂದ ವಸೂಲಾತಿ ನಿಲ್ಲಬೇಕು, ಇಲ್ಲವಾದರೆ ರಾಜ್ಯದಾದ್ಯಂತ ರೈತರು ರೊಚ್ಚಿಗೇಳಲಿದ್ದಾರೆ.

ಮಹೇಶ್ ಕುಮಾರ್, ಕರ್ನಾಟಕ ರಾಜ್ಯ ರೈತ ಸಂಘ ಹಸಿರುಸೇನೆ ಮುಖಂಡ

29 ಸಂಸ್ಥೆಗಳಿಗಷ್ಟೇ ಸಾಲಕ್ಕೆ ಅನುಮತಿ

ಚಾಮರಾಜನಗರ ಜಿಲ್ಲೆಯಲ್ಲಿ 29 ಮೈಕ್ರೋ ಫೈನಾನ್ಸ್‌ಗಳು ಮಾತ್ರ ಸಾಲ ವಿತರಿಸಲು ಅಧಿಕೃತ ಪರವಾನಗಿ ಪಡೆದಿವೆ. ಆದರೆ, ನಿಯಮ ಮೀರಿ ಹಲವು ಫೈನಾನ್ಸ್‌ಗಳು ಸಾಲ ನೀಡಿರುವ ದೂರುಗಳಿದ್ದು, ಮ್ಯಾಪಿಂಗ್ ಪ್ರಕ್ರಿಯೆ ಆರಂಭವಾಗಿದೆ. ಜಿಲ್ಲೆಯಲ್ಲಿರುವ ಮೈಕ್ರೋ ಫೈನಾನ್ಸ್‌ಗಳು ಎಷ್ಟು ಪ್ರಮಾಣದಲ್ಲಿ ಸಾಲ ವಿತರಿಸಿವೆ, ಬಡ್ಡಿಯ ದರ ಎಷ್ಟು, ಸಾಲ ವಿತರಿಸುವಾಗ ನಿಯಮ ಪಾಲಿಸಿವೆಯೇ ಎಂಬ ಮಾಹಿತಿ ಸಂಗ್ರಹಿಸಲಾಗುತ್ತಿದೆ. ಸಾಲ ವಸೂಲಾತಿ ಕಿರುಕುಳ ಸಂಬಂಧ ಮೈಕ್ರೋ ಫೈನಾನ್ಸ್ ಇನ್‌ಸ್ಟಿಟ್ಯೂಷನ್ ನೆಟ್‌ವರ್ಕ್ ಸಂಸ್ಥೆಯ ಕರ್ನಾಟಕ ಹಾಗೂ ತಮಿಳುನಾಡು ಮುಖ್ಯಸ್ಥರ ಜೊತೆ ಚರ್ಚಿಸಿದ್ದು, ಸಾಲ ವಸೂಲಾತಿ ನಿಯಮ ಮೀರದಂತೆ, ಉಲ್ಲಂಘಿಸಿದರೆ ಪ್ರಕರಣ ದಾಖಲಿಸುವ ಎಚ್ಚರಿಕೆ ನೀಡಲಾಗಿದೆ.

ಸಿ.ಟಿ.ಶಿಲ್ಪಾನಾಗ್, ಜಿಲ್ಲಾಧಿಕಾರಿ

'ರಾಷ್ಟ್ರೀಕೃತ ಬ್ಯಾಂಕ್‌ಗಳು ಸಾಲ ಕೊಡಲಿ'

ಮೈಕ್ರೋ ಫೈನಾನ್ಸ್‌ಗಳಿಗೆ ಸರ್ಕಾರ ಮೂಗುದಾರ ಹಾಕದಿದ್ದರೆ ಗ್ರಾಮಗಳು ಗುಳೆ ಹೋಗುವ ಪರಿಸ್ಥಿತಿ ನಿರ್ಮಾಣವಾಗಬಹುದು. ಸಾಲ ವಸೂಲಾತಿ ನಿಯಮಗಳು ಕಡ್ಡಾಯವಾಗಿ ಪಾಲಿಸಬೇಕು, ಮರುಪಾವತಿ ಶಕ್ತಿಗೆ ಅನುಗುಣವಾಗಿ ಸಾಲ ನೀಡಬೇಕು, ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಸರಳವಾಗಿ ಅಡಮಾನ ರಹಿತ ಸಾಲ ದೊರೆತರೆ ಸಾರ್ವಜನಿಕರು ಮೈಕ್ರೋ ಫೈನಾನ್ಸ್‌ಗಳತ್ತ ಸಾಲಕ್ಕೆ ಕೈಚಾಚುವ ಪರಿಸ್ಥಿತಿ ಬರುವುದಿಲ್ಲ. ರೈತರ ಮಾನಹಾನಿಯಾದರೆ, ಆತ್ಮಹತ್ಯೆಗಳಾದರೆ ಅನ್ನದಾತರು ಕಾನೂನು ಕೈಗೆತ್ತಿಕೊಳ್ಳಬೇಕಾಗುತ್ತದೆ.

ಹೊನ್ನೂರು ಪ್ರಕಾಶ್, ರೈತ ಮುಖಂಡ

ಅಸಭ್ಯ ವರ್ತನೆ

ಸಾಲ ಮರುಪಾವತಿಸಿ ನೆಪದಲ್ಲಿ ಮನೆಗೆ ನುಗ್ಗಿ ಮಹಿಳೆಯರ ಜೊತೆ ಅಸಭ್ಯವಾಗಿ ವರ್ತಿಸುತ್ತಿರುವ ಘಟನೆಗಳು ನಡೆಯುತ್ತಿವೆ. ನಿಂದಿಸಿ, ಬೆದರಿಕೆ ಹಾಕಲಾಗುತ್ತಿದೆ. ಸಮಸ್ಯೆ ಪರಿಹರಿಸುವಂತೆ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಲಾಗಿದೆಯಾದರೂ ಕಿರುಕುಳ ನಿಲ್ಲುತ್ತಿಲ್ಲ.

ಸಿರಾಜ್ ಶಬ್ದಿ, ಕಲಬುರಗಿಯ ಜನತಾ ಪರಿವಾರ ಸಂಘಟನೆ ರಾಜ್ಯ ಅಧ್ಯಕ್ಷ

ಗುಂಡಣ್ಣ

25 ವರ್ಷಗಳ ಹಿಂದೆ

ಬುಧವಾರ, 19-01-2000

- **ಉಗ್ರಗಾಮಿಗಳ ವಿರುದ್ಧ ಹೊಸ ಸಮರ ನೀತಿ**

ನವದೆಹಲಿ, ಜ.18 (ಪಿಟಿಐ)– ಕಾಶ್ಮೀರದಲ್ಲಿ ಪಾಕ್ ಪ್ರೇರಿತ ಭಯೋತ್ಪಾದಕರ ಹಾವಳಿಯನ್ನು ಅಡಗಿಸಲು ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಹೊಸ ಸಮರ ನೀತಿಯಡಿ ಉಗ್ರಗಾಮಿಗಳನ್ನು ಯಾವುದೇ ಕಾರಣಕ್ಕೂ ಪರಾರಿಯಾಗಲು ಬಿಡುವುದಿಲ್ಲ.'ರಕ್ಷಣಾ ಕಾರ್ಯದಲ್ಲಿ ತೊಡಗಿರುವ ಎಲ್ಲ ದಳಗಳನ್ನು ಒಂದು ಸಂಯುಕ್ತ ನಾಯಕತ್ವದಡಿ ಒಟ್ಟುಗೂಡಿಸಿ ಭಯೋತ್ಪಾದಕರ ವಿರುದ್ಧ ಹೋರಾಟ ಇನ್ನಷ್ಟು ಪರಿಣಾಮಕಾರಿಯಾಗಿ ಮಾಡಲು ನಿರ್ಧರಿಸಲಾಗಿದೆ ಎಂದು ಅಧಿಕೃತ ಮೂಲಗಳು ಇಂದು ತಿಳಿಸಿದವು.

50 ವರ್ಷಗಳ ಹಿಂದೆ

ಭಾನುವಾರ, 19-01-1975

- **ಮಲೆಯಾಳಿ ಭಾಷೆ ಕಲಿಯದವರಿಗೆ ಸರ್ಕಾರಿ ನೌಕರಿ ಇಲ್ಲ**

ಕಾಸರಗೋಡು, ಜ.18– ಇನ್ನು ಮುಂದೆ ಕೇರಳ ರಾಜ್ಯದಲ್ಲಿ ಮಲೆಯಾಳಿ ಭಾಷೆ ಬಾರದವರಿಗೆ ಸರ್ಕಾರಿ ಉದ್ಯೋಗವಿಲ್ಲ.
ಹಾಲಿ ಉದ್ಯೋಗದಲ್ಲಿರುವ ಹಾಗೂ ಮುಂಬಡ್ತಿ ಪಡೆದಿರುವ ಕೇರಳೀಯರಲ್ಲದವರು ನಾಲ್ಕು ವರ್ಷಗಳ ಅವಧಿಯೊಳಗೆ ಮಲೆಯಾಳಿ ಭಾಷೆ ಪರೀಕ್ಷೆಯಲ್ಲಿ ತೇರ್ಗಡೆಯಾಗದಿದ್ದರೆ ಉದ್ಯೋಗ ಕಳೆದುಕೊಳ್ಳುವರು ಇಲ್ಲವೇ ಹಿಂಬಡ್ತಿ ಪಡೆಯುವರು.

ಕೇರಳ ಸರ್ಕಾರ ಹೊರಡಿಸಿದ ಈ ಆಜ್ಞೆಯಿಂದ ಕಾಸರಗೋಡಿನಲ್ಲಿರುವ ಸರ್ಕಾರಿ ಉದ್ಯೋಗಸ್ಥ ಕನ್ನಡಿಗರು ಅಸಮಾಧಾನಗೊಂಡಿದ್ದಾರೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

ಭಾನುವಾರ ಜನವರಿ 19, 2025

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಹೇಮಂತ ಋತು ತಿಥಿ: ಪೌಷ ಕೃಷ್ಣ ಪಂಚಮಿ ಗಂ. 07-31 ನಕ್ಷತ್ರ: ಉತ್ತರಫಲ್ಗುನಿ ಗಂ. 17-30 ಯೋಗ: ಅತಿಗಂಡ ಗಂ. 25-57 ಕರಣ: ತೈತಿಲ ಗಂ. 07-31, ಮಕರ ಮಾಸದ 05 ನೇ ದಿನ, ಮಳೆನಕ್ಷತ್ರ: ಉತ್ತರಾಷಾಢ 3.
ರಾಹುಕಾಲ : ಸಾಯಂಕಾಲ 04-30 – 06-00
ಸೂರ್ಯೋದಯ : 07-01 ಸೂರ್ಯಾಸ್ತ : 06-21
ಮುಸ್ಲಿಂ ದಿನಾಂಕ : 18 ರಜಬ್
ಅದೃಷ್ಟ ಸಂಖ್ಯೆ : 6, 11

ಮೇಷ: ಪ್ರಭಾವಿ ವ್ಯಕ್ತಿಗಳೊಂದಿಗೆ ಹೆಚ್ಚಿನ ಸಮಯವನ್ನು ಕಳೆಯಬೇಕಾಗಬಹುದು. ಕಾರ್ಯ ನಿಮಿತ್ತವಾಗಿ ಅತ್ತೆ-ಸೊಸೆಯಲ್ಲಿ ಭಿನ್ನಾಭಿಪ್ರಾಯ ತೋರಿಬಂದರೂ ತಾಳ್ಮೆ ಇರಲಿ. ತಂತ್ರಜ್ಞಾನದ ವಿಚಾರದಲ್ಲಿ ಸಿದ್ಧಹಸ್ತರಾಗುವಿರಿ.

ವೃಷಭ: ವಾಹನ ಚಾಲನೆ ಅಥವಾ ಕಬ್ಬಿಣದ ಕೆಲಸ ಮಾಡುವವರು ಕಾಳಜಿ ವಹಿಸಿ. ಔಷಧಿ ವ್ಯಾಪಾರಿಗಳಿಗೆ ಇಂದು ಅಧಿಕ ಲಾಭ ಉಂಟಾಗುವುದು. ದಾಂಪತ್ಯದಲ್ಲಿ ಯಾವುದೇ ರೀತಿಯ ಬಿರುಕು ಬರದಂತೆ ನೋಡಿಕೊಳ್ಳಿ.

ಮಿಥುನ: ನಿಮ್ಮ ರಚನಾತ್ಮಕ ಕಾರ್ಯಕ್ರಮಗಳ ಕುರಿತು ದೂರದರ್ಶನ ಮಾಧ್ಯಮದವರಿಂದ ಮೆಚ್ಚುಗೆಯ ಮಾತುಗಳನ್ನು ಕೇಳಲಿದ್ದೀರಿ. ಸಿದ್ಧ ಉಡುಪು ತಯಾರಕರಿಗೆ ಹಾಗೂ ಮಾರಾಟಗಾರರಿಗೆ ವಿಶೇಷ ಲಾಭ ಬರುವುದು.

ಕರ್ಕಾಟಕ: ಅತಿಯಾದ ಉತ್ಸಾಹದಿಂದ ಜೀವನದಲ್ಲಿ ಹೊಸ ತಿರುವೊಂದನ್ನು ಪಡೆದುಕೊಳ್ಳುವಿರಿ. ದೂರದ ಸಂಚಾರ ತೋರಿಬಂದರೂ ಮುಂದೂಡಿಕೆ ಅನಿವಾರ್ಯವಾಗುವುದು. ಕ್ರೀಡಾಪಟುಗಳಿಗೆ ಅದೃಷ್ಟದ ಜಯ ಸಿಗಲಿದೆ.

ಸಿಂಹ: ಅನಿವಾರ್ಯತೆಗಳಿಲ್ಲದೆ ಕೇವಲ ಹಿರಿಮೆಗಾಗಿ ವಿಲಾಸೀ ವಸ್ತುಗಳನ್ನು ಖರೀದಿಸುವಿರಿ. ಕಟ್ಟಡದ ಕಂಟ್ರಾಕ್ಟರ್‌ಗಳಿಗೆ ಕೆಲಸಗಾರರ ಕೊರತೆ ಕಾಣಲಿದೆ ಅಥವಾ ಪರಿಣಿತ ಕೆಲಸಗಾರರ ಗೈರುಹಾಜರಿಯಿಂದ ನಷ್ಟ ಸಂಭವಿಸುವುದು.

ಕನ್ಯಾ: ನೀವು ಇರುವ ಜಾಗದಲ್ಲಿ ತೊಂದರೆ ಕಾಣಿಸಿಕೊಳ್ಳಲಿದೆ, ಕೂಡಲೇ ಬಗೆಹರಿಸಿಕೊಳ್ಳಿರಿ. ನಿಮ್ಮ ಸೋಮಾರಿತನವೇ ನಿಮಗೆ ಶತ್ರುವಾಗಿ ಪರಿಣಾಮ ಬೀರುವುದು. ಸಾಲದ ಹಣ ಈ ದಿನ ಹಿಂತಿರುಗಿ ಬರುವುದು.

ತುಲಾ: ನಿಮ್ಮ ಮಾತ-ಪಿತೃಗಳ ಆಶೀರ್ವಾದದಿಂದ ಕೆಲಸ ಕಾರ್ಯಗಳಲ್ಲಿ ಜಯ ಪಡೆಯುವಿರಿ. ಸಂಘ ಸಂಸ್ಥೆಯಲ್ಲಿ ನಿಮ್ಮ ಪ್ರಾಮುಖ್ಯತೆ ಹಾಗೂ ಜವಾಬ್ದಾರಿಯೂ ಹೆಚ್ಚಲಿದೆ. ಸಿದ್ಧ ಉಡುಪು ಮಾರಾಟಗಾರರಿಗೆ ಶುಭದಿನ.

ವೃಶ್ಚಿಕ: ವ್ಯವಹಾರಕ್ಕೆ ಸಂಬಂಧಿಸಿದಂತೆ ಕಾನೂನು ವಿಷಯದಲ್ಲಿ ಹೆಚ್ಚಿನ ಸಲಹೆ ಪಡೆದುಕೊಳ್ಳುವುದು ಅನಿವಾರ್ಯವಾಗಲಿದೆ. ಇತರರ ಅನುಮಾನಕ್ಕೆ ಎಡೆಮಾಡಿಕೊಡುವಂತಹ ಕೆಲಸಗಳು ನಿಮ್ಮಿಂದ ನಡೆಯಲಿವೆ.

ಧನು: ಧಾರ್ಮಿಕ ಕಾರ್ಯದಲ್ಲಿ ಭಾಗವಹಿಸುವಿಕೆಯಿಂದ ಮಾನಸಿಕ ಶಾಂತಿ ಹೆಚ್ಚಾಗಲಿದೆ. ವೈಯಕ್ತಿಕ ಸಮಸ್ಯೆ ಬಗೆಹರಿದು ನೆಮ್ಮದಿ ಸಿಗಲಿದೆ. ಎಲ್ಲರನ್ನೂ ಗೌರವಯುತವಾಗಿ ನೋಡಿ. ತಪ್ಪನ್ನು ತಿದ್ದಿಕೊಳ್ಳುವ ಅವಕಾಶ ಸಿಗುತ್ತದೆ.

ಮಕರ: ಸ್ನೇಹಿತರಲ್ಲಿ ಅಥವಾ ಸಂಬಂಧಿಕರಲ್ಲಿ ಅವರ ವೈಯಕ್ತಿಕ ವಿಚಾರವನ್ನು ಅನಗತ್ಯವಾಗಿ ಮಾತನಾಡುವುದಕ್ಕಿಂತ ಮೌನವಾಗಿ ಇರುವುದು ಲೇಸು. ಈ ದಿನ ಹಂತ ಹಂತವಾಗಿ ಪ್ರಗತಿ ಪ್ರಾಪ್ತಿಯಾಗುವುದು.

ಕುಂಭ: ನಿಯಮವನ್ನು ಬದಿಗಿಟ್ಟು ಸಮಯಕ್ಕೆ ಸರಿಯಾಗಿ ವರ್ತಿಸುವ ಅನಿವಾರ್ಯತೆ ಎದುರಾಗುವುದು. ಬಹುಕಾಲಿಕ ಯೋಜನೆಗಳು ಅರ್ಧದಲ್ಲಿ ನಿಲ್ಲುವ ಲಕ್ಷಣಗಳಿವೆ. ವಿರೋಧಿಗಳು ನಿಮ್ಮನ್ನು ಏನೂ ಮಾಡಲಾರರು.

ಮೀನ: ನೃತ್ಯ ಮತ್ತು ಅಭಿನಯ ಕಲಿಯಲು ಆಸಕ್ತಿ ಉಂಟಾಗುವುದು ಹಾಗೂ ಹೆಸರು ಸಂಪಾದಿಸಬಹುದು. ಸಾಮಾಜಿಕ ಬದುಕಿನಲ್ಲಿ ಗೌರವಯುತವಾಗಿ ವರ್ತಿಸಿರಿ. ಸಿಹಿ ತಿಂಡಿಗಳ ತಯಾರಕರಿಗೆ ಬೇಡಿಕೆ ಹೆಚ್ಚುವುದು.

ಪದಬಂಧ 5927

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಒಂದೇ ವಿಷಯದಲ್ಲಿ ಗಮನವನ್ನು ಕೇಂದ್ರೀಕರಿಸುವುದು (4)
3.ತೋರಿಕೆಯ ನೆಪ (4)
5.ಪಣ ತೊಟ್ಟು ನೋಡಿದ ಐಶ್ವರ್ಯ (3)
7.ನವರತ್ನಗಳಲ್ಲಿ ಒಂದಾದ ಹವಳ (3)
9.ಹಾಲಿನಿಂದ ಮಾಡಿದ ಸಿಹಿ ಭಕ್ಷ್ಯ (3)
11.ನೆರವಿಗಾಗಿ ನೀಡುವ ಹಣ (5)
12.ಪದ್ಯಗಳ ಸಾಲು (3)
13.ಬೈದಾಟಕ್ಕೊಂದು ಪರ್ಯಾಯ ಪದ (3)
14.ಬದಲಾಗಿ ಬಂದ ವ್ಯಕ್ತಿ ಅಥವಾ ವಸ್ತು (3)
18.ಕಲೆಯೊಳಗಿರುವ ಕತ್ತಿ! (4)
19.ಗಿಣಿಯಿರುವ ನದಿ ಕಾಣಿಸುತ್ತಿದೆ (4)

ಮೇಲಿಂದ ಕೆಳಕ್ಕೆ

1.ಬಾವಿಯಿಂದ ನೀರೆತ್ತುವ ಸಾಧನ (2)
2.ತೆರ ಕೊಡದೆ ಸತಾಯಿಸುತ್ತಿರುವ ದಡ್ಡ (3)
3.ಚಿನ್ನದಲ್ಲಿ ಹರಳನ್ನು ಕೂರಿಸುವ ಕೆಲಸ (3)
4.ಅತ್ತ ತೋರಿಸಿದ ವಿಳಾಸ (2)
6.ಸಮನಾರ್ಥಕ ಪದ (5)
7.ಕೂದಲಿರದೆ ಬೋಳಾದವನು (3)
8.ಮಣ ಭಾರದ ಹೆಣವನ್ನು ಹೂಳಿದ ಜಾಗ (3)
9.ಪಾಕದ ನಂತರ ಸೇವಿಸಿದ ಷರಬತ್ತು (3)
10.ಯುದ್ಧಕ್ಕೆ ಸನ್ನದ್ಧವಾದ ಸೇನೆ (3)
14.ಬಲೆಯಲ್ಲಿ ನಗ್ನತೆ! (3)
15.ಬರೆದ ದಾಖಲೆ (3)
16.ಸುಂಕ ಕಟ್ಟಿ ನೋಡಿದ ಸೇತುವೆ (2)
17.ನಿಚ್ಚಣಿಕೆ ಇಲ್ಲದೆ (2)



5926ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅಭಯದಾನ 3.ಸರ್ಗ 4.ಅಡವಿ
5.ತರ್ಜನಿ 7.ಕರ 8.ರಸ
10.ತವರ 11.ಸುಮ 13.ಕಾಲ
14.ಣಿಮರ 15.ರಥಿಕ 16.ಪಂಥ
17.ಆಮ್ಲಜನಕ

ಮೇಲಿಂದ ಕೆಳಕ್ಕೆ:
2.ಭವಾಂತರ 3.ಸವಿಸ್ತಾರ
4.ಅಧಿಕಾರವಾಣಿ 6.ನಿಯತಕಾಲಿಕ
7.ಕಡಸು 9.ಸಫಲ
12.ಮನೋರಥ 13.ಕಾರಸ್ಥಾನ

ಸುಡೊಕು 6312

	4		1		3	5		
7		6	4				3	1
	3				7	4		
6	1				4			
						6		4
8	2						1	
		3		2		9		8
9			3		6		7	5
		1		8			6	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6311 ಸುಡೊಕು

3	5	2	1	9	4	8	6	7
6	1	4	5	8	7	9	3	2
7	9	8	6	3	2	5	1	4
2	7	9	8	1	3	6	4	5
1	3	6	7	4	5	2	9	8
4	8	5	9	2	6	3	7	1
5	4	1	2	6	9	7	8	3
9	2	3	4	7	8	1	5	6
8	6	7	3	5	1	4	2	9

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕೋಟೆಕಾರು ದರೋಡೆ ಪ್ರಕರಣ: ಕೃತ್ಯಕ್ಕೆ 2 ಕಾರು ಬಳಕೆ– ಒಂದು ಕಾರು ಕೇರಳದತ್ತ, ಇನ್ನೊಂದು ಮಂಗಳೂರಿನತ್ತ

‘ದರೋಡೆಯಾಗಿದ್ದು ₹14 ಕೋಟಿ ಮೌಲ್ಯದ ಚಿನ್ನ’

ಪ್ರಜಾವಾಣಿ ವಾರ್ತೆ

ಉಳ್ಳಾಲ (ದಕ್ಷಿಣ ಕನ್ನಡ): ‘ಕೋಟೆಕಾರು ವ್ಯವಸಾಯ ಸೇವಾ ಸಹಕಾರಿ ಸಂಘದ ಕೆ.ಸಿ.ರೋಡ್ ಶಾಖೆಗೆ ಶುಕ್ರವಾರ ನುಗ್ಗಿದ್ದ ದರೋಡೆಕೋರರು ದೋಚಿದ್ದು ₹11 ಲಕ್ಷ ನಗದು ಹಾಗೂ ಅಂದಾಜು ₹14 ಕೋಟಿ ಮೌಲ್ಯದ ಚಿನ್ನಾಭರಣ ಎಂಬುದು ಪರಿಶೀಲನೆ ವೇಳೆ ಗೊತ್ತಾಗಿದೆ’ ಎಂದು ಕೋಟೆಕಾರು ವ್ಯವಸಾಯ ಸೇವಾ ಸಹಕಾರಿ ಸಂಘದ ಅಧ್ಯಕ್ಷ ಕೃಷ್ಣ ಶೆಟ್ಟಿ ಕೆ. ‘ಪ್ರಜಾವಾಣಿ’ಗೆ ತಿಳಿಸಿದರು.

ಕಳವಾದ ಚಿನ್ನಾಭರಣಗಳ ಬಗ್ಗೆ ಕೂಲಂಕಷವಾಗಿ ಶನಿವಾರ ಪರಿಶೀಲಿಸಿದಾಗ ಇಷ್ಟೊಂದು ಮೊತ್ತದ ನಗ–ನಗದು ಕಳವಾಗಿದ್ದು ಗೊತ್ತಾಗಿದೆ ಎಂದು ಅವರು ಹೇಳಿದರು.

‘ಚಿನ್ನ ಅಡವಿಟ್ಟವರು ಅದರ ಮೌಲ್ಯದ ಶೇ 80ರಷ್ಟು ಮೊತ್ತವನ್ನು ಸಾಲವಾಗಿ ಪಡೆದಿರುತ್ತಾರೆ. ಶೇ 20ರಷ್ಟು ಮೊತ್ತವನ್ನು ಅವರಿಗೆ ಮರಳಿಸಬೇಕಾಗುತ್ತದೆ. ಅಡಮಾನವಾಗಿ ಪಡೆದ ಚಿನ್ನಾಭರಣ ಗಳಿಗೆ ₹19 ಕೋಟಿ ಮೌಲ್ಯದ ವಿಮೆ ಯನ್ನು ಮಾಡಿಸಿದ್ದೇವೆ. ನಾವು ಗ್ರಾಹಕರಿಗೆ ಸೇರಬೇಕಾದ ಹಣವನ್ನು ಮರಳಿಸುತ್ತೇವೆ’ ಎಂದು ಮಾಹಿತಿ ನೀಡಿದರು.

‘ಸಂಘದ ಈ ಶಾಖೆ ಸ್ಥಾಪನೆಯಾಗಿ ಸುಮಾರು 14 ವರ್ಷಗಳಾಗಿವೆ. ಕೆಲವರು ಸಾಲವನ್ನು ಪ್ರತಿ ವರ್ಷವೂ ನವೀಕರಿಸುತ್ತಿದ್ದರು’ ಎಂದರು.

ಕೋಟೆಕಾರು ವ್ಯವಸಾಯ ಸೇವಾ ಸಹಕಾರಿ ಸಂಘದ ಕೆ.ಸಿ.ರೋಡ್ ಶಾಖೆಯಲ್ಲಿ ನಡೆದ ದರೋಡೆ ಪ್ರಕರಣದ ಕುರಿತು ಕಚೇರಿಯ ಸಿಬ್ಬಂದಿಯಿಂದ ಉಳ್ಳಾಲ ಠಾಣೆಯ ಇನ್‌ಸ್ಪೆಕ್ಟರ್ ಬಾಲಕೃಷ್ಣ ಎನ್‌ಎನ್ ಅವರು ಶನಿವಾರ ಮಾಹಿತಿ ಸಂಗ್ರಹಿಸಿದರು ಪ್ರಜಾವಾಣಿ ಚಿತ್ರ

ಎರಡು ಕಾರು ಬಳಕೆ: ದರೋಡೆಕೋರರು ನಕಲಿ ನಂಬರ್ ಪ್ಲೇಟ್‌ನ ಎರಡು ಕಾರು ಬಳಸಿರುವುದು ತಿಳಿದು ಬಂದಿದೆ. ಈ ಕಾರುಗಳಲ್ಲಿ ಒಂದು ಕಾರು ರಾಷ್ಟ್ರೀಯ ಹೆದ್ದಾರಿ 66ರಲ್ಲಿ ತಲಪಾಡಿ ಟೋಲ್‌ಗೇಟ್ ಮೂಲಕ ಕೇರಳದತ್ತ ಸಾಗಿದ್ದರೆ, ಇನ್ನೊಂದು ಕಾರು ಮಂಗಳೂರಿನತ್ತ ಸಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಆರೇ ನಿಮಿಷ: ‘ದರೋಡೆಕೋರರು ಐದಾರು ನಿಮಿಷಗಳಲ್ಲಿ ಕೃತ್ಯವನ್ನು ಹೇಗೆ ಪೂರ್ಣಗೊಳಿಸಬೇಕು ಎಂಬ ಬಗ್ಗೆ ಮೊದಲೇ ಯೋಜನೆ ರೂಪಿಸಿಕೊಂಡು ಬಂದಿದ್ದಾರೆ. ಸದಾ ಜನನಿಬಿಡವಾಗಿರುವ ಕೆ.ಸಿ.ರೋಡ್‌ನಲ್ಲಿ ಶುಕ್ರವಾರ ಮಧ್ಯಾಹ್ನ ಜನರ ಓಡಾಟ ಕಡಿಮೆ ಇರುತ್ತದೆ. ಇಲ್ಲಿನ ಬಹುತೇಕ ಅಂಗಡಿಗಳ ಮಾಲೀಕರು ಮುಸ್ಲಿಮರಿದ್ದು, ಅವರು ಶುಕ್ರವಾರ ಮಧ್ಯಾಹ್ನ ವೇಳೆ ನಮಾಜ್‌ಗೆ ತೆರಳುವ ಸಂದರ್ಭ ನೋಡಿಕೊಂಡು ಕೃತ್ಯ ನಡೆಸಿದ್ದಾರೆ. ಮಧ್ಯಾಹ್ನ 1 ಗಂಟೆ 09 ನಿಮಿಷಕ್ಕೆ ಸಹಕಾರಿ ಸಂಘದ ಕಚೇರಿ ಬಳಿ ಕಾರು ನಿಲ್ಲಿಸಿರುವ ದರೋಡೆಕೋರರು, 1 ಗಂಟೆ 15 ನಿಮಿಷದ ಒಳಗೆ ಎಷ್ಟು ಸಾಧ್ಯವಾಗುತ್ತದೋ, ಅಷ್ಟು ನಗ–ನಗದು ತುಂಬಿಕೊಂಡು ಪರಾರಿಯಾಗಿದ್ದಾರೆ. ದರೋಡೆಗೆ ಬಳಸಿದ್ದ ಕಾರು ಮಧ್ಯಾಹ್ನ 1 ಗಂಟೆ 20 ನಿಮಿಷಕ್ಕೆ ತಲಪಾಡಿಯ ಟೋಲ್‌ಗೇಟ್ ಮೂಲಕ ಹಾದುಹೋಗಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

‘ಐವರ ತಂಡ ದರೋಡೆಯಲ್ಲಿ ಭಾಗಿಯಾಗಿತ್ತು. ಆದರೆ, ಕೃತ್ಯಕ್ಕೆ ಬಳಸಿದ ಕಾರು ತಲಪಾಡಿ ಟೋಲ್‌ಗೇಟ್ ಮೂಲಕ ಹಾದುಹೋಗುವಾಗ ಅದರಲ್ಲಿ ಚಾಲಕ ಮತ್ತು ಹಿಂಬದಿಯ ಸೀಟಿನಲ್ಲಿ ಒಬ್ಬ ವ್ಯಕ್ತಿ ಮಾತ್ರ ಇದ್ದರು. ಚಾಲಕ ಮಾಸ್ಕ್ ಧರಿಸಿ ಟೋಲ್‌ನಲ್ಲಿ ಹಣ ಪಾವತಿಸಿದ್ದ. ಈ ದೃಶ್ಯ ಟೋಲ್‌ಗೇಟ್ ಬಳಿಯ ಸಿ.ಸಿ.ಟಿ.ವಿ. ಕ್ಯಾಮೆರಾದಲ್ಲಿ ದಾಖಲಾಗಿವೆ. ಈ ಕಾರು ಹೊಸಂಗಡಿಯವರೆಗೆ ಸಾಗಿದ್ದು, ಅಲ್ಲಿಂದ ರಾಷ್ಟ್ರೀಯ ಹೆದ್ದಾರಿ 66ರಿಂದ ಎಡಕ್ಕೆ ತಿರುಗಿ ಇನ್ನೊಂದು ರಸ್ತೆಯಲ್ಲಿ ಸಾಗಿರುವುದು ತನಿಖೆಯಿಂದ ಗೊತ್ತಾಗಿದೆ. ದರೋಡೆಯಲ್ಲಿ ಭಾಗಿಯಾದ ಇತರರು ರಾಷ್ಟ್ರೀಯ ಹೆದ್ದಾರಿ 66 ರಲ್ಲಿ ಕೆ.ಸಿ.ರೋಡ್‌ನಿಂದ ತಲಪಾಡಿವರೆಗೆ ಸಾಗಿ, ಸಿ.ಸಿ.ಟಿ.ವಿ ಕ್ಯಾಮೆರಾ ಕಣ್ಗಾವಲು ಇಲ್ಲದ ಕಡೆ ಇನ್ನೊಂದು ಕಾರು ಹತ್ತಿ, ಕದ್ದ ಚಿನ್ನಾಭರಣದೊಂದಿಗೆ ಮಂಗಳೂರಿನತ್ತ ಸಾಗಿರುವ ಶಂಕೆಯೂ ಇದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಸಂಘದಲ್ಲಿ ಚಿನ್ನವನ್ನು ಅಡವಿಟ್ಟು ಸಾಲ ಪಡೆದವರು ಕಚೇರಿಗೆ ಶನಿವಾರ ದೌಡಾಯಿಸಿ, ಆತಂಕ ತೋಡಿಕೊಂಡರು.

ಆರೋಪಿಗಳ ಸುಳಿವು ಪತ್ತೆ: ಕಮಿಷನರ್

‘ಈ ದರೋಡೆ ಪ್ರಕರಣವನ್ನು ಎಲ್ಲ ಆಯಾಮಗಳಲ್ಲೂ ತನಿಖೆ ನಡೆಸುತ್ತಿದ್ದು, ಕೆಲ ಸುಳಿವು ಸಿಕ್ಕಿವೆ’ ಎಂದು ನಗರ ಪೊಲೀಸ್ ಕಮಿಷನರ್ ಅನುಪಮ್ ಅಗ್ರವಾಲ್ ತಿಳಿಸಿದ್ದಾರೆ.

‘ಸಹಕಾರಿ ಸಂಘದ ಕಚೇರಿಯಲ್ಲಿ ಕಾವಲು ಸಿಬ್ಬಂದಿ, ಎಚ್ಚರಿಕೆ ಗಂಟೆ ವ್ಯವಸ್ಥೆ ಇರಲಿಲ್ಲ. ಸಿ.ಸಿ.ಟಿ.ವಿ. ಕ್ಯಾಮೆರಾಗಳೂ ಕಾರ್ಯನಿರ್ವಹಿಸುತ್ತಿರಲಿಲ್ಲ. ಪರಿಚಯ ಇಲ್ಲದ ನಾಲ್ವರು ಕಚೇರಿಗೆ ನುಗ್ಗಿ ಬೀಗವನ್ನು ಕೇಳಿದಾಗಲೂ ಯಾರೂ ಪ್ರತಿರೋಧವನ್ನೂ ತೋರಿಲ್ಲ. ಕಚೇರಿಯಲ್ಲಿ ಒಂದು ಸಿಸಿಟಿವಿ ಕ್ಯಾಮೆರಾವನ್ನು ಮಾತ್ರ ಅಳವಡಿಸಲಾಗಿತ್ತು. ಲಾಕರ್ ಪ್ರದೇಶದ ದೃಶ್ಯಗಳು ದಾಖಲಾಗುವಂತೆ ಅದನ್ನು ಜೋಡಿಸಿರಲಿಲ್ಲ. ದರೋಡೆಕೋರರು ಕಚೇರಿಗೆ ನುಗ್ಗಿದಾಗ ಲಾಕರ್ ತೆರೆದೇ ಇತ್ತು’ ಎಂದು ಅವರು ಮಾಹಿತಿ ನೀಡಿದರು.

‘ಭದ್ರತಾ ಲೋಪದ ಬಗ್ಗೆ ಸಹಕಾರಿ ಸಂಘಗಳ ನಿಬಂಧಕರಿಗೆ ಪತ್ರ ಬರೆಯಲಿದ್ದೇವೆ. ಎಲ್ಲ ಸಹಕಾರಿ ಸಂಘಗಳ ಸಭೆ ಕರೆದು ಚರ್ಚಿಸಲಿದ್ದೇವೆ. ಪೊಲೀಸರೂ ಭೇಟಿ ನೀಡಿ, ಭದ್ರತಾ ವ್ಯವಸ್ಥೆ ಪರಿಶೀಲಿಸಲಿದ್ದಾರೆ’ ಎಂದರು.

ಬೋಟ್‌ನಲ್ಲಿ ಪರಾರಿಯಾದರೇ?

ತಲಪಾಡಿ ಟೋಲ್‌ಗೇಟ್ ಮೂಲಕ ಕೇರಳ ತಲುಪಿದ ದರೋಡೆಕೋರರು ಕೃತ್ಯಕ್ಕೆ ಬಳಸಿದ ಕಾರನ್ನು ಅಜ್ಞಾತ ಸ್ಥಳದಲ್ಲಿ ಬಿಟ್ಟು ಬೋಟ್ ಮೂಲಕ ಸಮುದ್ರ ಮಾರ್ಗವಾಗಿ ಕೇರಳಕ್ಕೆ ಪರಾರಿಯಾಗಿರುವ ಸಾಧ್ಯತೆ ಇದೆ. ಈ ಆಯಾಮದಲ್ಲೂ ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಜಿಲ್ಲಾ ಶಸ್ತ್ರಚಿಕಿತ್ಸಕರು ಮತ್ತು ಅಧೀಕ್ಷಕರ ಕಛೇರಿ
ವೆನ್‌ಲಾಕ್ ಜಿಲ್ಲಾ ಆಸ್ಪತ್ರೆ, ಮಂಗಳೂರು
ಸಂಖ್ಯೆ:ಎಸ್‌ಯುಪಿ(1)D-28/2024-25 ದಿನಾಂಕ: 10.01.2025
ಟೆಂಡರ್ ಅಧಿಸೂಚನೆ (ದ್ವಿ-ಲಕೋಟೆ ಪದ್ಧತಿಯಲ್ಲಿ)
(ಕೆಪಿಪಿಪಿ.ಕರ್ನಾಟಕ ಪೋರ್ಟಲ್ ಮುಖಾಂತರ ಮಾತ್ರ)
ವೆನ್ಲಾಕ್ ಜಿಲ್ಲಾ ಆಸ್ಪತ್ರೆ, ಮಂಗಳೂರು, ಇಲ್ಲಿನ ವಿವಿಧ ವಿಭಾಗದ ರೋಗಿಗಳ ಉಪಯೋಗಕ್ಕಾಗಿ ಒಂದು ವರ್ಷದ ಅವಧಿಗೆ ಬೇಕಾಗುವ ಔಷಧ ಗಳ ಟೆಂಡರ್ ಕರೆಯಲಾಗಿದೆ. ಕೆಪಿಪಿಪಿ.ಕರ್ನಾಟಕ ಪೋರ್ಟಲ್ ಮೂಲಕ ಟೆಂಡರನ್ನು ಸಲ್ಲಿಸುವ ಕೊನೆಯ ದಿನಾಂಕ: 27.01.2025 (ಮಧ್ಯಾಹ್ನ 4.30 ಗಂಟೆಯವರೆಗೆ ಮಾತ್ರ) ನಿಗದಿಪಡಿಸಲಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಇಲಾಖೆಯ ವೆಬ್‌ಸೈಟ್ kppp.karnataka.gov.in ನ್ನು ಸಂಪರ್ಕಿಸಲು ಕೋರಿದೆ.
ಸಹಿ/-
ಸದಸ್ಯ ಕಾರ್ಯದರ್ಶಿ, ಆರೋಗ್ಯ ರಕ್ಷಾ ಸಮಿತಿ ಹಾಗೂ ಜಿಲ್ಲಾ ಶಸ್ತ್ರಚಿಕಿತ್ಸಕರು ಮತ್ತು ಅಧೀಕ್ಷಕರು, ವೆನ್ಲಾಕ್ ಜಿಲ್ಲಾ ಆಸ್ಪತ್ರೆ, ಮಂಗಳೂರು
DIPR / MNG / 1205/ MPL / 24-25

ಕಂದಾಯ ಆಯುಕ್ತಾಲಯ, ಕಂದಾಯ ಇಲಾಖೆ
ಭೂಮಿ ಉಸ್ತುವಾರಿ ಕೋಶ
ಮೊದಲನೇ ಮಹಡಿ, ಎಸ್.ಎಸ್.ಎಲ್.ಆರ್.ಕಟ್ಟಡ, ಕೆ.ಆರ್.ವೃತ್ತ, ಬೆಂಗಳೂರು–560001. ದೂರವಾಣಿ ಸಂ: 080–22113255
No: BMC/2024-25/IND0014 Date: 18.01.2025
ಇ–ಟೆಂಡರ್ ಅಧಿಸೂಚನೆ
ಭೂಮಿ ಉಸ್ತುವಾರಿ ಕೋಶದ ಕಛೇರಿಗೆ 4000 Chrome Books ಗಳನ್ನು ಸರಬರಾಜು ಮಾಡಲು ಇ–ಟೆಂಡರ್ ಆಹ್ವಾನಿಸಲಾಗಿದೆ. ಭರ್ತಿ ಮಾಡಿದ ಟೆಂಡರ್ ದಾಖಲೆಗಳನ್ನು ದಿನಾಂಕ: **01–02–2025, ಸಂಜೆ 5.30 ಗಂಟೆಯೊಳಗೆ** ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಬಹುದಾಗಿದೆ. ಟೆಂಡರ್ ಷರತ್ತು ಮತ್ತಿತರ ವಿವರಗಳನ್ನು **https://kppp.karnataka.gov.in** ರಲ್ಲಿ ಪಡೆಯಬಹುದಾಗಿದೆ.
ಸಹಿ/–
ಸಹಾಯಕ ಆಯುಕ್ತರು, ಭೂಮಿ ಉಸ್ತುವಾರಿ ಕೋಶ, ಕಂದಾಯ ಇಲಾಖೆ
ವಾಸಾಸಂಇ/ವಾಪ್ರ/4425/2024–25

ರಾಷ್ಟ್ರೀಯ ಆರೋಗ್ಯ ಅಭಿಯಾನ
ಕರ್ನಾಟಕ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ
ಆರೋಗ್ಯ ಸೌಧ, 1ನೇ ಮಹಡಿ, ಮಾಗಡಿ ರಸ್ತೆ, ಬೆಂಗಳೂರು–23
ದೂ: 080–23113584 ಇ–ಮೇಲ್:pdrch-hfws@karnataka.gov.in
ಸಂ: DD/NCD/48/2023-24 (E-1270286) ದಿನಾಂಕ: 18.01.2025
ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಪ್ರಕಟಣೆ
TENDER FOR PROCUREMENT AND SUPPLY OF SPIROMETER UNDER 15TH FINANCE COMMISSION, NATIONAL HEALTH MISSION (NCD)
ರಾಷ್ಟ್ರೀಯ ಆರೋಗ್ಯ ಅಭಿಯಾನ ಕಾರ್ಯಕ್ರಮದಡಿಯಲ್ಲಿ “Supply & Installation of Spirometer Equipment for Karnataka State” ಗಳನ್ನು ಸರಬರಾಜು ಮಾಡಲು ಮೂಲ ತಯಾರಕರು / ಅಧಿಕೃತ ಸರಬರಾಜುದಾರರು ಅಗತ್ಯದಾಖಲೆಯೊಂದಿಗೆ ಭಾಗವಹಿಸಲು ಟೆಂಡರ್ ಅನ್ನು ಆಹ್ವಾನಿಸಲಾಗಿದೆ.
Tender No: NHM/2024-25/IND0028
ಅರ್ಹತೆಯುಳ್ಳ ಟೆಂಡರ್‌ದಾರರು ಮೇಲ್ಕಂಡ ವಿಷಯದ ಬಗ್ಗೆ ವಿವರವಾದ ಮಾಹಿತಿಯನ್ನು ವೆಬ್‌ಸೈಟ್ **https://kppp.karnataka.gov.in** ನಲ್ಲಿ ಪಡೆಯಬಹುದಾಗಿದೆ. ಟೆಂಡರ್ ದಾಖಲೆಗಳನ್ನು ದಿನಾಂಕ: **18/01/2025** ರಿಂದ ಡೌನ್‌ಲೋಡ್ ಮಾಡಬಹುದಾಗಿದೆ ಮತ್ತು ಟೆಂಡರ್ ದಾಖಲೆಗಳನ್ನು ಸಲ್ಲಿಸುವ ಕೊನೆಯ ದಿನಾಂಕ: **27/02/2025 ಅಪರಾಹ್ನ 05:30 ಗಂಟೆಯವರೆಗೆ.**
ಹೆಚ್ಚಿನ ಮಾಹಿತಿಗಾಗಿ ಕಛೇರಿಯ ಸಮಯದಲ್ಲಿ ಬೆಳಿಗ್ಗೆ 11.00 ರಿಂದ ಸಂಜೆ 04.00 ಗಂಟೆಯವರೆಗೆ ಭೇಟಿ ನೀಡಬಹುದು
ಸಹಿ/–
ಯೋಜನಾ ನಿರ್ದೇಶಕರು (ಆರ್.ಸಿ.ಹೆಚ್)
DIPR/CP/BCPL/4428/2024-25

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ.)
ಕಂಪನಿ ಕಚೇರಿ, ನವನಗರ, ಪಿ.ಬಿ. ರೋಡ್, ಹುಬ್ಬಳ್ಳಿ – 580 025
Telephone: 0836-2956611 E-mail ID: itc.hescom@gmail.com
Corporate Identity Number (CIN): U31401KA2002SGC030437
ನಂ. ಹು/ಕೈ.ತ.ಕೇಂ/ಪ್ರವ್ಯ (ಆ ಮತ್ತು ಮಾ.ಸಂ.ಅ) ಕಾ.ನಿ.ಇ(ವಿ)/2024-25/CYS-7572 ದಿನಾಂಕ: 16-01-2024
ಟೆಂಡರ್ ಪ್ರಕಟಣೆ
2023–24ನೇ ಸಾಲಿನ ಒಂದು ವರ್ಷದ ಇಲೆಕ್ಟ್ರೀಶಿಯನ್ ಶಿಕ್ಷುತ್ವ ತರಬೇತಿಗಾಗಿ ಮೂಲ ದಾಖಲಾತಿಗಳ ಪರಿಶೀಲನೆಗಾಗಿ ಆಯ್ಕೆಯಾದ ಅಭ್ಯರ್ಥಿಗಳ ಪಟ್ಟಿಯನ್ನು www.hescom.karnataka.gov.in ಜಾಲತಾಣದಲ್ಲಿ ಪ್ರಕಟಿಸಲಾಗಿದೆ.
ಸಹಿ/– ಪ್ರಧಾನ ವ್ಯವಸ್ಥಾಪಕರು (ಆ ಮತ್ತು ಮಾ.ಸಂ.ಅ)
ನಿಗಮ ಕಚೇರಿ, ನವನಗರ, ಹುಬ್ಬಳ್ಳಿ
ವಾ.ಸಾ.ಇ/ಧಾ/866/ದೇಶಪಾಂಡೆಪಬ್ಲಿಸಿಟಿ/2024–25

ಪೊಲೀಸ್ ಇಲಾಖೆ
ಪೊಲೀಸ್ ಮಹಾನಿರ್ದೇಶಕರು ರವರ ಕಛೇರಿ ಪೊಲೀಸ್ ಗಣಕ ವಿಭಾಗ,
7ನೇ ಮಹಡಿ, ಬಹುಮಹಡಿಗಳ ಕಟ್ಟಡ, ಡಾ. ಅಂಬೇಡ್ಕರ್ ವೀಧಿ, ಬೆಂಗಳೂರು–560001, ಇ–ಮೇಲ್ :dgppcw@ksp.gov.in ದೂರವಾಣಿ : 22353871
ಸಂಖ್ಯೆ: 25/ಸಂಗ್ರಹ/ಡಿಜಿಪಿ/ಪಿಸಿಡಬ್ಲ್ಯೂ/2024–25/Call-2 ದಿನಾಂಕ: 17.01.2025
ಇ–ಟೆಂಡರ್ ಪ್ರಕಟಣೆ
ಪೊಲೀಸ್ ಗಣಕ ವಿಭಾಗದ ವತಿಯಿಂದ ರಾಜ್ಯದ ವಿವಿಧ ಪೊಲೀಸ್ ಠಾಣೆಗಳಿಗೆ ಅವಶ್ಯಕತೆ ಇರುವ ಈ ಕೆಳಕಂಡ ಉಪಕರಣಗಳನ್ನು ಸರಬರಾಜು ಮಾಡಿ ಅಳವಡಿಸುವ ಕುರಿತು ಕೆ.ಟಿ.ಪಿ.ಪಿ ಕಾಯ್ದೆ 1999 ನಿಯಮ 2000ರ ಪ್ರಕಾರ ಕರ್ನಾಟಕ ಸರ್ಕಾರದ ಇ–ಟೆಂಡರ್ ಪ್ರಕ್ರಿಯೆ ಮೂಲಕ ಅರ್ಜಿಗಳನ್ನು ದ್ವಿಲಕೋಟೆ ಪದ್ಧತಿಯಲ್ಲಿ ಆಹ್ವಾನಿಸಲಾಗಿದೆ.

ಕ್ರ. ಸಂ	ಟೆಂಡರ್ ಸಂಖ್ಯೆ	ಟೆಂಡರ್ ಸಂಕ್ಷಿಪ್ತ ವಿವರ	ಸಂಖ್ಯೆ	ಟೆಂಡರ್ ಬಿಡ್ ಸಲ್ಲಿಕೆಗೆ ಕೊನೆಯ ದಿನಾಂಕ
1.	KSP/2024- 25/ IND0138/ call-2	High End Server with graphic card	02	01/02/2025 by 17:30 hrs
2.		Medium End Server with graphic card	03	
3.		Low End Server	05	

ಈ ನಿಟ್ಟಿನಲ್ಲಿ ಕುಶಲತೆ ಪಡೆದಿರುವ ಸಂಸ್ಥೆಗಳು ವಿವರವಾದ ಷರತ್ತು ಮತ್ತು ನಿಬಂಧನೆ ಹಾಗೂ ತಾಂತ್ರಿಕ ವಿವರ ಒಳಗೊಂಡಿರುವ ಟೆಂಡರ್ ದಾಖಲಾತಿಯನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳುವುದು. ಮೇಲ್ಕಂಡ ಉಪಕರಣಗಳನ್ನು ಸರಬರಾಜು ಮಾಡಿ ಅಳವಡಿಸಲು ಇಚ್ಛಿಸುವವರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳುವುದು. ಇ–ಖರೀದಿಯ ಬಗ್ಗೆ ತರಬೇತಿ ಕಾರ್ಯಕ್ರಮವನ್ನು ಇ–ಪ್ರೊಕ್ಯೂರ್‌ಮೆಂಟ್ ಸೆಲ್, ಇ–ಆಡಳಿತ ಇಲಾಖೆ, ಬಹುಮಹಡಿಗಳ ಕಟ್ಟಡ, ಡಾ॥ ಅಂಬೇಡ್ಕರ್ ವೀಧಿ, ಬೆಂಗಳೂರು–560001 ಇಲ್ಲಿ ವ್ಯವಸ್ಥೆಗೊಳಿಸುತ್ತಿದ್ದು, ಎಲ್ಲಾ ಸರಬರಾಜುದಾರರರು ದೂರವಾಣಿ ಸಂಖ್ಯೆ 91–8046010000 + 91–8068948777 ಗಳಿಗೆ ಸಂಪರ್ಕಿಸಿ ಸಹಾಯವನ್ನು ಪಡೆಯಬಹುದು. ಇ–ಖರೀದಿ ಪ್ರಕ್ರಿಯೆಯಲ್ಲಿ ಭಾಗವಹಿಸುವ ಸರಬರಾಜುದಾರರು ಇ–ಖರೀದಿ ವ್ಯವಸ್ಥೆಯಲ್ಲಿ ನೋಂದಾಯಿಸಿಕೊಳ್ಳುವುದು ಕಡ್ಡಾಯವಾಗಿದೆ. ಹೆಚ್ಚಿನ ವಿವರಗಳಿಗೆ https://kppp.karnataka.gov.in ಅಥವಾ ಹೆಲ್ಪ್‌ಲೈನ್ 91–8046010000 +91–8068948777ಗಳನ್ನು ಸಂಪರ್ಕಿಸತಕ್ಕದ್ದು. ದಿನಾಂಕ : 18.01.2025 ರಿಂದ ದಾಖಲಾತಿಯು https://kppp.karnataka.gov.in ನಲ್ಲಿ ಲಭ್ಯವಿರುತ್ತದೆ.
(1) ವಿವರಗಳು : (1) ಇಎಂಡಿ ಮೊತ್ತ : ರೂ.6,60,000/–(ಆರು ಲಕ್ಷದ ಅರವತ್ತು ಸಾವಿರ ಮಾತ್ರ) ಗಳನ್ನು ಈ ಕೆಳಕಂಡ ವಿಧಾನಗಳ ಮೂಲಕ ಪಾವತಿ ಮಾಡಬಹುದು. (ಎ) ಕ್ರೆಡಿಟ್ ಕಾರ್ಡ್, (ಬಿ) ಡೆಬಿಟ್ ಕಾರ್ಡ್, (ಸಿ) ನ್ಯಾಷನಲ್ ಎಲೆಕ್ಟ್ರಾನಿಕ್ ಫಂಡ್ ಟ್ರಾನ್ಸ್‌ಫರ್, (ಡಿ) ಪಾವತಿ ವಿವರ ಬಿಡ್ ಡಾಕ್ಯುಮೆಂಟ್‌ನಲ್ಲಿ ತಿಳಿಸಿರುವಂತೆ (ಇ–ಪಾವತಿ ವಿವರ ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತದೆ) (2) ಪ್ರೀ ಬಿಡ್ ಸಭೆ : 23–01–2025 ರ ಮಧ್ಯಾಹ್ನ 12.00 ಗಂಟೆಗೆ (3) ತಾಂತ್ರಿಕ ಬಿಡ್ : 03–02–2025 ರ ಬೆಳಿಗ್ಗೆ 11.00 ಗಂಟೆಗೆ (4) ವಾಣಿಜ್ಯ ಬಿಡ್ : 10–02–2025 ರ ಬೆಳಿಗ್ಗೆ 11.30 ಗಂಟೆಗೆ.
ಸಹಿ/–
ಪೊಲೀಸ್ ಮಹಾ ನಿರ್ದೇಶಕರು, ಪೊಲೀಸ್ ಗಣಕ ವಿಭಾಗ, ಬೆಂಗಳೂರು
DIPR/CP/4374/Zen/2024-25

ಕರ್ನಾಟಕ ಸರ್ಕಾರ
ಜಂಟಿ ನಿರ್ದೇಶಕರ ಕಛೇರಿ, ಸಮಾಜ ಕಲ್ಯಾಣ ಇಲಾಖೆ, ಮೈಸೂರು ಜಿಲ್ಲೆ, ಮೈಸೂರು
ಡಾ. ಬಾಬು ಜಗಜೀವನ್‌ರಾಮ್ ಭವನ ಕಟ್ಟಡ, ಆದಿಪಂಪ ರಸ್ತೆ, ನಾರಾಯಣಸ್ವಾಮಿ ಬ್ಲಾಕ್, ವಿನಾಯಕನಗರ, ಮೈಸೂರು
E-mail dswomysore9@gmail.com ದೂ.: 0821–2344661
ಸಂಖ್ಯೆ : ನಿಪಕೇ.ಮೈ/ಆಡಳಿತ/ಸಿಆರ್–1/2024–25 ದಿನಾಂಕ: 18–01–2025
ಅಲ್ಪಾವಧಿ ಮರು ಇ–ಟೆಂಡರ್ ಪ್ರಕಟಣೆ
(ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)
ನಿರಾಶ್ರಿತರ ಪರಿಹಾರ ಕೇಂದ್ರ, ಜ್ಯೋತಿನಗರ, ಮೈಸೂರು ಇಲ್ಲಿನ ನಿರಾಶ್ರಿತರುಗಳ ಊಟದ ನಿರ್ವಹಣೆಗಾಗಿ 2024–25ನೇ ಸಾಲಿಗೆ ಬೇಕಾಗಿರುವ ಆಹಾರ ಪದಾರ್ಥಗಳು ಮತ್ತು ಇತರೆ ಅಗತ್ಯ ವಸ್ತುಗಳ ಪೂರೈಕೆಗಾಗಿ ಕರ್ನಾಟಕ ಪಬ್ಲಿಕ್ ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಅಲ್ಪಾವಧಿ ಮರು ಇ–ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ನಮೂನೆಗಳಿಗಾಗಿ ಇ.ಎಂ.ಡಿ. ಬಗ್ಗೆ ಮತ್ತು ಟೆಂಡರ್ ಬಗ್ಗೆ ಹೆಚ್ಚಿನ ಮಾಹಿತಿಗಳನ್ನು ವೆಬ್‌ಸೈಟ್ http//.kppp.karnataka.gov.in ನಲ್ಲಿ ನೋಡಬಹುದಾಗಿದೆ. ಹೆಚ್ಚಿನ ವಿವರಗಳನ್ನು ಮೇಲ್ಕಂಡ ವಿಳಾಸದಲ್ಲಿ ಪಡೆಯಬಹುದು.
ಸಹಿ/– ಜಂಟಿ ನಿರ್ದೇಶಕರು
ಸಮಾಜ ಕಲ್ಯಾಣ ಇಲಾಖೆ ಹಾಗೂ ಕಾರ್ಯದರ್ಶಿ ನಿರಾಶ್ರಿತರ ಪರಿಹಾರ ಕೇಂದ್ರ, ಮೈಸೂರು

ಸಾರಿಗೆ ಇಲಾಖೆ
ಸಾರಿಗೆ ಆಯುಕ್ತರ ಕಛೇರಿ, ಕರ್ನಾಟಕ, 1ನೇ ಮಹಡಿ, ಟಿ.ಟಿ.ಎಂ.ಸಿ ಕಟ್ಟಡ, ಬಿಎಂಟಿಸಿ ಸಂಕೀರ್ಣ, ಶಾಂತಿನಗರ, ಬೆಂಗಳೂರು.
ಸಂ: ಸಾಆ/ಪೀಕ–3/ವೈವ–123/2023–24 ದಿನಾಂಕ: 18.01.2025
ಇ–ಟೆಂಡರ್ ಪ್ರಕಟಣೆ
ಸಾರಿಗೆ ಇಲಾಖೆಯ ನಾಲ್ಕು ಕಛೇರಿಗಳಲ್ಲಿನ ದಾಖಲೆಗಳನ್ನು ಡಿಜಿಟಲೀಕರಣಗೊಳಿಸಲು ಸಂಬಂಧ ಎಂಪನಲ್ಡ್ ಮಾರಾಟಗಾರರು (empanelled vendors) ಸಂಸ್ಥೆಗಳಿಂದ ಟೆಂಡರ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಎಂಪಾನಲ್ಡ್ ಸಂಸ್ಥೆಗಳು ಟೆಂಡರ್‌ನ ವಿವರಗಳನ್ನು ಅಂತರ್‌ಜಾಲದ ಮೂಲಕ ವೆಬ್‌ಸೈಟ್ ವಿಳಾಸ : kppp.karnataka.gov.in ಸಂಪರ್ಕಿಸಿ ಪಡೆಯಬಹುದಾಗಿದೆ. ಎಂಪಾನಲ್ಡ್ ಸಂಸ್ಥೆಗಳು ಇ–ಪ್ರೊಕ್ಯೂರ್‌ಮೆಂಟ್ ಸಹಾಯವಾಣಿಯ ದೂರವಾಣಿ ಸಂಖ್ಯೆ: +91–8046010000/+91–8068948777 ಮೂಲಕ ಸಂಪರ್ಕಿಸಿ ಸಹಾಯವನ್ನು ಪಡೆಯಬಹುದು.
ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **14–02–2025 ರ ಅಪರಾಹ್ನ 5.00 ಗಂಟೆ ಆಗಿರುತ್ತದೆ.** ಹೆಚ್ಚಿನ ಮಾಹಿತಿಗಾಗಿ ಈ ದೂರವಾಣಿ ಸಂಖ್ಯೆ: 080–22235176 ಯನ್ನು ಸಂಪರ್ಕಿಸಬಹುದು.
Tender No. TD/2024-25/SE0066.
ಸಹಿ/–
ಸಾರಿಗೆ ಆಯುಕ್ತರ ಪರವಾಗಿ, ಬೆಂಗಳೂರು
ವಾಸಾಸಂಇ/ವಾ.ಪ್ರ/4404/ಎಂಎಎ/24–25

ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ
(ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ)
ಇರ್ವಿನ್ ರಸ್ತೆ, ಮೈಸೂರು–570 001
Phone:91-0821-2520512 (Off.), 2520803 (Fax)
Website: www.mmcri/karnataka.gov.in
E-mail: mmcrimysore@yahoo.com
ಸಂ:ಸರಬ/ವಿವ/271/2024–25 ದಿ:13.01.2025
ಅಲ್ಪಾವಧಿ ಮರು–ಟೆಂಡರ್ ಅಧಿಸೂಚನೆ
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 – ನಿಯಮ 2000 ರಂತೆ ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಮೈಸೂರು ಇಲ್ಲಿನ ಕೆ.ಆರ್. ಆಸ್ಪತ್ರೆ, ಚೆಲುವಾಂಬ ಆಸ್ಪತ್ರೆ ಮತ್ತು ಪಿ.ಕೆ.ಟಿ.ಬಿ. ಮತ್ತು ಸಿ.ಡಿ. ಆಸ್ಪತ್ರೆಗಳಿಗೆ ವಿವಿಧ ಸೇವಾ ಸಿಬ್ಬಂದಿಗಳನ್ನು ಸೇವಾ ಟೆಂಡರ್ ಮೂಲಕ ಸೇವೆಯನ್ನು ಪಡೆಯಲು 01 ವರ್ಷದ ಅವದಿಗೆ ಅಥವಾ ಮುಂದಿನ ಆದೇಶದವರೆಗೆ “ಸೇವೆಯನ್ನು ಪಡೆಯಲು ವಿದ್ಯುನ್ಮಾನ ವೇದಿಕೆ ಮುಖಾಂತರ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್ ನಮೂನೆಯನ್ನು ಇ–ಪ್ರೂಕೂರ್‌ಮೆಂಟ್ ವೆಬ್‌ಸೈಟ್ – **http://kppp.karnataka.gov.in** ಮೂಲಕ ದಿನಾಂಕ 15.01.2025 ರಿಂದ ಪಡೆಯಬಹುದಾಗಿದ್ದು, ದಿನಾಂಕ 29.01.2025 ರಂದು ಅಪರಾಹ್ನ 5.00. ರೊಳಗಾಗಿ ಸಲ್ಲಿಸಬಹುದಾಗಿರುತ್ತದೆ, ಇ.ಎಂ.ಡಿ. ಸಲ್ಲಿಸದ ಟೆಂಡರ್ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಒಂದು ವೇಳೆ ಸಾರ್ವಜನಿಕ ರಜೆಯೆಂದು ಘೋಷಿಸಲ್ಪಟ್ಟರೆ, ಮುಂದಿನ ಕೆಲಸದ ದಿನಾಂಕವನ್ನು ಕೊನೆಯ ದಿನಾಂಕವೆಂದು ಪರಿಗಣಿಸತಕ್ಕದ್ದು. ಈ ಬಗ್ಗೆ ಯಾವುದೇ ಅಧಿಸೂಚನೆ ಹೊರಡಿಸಲಾಗುವುದಿಲ್ಲ.
ಸಹಿ/–ನಿರ್ದೇಶಕರು ಮತ್ತು ಡೀನ್, ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಮೈಸೂರು
DIPR/DD-MYS/1120/KSMCA/762/2024-25

ಲೋಕೋಪಯೋಗಿ ಇಲಾಖೆ, ತುಮಕೂರು,
ಕ್ರ.ಸಂ:ಕಾಇಂ:ಲೋಇವಿ:ತುಮ:ಕಿ.ಇಂ–1: ಟೆಂಡರ್ 32:2024–25, ದಿನಾಂಕ: 15–01–2025
ಟೆಂಡರ್ ಪ್ರಕಟಣೆ ಸಂ. 32/2024–25 ದಿನಾಂಕ 15–01–2025
ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ:32/2024–25:ದಿನಾಂಕ15–01–2025 ರಂದು ತುಮಕೂರು ವಿಭಾಗದ ವ್ಯಾಪ್ತಿಯಲ್ಲಿ 5054–ಜಿಲ್ಲಾ ಮತ್ತು ಇತರೆ ರಸ್ತೆಗಳ ಸುಧಾರಣೆ, 5054– ರಾಜ್ಯ ಹೆದ್ದಾರಿ ನವೀಕರಣ ಮತ್ತು 3054–ಜಿಲ್ಲಾ ಮತ್ತು ಇತರೆ ರಸ್ತೆಗಳ ನಿರ್ವಹಣೆ ಲೆಕ್ಕ ಶೀರ್ಷಿಕೆ ಅಡಿಯಲ್ಲಿ 04 ಕಾಮಗಾರಿಗೆ KPPP-Portal ಮೂಲಕ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಟೆಂಡರಿಗಿಟ್ಟ ಗರಿಷ್ಠ ಮೊತ್ತ **ರೂ: 704.74 ಲಕ್ಷ**ಗಳು, ಟೆಂಡರಿಗಿಟ್ಟ ಕನಿಷ್ಠ ಮೊತ್ತ **ರೂ: 81.49 ಲಕ್ಷ**ಗಳು ಇ.ಎಂ.ಡಿ ಗರಿಷ್ಠ ಮೊತ್ತ **ರೂ. 10,57,123.00/–**, ಇ.ಎಂ.ಡಿ ಕನಿಷ್ಠ ಮೊತ್ತ **ರೂ. 1,62,987.00/–** ಅರ್ಹ ಗುತ್ತಿಗೆದಾರರು 1ನೇ ದರ್ಜೆ ಹಾಗೂ 3ನೇ ದರ್ಜೆ ಮೇಲ್ಪಟ್ಟು ಕಾಲಾವಧಿ: **11, 9 ಮತ್ತು 3 ತಿಂಗಳುಗಳು** ಸಂಬಂಧಿಸಿದ ವಿಚಾರಣೆ ಮತ್ತು ಸ್ಪಷ್ಟೀಕರಣಗಳಿಗೆ ಕೊನೆ ದಿನಾಂಕ ಮತ್ತು ವೇಳೆ: **23–01–2025 ರ 17–00 ಗಂಟೆಗೆ**, KPPP-Portal ಮೂಲಕ ಟೆಂಡರ್‌ಅನ್ನು **ದಿನಾಂಕ 16–01–2025 ರಿಂದ 24–01–2025 ರ 16.00 ಗಂಟೆ**ವರೆಗೆ ಪಡೆಯಬಹುದಾಗಿದೆ. ಟೆಂಡರ್‌ಅನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ವೇಳೆ: **24–01–2025 ರ 16–00 ಗಂಟೆ**ವರೆಗೆ, ತಾಂತ್ರಿಕ ಬಿಡ್ ಅನ್ನು ತೆರೆಯುವ ದಿನಾಂಕ ಮತ್ತು ವೇಳೆ: **27–01–2025 ರ 16–30 ಗಂಟೆಗೆ**, ರ ಆರ್ಥಿಕ ಬಿಡ್‌ಅನ್ನು ತೆರೆಯುವ ದಿನಾಂಕ ಮತ್ತು ವೇಳೆ: **28–01–2025 ರ 16.40 ಗಂಟೆಗೆ**, ಹೆಚ್ಚಿನ ವಿವರಗಳನ್ನು ಸದರಿ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿದೆ ಹಾಗೂ ವೆಬ್‌ಸೈಟ್ ಸಂ:**https://kppp.karnataka.gov.in** ರಲ್ಲಿ ಪಡೆಯಬಹುದಾಗಿದೆ.
ಸೂಚನೆ: ಆರ್ಥಿಕ ವಹಿವಾಟಿನ ಪತ್ರದಲ್ಲಿ ಯು.ಡಿ.ಐ ಸಂಖ್ಯೆಯನ್ನು ನಮೂದಿಸಿಲ್ಲದಿರುವ ಆರ್ಥಿಕ ವಹಿವಾಟನ್ನು ಪರಿಗಣಿಸುವುದಿಲ್ಲ.
ಸಹಿ/–ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ತುಮಕೂರು.
DIPR/TUM/RO-153/24-25/Oysters

ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಲೋಕೋಪಯೋಗಿ ಇಲಾಖೆ, ತುಮಕೂರು.
ಕ್ರ.ಸಂ:ಕಾಇಂ:ಲೋಇವಿ:ತುಮ:ಸಇಂ–1:ಟೆಂಡರ್ 31/2024–25 ದಿನಾಂಕ : 13.01.2025
ಟೆಂಡರ್ ಪ್ರಕಟಣೆ ಸಂ.31/2024–25 ದಿನಾಂಕ: 13.01.2025
ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ: 31/2024–25:ದಿನಾಂಕ 13–01–2025 ರಂದು ತುಮಕೂರು ವಿಭಾಗದ ವ್ಯಾಪ್ತಿಯಲ್ಲಿ 5054–ಜಿಲ್ಲಾ ಮುಖ್ಯ ರಸ್ತೆಗಳ ಸುಧಾರಣೆ ಲೆಕ್ಕ ಶೀರ್ಷಿಕೆ ಅಡಿಯಲ್ಲಿ 02 ಕಾಮಗಾರಿಗೆ KPPP-Portal ಮೂಲಕ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಟೆಂಡರಿಗಿಟ್ಟ ಗರಿಷ್ಠ ಮೊತ್ತ ರೂ.561.31 ಲಕ್ಷಗಳು, ಕನಿಷ್ಠ ಟೆಂಡರ್‌ಗಿಟ್ಟ ಮೊತ್ತ 491.39 ಲಕ್ಷಗಳು, ಇ.ಎಂ.ಡಿ ಗರಿಷ್ಠ ಮೊತ್ತ ರೂ.841972/– ಮತ್ತು ಕನಿಷ್ಠ ಮೊತ್ತ ರೂ.737082/–, ಅರ್ಹ ಗುತ್ತಿಗೆದಾರರು 2ನೇ ದರ್ಜೆ ಮೇಲ್ಪಟ್ಟು, ಕಾಲಾವಧಿ: 09 ತಿಂಗಳು, ಸಂಬಂಧಿಸಿದ ವಿಚಾರಣೆ ಮತ್ತು ಸ್ಪಷ್ಟೀಕರಣಗಳಿಗೆ ಕೊನೆ ದಿನಾಂಕ ಮತ್ತು ವೇಳೆ: 13–02–2025ರ 17–30 ಗಂಟೆಗೆ, KPPP-Portal ಮೂಲಕ ಟೆಂಡರ್‌ಅನ್ನು ದಿನಾಂಕ 15–01–2025 ರಿಂದ 14–02–2025 ರ 17.00 ಗಂಟೆವರೆಗೆ ಪಡೆಯಬಹುದಾಗಿದೆ. ಟೆಂಡರ್‌ಅನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ವೇಳೆ: 14–02–2025 ರ 17–00 ಗಂಟೆವರೆಗೆ, ತಾಂತ್ರಿಕ ಬಿಡ್‌ಅನ್ನು ತೆರೆಯುವ ದಿನಾಂಕ ಮತ್ತು ವೇಳೆ: 15–02–2025 ರ 17–15 ಗಂಟೆಗೆ, ಆರ್ಥಿಕ ಬಿಡ್‌ಅನ್ನು ತೆರೆಯುವ ದಿನಾಂಕ ಮತ್ತು ವೇಳೆ: 17–02–2025 ರ 11.00 ಗಂಟೆಗೆ, ಹೆಚ್ಚಿನ ವಿವರಗಳನ್ನು ಸದರಿ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿದೆ ಹಾಗೂ ವೆಬ್‌ಸೈಟ್ ಸಂ: https://kppp.karnataka.gov.in ರಲ್ಲಿ ಪಡೆಯಬಹುದಾಗಿದೆ.
ಸೂಚನೆ: ಆರ್ಥಿಕ ವಹಿವಾಟಿನ ಪತ್ರದಲ್ಲಿ ಯು.ಡಿ.ಐ ಸಂಖ್ಯೆಯನ್ನು ನಮೂದಿಸಿಲ್ಲದಿರುವ ಆರ್ಥಿಕ ವಹಿವಾಟನ್ನು ಪರಿಗಣಿಸುವುದಿಲ್ಲ.
ಸಹಿ/–ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ ವಿಭಾಗ, ತುಮಕೂರು.
DIPR/TUM/567/KSMCA/2024-25

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ
ಉಗ್ರಾಣ ಮತ್ತು ಖರೀದಿ ಇಲಾಖೆ, ಕೇಂದ್ರ ಕಛೇರಿ, ಶಾಂತಿನಗರ, ಬೆಂಗಳೂರು – 560 027.
ಸಂಖ್ಯೆ: ಬೆಂಮಸಾಸಂಸ್ಥೆ/ಕೇಕ/ಉ&ಖನಿ/12/2024–25 ದಿನಾಂಕ: 17.01.2025
ಟೆಂಡರ್ ಆಹ್ವಾನ ಪ್ರಕಟಣೆ
ಬೆಂ.ಮ.ಸಾ.ಸಂಸ್ಥೆಗೆ ಅವಶ್ಯಕವಿರುವ ಈ ಕೆಳಗೆ ತೋರಿಸಲಾಗಿರುವ ಸೇವೆಗಳನ್ನು ಪಡೆಯಲು **KPPP** ನ ಮೂಲಕ ಟೆಂಡರ್ ಕರೆಯಲಾಗಿದ್ದು ಟೆಂಡರ್ ಆಸಕ್ತರು ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದೆ.

ಕ್ರ. ಸಂ.	ಟೆಂಡರ್ ಸಂಖ್ಯೆ	ವಿವರಣೆ	ಟೆಂಡರ್ (ಅಂದಾಜು) ಮೌಲ್ಯ ರೂ. ಕೋಟಿಗಳಲ್ಲಿ	KPPP ಮೂಲಕ ಬಿಡ್‌ನ್ನು ಸಲ್ಲಿಸಲು ಕೊನೆ ದಿನಾಂಕ
		ನಿಯಮಿತ ಟೆಂಡರ್		
1	BMTC/2024-25/ IND0154	ವ್ಯಾಲೇಯಬಲ್ ಕಂಪೋನೆಂಟ್ಸ್‌ಗಳ ಖರೀದಿ ಬಗ್ಗೆ	0.83	06-02-2025
2	BMTC/2024-25/ IND0155	ಡ್ಯಾಶ್ ಬೋರ್ಡ್ ಇನ್ಸ್‌ಟ್ರುಮೆಂಟ್ಸ್‌ಗಳ ಖರೀದಿ ಬಗ್ಗೆ	0.76	06-02-2025
3	BMTC/2024-25/ IND0156	ಫಾಸ್ಟನರ್‌ಗಳ ಖರೀದಿ ಬಗ್ಗೆ	0.10	07-02-2025
4	BMTC/2024-25/ IND0157	ಶಾಕಲ್ ಪಿನ್ಸ್‌ಗಳು ಮತ್ತು ಬುಷಸ್‌ಗಳ ಖರೀದಿ ಬಗ್ಗೆ	0.3	07-02-2025
5	BMTC/2024-25/ IND0158	ಟೈರ್‌ಗಳು, ಟ್ಯೂಬ್‌ಗಳು, ಫ್ಲಾಪ್ ಸೆಟ್ ಟ್ಯೂಬ್‌ಲೆಸ್ ರೇಡಿಯಲ್ ಟೈರ್‌ಗಳು, ಹೆಚ್ಚುವರಿ ಟ್ಯೂಬ್‌ಗಳು ಫ್ಲಾಪ್‌ಗಳು ಖರೀದಿ ಬಗ್ಗೆ	15.50	20-02-2025
6	BMTC/2024-25/ IND0159	ವಿವಿಧ ರೀತಿಯ ಕನ್ನಡಿಗಳ ಖರೀದಿ ಬಗ್ಗೆ	0.34	06-02-2025
7	BMTC/2024-25/ IND0160	ಲೂಬ್ರಿಕೆಂಟ್‌ಗಳ ಖರೀದಿ ಬಗ್ಗೆ	1.90	20-02-2025
8	BMTC/2024-25/ IND0161	BS VI ವಾಹನಗಳ ಲೂಬ್ರಿಕೆಂಟ್‌ಗಳ ಖರೀದಿ ಬಗ್ಗೆ	0.56	06-02-2025
9	BMTC/2024-25/ IND0162	ಪಾಲಿಯುರೆಥೇನ್ ಸೀಲೆಂಟ್ ಖರೀದಿ ಬಗ್ಗೆ	0.72	06-02-2025
10	BMTC/2024-25/ IND0163	ಗ್ಯಾಸ್ಕೆಟ್‌ಗಳ ಖರೀದಿ ಬಗ್ಗೆ	1.41	20-02-2025
11	BMTC/2024-25/ IND0164	ಹೆಡ್ ಲ್ಯಾಂಪ್ ಅಸೆಂಬ್ಲಿ ಮತ್ತು ಬಿಡಿಭಾಗಗಳ ಖರೀದಿ ಬಗ್ಗೆ	0.58	06-02-2025
12	BMTC/2024-25/ IND0165	ನಾನ್– ಅಮಿನೊ ಬೇಸ್ ಕೂಲಂಟ್ ಖರೀದಿ ಬಗ್ಗೆ	0.27	06-02-2025
	ತಿದ್ದುಪಡಿ: KPP–ಪೋರ್ಟಲ್‌ನಲ್ಲಿ ಈ ಕೆಳಕಂಡ ಟೆಂಡರ್ ಗಳಿಗೆ ಬಿಡ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯವನ್ನು ಕೆಳಕಂಡತೆ ವಿಸ್ತರಿಸಲಾಗಿದೆ..			
1	BMTC/2024-25/ IND0118	ವಿನೈಲ್ ಫ್ಲೋರಿಂಗ್ ಮ್ಯಾಟ್ ಮತ್ತು ಥ್ರೂರ್ ಫ್ಲೋರಿಂಗ್ ಮ್ಯಾಟ್ ಖರೀದಿ ಬಗ್ಗೆ	0.40	06-02-2025
2	BMTC/2024-25/ IND0116	ವಿವಿಧ ಅಗ್ನಿಶಾಮಕಗಳು, ಅಗ್ನಿಶಾಮಕ ಬಕೆಟ್‌ಗಳು ಮತ್ತು ಅಗ್ನಿಶಾಮಕ ಸ್ಟ್ಯಾಂಡ್‌ಗಳು, ಮುಂತಾದವುಗಳ ಖರೀದಿ ಬಗ್ಗೆ.	0.30	06-02-2025

ಈ ಮೇಲಿನ ಟೆಂಡರ್‌ಗಳಿಗೆ ಸಂಬಂಧಿಸಿದ ವಿವರಗಳನ್ನು https://kppp.karnataka.gov.in ನಿಂದ ಪಡೆಯಬಹುದು.
ಮುಂದುವರೆದು, ಸಾಮಗ್ರಿಗಳ ತಾಂತ್ರಿಕ ವಿವರಗಳು, ವ್ಯಾಪ್ತಿ ಇತರೆ ನಿಯಮ ಮತ್ತು ನಿಬಂಧನೆಗಳಲ್ಲಿ ಹಾಗೂ ಮೇಲ್ಕಂಡ ದಿನಾಂಕದಲ್ಲಿ ಯಾವುದೇ ಸೇರ್ಪಡೆ / ತಿದ್ದುಪಡಿ ಇದ್ದಲ್ಲಿ KPP–ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಗೊಳಿಸಲಾಗುವುದು.
ಸೂಚನೆ: ಆಸಕ್ತಿಯುಳ್ಳ ಸರಬರಾಜುದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಣಿ ಹೊಂದಿರಬೇಕು. ಹೆಚ್ಚಿನ ವಿವರಗಳನ್ನು ಸದರಿ ಕಛೇರಿ ಅಥವಾ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://kppp.karnataka.gov.in ಅಥವಾ ದೂರವಾಣಿ ಸಂಖ್ಯೆ: 080–22230960/22234115 ಗೆ ಕರೆಮಾಡಿ, support@eprochelpdesk.com ಇ–ಮೇಲ್ ಮಾಡಿ ಮಾಹಿತಿ ಪಡೆಯಬಹುದಾಗಿರುತ್ತದೆ.
ಸಹಿ/– ಉಗ್ರಾಣ ಮತ್ತು ಖರೀದಿ ನಿಯಂತ್ರಕರು (ಟೆಂಡರ್ ಕರೆಯುವ ಪ್ರಾಧಿಕಾರಿ)

ಕರ್ನಾಟಕ ಸರ್ಕಾರ
(ನಗರಾಭಿವೃದ್ಧಿ ಇಲಾಖೆ)
ವಿಜಯಪುರ ಮಹಾನಗರ ಪಾಲಿಕೆ, ವಿಜಯಪುರ
ಬಾಗಲಕೋಟ ರಸ್ತೆ, ಜಲನಗರ–586109
ದೂರವಾಣಿ : 08352–278536, ಸಹಾಯವಾಣಿ: 08352–222474
ಫ್ಯಾಕ್ಸ್:08352–278532, Website: www.bijapurcity.gov.in
E-mail: itstaff_ulb_bijapur@yahoo.co.in
ನಂ:ಮನಪಾವಿ/ಕೇಂ.ಕ/ಪ.ವಿ/2024–25/5479 ದಿನಾಂಕ:18.01.2025
ಅಲ್ಪಾವಧಿ ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ
ವಿಜಯಪುರ ಮಹಾನಗರ ಪಾಲಿಕೆಯ ಎಸ್.ಸಿ.ಪಿ/ಟಿ.ಎಸ್.ಪಿ ಪಾಲಿಕೆಯ ಸಾಮಾನ್ಯ ನಿಧಿ ಅನುದಾನದಡಿ ಘನತ್ಯಾಜ್ಯ ನಿರ್ವಹಣೆಗೆ ಸಂಬಂಧಿಸಿದಂತೆ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸುವ ಸಲುವಾಗಿ ಆಸಕ್ತ, ಅರ್ಹ ಗುತ್ತಿಗೆದಾರರಿಂದ KPPP ಪ್ಲಾಟ್‌ಫಾರಂ ಮೂಲಕ ಟೆಂಡರ್ ದಸ್ತಾವೇಜಿನಲ್ಲಿ ನಿಗದಿಪಡಿಸಿದ ನಿಬಂಧನೆಗಳಿಗೊಳಪಟ್ಟು ಪ್ರಸ್ತಾವನೆಗಳನ್ನು ಆಹ್ವಾನಿಸುತ್ತದೆ. ಆಸಕ್ತರು ತಮ್ಮ ಪ್ರಸ್ತಾವನೆಗಳನ್ನು ನಿಗದಿತ ದಿನಾಂಕದೊಳಗೆ https://kppp.karnataka.gov.in ಪ್ಲಾಟ್‌ಫಾರಂ ಮೂಲಕ ಸಲ್ಲಿಸಲು ಕೋರಿದೆ.
ಕಾಮಗಾರಿಯ ಹೆಸರು: 1) ವಿಜಯಪುರ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಸ್ವಚ್ಛತಾ ಕಾರ್ಯಗಳಲ್ಲಿ ತೊಡಗಿರುವ ಖಾಯಂ ಮತ್ತು ನೇರವೇತನ ಪಾವತಿ ಮಹಿಳಾ ಮತ್ತು ಪುರುಷ ಸಿಬ್ಬಂದಿಗಳಿಗೆ ದೈನಂದಿನ ಉಪಯೋಗಕ್ಕಾಗಿ ಸಮವಸ್ತ್ರಗಳನ್ನು ಖರೀದಿಸುವುದು. **(INDENT NO: DMA/2024-25/IND4182). ಅಂದಾಜು ಮೊತ್ತ ರೂ. 22.25 ಲಕ್ಷಗಳು. ಕಾಮಗಾರಿ ಪೂರ್ಣಗೊಳಿಸುವ ಅವಧಿ: 01 ತಿಂಗಳು.**
2) ವಿಜಯಪುರ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಸ್ವಚ್ಛತಾ ಕಾರ್ಯಗಳಲ್ಲಿ ತೊಡಗಿರುವಸ್ವಚ್ಛತಾ ಸಿಬ್ಬಂದಿಗಳಿಗೆ ಸುರಕ್ಷತಾ ಸಲಕರಣೆಗಳನ್ನು ಖರೀದಿಸುವುದು. **(INDENT NO: DMA/2024-25/IND4183). ಅಂದಾಜು ಮೊತ್ತ ರೂ. 16.74 ಲಕ್ಷಗಳು. ಕಾಮಗಾರಿ ಪೂರ್ಣಗೊಳಿಸುವ ಅವಧಿ: 01 ತಿಂಗಳು.**
3) ವಿಜಯಪುರ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಸ್ವಚ್ಛತಾ ಕಾರ್ಯಗಳಲ್ಲಿ ತೊಡಗಿರುವ ಸ್ವಚ್ಛತಾ ಸಿಬ್ಬಂದಿಗಳಿಗೆ ಸಾಧನ ಸಲಕರಣೆಗಳನ್ನು ಖರೀದಿಸುವುದು. **(INDENT NO: DMA/2024-25/IND4184). ಅಂದಾಜು ಮೊತ್ತ ರೂ. 10.00 ಲಕ್ಷಗಳು. ಕಾಮಗಾರಿ ಪೂರ್ಣಗೊಳಿಸುವ ಅವಧಿ: 01 ತಿಂಗಳು.**
4) ಪೌರಕಾರ್ಮಿಕರು ಹಾಗೂ ಸ್ವಚ್ಛತಾ ಕಾರ್ಮಿಕರುಗಳಿಗೆ ಆರೋಗ್ಯ ತಪಾಸಣೆ ಕೈಗೊಳ್ಳುವುದು. **(INDENT NO: DMA/2024-25/SE4415). ಅಂದಾಜು ಮೊತ್ತ ರೂ. 21.80 ಲಕ್ಷಗಳು. ಕಾಮಗಾರಿ ಪೂರ್ಣಗೊಳಿಸುವ ಅವಧಿ: 01 ತಿಂಗಳು.**
ಪ್ರಸ್ತಾವನೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 29.01.2025 ರಂದುಸಾಯಂಕಾಲ 5.00 ಗಂಟೆವರೆಗೆ.
ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 30.01.2025 ರಂದು ಸಾಯಂಕಾಲ 5.30 ಗಂಟೆಗೆ.
ಆರ್ಥಿಕ ಬಿಡ್ ಟೆಂಡರ ತೆರೆಯುವ ದಿನಾಂಕ: 31.01.2025 ರಂದು ಬೆಳಿಗ್ಗೆ 11.00 ಗಂಟೆಗೆ.
ಹೆಚ್ಚಿನ ವಿವರಗಳಿಗಾಗಿ https://kppp.karnataka.gov.in ಪ್ಲಾಟ್‌ಫಾರಂ ವಿಕ್ಷೀಸಬಹುದಾಗಿರುತ್ತದೆ.
ಸಹಿ/– ಕಾರ್ಯಪಾಲಕ ಅಭಿಯಂತರರು (ಘ.ಪ.ನಿ) ವಿಜಯಪುರ ಮಹಾನಗರ ಪಾಲಿಕೆ, ವಿಜಯಪುರ
ವಾಸಾಸಂಇ/ವಿಜಯಪುರ/ಕೆಎಸ್‌ಎಂಸಿಎ/622/2024–25

ಜಿಲ್ಲಾ ಪಂಚಾಯತ್ ತುಮಕೂರು,
ಕಾರ್ಯಪಾಲಕ ಅಭಿಯಂತರವರ ಕಚೇರಿ,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ತುಮಕೂರು ವಿಭಾಗ.
ದೂ:0816-2252937
ಸಂ:26/ಕಾಪಾಅ/ಗ್ರಾ.ಕು.ನೀ.ನೈ ವಿ/ತುಮ/ಟೆಂಡರ್/ಸಇಂ–1&2&3&4/5614/2024–25 ದಿನಾಂಕ: 16.01.2025
ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 26/2024–25
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಮಾತ್ರ)
ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ, ಕಾರ್ಯಪಾಲಕ ಅಭಿಯಂತರರು, ಗ್ರಾ.ಕು.ನೀ ಮತ್ತು ನೈರ್ಮಲ್ಯ ವಿಭಾಗ, ತುಮಕೂರು ಇವರು 2024–25 ನೇ ಸಾಲಿಗೆ ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರನ್ನು ಸೂಕ್ತ ನೊಂದಾಯಿತ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಟೆಂಡರ್‌ನ ವಿವರ ಈ ಕೆಳಕಂಡಂತಿರುತ್ತದೆ. ತುಮಕೂರು ಜಿಲ್ಲೆ ವ್ಯಾಪ್ತಿಯಲ್ಲಿ ಜಲ ಜೀವನ್ ಮಿಷನ್ ಯೋಜನೆಯಡಿ ಅನುಮೋದನೆಗೊಂಡಿರುವ ತುಮಕೂರು, ತಿಪಟೂರು, ತುರುವೇಕೆರೆ, ಮಧುಗಿರಿ ಮತ್ತು ಪಾವಗಡ ತಾಲ್ಲೂಕಿನ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ (https://kppp.karnataka.gov.in/) ಬಿಡ್ ಸಲ್ಲಿಸಬಹುದು ಹೆಚ್ಚಿನ ಮಾಹಿತಿಗಾಗಿ ಈ ಕೆಳಗೆ ಸಹಿ ಮಾಡಿರುವವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು. ಅ) ಕನಿಷ್ಠ ಕಾಮಗಾರಿ ಮೊತ್ತ ರೂ.100.35 ಲಕ್ಷಗಳು, ಇ.ಎಂ.ಡಿ ಮೊತ್ತ ರೂ.2,00,000/– ಗಳು ಹಾಗೂ ಆ) ಗರಿಷ್ಠ ಮೊತ್ತ ರೂ.394.67 ಲಕ್ಷಗಳು, ಇ.ಎಂ.ಡಿ ಮೊತ್ತ ರೂ.5,92,100/– ಗಳು (1) ಭರ್ತಿಮಾಡಿದ ಟೆಂಡರ್‌ನ್ನು ಸಲ್ಲಿಸುವ ಅಂತಿಮ ದಿನಾಂಕ: 04–02–2025 ಸಂಜೆ 5:00 ಘಂಟೆ ವರೆಗೆ (2) ಪೂರ್ವಭಾವಿ ಸಭೆ ದಿನಾಂಕ: 27–01–2025 ಕಾರ್ಯಪಾಲಕ ಅಭಿಯಂತರರು, ಗ್ರಾ.ಕು.ನೀ&ನೈರ್ಮಲ್ಯ ವಿಭಾಗ ತುಮಕೂರು (3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 05–02–2025 ಸಂಜೆ 05.30 ಘಂಟೆಯ ನಂತರ (4) ಆರ್ಥಿಕ ಬಿಡ್ ತೆರೆಯುವ ದಿನಾಂಕ: 10–02–2025 ಬೆಳಿಗ್ಗೆ 11.00 ಘಂಟೆಯ ನಂತರ.
ಸಹಿ/– ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ತುಮಕೂರು ವಿಭಾಗ, ತುಮಕೂರು
DIPR/TMK/568/KSMCA/2024-25

ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೊರೇಷನ್ ಲಿಮಿಟೆಡ್
(ಕರ್ನಾಟಕ ಸರ್ಕಾರದ ಉದ್ಯಮ)
ಆಡಳಿತ ಕಛೇರಿ: ಟಿ.ಟಿ.ಎಂ.ಸಿ ‘ಎ’ ಬ್ಲಾಕ್, 5ನೇ ಮಹಡಿ, ಬಿ.ಎಂ.ಟಿ.ಸಿ ಕಟ್ಟಡ ಕೆ.ಹೆಚ್ ರಸ್ತೆ, ಶಾಂತಿನಗರ, ಬೆಂಗಳೂರು–560 027.
ದೂರವಾಣಿ: 080–22278813/14/15/16 ವೆಬ್‌ಸೈಟ್: www. ksmc.karnataka.gov.in
No. KSMCL/PROD/12/SIOM/Prod-Tender/2024-25/3274 ದಿನಾಂಕ :18.01.2025
ಇ–ಟೆಂಡರ್ ಆಹ್ವಾನ ಪತ್ರಿಕೆ
ಕೆಎಸ್‌ಎಂಸಿಎಲ್ ಸಂಸ್ಥೆಯ ಬಳ್ಳಾರಿ ಜಿಲ್ಲೆ, ಸಂಡೂರು ತಾಲ್ಲೂಕಿನಲ್ಲಿರುವ ಸುಬ್ಬರಾಯನಹಳ್ಳಿ ಕಬ್ಬಿಣದ ಅದಿರು ಗಣಿಯಲ್ಲಿ ಡ್ರಿಲ್ಲಿಂಗ್, ಅದಿರು ಉತ್ಪಾದನೆ (Excavation), ಅದಿರಿನ ಗಾತ್ರೀಕರಣದ (Crushing & Screening) ಕೆಲಸವನ್ನು ನಿರ್ವಹಿಸಲು ಇ–ಟೆಂಡರ್ ಆಹ್ವಾನಿಸುತ್ತಿದ್ದು, ಈ ಕೆಳಗಿನ ವೇಳಾಪಟ್ಟಿಯಂತೆ ಜಾಹೀರಾತು ಪ್ರಕಟಣೆ.
ವೇಳಾಪಟ್ಟಿ

ಟೆಂಡರ್ ಉಲ್ಲೇಖ	KSMCL/2024-25/SE0035
www.kppp.karnataka.gov.in ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಲು ಪ್ರಾರಂಭದ ದಿನಾಂಕ	18.01.2025
ಪೂರ್ವ ಬಿಡ್ ಪ್ರಶ್ನೆಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ	27.01.2025 ಸಂಜೆ 5.00 ಗಂಟೆ
KSMCLನ ಪ್ರಧಾನ ಕಛೇರಿಯಲ್ಲಿ ಪೂರ್ವ ಬಿಡ್ ಸಭೆ	28.01.2025 ಬೆಳಿಗ್ಗೆ 11:30 ಗಂಟೆ
ಇ–ಟೆಂಡರ್ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ	17.02.2025 ಸಂಜೆ 05:00 ಗಂಟೆಯವರೆಗೆ
ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ	19.02.2025 ಬೆಳಿಗ್ಗೆ 11:00 ಗಂಟೆ
ಇ.ಎಂ.ಡಿ	ರೂ. 36,18,000/-
ವಿಳಾಸ	ಪ್ರಧಾನ ವ್ಯವಸ್ಥಾಪಕರು (ಉ), ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೊರೇಷನ್ ಲಿಮಿಟೆಡ್, ಟಿ.ಟಿ.ಎಂ.ಸಿ. ‘ಎ’ ಬ್ಲಾಕ್, 5ನೇ ಮಹಡಿ, ಬಿಎಂಟಿಸಿ ಕಟ್ಟಡ, ಕೆ.ಹೆಚ್. ರೋಡ್, ಶಾಂತಿನಗರ, ಬೆಂಗಳೂರು – 560027. ದೂ.ಸಂಖ್ಯೆ:080–22278813/14/15/16

ಸಹಿ/–
ಪ್ರಧಾನ ವ್ಯವಸ್ಥಾಪಕರು (ಉ)
DIPR/CP/KAVITA/4413/2024-25

ಮನೆ ನಿರ್ಮಾಣ ಸಹಾಯಧನ ಪಡೆಯಲು ಜನರ ನಿರಾಸಕ್ತಿ • ಸಲ್ಲಿಕೆಯಾದ ಅರ್ಜಿಗಳಲ್ಲಿ ಶೇ 85ರಷ್ಟು ಒಪ್ಪಿತ

ಕುಂಟುತ್ತಿದೆ ಪ್ರಧಾನಮಂತ್ರಿ ವಸತಿ ಯೋಜನೆ

• ಜಯಸಿಂಹ ಆರ್.

ಬೆಂಗಳೂರು: ಗ್ರಾಮೀಣ ಪ್ರದೇಶದಲ್ಲಿ ಮನೆ ಇಲ್ಲದವರಿಗೆ ವಸತಿ ಒದಗಿಸುವ ಪ್ರಧಾನ ಮಂತ್ರಿ ವಸತಿ ಯೋಜನೆ ಅಡಿಯಲ್ಲಿ ಈ ಆರ್ಥಿಕ ವರ್ಷದಲ್ಲಿ 2.26 ಲಕ್ಷ ಫಲಾನುಭವಿಗಳನ್ನು ಗುರುತಿಸಿ, ಮನೆ ನಿರ್ಮಿಸುವ ಗುರಿಯನ್ನು ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಕ್ಕೆ ನೀಡಿತ್ತು. ಆರ್ಥಿಕ ವರ್ಷದ ಮೊದಲ ಒಂಬತ್ತು ತಿಂಗಳ ಅಂತ್ಯದವರೆಗೂ ರಾಜ್ಯ ಸರ್ಕಾರವು ಗುರುತಿಸಿದ್ದು ಸುಮಾರು 66 ಸಾವಿರ ಫಲಾನುಭವಿಗಳನ್ನು ಮಾತ್ರ.

ಈ ಅವಧಿಯಲ್ಲಿ ಮನೆ ನಿರ್ಮಾಣದ ಸಂಖ್ಯೆಯೂ 5 ಸಾವಿರದ ಆಸುಪಾಸಿನಲ್ಲಿದೆ. ಅಂಥದ್ದರಲ್ಲಿ ಇದೇ ಆರ್ಥಿಕ ವರ್ಷದಲ್ಲಿ ಇನ್ನೂ ಹೆಚ್ಚುವರಿ 4.76 ಲಕ್ಷ ಫಲಾನುಭವಿಗಳನ್ನು ಗುರುತಿಸಿ ಎಂದು ಗುರಿಯನ್ನು ಮತ್ತಷ್ಟು ಹೆಚ್ಚಿಸಿದೆ.

ಯೋಜನೆಯ ಪ್ರಗತಿ ದಾಖಲಿಸಲು ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವಾಲಯ ನಿರ್ವಹಣೆ ಮಾಡುತ್ತಿರುವ 'ರಿಯಲ್ ಟೈಂ ಡ್ಯಾಶ್‌ಬೋರ್ಡ್' ರಾಜ್ಯದಲ್ಲಿ ಯೋಜನೆಯ ಸ್ಥಿತಿಗತಿಯನ್ನು ವಿವರಿಸಿದೆ.

ಕೇಂದ್ರ ಸರ್ಕಾರವು ಮನೆ ನಿರ್ಮಾಣದ ಗುರಿಯನ್ನೇನೋ ಎಲ್ಲ ರಾಜ್ಯಗಳಂತೆ, ಕರ್ನಾಟಕಕ್ಕೂ ನೀಡುತ್ತಿದೆ. ಆದರೆ ಇಲ್ಲಿ ಯೋಜನೆಯ ಪ್ರಯೋಜನ ಪಡೆಯುವಲ್ಲಿ ಜನರಲ್ಲೇ ನಿರಾಸಕ್ತಿ ಇದೆ ಎಂಬುದನ್ನು ದತ್ತಾಂಶಗಳು ಹೇಳುತ್ತವೆ.

ಈ ಆರ್ಥಿಕ ವರ್ಷದಲ್ಲಿ 2.26 ಲಕ್ಷ ಮನೆಗಳ ನಿರ್ಮಾಣ ಗುರಿ ನೀಡಿದ್ದರೂ, ಯೋಜನೆಯ ಪ್ರಯೋಜನ ಪಡೆಯಲು ಅರ್ಜಿ ಸಲ್ಲಿಸಿದವರು 75 ಸಾವಿರ ಮಂದಿ ಮಾತ್ರ. ಯೋಜನೆ ಕುಂಠಿತವಾಗಲು ಇದೂ ಒಂದು ಪ್ರಮುಖ ಕಾರಣ ಎಂದು ವಿಶ್ಲೇಷಿಸಲಾಗಿದೆ. ಸಲ್ಲಿಕೆಯಾದ ಅರ್ಜಿಗಳಲ್ಲಿ ಶೇ 85ರಷ್ಟು ಒಪ್ಪಿತವಾಗಿವೆ ಮತ್ತು ಸಹಾಯಧನ ಮಂಜೂರಾಗಿವೆ. ಹೀಗಿದ್ದೂ ನಿರ್ಮಾಣ ಪೂರ್ಣಗೊಂಡು, ಪೂರ್ಣ ಪ್ರಮಾಣದ ಸಹಾಯಧನ ದೊರಕಿದ್ದು ಶೇ 2.35 ಮನೆಗಳಿಗಷ್ಟೆ.

'ರಾಜ್ಯದಲ್ಲಿ ಯೋಜನೆ ಅಡಿ ಮಂಜೂರಾದ ಮನೆಗಳ ನಿರ್ಮಾಣವು ಸರಾಸರಿ 10 ತಿಂಗಳಲ್ಲಿ ಪೂರ್ಣಗೊಳ್ಳುತ್ತಿವೆ. ಆರ್ಥಿಕ ವರ್ಷದ ಬೇರೆ–ಬೇರೆ ತ್ರೈಮಾಸಿಕಗಳಲ್ಲಿ ಮಂಜೂರಾದ ಮನೆಗಳ ನಿರ್ಮಾಣ ಇನ್ನೂ ಪೂರ್ಣವಾಗಿಲ್ಲ. ಅವುಗಳ ನಿರ್ಮಾಣ ಪೂರ್ಣಗೊಂಡ ನಂತರ, ಫಲಾನುಭವಿಗಳ ಸಂಖ್ಯೆಯಲ್ಲಿ ಏರಿಕೆಯಾಗಲಿದೆ' ಎಂದು ಗ್ರಾಮೀಣಾಭಿವೃದ್ಧಿ ಇಲಾಖೆಯ ಮೂಲಗಳು ತಿಳಿಸಿವೆ.



ಗುರಿ 7.02 ಲಕ್ಷ ವಸತಿಗಳಿಗೆ ಏರಿಕೆ

2024ರ ಡಿಸೆಂಬರ್ ಅಂತ್ಯಕ್ಕೆ ಕೊನೆಗೊಳ್ಳಬೇಕಿದ್ದ ಈ ಯೋಜನೆಯನ್ನು ಕೇಂದ್ರ ಸರ್ಕಾರವು 2029ರ ಅಂತ್ಯದವರೆಗೂ ವಿಸ್ತರಿಸಿದೆ. ಈ ಯೋಜನೆ ಅಡಿ 2024–25ರ ಆರ್ಥಿಕ ವರ್ಷದಲ್ಲಿ ರಾಜ್ಯವು ನಿರ್ಮಿಸಬೇಕಿದ್ದ ಮನೆಗಳ ಸಂಖ್ಯೆಯನ್ನು 2.26 ಲಕ್ಷದಿಂದ 7.02 ಲಕ್ಷಕ್ಕೆ ಏರಿಕೆ ಮಾಡಿದೆ.

ಈ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಶನಿವಾರ ಪತ್ರ ಬರೆದಿದ್ದಾರೆ. 'ಈ ಆರ್ಥಿಕ ವರ್ಷದಲ್ಲಿ ಕರ್ನಾಟಕಕ್ಕೆ ಇನ್ನೂ ಹೆಚ್ಚುವರಿ 4.76 ಲಕ್ಷ ಮನೆಗಳ ನಿರ್ಮಾಣದ ಗುರಿ ನೀಡಲಾಗಿದೆ. ಫಲಾನುಭವಿಗಳನ್ನು ಗುರುತಿಸಿ, ಯೋಜನೆಯ ಪ್ರಯೋಜನ ಪಡೆಯಬೇಕು' ಎಂದು ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

ಪರಿಶಿಷ್ಟರ ವಸತಿಗೆ ₹5 ಲಕ್ಷ ಘಟಕ ನಿಧಿ: ಮಹದೇವಪ್ಪ

ಬೆಂಗಳೂರು: 'ಪರಿಶಿಷ್ಟ ಸಮುದಾಯದ ಜನರು ಮನೆ ನಿರ್ಮಿಸಿಕೊಳ್ಳಲು ₹5 ಲಕ್ಷ ಘಟಕ ನಿಧಿ ನಿಗದಿಗೊಳಿಸುವ ಕುರಿತು ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಲಾಗುವುದು' ಎಂದು ಸಮಾಜ ಕಲ್ಯಾಣ ಸಚಿವ ಎಚ್‌.ಸಿ. ಮಹದೇವಪ್ಪ ಹೇಳಿದರು.

ವಿಧಾನಸೌಧದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಪರಿಶಿಷ್ಟರ ಜಾತಿ ಉಪ ಯೋಜನೆ (ಎಸ್‌ಸಿಎಸ್‌ಪಿ) ನೋಡಲ್ ಅಧಿಕಾರಿಗಳ ಸಭೆಯಲ್ಲಿ ಅವರು ಮಾತನಾಡಿದರು.

ರಾಜ್ಯದಲ್ಲಿನ ವಸತಿ ರಹಿತ ಪರಿಶಿಷ್ಟರನ್ನು ಗುರುತಿಸಬೇಕು. ಕೃಷಿ ಹಾಗೂ ಸ್ವಯಂ ಉದ್ಯೋಗ ಕೈಗೊಳ್ಳಲು ನೆರವು ನೀಡಬೇಕು. ಅನುದಾನ ಬಳಸಿಕೊಂಡು ಪರಿಶಿಷ್ಟರ ಅಭಿವೃದ್ಧಿಗೆ ಪೂರಕ ಯೋಜನೆಗಳನ್ನು ರೂಪಿಸಬೇಕು. ಸಹಕಾರ ಕ್ಷೇತ್ರಗಳಲ್ಲಿ ಪರಿಶಿಷ್ಟರು ಪಾಲ್ಗೊಳ್ಳುವಂತೆ ನೋಡಿಕೊಳ್ಳಬೇಕು. ಆಸಕ್ತರನ್ನು ನೋಂದಣಿ ಮಾಡಿಸಬೇಕು ಎಂದು ಸೂಚಿಸಿದರು.

ನಿಗದಿತ ಅವಧಿಯಲ್ಲಿ ಹಣ ವ್ಯಯಿಸದೇ ಎಸ್‌ಸಿಎಸ್‌ಪಿ ಎಸ್‌ಟಿಪಿ ಕಾಯ್ದೆ ಆಶಯಗಳನ್ನು ಮರೆತು, ನಿಯಮಬಾಹಿರವಾಗಿ ವರ್ತಿಸಿದರೆ, ಅನುದಾನ ಬಳಕೆಗೆ ನಿರ್ಲಕ್ಷ್ಯ ತೋರಿದರೆ ಕಠಿಣ ಕ್ರಮಕೈಗೊಳ್ಳಲಾಗುವುದು. ಖರ್ಚಾಗದ ಹಣವನ್ನು ಏಕ ಗವಾಕ್ಷಿ ಮೂಲಕ ಹಿಂಪಡೆದು, ಪರಿಶಿಷ್ಟ ಸಮುದಾಯಗಳ ಪೂರಕ ಯೋಜನೆಗೆ ನೀಡಲಾಗುವುದು ಎಂದರು.

ಸಿಇಟಿ ಪಠ್ಯಕ್ರಮ ಪ್ರಕಟ

ಬೆಂಗಳೂರು: ಎಂಜಿನಿಯರಿಂಗ್ ಸೇರಿ ವಿವಿಧ ವೃತ್ತಿಪರ ಕೋರ್ಸ್‌ಗಳ 2025ನೇ ಸಾಲಿನ ಪ್ರವೇಶಕ್ಕೆ ನಡೆಸುವ ಸಾಮಾನ್ಯ ಪ್ರವೇಶ ಪರೀಕ್ಷೆಯ (ಸಿಇಟಿ) ಪಠ್ಯಕ್ರಮವನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಪ್ರಕಟಿಸಿದೆ.

ಪ್ರಥಮ ಮತ್ತು ದ್ವಿತೀಯ ಪಿಯುಸಿಯ ಭೌತವಿಜ್ಞಾನ, ರಸಾಯನ ವಿಜ್ಞಾನ, ಗಣಿತ ಮತ್ತು ಜೀವವಿಜ್ಞಾನ ವಿಷಯಗಳ ಪಠ್ಯಕ್ರಮವನ್ನು ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿ ಪ್ರಕಟಿಸಿದೆ.

ಈ ಪಠ್ಯಕ್ರಮದ ಅನುಸಾರವೇ ಪರೀಕ್ಷೆಗೆ ತಯಾರಿ ನಡೆಸಿಕೊಳ್ಳಬೇಕು ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್‌. ಪ್ರಸನ್ನ ಅವರು ತಿಳಿಸಿದ್ದಾರೆ.

ಎನ್‌ಸಿಇಆರ್‌ಟಿಸಿ ಪಠ್ಯಕ್ರಮ ಹಾಗೂ ಪದವಿಪೂರ್ವ ಶಿಕ್ಷಣ ನಿರ್ದೇಶನಾಲಯ ಪ್ರಕಟಿಸಿರುವ ಪಠ್ಯಪುಸ್ತಕಗಳನ್ನು ಆಧಾರವಾಗಿ ಇಟ್ಟುಕೊಂಡು ಪಠ್ಯಕ್ರಮ ರಚಿಸಲಾಗಿದೆ. ಪಿಯು ಕಾಲೇಜುಗಳ ವಿಷಯ ತಜ್ಞರಿಂದಲೂ ಪರಿಶೀಲನೆ ಮಾಡಿಸಲಾಗಿದೆ ಎಂದು ವಿವರಿಸಿದ್ದಾರೆ.

'ಬಿಜೆಪಿ, ಜೆಡಿಎಸ್‌ನ 25 ಶಾಸಕರು ಶೀಘ್ರ ಕಾಂಗ್ರೆಸ್‌ಗೆ'

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: 'ಬಿಜೆಪಿ ಹಾಗೂ ಜೆಡಿಎಸ್‌ನ 25 ಶಾಸಕರು ಕಾಂಗ್ರೆಸ್ ಸೇರಲು ತಯಾರಾಗಿದ್ದು, ಸೂಕ್ತ ಮುಹೂರ್ತಕ್ಕಾಗಿ ಕಾಯುತ್ತಿದ್ದಾರೆ. ಶೀಘ್ರವೇ ಅವರನ್ನು ಪಕ್ಷಕ್ಕೆ ಬರಮಾಡಿಕೊಳ್ಳುತ್ತೇವೆ' ಎಂದು ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಹೇಳಿದರು.

ಶನಿವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಮುಖ್ಯಮಂತ್ರಿ ಸಿದ್ದರಾಮಯ್ಯ ಯಾವ ಕ್ಷಣದಲ್ಲಾದರೂ ರಾಜೀನಾಮೆ ಕೊಡಬಹುದು ಎಂದು ಬಿ.ವೈ.ವಿಜಯೇಂದ್ರ ಹೇಳಿರುವುದು ಹಾಸ್ಯಾಸ್ಪದ. ಅವರು ಎಷ್ಟು ದಿನ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರಾಗಿ ಇರುತ್ತಾರೆ? ಅವರ ಕುರ್ಚಿಯ 4 ಕಾಲುಗಳಲ್ಲಿ ಈಗಾಗಲೇ ಮೂರು ಮುರಿದಿವೆ. ಒಂದೇ ಕಾಲಿನಲ್ಲಿ ಅವರ ಕುರ್ಚಿ ನಿಂತಿದೆ' ಎಂದು ವ್ಯಂಗ್ಯವಾಡಿದರು.

'ಬಿಜೆಪಿಯ ಸದ್ಯದ ಸ್ಥಿತಿ ಮನೆಯೊಂದು 6 ಬಾಗಿಲು ಎಂಬಂತಾಗಿದೆ. ಅವರ ದೋಸೆಯಲ್ಲೇ ಸಾಕಷ್ಟು ತೂತುಗಳಿವೆ. ಅದನ್ನು ಬಿಟ್ಟು ಅವರು ಬೇರೆಯವರ ದೋಸೆಯ ತೂತು ಹುಡುಕುವ ಕೆಲಸ ಮಾಡುತ್ತಿದ್ದಾರೆ. ಮೊದಲು ಅವರ ಮನೆಯನ್ನು ಶುದ್ಧ ಮಾಡಿಕೊಳ್ಳಲಿ' ಎಂದು ತಿರುಗೇಟು ನೀಡಿದರು.

'ಬಿಜೆಪಿಯ ಕೆಲ ಶಾಸಕರು ಈಗಾಗಲೇ ಕಾಂಗ್ರೆಸ್ ಜೊತೆ ಗುರುತಿಸಿಕೊಂಡಿದ್ದಾರೆ. ಜೆಡಿಎಸ್‌ನಿಂದ ದೊಡ್ಡ ತಂಡವೊಂದು ಕಾಂಗ್ರೆಸ್‌ನತ್ತ ವಲಸೆ ಬರಲಿದೆ. ಪರಿಸ್ಥಿತಿ ಹೀಗಿರುವಾಗ ರಮೇಶ್ ಜಾರಕಿಹೊಳಿ ಅವರು ಕಾಂಗ್ರೆಸ್‌ನ 60 ಶಾಸಕರನ್ನು ಬಿಜೆಪಿಗೆ ಕರೆದೊಯ್ಯುತ್ತಾರೆ ಎಂಬುದನ್ನು ನಂಬಲು ಸಾಧ್ಯವೆ. ಅದೇನು ಹುಣಸೆ ಬೀಜವಾ' ಎಂದು ಪ್ರಶ್ನಿಸಿದರು.

'ಇ.ಡಿ, ಸಿಬಿಐ, ಐಟಿ ಎಲ್ಲವೂ ಪ್ರಧಾನಿ ಮೋದಿ ಹಾಗೂ ಅಮಿತ್ ಶಾ ಅವರ ಅಣತಿಯಂತೆ ಕೆಲಸ ಮಾಡುತ್ತಿವೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಯಾವ ತಪ್ಪನ್ನೂ ಮಾಡಿಲ್ಲ. ಎಲ್ಲಾ ಆರೋಪಗಳನ್ನು ಧೈರ್ಯದಿಂದಲೇ ಎದುರಿಸುತ್ತಿದ್ದಾರೆ' ಎಂದರು.

ನಾವು ಆಪರೇಷನ್ ಹಸ್ತ ಮಾಡುವುದಿಲ್ಲ. ಬಿಜೆಪಿ ಹಾಗೂ ಜೆಡಿಎಸ್ ಮುಳುಗುವ ಹಡಗುಗಳಿದ್ದಂತೆ. ಆ ಪಕ್ಷಗಳೊಳಗಿನ ವಾತಾವರಣದಿಂದ ಬೇಸತ್ತು ಶಾಸಕರು ಕಾಂಗ್ರೆಸ್‌ನತ್ತ ಮುಖ ಮಾಡಿದ್ದಾರೆ

ಎಂ.ಬಿ.ಪಾಟೀಲ, ಕೈಗಾರಿಕಾ ಸಚಿವ

'ಖರ್ಗೆ ಬುದ್ಧಿವಾದ ಎಲ್ಲರೂ ಪಾಲಿಸಲಿ'

ಜನರ ವಿಶ್ವಾಸ ಗಳಿಸಿ ಇನ್ನಷ್ಟು ಒಳ್ಳೆ ಕೆಲಸ ಮಾಡಲು ಪ್ರಯತ್ನ: ಶಿವಕುಮಾರ್

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಬುದ್ಧಿವಾದವನ್ನು ನಾನು ಪಾಲಿಸುವೆ, ಉಳಿದವರೂ ಪಾಲಿಸಬೇಕು' ಎಂದು ಕೆಪಿಸಿಸಿ ಅಧ್ಯಕ್ಷ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.



ಶಿವಕುಮಾರ್

ಜ. 21ರಂದು ಬೆಳಗಾವಿಯಲ್ಲಿ ಕಾಂಗ್ರೆಸ್ ಆಯೋಜಿಸಿರುವ 'ಜೈ ಬಾಪೂ, ಜೈ ಭೀಮ, ಜೈ ಸಂವಿಧಾನ' ಕಾರ್ಯಕ್ರಮದ ಪೂರ್ವಭಾವಿ ಸಭೆಯ ಬಳಿಕ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಸಿ.ಎಂ ಬದಲಾವಣೆ ಕುರಿತ ಪ್ರಶ್ನೆಗೆ ಹೀಗೆ ಪ್ರತಿಕ್ರಿಯಿಸಿದರು.

'ಈ ವಿಚಾರಕ್ಕೆ ಹೆಚ್ಚು ಒತ್ತು ನೀಡದೆ, ಜನರ ವಿಶ್ವಾಸ ಗಳಿಸಿ ಇನ್ನಷ್ಟು ಒಳ್ಳೆಯ ಕೆಲಸ ಮಾಡಲು ಪ್ರಯತ್ನಪಡುತ್ತೇವೆ' ಎಂದು ಹೇಳಿದರು.

ಡಿಕೆಶಿ ಸಿ.ಎಂ ಆದ ಬಳಿಕ ಅಧ್ಯಕ್ಷ ಸ್ಥಾನ ಬದಲಾವಣೆ: (ಬಿಡದಿ ವರದಿ): 'ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಿ.ಎಂ ಆದ ಬಳಿಕ ಕೆಪಿಸಿಸಿ ಅಧ್ಯಕ್ಷ ಸ್ಥಾನ ಬದಲಾವಣೆ ಆಗಲಿದೆ. ಈ ಕುರಿತು ಪಕ್ಷದ ವರಿಷ್ಠರು ಸೂಕ್ತ ಸಂದರ್ಭದಲ್ಲಿ ನಿರ್ಧರಿಸುವರು. ಅಲ್ಲದೆ, ಪಕ್ಷದೊಳಗೆ ಯಾರೂ ಶಿವಕುಮಾರ್ ಅವರನ್ನು ಟಾರ್ಗೆಟ್ ಮಾಡಿಲ್ಲ' ಎಂದು ಶಾಸಕ ಎಚ್‌.ಸಿ. ಬಾಲಕೃಷ್ಣ ಅವರು ಹೇಳಿದರು.

ಶನಿವಾರ ಮಾಧ್ಯಮದವರ ಪ್ರಶ್ನೆಗೆ ಅವರು, 'ಬೇರೆ ಪಕ್ಷಗಳಂತೆ ಕಾಂಗ್ರೆಸ್ ಕುಟುಂಬದ ಹಿಡಿತದಲ್ಲಿ ಇಲ್ಲ. ನಮ್ಮಲ್ಲಿ ಹಲವರಿಗೆ ಮುಖ್ಯಮಂತ್ರಿಯಾಗುವ ಅರ್ಹತೆ ಇದೆ. ಚುನಾವಣೆಯಲ್ಲಿ ಏಳೆಂಟು ಸಲ ಗೆದ್ದಿರುವ ಹಿರಿಯರಿದ್ದಾರೆ. ಹಾಗಾಗಿ, ನಾಯಕತ್ವದ ಪೈಪೋಟಿ ಸಾಮಾನ್ಯ. ಹೈಕಮಾಂಡ್ ಎಲ್ಲವನ್ನೂ ಸರಿ ಮಾಡಲಿದೆ' ಎಂದು ತಿಳಿಸಿದರು.

'ಪಕ್ಷಕ್ಕೆ ಮುಜುಗರ ಆಗುವಂತೆ ಹೇಳಿಕೆ ನೀಡದಂತೆ ಮತ್ತು ಬಹಿರಂಗವಾಗಿ ಚರ್ಚಿಸದಂತೆ ಹೈಕಮಾಂಡ್ ಸೂಚಿಸಿದೆ. ಆದರೂ, ಒಂದಿಬ್ಬರು ಸಚಿವರು ತಮ್ಮ ವೈಯಕ್ತಿಕ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ರಾಷ್ಟ್ರೀಯ ಪಕ್ಷಗಳಲ್ಲಿ ಇದು ಸಾಮಾನ್ಯ. ಡಿನ್ನರ್ ಪಾರ್ಟಿ ಮಾಡುವುದು ತಪ್ಪಲ್ಲ. ವ್ಯಕ್ತಿಗಳ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಕಡಿವಾಣ ಹಾಕುವ ಪಕ್ಷ ನಮ್ಮದಲ್ಲ' ಎಂದರು.

ನಮ್ಮ ಪಕ್ಷದಲ್ಲಿ ಗೊಂದಲಗಳಿಲ್ಲ. ಗಾಂಧಿ ಭಾರತ ಕಾರ್ಯಕ್ರಮದಂದೇ ಕೆಲ ಶಾಸಕರು ದುಬೈ ಪ್ರವಾಸ ಹೋಗುತ್ತಾರೆಂಬುದು ತಪ್ಪು ಮಾಹಿತಿ

ಎಚ್‌.ಕೆ.ಪಾಟೀಲ
ಕಾನೂನು ಸಚಿವ

'ವರಿಷ್ಠರ ಪ್ರಶ್ನಿಸುವುದು ಸರಿಯಲ್ಲ'

ಬೆಂಗಳೂರು: 'ಅಧಿಕಾರ ಸಿಕ್ಕಿದ ಬಳಿಕ ಯಾವ ಕಾಂಗ್ರೆಸ್ ಪಕ್ಷ? ಎಐಸಿಸಿ ಅಧ್ಯಕ್ಷರು ಯಾರು? ರಾಹುಲ್ ಗಾಂಧಿ ಯಾರು? ಹೈಕಮಾಂಡ್ ಏನು ಮಾಡುತ್ತದೆ? ಎನ್ನುವುದು ಸರಿಯಲ್ಲ' ಎಂದು ಸಚಿವ ಪ್ರಿಯಾಂಕ್ ಖರ್ಗೆ ಶನಿವಾರ ಹೇಳಿದರು.

'ಬಾಯಿ ಮುಚ್ಚಿಕೊಂಡು ಇರಿ' ಎಂಬ ಎಐಸಿಸಿ ಅಧ್ಯಕ್ಷರ ಎಚ್ಚರಿಕೆ ಕುರಿತು ಸುದ್ದಿಗಾರರಿಗೆ ಪ್ರಶ್ನೆಗೆ ಅವರು, 'ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಹೇಳಿರುವುದನ್ನೇ ಎಐಸಿಸಿ ಅಧ್ಯಕ್ಷರು ಹೇಳಿದ್ದಾರೆ ಅಷ್ಟೇ. ಅವರ ಸೂಚನೆಯಂತೆ ನಾವು ಕೆಲಸ ಮಾಡಬೇಕು' ಎಂದರು.

ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, 'ಯಾರ ಬಾಯಿಗೂ ಬೀಗ ಹಾಕಲು ಆಗಲ್ಲ. ನಮ್ಮ ನಮ್ಮ ವಿವೇಚನೆ ಬಳಸಿ ಮಾತನಾಡ ಬೇಕು. ಮಾತಿನಿಂದ ಪಕ್ಷಕ್ಕೆ ಹಾನಿ ಆಗುವುದೇ ಎಂದು ಯೋಚಿಸ ಬೇಕು' ಎಂದರು.

ದಲಿತ ನಾಯಕರ ಔತಣಕೂಟ ಕುರಿತು, 'ರಾಜಕಾರಣಿಗಳು, ಸ್ನೇಹಿತರು ಒಟ್ಟಿಗೆ ಸೇರುತ್ತೇವೆ. ಹೈಕಮಾಂಡ್ ಸಭೆ ಸೇರಬೇಡಿ ಎನ್ನುವುದಿಲ್ಲ. ಸಭೆ ಸೇರುವುದರಲ್ಲಿ ತಪ್ಪಿಲ್ಲ' ಎಂದರು.

'ವಿಧಾನಸೌಧದಲ್ಲೇ ಸಭೆ ನಡೆಸಬಹುದು' ಎಂಬ ಬಿಜೆಪಿ ನಾಯಕರ ಹೇಳಿಕೆಗೆ, 'ಸಂಪುಟ ಸಭೆಯಲ್ಲಿ ಎಲ್ಲರಿಗೂ ಅವಕಾಶ ಇದೆಯೇ? ಬಿಜೆಪಿಯವರಿಗೆ ಸಾಮಾನ್ಯ ಪ್ರಜ್ಞೆ ಇದೆಯೇ? ಮೊದಲು ಅವರ ವಿಚಾರಗಳನ್ನು ನೋಡಿ ಕೊಳ್ಳಲಿ' ಎಂದರು.

'ಸತೀಶ ಅಧ್ಯಕ್ಷ ಸ್ಥಾನ ನಿಭಾಯಿಸಬಲ್ಲರು'

ಬೆಳಗಾವಿ: 'ಈಗ ಕೆಪಿಸಿಸಿ ಅಧ್ಯಕ್ಷ ಸ್ಥಾನ ಖಾಲಿ ಇಲ್ಲ. ಒಂದು ವೇಳೆ ಸತೀಶ ಜಾರಕಿಹೊಳಿ ಅವರಿಗೆ ಆ ಸ್ಥಾನ ಕೊಟ್ಟರೆ, ನಿಭಾಯಿಸುವ ಸಾಮರ್ಥ್ಯ ಅವರಲ್ಲಿದೆ' ಎಂದು ಶಾಸಕ ಆಸಿಫ್ ಸೇಠ್ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಯಾರಿಗೆ ಆ ಸ್ಥಾನ ಕೊಡಬೇಕೆಂದು ಪಕ್ಷದ ಹೈಕಮಾಂಡ್ ನಿರ್ಧರಿಸುತ್ತದೆ' ಎಂದರು.

'15 ಶಾಸಕರು ದೆಹಲಿಗೆ ಹೋಗಲು ಯೋಜಿಸಿಲ್ಲ. ಬದಲಿಗೆ ಸ್ನೇಹಿತರಾಗಿರುವ ನಾವೆಲ್ಲ ದುಬೈಗೆ ಹೋಗುತ್ತೇವೆ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ನಿತ್ಯ ತಾಸಿಗೂ ಹೆಚ್ಚು ಸಮಯ ಪತ್ರಿಕೆ ಓದುವೆ: ಮುಖ್ಯಮಂತ್ರಿ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಪತ್ರಕರ್ತರು ಸತ್ಯ, ನೈಜ ವರದಿಗೆ ಆದ್ಯತೆ ನೀಡಬೇಕು
- ಮಾಧ್ಯಮ ಕ್ಷೇತ್ರದಲ್ಲಿ ಅವಕಾಶ, ಸವಾಲು ಎರಡೂ ಇವೆ

ತುಮಕೂರು: 'ಪತ್ರಿಕೆ ಓದುಗರ ಸಂಖ್ಯೆ ಕಡಿಮೆಯಾಗುತ್ತಿದೆ ಎಂಬ ಭಾವನೆ ಇದೆ. ಆದರೆ ನಾನು ನಿತ್ಯ ಒಂದು ತಾಸಿಗೂ ಹೆಚ್ಚು ಸಮಯ ಪತ್ರಿಕೆಗಳನ್ನು ಓದುತ್ತೇನೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಶನಿವಾರ ನಗರದಲ್ಲಿ ಹಮ್ಮಿಕೊಂಡಿದ್ದ 39ನೇ ರಾಜ್ಯಮಟ್ಟದ ಪತ್ರಕರ್ತರ ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡಿದರು.

ಊಹಾ ಪತ್ರಿಕೋದ್ಯಮ ಸಮಾಜಕ್ಕೆ ಬಹಳ ಅಪಾಯಕಾರಿ. ಪತ್ರಕರ್ತರು ಸತ್ಯ, ನೈಜ ವರದಿಗೆ ಆದ್ಯತೆ ನೀಡಬೇಕು. ಆದರೆ, ಈಚೆಗೆ ಪತ್ರಿಕೋದ್ಯಮದ ಆದ್ಯತೆಗಳು ಸಹ ಬದಲಾಗಿವೆ ಎಂದು ಕಳವಳ ವ್ಯಕ್ತಪಡಿಸಿದರು.

ಸರ್ಕಾರದ ಆಡಳಿತ ವೈಖರಿ ಟೀಕೆ ಮಾಡಿದರೆ ತಕರಾರು ಇಲ್ಲ. ಟೀಕೆ ಆರೋಗ್ಯಕರ, ಸಮಾಜಮುಖಿಯಾಗಿ, ಜನಪರವಾಗಿರಬೇಕು. ವರದಿಗಾರಿಕೆ ವೃತ್ತಿಪರವಾಗಿದ್ದಾಗ ಸಮಾಜದ ಪರವಾಗಿರುತ್ತದೆ ಎಂದು ಅವರು ಅಭಿಪ್ರಾಯಪಟ್ಟರು.

ವಿಜ್ಞಾನ, ತಂತ್ರಜ್ಞಾನ ಕ್ಷೇತ್ರ ಬೆಳೆಯುತ್ತಿರುವ ವೇಗದಲ್ಲೇ ಪತ್ರಿಕೋದ್ಯಮ ಕೂಡ ಬೆಳೆಯುತ್ತಿದೆ. ಇದರಿಂದ ಮಾಧ್ಯಮ ಕ್ಷೇತ್ರದಲ್ಲೂ ಬದಲಾವಣೆಗಳಾಗಿವೆ. ಇದು ಅವಕಾಶ, ಸವಾಲೂ ಎರಡೂ ಆಗಿದೆ ಎಂದರು.

ಗೃಹ ಸಚಿವ ಜಿ.ಪರಮೇಶ್ವರ, ದೆಹಲಿ ವಿಶೇಷ ಪ್ರತಿನಿಧಿ ಟಿ.ಬಿ. ಜಯಚಂದ್ರ, ಸಚಿವ ಕೆ.ಎನ್. ರಾಜಣ್ಣ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು ವೇದಿಕೆಯಲ್ಲಿದ್ದರು.

ತುಮಕೂರಿನಲ್ಲಿ ಶನಿವಾರ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಹಮ್ಮಿಕೊಂಡಿದ್ದ 39ನೇ ರಾಜ್ಯಮಟ್ಟದ ಪತ್ರಕರ್ತರ ಸಮ್ಮೇಳನವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು. ಸಚಿವರಾದ ಜಿ.ಪರಮೇಶ್ವರ, ಕೆ.ಎನ್‌.ರಾಜಣ್ಣ, ಸಂಘದ ಅಧ್ಯಕ್ಷ ಶಿವಾನಂದ ತಗಡೂರು, ದೆಹಲಿ ವಿಶೇಷ ಪ್ರತಿನಿಧಿ ಟಿ.ಬಿ. ಜಯಚಂದ್ರ, ಮಾಜಿ ಸಚಿವ ಸೊಗಡು ಶಿವಣ್ಣ, ಶಾಸಕರಾದ ಕೆ.ಷಡಾಕ್ಷರಿ, ಎಚ್‌.ವಿ.ವೆಂಕಟೇಶ್ ಉಪಸ್ಥಿತರಿದ್ದರು

ಕೆಪಿಎಸ್‌ಸಿ: ಸಿಎಸ್ ನೇತೃತ್ವದಲ್ಲಿ 27ಕ್ಕೆ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೆಜೆಟೆಡ್ ಪ್ರೊಬೇಷನರಿ 384 ಹುದ್ದೆಗಳ ನೇಮಕಾತಿಗೆ ನಡೆದ ಪೂರ್ವಭಾವಿ ಮರು ಪರೀಕ್ಷೆಯಲ್ಲೂ ಭಾಷಾಂತರ ಗೊಂದಲ ಸೇರಿದಂತೆ ಕೆಪಿಎಸ್‌ಸಿಗೆ ಸಂಬಂಧಿಸಿದ ವಿಷಯಗಳ ಕುರಿತು ಚರ್ಚಿಸಲು ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅಧ್ಯಕ್ಷತೆಯಲ್ಲಿ ಶನಿವಾರ (ಜ. 18) ಆಯೋಜಿಸಿದ್ದ ಸಭೆಯನ್ನು ಜ.27ಕ್ಕೆ ಮುಂದೂಡಲಾಗಿದೆ.

ಸಭೆಯನ್ನು 27ರ ಮಧ್ಯಾಹ್ನ 3.30ಕ್ಕೆ ಮುಂದೂಡಲಾಗಿದೆ ಎಂದು ಮುಖ್ಯ ಕಾರ್ಯದರ್ಶಿ ವಿಶೇಷಾಧಿಕಾರಿ ತಿಳಿಸಿದ್ದಾರೆ. ಅದರೆ, ಸಭೆ ಮುಂದೂಡಲು ಕಾರಣ ವಿವರಿಸಿಲ್ಲ. ಕೆಪಿಎಸ್‌ಸಿ ಕಾರ್ಯದರ್ಶಿ ರಜೆಯಲ್ಲಿ ತೆರಳಿರುವುದರಿಂದ ಸಭೆ ಮುಂದೂಡಲಾಗಿದೆ ಎಂದು ಗೊತ್ತಾಗಿದೆ.

ಮುಖ್ಯಮಂತ್ರಿಗಳ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್‌.ಕೆ.ಅತೀಕ್, ಡಿಪಿಎಆರ್ ಕಾರ್ಯದರ್ಶಿ ಮತ್ತು ಇ–ಆಡಳಿತ ವಿಭಾಗದ ಕಾರ್ಯದರ್ಶಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಾರ್ಯದರ್ಶಿ ಮತ್ತು ನಿರ್ದೇಶಕರನ್ನು ಸಭೆಗೆ ಆಹ್ವಾನಿಸಲಾಗಿದೆ. ಅಗತ್ಯ ಮಾಹಿತಿ ಜೊತೆ ಸಭೆಗೆ ಹಾಜರಾಗಬೇಕು. ಸಭೆಗೂ ಮೊದಲೇ ಟಿಪ್ಪಣಿಯೊಂದನ್ನು ಮುಖ್ಯ ಕಾರ್ಯದರ್ಶಿಗೆ ನೀಡಬೇಕು ಎಂದು ಸಭಾ ಸೂಚನಾ ಪತ್ರದಲ್ಲಿ ತಿಳಿಸಲಾಗಿದೆ.

ಈ ಹುದ್ದೆಗಳಿಗೆ ಆಗಸ್ಟ್ 27ರಂದು ನಡೆದಿದ್ದ ಪೂರ್ವಭಾವಿ ಪರೀಕ್ಷೆ ಪ್ರಶ್ನೆ-ಪತ್ರಿಕೆಯಲ್ಲಿ ಭಾಷಾಂತರ ತಪ್ಪುಗಳು ಕಂಡುಬಂದ ಕಾರಣ ಡಿ. 29ರಂದು ಮರು ಪರೀಕ್ಷೆ ನಡೆಸಲಾಗಿತ್ತು. ಮರು ಪರೀಕ್ಷೆಯಲ್ಲೂ ಸಾಕಷ್ಟು ಲೋಪಗಳಾಗಿದ್ದವು.

ಕೆಲ ಕೇಂದ್ರಗಳಲ್ಲಿ ಅಭ್ಯರ್ಥಿಗಳ ನೋಂದಣಿ ಸಂಖ್ಯೆ ಮತ್ತು ಒಎಂಆರ್ ಶೀಟ್‌ನಲ್ಲಿದ್ದ ಸಂಖ್ಯೆ ತಾಳೆಯಾಗದೆ ಗೊಂದಲ ಮೂಡಿತ್ತು. ಹೀಗಾಗಿ ಮತ್ತೆ ಪೂರ್ವಭಾವಿ ಪರೀಕ್ಷೆ ನಡೆಸಬೇಕು ಅಥವಾ ಮುಖ್ಯ ಪರೀಕ್ಷೆಗೆ 1:50 ಅನುಪಾತದಲ್ಲಿ ಆಯ್ಕೆ ಮಾಡಬೇಕು ಎಂದು ಅಭ್ಯರ್ಥಿಗಳು ಪಟ್ಟು ಹಿಡಿದಿದ್ದಾರೆ. ಮುಖ್ಯ ಕಾರ್ಯದರ್ಶಿ ಅಧ್ಯಕ್ಷತೆಯಲ್ಲಿ ನಡೆಯುವ ಸಭೆಯಲ್ಲಿ ಈ ಬಗ್ಗೆ ಸ್ಪಷ್ಟ ನಿರ್ಧಾರ ಹೊರಬೀಳುವ ಸಾಧ್ಯತೆಯಿದೆ.

ಸಂಸ್ಕಾರ ವೃದ್ಧಿಯೂ ಅಗತ್ಯ: ಶೃಂಗೇರಿ ಶ್ರೀ

ಒಂದನೇ ಪುಟದಿಂದ...

'ಗಂಡು ಮಕ್ಕಳಿಗೆ ಸಕಾಲದಲ್ಲಿ ಉಪನಯನ ಮಾಡುವಂತೆ, ಹೆಣ್ಣು ಮಕ್ಕಳಿಗೂ ಜಪ ಮಂತ್ರಗಳ ಸಂಸ್ಕಾರ ಒದಗಿಸಬೇಕು' ಎಂದು ವಿಧುಶೇಖರ ಭಾರತೀ ಸ್ವಾಮೀಜಿ ಹೇಳಿದರು.

'ವಿವಾಹಕ್ಕೆ ಶಾಸ್ತ್ರೀಯವಾದ ಸಂಸ್ಕಾರವಾಗಿದೆ. ಇದು ಕಂಪನಿಗಳು ಪರಸ್ಪರ ಮಾಡಿಕೊಳ್ಳುವ ಒಪ್ಪಂದಗಳ ರೀತಿಯಲ್ಲ. ಇದನ್ನು ಅರ್ಥ ಮಾಡಿಕೊಂಡು ಸಾಗಬೇಕು' ಎಂದು ಹೇಳಿದರು.

ವಿಚ್ಛೇದನ ಹೆಚ್ಚಳ: ಸೋಂದಾ ಸ್ವರ್ಣವಲ್ಲಿ ಮಠದ ಗಂಗಾಧರೇಂದ್ರ ಸರಸ್ವತಿ ಸ್ವಾಮೀಜಿ, 'ಬ್ರಾಹ್ಮಣ ಸಮುದಾಯ ಹಿಂದೆಂದಿಗಿಂತ ಹೆಚ್ಚಿನ ಸಮಸ್ಯೆ ಎದುರಿಸುತ್ತಿದೆ. ಅವುಗಳಲ್ಲಿ ವೈವಾಹಿಕ ಸಮಸ್ಯೆ ಮುಖ್ಯವಾದದ್ದಾಗಿದೆ. ವಿವಾಹ ನಿಶ್ಚಯವಾಗುವುದೇ ಕಷ್ಟ ಎನ್ನುವ ಸ್ಥಿತಿಯಿರುವಾಗ, ವಿಚ್ಛೇದನ ಪ್ರಕರಣಗಳು ಹೆಚ್ಚುತ್ತಿವೆ. ಇದು ಸಂಸ್ಕಾರವಂತ, ಬುದ್ಧಿವಂತ ಸಮುದಾಯದ ಲಕ್ಷಣವೆ? ಸಮಸ್ಯೆಗೆ ಪರಿಹಾರೋಪಾಯ ಕಂಡುಕೊಳ್ಳಲು ಹೆಣ್ಣು ಮಕ್ಕಳಿಗೆ ದಶ ಹೋಮ, ಕನ್ಯಾ ಸಂಸ್ಕಾರ, ಮಾರ್ಗದರ್ಶಕ ಶಿಬಿರಗಳು ಅಗತ್ಯ. ಈಮೂಲಕ ವಿಚ್ಛೇದನ ತಡೆಯುವ ಕೆಲಸ ವ್ಯಾಪಕವಾಗಬೇಕು' ಎಂದು ಅಭಿಪ್ರಾಯಪಟ್ಟರು.

ಮಹಾಸಭಾ ಅಧ್ಯಕ್ಷ ಅಶೋಕ ಹಾರನಹಳ್ಳಿ, 'ಸನಾತನಧರ್ಮಕ್ಕೆಸಂಕಷ್ಟಗಳು ಎದುರಾಗಿವೆ. ಧರ್ಮದ ಒಳಗಿನ ಕೆಲ ಭಿನ್ನಾಭಿಪ್ರಾಯಗಳನ್ನು ತೊಡೆದು ಹಾಕಬೇಕಿದೆ. ಧರ್ಮಕ್ಕೆ ಶಕ್ತಿ ನೀಡಿದರೆ, ಬೇರೆ ಮತಗಳ ಪ್ರಭಾವ ವ್ಯಾಪಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಬ್ರಾಹ್ಮಣರು ಉಪ ಪಂಗಡಗಳಲ್ಲಿ ಗುರುತಿಸಿಕೊಳ್ಳದೆ, ಒಗ್ಗಟ್ಟು ಪ್ರದರ್ಶಿಸಬೇಕು' ಎಂದರು.

ಶೃಂಗೇರಿ ಶಿವಗಂಗಾ ಮಠದ ಪುರುಷೋತ್ತಮ ಭಾರತೀ ಸ್ವಾಮೀಜಿ, ನೆಲೆಮಾವು ಮಠದ ಮಾಧವಾನಂದ ಭಾರತಿ ಸ್ವಾಮೀಜಿ, ಶೃಂಗೇರಿ ಮಠದ ಅದ್ವೈತಾನಂದ ಭಾರತೀ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು.

ಸಮ್ಮೇಳನದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಸುವರ್ಣ ಭವನದ ಶಿಲಾನ್ಯಾಸವನ್ನು ವಿಧುಶೇಖರ ಭಾರತೀ ಸ್ವಾಮೀಜಿ ನೆರವೇರಿಸಿದರು. ಅಶೋಕ ಹಾರನಹಳ್ಳಿ, ಅದ್ವೈತಾನಂದ ಭಾರತೀ ಸ್ವಾಮೀಜಿ, ಪುರುಷೋತ್ತಮ ಭಾರತೀ ಸ್ವಾಮೀಜಿ, ಮಾಧವಾನಂದ ಭಾರತೀ ಸ್ವಾಮೀಜಿ ಮತ್ತು ಗಂಗಾಧರೇಂದ್ರ ಸರಸ್ವತಿ ಸ್ವಾಮೀಜಿ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಇವತ್ತಿನ ಸಮಾಜವು ಅಂಕ, ಹಣ ಮತ್ತು ಸಾಮಾಜಿಕ ಜಾಲತಾಣ ಹಿಂದೆ ಓಡುತ್ತಿದೆ. ಓದಿನಲ್ಲಿ ಹೆಚ್ಚು ಅಂಕ ಗಳಿಸಿದವರು, ಹಣಕ್ಕಾಗಿ ಧರ್ಮ ಬಿಟ್ಟು ಹೋಗುತ್ತಿದ್ದಾರೆ

ಮಾಧವಾನಂದ ಭಾರತೀ ಸ್ವಾಮೀಜಿ, ನೆಲೆಮಾವು ಮಠ

ಬ್ರಾಹ್ಮಣರು ಆಚರಣೆ ಬಿಡಬಾರದು: ಕೇಂದ್ರ ಸಚಿವ ಪ್ರಲ್ಹಾದ ಜೋಶಿ

'ಸಾಮಾಜಿಕ ವ್ಯವಸ್ಥೆ ಬದಲಾವಣೆಯಾದ ಈ ಸಂದರ್ಭದಲ್ಲಿ ಬ್ರಾಹ್ಮಣರು ಆಚರಣೆಗಳನ್ನು ಬಿಡದೆ, ಇತಿಹಾಸ ಮರೆಯದೆ ಮುನ್ನಡೆಯಬೇಕು' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹೇಳಿದರು.

'ಮೊಘಲರು ಸೇರಿ ಹೊರಗಿನ ಅನೇಕರು ನಮ್ಮ ಸಂಸ್ಕೃತಿ, ಧಾರ್ಮಿಕ ಪರಂಪರೆ ಮೇಲೆ ಆಕ್ರಮಣ ಮಾಡಿದ್ದಾರೆ. ಈಗ ದೇಶದಲ್ಲಿಯೇ ಕೆಲವರು ಸನಾತನ ಧರ್ಮವನ್ನು ನಿರ್ಮೂಲನೆ ಮಾಡಲು ಹೊರಟಿದ್ದಾರೆ.

ದೇಶದ ಹಿತದೃಷ್ಟಿಯಿಂದ ಸಮಾಜವನ್ನು ಸಂಘಟಿಸುವ ಜತೆಗೆ ಇಡೀ ಹಿಂದೂ ಸಮಾಜವನ್ನು ಒಟ್ಟಿಗೆ ಕರೆದೊಯ್ಯಬೇಕಿದೆ ಎಂದು ಅವರು ಹೇಳಿದರು.

ಬಿವೈವಿ ವಿರುದ್ಧ ಭಿನ್ನರ ಸಮರ

ವಿಜಯೇಂದ್ರ ಕಲೆಕ್ಷನ್ ಮಾಸ್ಟರ್: ಯತ್ನಾಳ

ಒಂದನೇ ಪುಟದಿಂದ...

'17 ಜನ ಬಂದಿದ್ದರಿಂದಲೇ ಸರ್ಕಾರ ಬಂತು. ನೀವು ಇಷ್ಟೆಲ್ಲ ದುಡ್ಡು ಮಾಡಲು ರಮೇಶ ಅವರೇ ಕಾರಣ. ನೀವು ಎಷ್ಟು ದುಡ್ಡು ಮಾಡಿದ್ದೀರಿ ಎಂದು ಇಡೀ ಜಗತ್ತಿಗೆ ಗೊತ್ತಿದೆ. ಉಮೇಶ್ ಮನೆಯಲ್ಲಿ ಇ.ಡಿಗೆ ಎರಡು ಹಣ ಎಣಿಕೆಯ ಯಂತ್ರಗಳು, ಸಾವಿರಾರು ಕೋಟಿ ರೂಪಾಯಿ ಖರೀದಿ ಬಾಂಡ್‌ಗಳು, ನಗದು ಸಿಕ್ಕಿತ್ತು. ಇದೆಲ್ಲ ಯಾರದ್ದು ವಿಜಯೇಂದ್ರ ಅವರೇ' ಎಂದು ಪ್ರಶ್ನಿಸಿದರು.

'ಬಿಜೆಪಿ ರಾಜ್ಯ ಘಟಕಕ್ಕೆ ಚುನಾವಣೆ ನಡೆದಿದ್ದೇ ಆದರೆ ನಿಷ್ಠಾವಂತ ಬಿಜೆಪಿ ಕಾರ್ಯಕರ್ತರು, ಪಕ್ಷದ ಮೂಲ ಸಿದ್ಧಾಂತಗಳು ಮತ್ತು ಹಿಂದೂಗಳ ರಕ್ಷಣೆ ಹಾಗೂ ವಕ್ಫ್ ವಿರುದ್ಧದ ಹೋರಾಟಕ್ಕೆ ಬಲ ತುಂಬಲು ನಮ್ಮ ಪರವಾಗಿ ಅಭ್ಯರ್ಥಿಯನ್ನು ನಿಲ್ಲಿಸುವ ಗಂಭೀರವಾದ ಚಿಂತನೆ ಇದೆ' ಎಂದರು.

'ಬಿಜೆಪಿ ಜಿಲ್ಲಾ ಘಟಕಗಳ ಚುನಾವಣೆಯ ಹೊಣೆಯನ್ನು ಹಾಲಿ ಅಧ್ಯಕ್ಷರಿಗೆ ಕೊಡಬಾರದು. ಪಾರದರ್ಶಕವಾಗಿ ಚುನಾವಣೆ ನಡೆಸುವವರನ್ನು ಅಥವಾ ಹೊರ ರಾಜ್ಯದವರನ್ನು ಜಿಲ್ಲಾ ಉಸ್ತುವಾರಿಗಳನ್ನಾಗಿ ನೇಮಿಸಬೇಕು ಎಂದು ಕೇಂದ್ರ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರಲ್ಲಿ ಮನವಿ ಮಾಡುತ್ತೇನೆ' ಎಂದರು.

'... ಅಧ್ಯಕ್ಷನಾಗಲು ಯೋಗ್ಯನಲ್ಲ'

ಒಂದನೇ ಪುಟದಿಂದ...

'ನಾನು ರಕ್ಷಣೆಗೆ ಪೊಲೀಸ್ ಪಡೆ ಅಥವಾ ಗನ್ ತರುವುದಿಲ್ಲ. ಒಬ್ಬನೇ ಬರುತ್ತೇನೆ. ಆ ತಾಕತ್ತು ನನಗಿದೆ. ಆದರೆ, ನಿನ್ನನ್ನು ರಾಜ್ಯದಲ್ಲಿ ಓಡಾಡದ ಹಾಗೆ ಮಾಡುವ ತಾಕತ್ತನ್ನೂ ದೇವರು ನನಗೆ ಕೊಟ್ಟಿದ್ದಾನೆ' ಎಂದೂ ತಿರುಗೇಟು ನೀಡಿದರು.

'ಯಡಿಯೂರಪ್ಪ ಅವರಿಗೂ ನಾನು ಹೇಳುವುದು ಒಂದೇ; ವಿಜಯೇಂದ್ರನ ಬೆನ್ನು ಹತ್ತಿ ಹಾಳಾಗುತ್ತಿದ್ದೀರಿ. ಬಿಜೆಪಿ ರಾಜ್ಯ ಘಟಕಕ್ಕೆ ಒಳ್ಳೆಯ ಅಧ್ಯಕ್ಷ ಬರಲು ಅವಕಾಶ ಕೊಡಿ. ಅವರಿಗೆ ಮಾರ್ಗದರ್ಶನ ಮಾಡಿ. ನಿಮ್ಮಿಂದ ಪಕ್ಷಕ್ಕೆ ಒಳ್ಳೆಯದಾಗಿದೆ. ಆದರೆ, ನೀವು ಪಕ್ಷದಿಂದ ಸಾವಿರಪಟ್ಟು ಲಾಭ ಪಡೆದಿದ್ದೀರಿ' ಎಂದರು.

ಆರೋಪಿಗಳಿಗೆ ನ್ಯಾಯಾಂಗ ಬಂಧನ

ಪ್ರಜಾವಾಣಿ ವಾರ್ತೆ

ಬೀದರ್: ಯುವ ಗುತ್ತಿಗೆದಾರ ಸಚಿನ್ ಪಾಂಚಾಳ್ ಆತ್ಮಹತ್ಯೆ ಪ್ರಕರಣದ ಆರೋಪಿಗಳಾಗಿರುವ ಕಲಬುರಗಿಯ ಮಾಜಿ ಕಾರ್ಪೊರೇಟರ್ ರಾಜು ಕಪನೂರ ಸೇರಿದಂತೆ ಐವರನ್ನು ನಗರದ ಹೆಚ್ಚುವರಿ ಜೆಎಂಎಫ್‌ಸಿ ನ್ಯಾಯಾಲಯವು 14 ದಿನ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ ಶನಿವಾರ ಆದೇಶ ಹೊರಡಿಸಿದೆ.

ಸಿಐಡಿ ಅಧಿಕಾರಿಗಳು ಸಚಿವ ಪ್ರಿಯಾಂಕ್ ಖರ್ಗೆ ಆಪ್ತರಾಗಿರುವ ರಾಜು ಕಪನೂರ, ಜಿಲ್ಲಾ ಪಂಚಾಯಿತಿ ಮಾಜಿ ಉಪಾಧ್ಯಕ್ಷ ಗೋರಖನಾಥ ಸಜ್ಜನ್, ಬ್ಲಾಕ್ ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷ ನಂದಕುಮಾರ ನಾಗಭುಜಂಗೆ, ಕಲಬುರಗಿಯ ಪ್ರಥಮ ದರ್ಜೆ ಗುತ್ತಿಗೆದಾರ ರಾಮನಗೌಡ ಪಾಟೀಲ ಹಾಗೂ ಸತೀಶ ರತ್ನಾಕರ ದುಬಲಗುಂಡಿ ಅವರನ್ನು ಜನವರಿ 10ರಂದು ಬಂಧಿಸಿದ್ದರು. ಬಳಿಕ ನ್ಯಾಯಾಲಯವು ಐದು ದಿನಗಳವರೆಗೆ ಸಿಐಡಿ ಕಸ್ಟಡಿಗೆ ಒಪ್ಪಿಸಿತ್ತು. ಜನವರಿ 15ರಂದು ನ್ಯಾಯಾಲಯವು ಪುನಃ ಮೂರು ದಿನಗಳವರೆಗೆ ಸಿಐಡಿ ಕಸ್ಟಡಿ ಅವಧಿಯನ್ನು ವಿಸ್ತರಿಸಿತ್ತು.

ಬಾಲಗಂಗಾಧರನಾಥ ಸ್ವಾಮೀಜಿ ಅವರ 80ನೇ ವರ್ಷದ ಜಯಂತ್ಯುತ್ಸವ

ಅಕ್ಷರ ನೀಡಿದ ಸಂತ ಚುಂಚಶ್ರೀ: ಕೆ.ಎಚ್‌. ಮುನಿಯಪ್ಪ

ಪ್ರಜಾವಾಣಿ ವಾರ್ತೆ

ಗುಣಗಾನ
- ಸಮಾಜಮುಖಿ ಚುಂಚಶ್ರೀ
- ಬಡ ವಿದ್ಯಾರ್ಥಿಗಳ ಆಶಾಕಿರಣ
- ಎಲ್ಲರಿಗೂ ಮೀಸಲಾದ ಆದಿಚುಂಚನಗಿರಿ ಮಠ

ನಾಗಮಂಗಲ (ಮಂಡ್ಯ ಜಿಲ್ಲೆ): 'ಅಕ್ಷರ, ಅನ್ನ ಹಾಗೂ ಆರೋಗ್ಯ ನೀಡಿದ ಸಂತ ಬಾಲಗಂಗಾಧರನಾಥ ಸ್ವಾಮೀಜಿಯವರು ಬಡ ವಿದ್ಯಾರ್ಥಿಗಳ ಆಶಾಕಿರಣ' ಎಂದು ಸಚಿವ ಕೆ.ಎಚ್‌. ಮುನಿಯಪ್ಪ ಶ್ಲಾಘಿಸಿದರು.

ತಾಲ್ಲೂಕಿನ ಆದಿಚುಂಚನಗಿರಿ ಮಠದಲ್ಲಿ ಶನಿವಾರ ನಡೆದ ಬಾಲಗಂಗಾಧರನಾಥ ಸ್ವಾಮೀಜಿಯವರ 80ನೇ ವರ್ಷದ ಜಯಂತ್ಯುತ್ಸವ ಹಾಗೂ 12ನೇ ವರ್ಷದ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, 'ಶ್ರೀಗಳು ಧಾರ್ಮಿಕ ಕೈಂಕರ್ಯದ ಜೊತೆಗೆ ಬಡವರನ್ನು ಮೇಲೆತ್ತುವ ಕೆಲಸ ಮಾಡಿದರು. ಬಡ ವಿದ್ಯಾರ್ಥಿಗಳ ಶಿಕ್ಷಣಕ್ಕೂ ಶ್ರಮಿಸಿದರು. ಗ್ರಾಮಾಂತರ ಪ್ರದೇಶಗಳಲ್ಲಿ ಶಿಕ್ಷಣ ಸಂಸ್ಥೆ ತೆರೆದು ಕ್ರಾಂತಿಯನ್ನೇ ಮಾಡಿದರು' ಎಂದು ಬಣ್ಣಿಸಿದರು.

'ಶಿಕ್ಷಣ ಸಂಸ್ಥೆಗಳೊಂದಿಗೆ ಮಠದ ಶಾಖೆಗಳನ್ನು ತೆರೆದು ಸಮಾಜದ ಕೆಲಸ ಮಾಡಿದ ಕೀರ್ತಿ ಸ್ವಾಮೀಜಿಯವರಿಗೆ ಸಲ್ಲುತ್ತದೆ. ಇಂಥ ಪ್ರಯತ್ನಗಳಿಂದಲೇ ಆದಿಚುಂಚನಗಿರಿ ಮಹಾಸಂಸ್ಥಾನ ಎತ್ತರಕ್ಕೆ ಬೆಳೆದಿದೆ. ಇಲ್ಲಿ ಯಾವುದೇ ಜಾತಿಮತಗಳಿಗೆ ಸ್ಥಾನವಿಲ್ಲ, ಶ್ರೀಮಠವು ವಿಶ್ವಮಾನ್ಯವಾಗಿ ಉಳಿಯಲು ಇದು ಕೂಡ ಕಾರಣ' ಎಂದರು.

ಆಶೀರ್ವಚನ ನೀಡಿದ ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ, 'ಬಾಲಗಂಗಾಧರನಾಥ ಸ್ವಾಮೀಜಿಯವರು 500ಕ್ಕೂ ಹೆಚ್ಚು ವಿದ್ಯಾಸಂಸ್ಥೆಗಳನ್ನು ಕಟ್ಟಿ ಗ್ರಾಮಾಂತರ ಪ್ರದೇಶದ ಮಕ್ಕಳ ವಿದ್ಯಾಭ್ಯಾಸಕ್ಕೆ ಆದ್ಯತೆ ನೀಡಿದರು. ಶ್ರೀ ಕಾಲಭೈರವೇಶ್ವರಸ್ವಾಮಿ ದೇವಸ್ಥಾನ ನಿರ್ಮಿಸುವ ಮೊದಲೇ ವಿದ್ಯಾದೇಗುಲಗಳನ್ನು ಕಟ್ಟಿದರು. ಸ್ವಾಮಿಯ ದೇವಾಲಯ ನಿರ್ಮಿಸಿ ಇತಿಹಾಸ ಸೃಷ್ಟಿಸಿದರು' ಎಂದು ಸ್ಮರಿಸಿದರು.

ಮಾಜಿ ಸಂಸದ ಸಿ.ಎಸ್‌.ಪುಟ್ಟರಾಜು, ಮಾಜಿ ಶಾಸಕ ಸುರೇಶ್‌ಗೌಡ, ಅಮೆರಿಕ ಒಕ್ಕಲಿಗರ ಪರಿಷತ್ ಅಧ್ಯಕ್ಷ ಧನಂಜಯ್ಯ, ಮಾಜಿ ಅಧ್ಯಕ್ಷ ಅಮರನಾಥಗೌಡ, ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್ ಕಾರ್ಯದರ್ಶಿ ಪುರುಷೋತ್ತಮಾನಂದ ಸ್ವಾಮೀಜಿ, ಮಠದ ಕಾರ್ಯದರ್ಶಿ ಪ್ರಸನ್ನನಾಥ ಸ್ವಾಮೀಜಿ, ಧರ್ಮಪಾಲನಾಥ ಸ್ವಾಮೀಜಿ, ಸೋಮೇಶ್ವರನಾಥ ಸ್ವಾಮೀಜಿ, ಮಂಗಳನಾಥ ಸ್ವಾಮೀಜಿ, ಶೈಲನಾಥ ಸ್ವಾಮೀಜಿ ಭಾಗವಹಿಸಿದ್ದರು.

ನಾಗಮಂಗಲ ತಾಲ್ಲೂಕಿನ ಆದಿಚುಂಚನಗಿರಿ ಮಹಾಸಂಸ್ಥಾನ ಮಠದಲ್ಲಿ ಶನಿವಾರ ನಡೆದ ಬಾಲಗಂಗಾಧರನಾಥ ಸ್ವಾಮೀಜಿಯವರ 80ನೇ ವರ್ಷದ ಜಯಂತ್ಯುತ್ಸವ ಹಾಗೂ 12ನೇ ವರ್ಷದ ಪುಣ್ಯಸ್ಮರಣೆ ಕಾರ್ಯಕ್ರಮವನ್ನು ನಿರ್ಮಲಾನಂದನಾಥ ಸ್ವಾಮೀಜಿ ಉದ್ಘಾಟಿಸಿದರು. ಸಚಿವ ಕೆ.ಎಚ್‌.ಮುನಿಯಪ್ಪ ಇದ್ದಾರೆ

ಮುಡಾ ನಿವೇಶನಗಳ ಹಂಚಿಕೆ ಪ್ರಕರಣದ ತನಿಖೆ; ಪತ್ರ ಬರೆದ ಸಹಾಯಕ ಆಯುಕ್ತ

631 ನಿವೇಶನಗಳ ಮಾಹಿತಿ ಕೇಳಿದ ಇ.ಡಿ

ಪ್ರಜಾವಾಣಿ ವಾರ್ತೆ

ಮೈಸೂರು: ಮುಡಾ ನಿವೇಶನಗಳ ಹಂಚಿಕೆ ಪ್ರಕರಣದ ತನಿಖೆ ನಡೆಸುತ್ತಿರುವ ಜಾರಿ ನಿರ್ದೇಶನಾಲಯವು ಒಟ್ಟು 631 ನಿವೇಶನಗಳ ಮಾಹಿತಿ ಕೋರಿ ಇಲ್ಲಿನ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತರಿಗೆ ಪತ್ರ ಬರೆದಿದೆ.

ಡಿ. 16ರಂದು ಇ.ಡಿ. ಬೆಂಗಳೂರು ಕಚೇರಿಯ ಸಹಾಯಕ ನಿರ್ದೇಶಕ ವಿ. ಮುರಳೀಕಣ್ಣನ್ ಅವರು ಪತ್ರ ಬರೆದಿದ್ದು, ತನಿಖೆಗೆ ಅವಶ್ಯವಾಗಿರುವ ಎಲ್ಲ ಮಾಹಿತಿಯನ್ನು ಜರೂರಾಗಿ ಒದಗಿಸಬೇಕೆಂದು ಸೂಚಿಸಿದ್ದಾರೆ. ಈ ಪತ್ರ ಈಗ ಮಾಧ್ಯಮಗಳಿಗೆ ದೊರೆತಿದೆ.

ಮುಡಾ ವ್ಯಾಪ್ತಿಯ 631 ನಿವೇಶನಗಳ ಪಟ್ಟಿಯನ್ನು ಸರ್ವೆ ಸಂಖ್ಯೆ ಸಮೇತ ಇ.ಡಿ. ನೀಡಿದೆ. ದಟ್ಟಗಳ್ಳಿ, ಕೆಸರೆ 10ರಿಂದ ಮೂರನೇ ಹಂತ, ಜೆ.ಪಿ. ನಗರ, ವಿಜಯನಗರ, ಹಂಚ್ಯಾ–ಸಾತಗಳ್ಳಿ, ಹಿಣಕಲ್, ಶ್ರೀರಾಂಪುರ, ವಸಂತನಗರ ಸೇರಿದಂತೆ ವಿವಿಧ ಬಡಾವಣೆಗಳಲ್ಲಿ ಹಂಚಿಕೆಯಾಗಿರುವ ನಿವೇಶನಗಳ ಮಾಲೀಕರು, ಅವರ ವಿಳಾಸ, ನಿವೇಶನ ಮಂಜೂರಾದ ದಿನ, ನಿವೇಶನದ ವಿಸ್ತೀರ್ಣದ ಮಾಹಿತಿಯನ್ನು ಅಧಿಕಾರಿಗಳು ಕೋರಿದ್ದಾರೆ. ಕೆಲವು ಬಡಾವಣೆಗಳ ನಕ್ಷೆಯನ್ನೂ ನೀಡುವಂತೆ ಸೂಚಿಸಿದ್ದಾರೆ.

ಈ ನಿವೇಶನಗಳಲ್ಲಿ ಕೆಲವು 50:50 ಅನುಪಾತದಲ್ಲಿ ಹಂಚಿಕೆಯಾಗಿದ್ದರೆ, 'ಇನ್ನೂ ಕೆಲವು ನಿವೇಶನಗಳ ವಿಸ್ತೀರ್ಣ ಬದಲಿಸಿ ಹಂಚಲಾಗಿದೆ ಎನ್ನಲಾಗಿದೆ.

ಹೊಸತೇನಿಲ್ಲ: 'ಮುಡಾ ವಿಚಾರಣೆ ಆರಂಭವಾದ ಬಳಿಕ ಇ.ಡಿ.ಯಿಂದ ಹಲವು ಪತ್ರಗಳು ಬಂದಿವೆ. ಅವರು ಕೇಳಿದ ಎಲ್ಲ ಮಾಹಿತಿಯನ್ನೂ ಒದಗಿಸುತ್ತಿದ್ದೇವೆ. ತನಿಖೆ ನಡೆಯುವ ಕಾರಣ ಹೆಚ್ಚೇನು ಹೇಳಲಾಗದು' ಎಂದು ಮುಡಾದ ಅಧಿಕಾರಿಯೊಬ್ಬರು ಪ್ರತಿಕ್ರಿಯಿಸಿದರು.

ಸಿಎಂ ರಾಜೀನಾಮೆಗೆ ವಿಜಯೇಂದ್ರ ಆಗ್ರಹ

ಬೆಂಗಳೂರು: ಮೈಸೂರು 'ಮುಡಾ'ದಲ್ಲಿ ನಡೆದಿರುವುದು ಸಾವಿರಾರು ಕೋಟಿ ರೂಪಾಯಿ ಹಗರಣ. ಮುಖ್ಯಮಂತ್ರಿ ಸಿದ್ದರಾಮಯ್ಯ ಭಂಡತನ ಬಿಟ್ಟು ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಡಬೇಕು. ಪ್ರಕರಣವನ್ನು ಸಿಬಿಐ ತನಿಖೆಗೆ ಹಸ್ತಾಂತರ ಮಾಡಬೇಕು ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಆಗ್ರಹಿಸಿದರು.

ಸುದ್ದಿಗಾರರ ಜತೆ ಶನಿವಾರ ಮಾತನಾಡಿದ ಅವರು, ಮುಡಾ ಹಗರಣ ಈಗ ಮಹತ್ವದ ತಿರುವು ಪಡೆದುಕೊಂಡಿದೆ. ಜಾರಿ ನಿರ್ದೇಶನಾಲಯವು ₹300 ಕೋಟಿಗೂ ಹೆಚ್ಚು ಬೆಲೆಬಾಳುವ ಸ್ಥಿರಾಸ್ತಿಗಳನ್ನು ಮುಟ್ಟುಗೋಲು ಹಾಕಿಕೊಂಡಿದೆ. ಮುಖ್ಯಮಂತ್ರಿ ತಮ್ಮ ಕುಟುಂಬಕ್ಕೆ ಅಕ್ರಮವಾಗಿ 14 ನಿವೇಶನಗಳನ್ನು ಪಡೆದುಕೊಂಡಿದ್ದಾರೆ ಎಂಬುದು ಮೇಲ್ನೋಟಕ್ಕೆ ಸ್ಪಷ್ಟವಾಗಿದೆ ಎಂದರು.

ಬಡವರಿಗೆ ಮಂಜೂರಾಗಬೇಕಿದ್ದ ನಿವೇಶನಗಳನ್ನು ರಿಯಲ್ ಎಸ್ಟೇಟ್ ಉದ್ಯಮಿಗಳು, ದಲ್ಲಾಳಿಗಳಿಗೆ ನೀಡಿದೆ. ಸರ್ಕಾರ ಮತ್ತು ಪ್ರಾಧಿಕಾರಕ್ಕೆ ಆರ್ಥಿಕ ನಷ್ಟವಾಗಿರುವುದು ಮತ್ತೊಮ್ಮೆ ಸಾಬೀತಾಗಿದೆ. ಪ್ರಕರಣವನ್ನು ಬಯಲಿಗೆ ಎಳೆದ ಸ್ನೇಹಮಯಿ ಕೃಷ್ಣ ಅವರ ದೂರನ್ನು ಹತ್ತಿಕ್ಕಲು ಕೆಲಸವನ್ನು ರಾಜ್ಯ ಸರ್ಕಾರ ಮಾಡಿತ್ತು. ಅವರ ಮೇಲೆ ಆರೋಪ ಹೊರಿಸಿ, ಅವರನ್ನು ಬಂಧಿಸುವ ಹುನ್ನಾರ ನಡೆಯಿತು. ಸಿದ್ದರಾಮಯ್ಯ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ಕೊಟ್ಟ ರಾಜ್ಯಪಾಲರ ಮೇಲೂ ಅಪವಾದ ಹೊರಿಸುವ ಕೆಲಸವನ್ನು ಸರ್ಕಾರ ಮಾಡಿತ್ತು. ಈಗ ಇ.ಡಿ. ಕ್ರಮದಿಂದ ಸಿದ್ದರಾಮಯ್ಯ ಮತ್ತೊಮ್ಮೆ ಅಪರಾಧಿ ಸ್ಥಾನದಲ್ಲಿ ನಿಂತಿದ್ದಾರೆ ಎಂದರು.

ಕ್ಲೀನ್‌ಚಿಟ್ ನೀಡಲು ಸಿದ್ಧತೆ– ಅಶೋಕ

ಬೆಂಗಳೂರು: 'ಮುಡಾ ನಿವೇಶನ ಹಂಚಿಕೆ ಪ್ರಕರಣದಲ್ಲಿ ತನಿಖೆ ನಡೆಸಲು ಲೋಕಾಯುಕ್ತ ಪೊಲೀಸರು ಆಸಕ್ತಿ ತೋರಿಸುತ್ತಿಲ್ಲ. ಕ್ಲೀನ್‌ಚಿಟ್ ನೀಡಲು ಸಿದ್ಧತೆ ಮಾಡಿಕೊಂಡಿರುವಂತಿದೆ' ಎಂದು ವಿರೋಧಪಕ್ಷದ ನಾಯಕ ಆರ್. ಅಶೋಕ ಶನಿವಾರ ದೂರಿದರು.

ಸುದ್ದಿಗೋಷ್ಠಿಯಲ್ಲಿ ಅವರು, 'ಈ ಪ್ರಕರಣದಲ್ಲಿ ಮಧ್ಯವರ್ತಿಗಳ ಆಸ್ತಿಯನ್ನು ಜಾರಿ ನಿರ್ದೇಶನಾಲಯ ವಶಕ್ಕೆ ಪಡೆದುಕೊಂಡಿದೆ. ಆದರೆ, ಲೋಕಾಯುಕ್ತ ಪೊಲೀಸರು ಏನೂ ಮಾಡಿಲ್ಲ. ಹೀಗಾಗಿ, ಪ್ರಕರಣವನ್ನು ಸಿಬಿಐಗೆ ವಹಿಸುವಂತೆ ಒತ್ತಾಯಿಸಿದ್ದೇವೆ' ಎಂದರು.

> ಕರ್ನಾಟಕ ದರೋಡೆಕೋರರ ಸ್ವರ್ಗ ಆಗಿರುವುದರಿಂದ ಹೂಡಿಕೆದಾರರು ಮುಂದೆ ಬರುತ್ತಿಲ್ಲ. ಇದು ಪಶ್ಚಿಮ ಬಂಗಾಳದಂತೆಯೇ ಆಗುತ್ತಿದೆ
>
> **ಆರ್. ಅಶೋಕ**, ವಿಧಾನಸಭೆ ವಿರೋಧ ಪಕ್ಷದ ನಾಯಕ

ದರೋಡೆ ರಾಜ್ಯ: 'ಕರ್ನಾಟಕ ದರೋಡೆ ರಾಜ್ಯವಾಗಿ ಬದಲಾಗಿದೆ. ಜನರು ಆತಂಕದಲ್ಲಿ ಬದುಕುತ್ತಿದ್ದಾರೆ. ಜನರ ರಕ್ಷಣೆ ಮಾಡುವವರೇ ಇಲ್ಲ' ಎಂದರು.

'ಬೀದರ್‌ನಲ್ಲಿ ಬ್ಯಾಂಕ್‌ನ ಹಣ ದರೋಡೆ ಮತ್ತು ಸಿಬ್ಬಂದಿ ಕೊಲೆ ನಡೆದಿದೆ. ಮಂಗಳೂರಿನಲ್ಲಿ ಹಾಲಿವುಡ್ ಸಿನಿಮಾ ಶೈಲಿಯಲ್ಲಿ ₹ 15 ಕೋಟಿ ಹಣ ಲೂಟಿಯಾಗಿದೆ. ಪೊಲೀಸರ ಬಗ್ಗೆ ಯಾರಿಗೂ ಭಯವಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪೊಲೀಸ್ ಅಧಿಕಾರಿಗಳ ಮೇಲೆ ಎಷ್ಟು ಹಿಡಿತ ಇದೆ, ರಾಜ್ಯದ ಕಾನೂನು ವ್ಯವಸ್ಥೆ ಎಷ್ಟು ಹದಗೆಟ್ಟಿದೆ ಎನ್ನುವುದು ಇದರಿಂದ ಗೊತ್ತಾಗುತ್ತದೆ' ಎಂದರು.

'ಕಳ್ಳರು ಬೇರೆ ರಾಜ್ಯಗಳಿಂದ ಬಂದು ದರೋಡೆ ಮಾಡಿಕೊಂಡು ಬಸ್ಸು, ರೈಲಿನಲ್ಲಿ ಹೋಗುತ್ತಿದ್ದಾರೆ. ಪೊಲೀಸರ ಕೈಯಲ್ಲಿ ಪಿಸ್ತೂಲ್ ಇಲ್ಲ. ಆದರೆ, ದರೋಡೆ ಮಾಡುವವರ ಕೈಯಲ್ಲಿ ಆಧುನಿಕ ಶಸ್ತ್ರಾಸ್ತ್ರಗಳಿವೆ' ಎಂದರು.

'ಲವ್ ಜಿಹಾದ್', ಕೋಮುಗಲಭೆ, ಹಸುಗಳ ಕೆಚ್ಚಲು ಕತ್ತರಿಸಿದ್ದು ಮುಂತಾದ ಘಟನೆಗಳಲ್ಲಿ ಸರ್ಕಾರ ಕಠಿಣ ಕ್ರಮ ತೆಗೆದುಕೊಂಡಿಲ್ಲ. ಪೊಲೀಸ್ ಇಲಾಖೆ ವರ್ಗಾವಣೆ ದಂಧೆಯಲ್ಲಿ ತೊಡಗಿದ್ದು, ಅಧಿಕಾರಿಗಳು ಸಾಯುತ್ತಿದ್ದಾರೆ. ಗೃಹ ಇಲಾಖೆಯ ಸಭೆ ಕರೆದು ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿಲ್ಲ. ಡಿ.ಕೆ. ಶಿವಕುಮಾರ್-ಸತೀಶ ಜಾರಕಿಹೊಳಿ ಗಲಾಟೆ, ಸಿ.ಎಂ ಬದಲಾವಣೆ ಮೊದಲಾದ ರಾಜಕೀಯದಲ್ಲೇ ಸರ್ಕಾರ ಮುಳುಗಿದೆ' ಎಂದು ದೂರಿದರು.

'ಶ್ವೇತಪತ್ರ ಬಿಡುಗಡೆ ಮಾಡಿ': 'ಮುಖ್ಯಮಂತ್ರಿಯಾಗಿದ್ದ ಬಸವರಾಜ ಬೊಮ್ಮಾಯಿ ಅವಧಿಯಲ್ಲಿ ಅಭಿವೃದ್ಧಿಗೆ ಎಷ್ಟು ಅನುದಾನ ಬಿಡುಗಡೆ ಮಾಡಲಾಗಿತ್ತು. ಮುಖ್ಯಮಂತ್ರಿ ಸಿದ್ದರಾಮಯ್ಯ ಎಷ್ಟು ಅನುದಾನ ನೀಡಿದ್ದಾರೆ ಎಂದು ಶ್ವೇತಪತ್ರ ಬಿಡುಗಡೆ ಮಾಡಲಿ' ಎಂದು ಅಶೋಕ ಆಗ್ರಹಿಸಿದರು.

'ಬಿಜೆಪಿ ಅವಧಿಯಲ್ಲಿ ಎಷ್ಟು ಸಾಲ ಮಾಡಲಾಗಿದೆ, ಕಾಂಗ್ರೆಸ್ ಅವಧಿಯಲ್ಲಿ ಎಷ್ಟು ಸಾಲ ಮಾಡಲಾಗಿದೆ ಎಂದು ಕೂಡ ತಿಳಿಸಲಿ' ಎಂದು ಆಗ್ರಹಿಸಿದರು.

'ಸಿದ್ದರಾಮಯ್ಯ ವಿರುದ್ಧ ಪಿತೂರಿ'

ಪ್ರಜಾವಾಣಿ ವಾರ್ತೆ

ಬೆಳಗಾವಿ/ಹುಬ್ಬಳ್ಳಿ: 'ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಅವರ ಕುಟುಂಬದ ವಿರುದ್ಧ ರಾಜಕೀಯವಾಗಿ ಪಿತೂರಿ ನಡೆಯುತ್ತಿದೆ. ಮುಡಾ ನಿವೇಶನ ಹಂಚಿಕೆ ಪ್ರಕರಣದಲ್ಲಿ ಮುಖ್ಯಮಂತ್ರಿ ಮತ್ತು ಅವರ ಪತ್ನಿ ಭಾಗಿಯಾಗಿಲ್ಲ' ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಮುಡಾ ನಿವೇಶನ ಹಂಚಿಕೆ ಪ್ರಕರಣಕ್ಕೆ ಸಂಬಂಧಿಸಿ ಜಾರಿ ನಿರ್ದೇಶನಾಲಯ(ಇ.ಡಿ) ತನಿಖೆ ಮಾಡುತ್ತಿರುವ ವಿಚಾರವಾಗಿ, ಇಲ್ಲಿ ಶನಿವಾರ ಸುದ್ದಿಗಾರರಿಗೆ ಅವರು ಹೀಗೆ ಪ್ರತಿಕ್ರಿಯಿಸಿದರು.

'ಒಂದು ಪ್ರಕರಣದ ತನಿಖೆ ಸುದೀರ್ಘವಾಗಿ ನಡೆಯುತ್ತದೆ. ಹೀಗಿರುವಾಗ, ಈ ಪ್ರಕರಣದಲ್ಲಿ ಅಕ್ರಮ ನಡೆದಿದೆಯೇ ಅಥವಾ ಇಲ್ಲವೇ ಎಂಬುದನ್ನು ನ್ಯಾಯಾಲಯ ವಿಚಾರಣೆ ಮಾಡಬೇಕೇ ಹೊರತು, ನಾವು–ನೀವು ಅಲ್ಲ. ಇ.ಡಿ ತನಿಖೆಯನ್ನು ನಾನು ಕಂಡಿದ್ದೇನೆ' ಎಂದರು.

ಹುಬ್ಬಳ್ಳಿಯಲ್ಲಿ ಮಾತನಾಡಿದ ಅವರು, 'ಮುಡಾ ಪ್ರಕರಣದಲ್ಲಿ ₹ 300 ಕೋಟಿ ಮೌಲ್ಯದ ಸ್ಥಿರಾಸ್ತಿ ವಶಪಡಿಸಿಕೊಂಡಿರುವ ಇ.ಡಿ ಕ್ರಮದ ಹಿಂದೆ ರಾಜಕಾರಣ ಇದೆ. ಇನ್ನು ಹೆಚ್ಚೇನೂ ಮಾತನಾಡಲ್ಲ' ಎಂದರು.

ಹುಬ್ಬಳ್ಳಿಯಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ , 'ಬೆಳಗಾವಿಯಲ್ಲಿ ನಾವು ಆಯೋಜಿಸುತ್ತಿರುವ 'ಜೈ ಬಾಪು, ಜೈ ಅಂಬೇಡ್ಕರ್, ಜೈ ಸಂವಿಧಾನ' ಸಮಾವೇಶವನ್ನು ಕಂಡು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಹಾಗೂ ಬಿಜೆಪಿ ಹೆದರಿವೆ. ಅದಕ್ಕಾಗಿ ಮುಡಾ ಪ್ರಕರಣದಲ್ಲಿ ₹ 300 ಕೋಟಿ ಮೌಲ್ಯದ ಆಸ್ತಿ ವಶಪಡಿಕೊಂಡಿಸಿರುವ ಬಗ್ಗೆ ಇ.ಡಿ ಮೂಲಕ ಪತ್ರಿಕಾ ಪ್ರಕಟಣೆ ಕೊಡಿಸಿದೆ' ಎಂದು ಟೀಕಿಸಿದರು.

> ಸಿದ್ದರಾಮಯ್ಯ ನೈತಿಕ ಹೊಣೆ ಹೊತ್ತು ರಾಜೀನಾಮೆ ಕೊಡಬೇಕು. ನಿಷ್ಪಕ್ಷಪಾತ ತನಿಖೆಗೆ ಅನುಕೂಲ ಮಾಡಿಕೊಡಬೇಕು
>
> **ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್**, ಸಂಸದ

ಕಾನೂನು ಸಚಿವ ಎಚ್. ಕೆ.ಪಾಟೀಲ ಮಾಧ್ಯಮದವರೊಂದಿಗೆ ಮಾತನಾಡಿ, 'ಮುಡಾ ಹಗರಣದಲ್ಲಿ ₹ 300 ಕೋಟಿ ಆಸ್ತಿ ಜಪ್ತಿ ಮಾಡಿರುವುದಾಗಿ ಇ.ಡಿ. ಪತ್ರಿಕಾ ಪ್ರಕಟಣೆ ನೀಡುವುದು ಅತ್ಯಂತ ಆಶ್ಚರ್ಯಕರ. ಪತ್ರಿಕಾ ಪ್ರಕಟಣೆ ಕೊಡಲು ಇ.ಡಿ.ಗೆ ಯಾರು ಹೇಳಿದ್ದಾರೆ? ನಿಮ್ಮ ಕೆಲಸವನ್ನು ನೀವು ಮಾಡಬೇಕು. ತನಿಖೆ ಮಾಡಿ ಕೋರ್ಟ್‌ಗೆ ಚಾರ್ಜ್‌ಶೀಟ್ ಹಾಕಲಿ. ಅದು ಬಿಟ್ಟು ಪತ್ರಿಕಾ ಪ್ರಕಟಣೆ ಕೊಟ್ಟಿದ್ದು ರಾಜಕೀಯ ದುರುದ್ದೇಶದ ಹೆಜ್ಜೆ. ಬೆಳಗಾವಿಯಲ್ಲಿ ಆಯೋಜಿಸಿರುವ ಗಾಂಧಿ ಭಾರತ ಕಾರ್ಯಕ್ರಮ ಹಾಳುಗೆಡವಲು ಈ ರೀತಿ ಮಾಡಲಾಗಿದೆ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

'ಮಹದಾಯಿ; 2 ತಿಂಗಳೊಳಗೆ ಅನುಮತಿ ನೀಡಿ'

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ಮಹದಾಯಿ ಯೋಜನೆಗೆ ಕೇಂದ್ರ ಸರ್ಕಾರದ ಪರಿಸರ ಮತ್ತು ವನ್ಯಜೀವಿ ಮಂಡಳಿ ಮುಂದಿನ ಎರಡು ತಿಂಗಳ ಒಳಗಾಗಿ ಅನುಮತಿ ನೀಡಬೇಕು. ತಪ್ಪಿದಲ್ಲಿ ಮುಂದಿನ ಕ್ರಮಕ್ಕೆ ಮುಂದಾಗುತ್ತೇವೆ' ಎಂದು ಕಾನೂನು ಸಚಿವ ಎಚ್.ಕೆ.ಪಾಟೀಲ ಎಚ್ಚರಿಕೆ ನೀಡಿದರು.

ನಗರದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಈ ಹಿಂದೆ ನಡೆದ ಸಂಸತ್ ಅಧಿವೇಶನದಲ್ಲಿ ಅರಣ್ಯ ಸಚಿವಾಲಯದಿಂದ ಅನುಮತಿ (ಕ್ಲಿಯರೆನ್ಸ್) ಸಿಗಬಹುದೆಂಬ ಆಶಾವಾದ ನಮ್ಮದು ಆಗಿತ್ತು. ಆದರೆ ಕೇಂದ್ರ ಸರ್ಕಾರ ನಿರಾಶೆ ಮಾಡಿದೆ. ಚುನಾವಣೆಗಳು ಬಂದಾಗ ಪ್ರಧಾನಿ ಸೇರಿ ಕೇಂದ್ರ ಸಚಿವರು, ಸಂಸದರು ಈ ಬಗ್ಗೆ ಮಾತನಾಡುತ್ತಾರೆ. ಅದೇ ಮಹದಾಯಿ ಸಭೆ ವಿಚಾರ ಬಂದಾಗ ಮುಂದಕ್ಕೆ ಹಾಕುವ ಕೆಲಸ ಮಾಡುತ್ತಿದ್ದಾರೆ. ಈ ರೀತಿಯಾಗಿ ಬಿಜೆಪಿ ರಾಜಕಾರಣ ಮಾಡುತ್ತಿದೆ' ಎಂದರು.

ಮೈಸೂರು ವಿಶ್ವವಿದ್ಯಾಲಯದ 105ನೇ ವಾರ್ಷಿಕ ಘಟಿಕೋತ್ಸವದಲ್ಲಿ ಅತಿ ಹೆಚ್ಚು ಚಿನ್ನದ ಪದಕ ಪಡೆದ ಎಂ.ಆರ್. ಭೂಮಿಕಾ (18 ಚಿನ್ನದ ಪದಕ, 4 ನಗದು ಬಹುಮಾನ), ಯು.ಎ. ಕಾವ್ಯಶ್ರೀ (16 ಚಿನ್ನದ ಪದಕ), ಸೀಮಾ ಸಾಂಬಾ ಹೆಗಡೆ (13 ಚಿನ್ನದ ಪದಕ ಮತ್ತು 1 ನಗದು ಬಹುಮಾನ), ಸಿ ಕಾವ್ಯಾ (11 ಪದಕ ಹಾಗೂ 5 ನಗದು ಬಹುಮಾನ) ಹಾಗೂ ವಿವಿನಾ ಸ್ವೀಡಲ್ ಥೋರಸ್ (10 ಚಿನ್ನದ ಪದಕ ಹಾಗೂ 2 ನಗದು ಬಹುಮಾನ) ಸಂಭ್ರಮ (ಎಡ ಚಿತ್ರ). ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ ಘಟಿಕೋತ್ಸವದಲ್ಲಿ ಚಿನ್ನದ ಪದಕ ಪಡೆದವರು (ಎಡದಿಂದ): ವಿ. ವಿಜಯಶ್ರೀ (9 ಪದಕ), ಆರ್. ರೂಪಾ (5 ಪದಕ), ಎಲ್.ಬಿ. ಬಿಂದು (6 ಪದಕ), ಆರ್. ರಂಜಿನಿಶ್ರೀ (6 ಪದಕ), ಟಿ.ಎ. ಕೀರ್ತನಾ (5 ಪದಕ), ಕೆ.ಆರ್. ಅಶ್ವಿನಿ (6 ಪದಕ) ಹಾಗೂ ಬಿ.ಆರ್. ಮನೋಜ್ — ಪ್ರಜಾವಾಣಿ ಚಿತ್ರಗಳು

ಪದವಿ, ಪದಕ: ವಿದ್ಯಾರ್ಥಿನಿಯರೇ ಮುಂದು

ಮೈಸೂರು ವಿಶ್ವವಿದ್ಯಾಲಯ, ಗಂಗೂಬಾಯಿ ಹಾನಗಲ್ ಸಂಗೀತ ವಿಶ್ವವಿದ್ಯಾಲಯ ಘಟಿಕೋತ್ಸವ

ಪ್ರಜಾವಾಣಿ ವಾರ್ತೆ

ಮೈಸೂರು: ಇಲ್ಲಿನ ಮೈಸೂರು ವಿಶ್ವವಿದ್ಯಾಲಯ ಮತ್ತು ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದಲ್ಲಿ ಶನಿವಾರ ಘಟಿಕೋತ್ಸವ ಸಂಭ್ರಮ ಮನೆ ಮಾಡಿತ್ತು. ಎರಡೂ ಕಡೆ ಪದವಿ, ಚಿನ್ನದ ಪದಕ, ನಗದು ಬಹುಮಾನ ಪಡೆಯುವಲ್ಲಿ ವಿದ್ಯಾರ್ಥಿನಿಯರೇ ಮೇಲುಗೈ ಸಾಧಿಸಿದ್ದು ಗಮನ ಸೆಳೆದಿತ್ತು.

ಮೈಸೂರು ವಿಶ್ವವಿದ್ಯಾಲಯದಲ್ಲಿ ಎಂ.ಆರ್. ಭೂಮಿಕಾ ಟಾಪರ್ ಎನಿಸಿ 'ಚಿನ್ನದ ಹುಡುಗಿ'ಯಾಗಿ ಕಂಗೊಳಿಸಿದರು. ಪದವಿ ಗಳಿಸಿದ 31,689 ಮಂದಿ ಪೈಕಿ 20,222 ಮಹಿಳೆಯರು. ಪಿಎಚ್.ಡಿ ಪದವಿ ಪಡೆದ 304 ಮಂದಿಯಲ್ಲಿ 139 ಮಹಿಳೆಯರೇ ಇದ್ದಾರೆ. ಒಟ್ಟು 413 ಚಿನ್ನದ ಪದಕ ಹಾಗೂ 208 ಬಹುಮಾನಗಳನ್ನು 216 ಮಂದಿ ಹಂಚಿಕೊಂಡರು. ಅದರಲ್ಲಿ ಹೆಚ್ಚಿನ 'ಪಾಲು' ತಮ್ಮದಾಗಿಸಿಕೊಂಡವರು 139 ವಿದ್ಯಾರ್ಥಿನಿಯರೇ.

ವಿಶ್ವವಿದ್ಯಾಲಯದ ಕ್ರಾಫರ್ಡ್ ಭವನದಲ್ಲಿ ನಡೆದ 105ನೇ ಘಟಿಕೋತ್ಸವದಲ್ಲಿ ಹೀಗೆ 'ಮಹಿಳಾ ಪ್ರಾಬಲ್ಯ' ಕಂಡುಬಂದಿತು. ಅವರಿಗೆ ಪ್ರಶಂಸೆಯ ಚಪ್ಪಾಳೆಗಳ ಸುರಿಮಳೆಯೂ ಆಯಿತು. 'ಚಿನ್ನ ಎಂದಿಗೂ ಪುರುಷರ ಪಾಲಲ್ಲ ಎಂಬುದನ್ನು ಮಹಿಳೆಯರು ಮತ್ತೊಮ್ಮೆ ಸಾಬೀತುಪಡಿಸಿದ್ದಾರೆ' ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ಶ್ಲಾಘಿಸಿದರು. ಎರಡೂ ವಿಶ್ವವಿದ್ಯಾಲಯಗಳಲ್ಲಿ ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಅನುಪಸ್ಥಿತಿಯಲ್ಲಿ ಸಚಿವರೇ ಪದವಿ ಪ್ರದಾನ ಮಾಡಿದರು.

ಇದೇ ಸಂದರ್ಭದಲ್ಲಿ ರಾಜ್ಯಸಭಾ ಸದಸ್ಯೆ ಸುಧಾ ಮೂರ್ತಿ, ಮಾಜಿ ಸಂಸದ ಎ.ಸಿ. ಷಣ್ಮುಗಂ ಹಾಗೂ ಉದ್ಯಮಿ ಶಾಹೀನ್ ಮಜೀದ್ ಅವರಿಗೆ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಲಾಯಿತು. ನವದೆಹಲಿಯ ಅಖಿಲ ಭಾರತ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಪ್ರೊ.ಟಿ.ಪಿ. ಸಿಂಗ್ ಘಟಿಕೋತ್ಸವ ಭಾಷಣ ಮಾಡಿದರು. ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಜೊತೆಗಿದ್ದರು.

ಸಂಗೀತ ವಿಶ್ವವಿದ್ಯಾಲಯದಲ್ಲಿ 2021–22ನೇ ಸಾಲಿನಲ್ಲಿ ಭರತನಾಟ್ಯ ಕಲಾವಿದ ಸತ್ಯನಾರಾಯಣ ರಾಜು, ವಿದ್ವಾನ್ ಸಿ. ಚೆಲುವರಾಜು, ನಟಿ ಗಿರಿಜಾ ಲೋಕೇಶ್, 2022–23ನೇ ಸಾಲಿನಲ್ಲಿ ಗಮಕ ವಿದ್ವಾನ್ ಎಂ.ಆರ್. ಸತ್ಯನಾರಾಯಣ, ನಟ, ಸಂಗೀತ ನಿರ್ದೇಶಕ ಸಾಧುಕೋಕಿಲ, 2023–24ನೇ ಸಾಲಿನಲ್ಲಿ ವಿದುಷಿ ವೀಣಾ ಮೂರ್ತಿ ವಿಜಯ್, ವಿದುಷಿ ಪುಷ್ಪಾ ಶ್ರೀನಿವಾಸನ್ ಹಾಗೂ ರಂಗಕರ್ಮಿ ಸಿ.ಬಸವಲಿಂಗಯ್ಯ ಅವರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಲಾಯಿತು. ಮತ್ತೊಬ್ಬ ಡಾಕ್ಟರೇಟ್ ಪುರಸ್ಕೃತೆ ಭರತನಾಟ್ಯ ಕಲಾವಿದೆ ಸಂಧ್ಯಾ ಪುರೇಚ ಗೈರಾಗಿದ್ದರು.

ಸಂಗೀತ ವಿ.ವಿ; 3 ಘಟಿಕೋತ್ಸವ ಸಂಭ್ರಮ

ಸಂಗೀತ ವಿಶ್ವವಿದ್ಯಾಲಯದಲ್ಲಿ ಮೂರು ಶೈಕ್ಷಣಿಕ ವರ್ಷಗಳ (2021–2024) ಘಟಿಕೋತ್ಸವಗಳು ಒಟ್ಟಿಗೇ ನಡೆದಿದ್ದು, 27 ವಿದ್ಯಾರ್ಥಿಗಳು 69 ಚಿನ್ನದ ಪದಕಗಳೊಂದಿಗೆ ಸಂಭ್ರಮಿಸಿದರು. 8 ಮಂದಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಲಾಯಿತು. 7,8, ಹಾಗೂ 9ನೇ ಘಟಿಕೋತ್ಸವದಲ್ಲಿ ಒಟ್ಟು 540 ವಿದ್ಯಾರ್ಥಿಗಳು ಪದವಿ ಸ್ವೀಕರಿಸಿದರು.

ಇದೇ ವೇಳೆ 14 ಮಂದಿಗೆ ಡಿ.ಲಿಟ್ ಪದವಿ ಪ್ರದಾನ ಮಾಡಲಾಯಿತು. ನವದೆಹಲಿಯ ಕೇಂದ್ರೀಯ ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಶ್ರೀನಿವಾಸ ವರಖೇಡಿ ಘಟಿಕೋತ್ಸವ ಭಾಷಣ ಮಾಡಿದರು. ಸಂಗೀತ ವಿ.ವಿ. ಕುಲಪತಿ ಪ್ರೊ.ನಾಗೇಶ್ ವಿ.ಬೆಟ್ಟಕೋಟೆ ಜೊತೆಗಿದ್ದರು.

ವಿದೇಶಿ ಶಿಕ್ಷಣ ವ್ಯವಸ್ಥೆ ಅಳವಡಿಕೆ ಎಷ್ಟು ಸರಿ?

'ನಮ್ಮ ದೇಶದ ಶಿಕ್ಷಣದಲ್ಲಿ ವಿದೇಶಗಳ ವ್ಯವಸ್ಥೆಯನ್ನು ಅಳವಡಿಸುವುದು ಎಷ್ಟು ಸರಿ' ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ಕೇಂದ್ರ ಸರ್ಕಾರವನ್ನು ಪ್ರಶ್ನಿಸಿದರು.

ಮೈಸೂರು ವಿಶ್ವವಿದ್ಯಾಲಯದ ಘಟಿಕೋತ್ಸವದಲ್ಲಿ ಮಾತನಾಡಿ, 'ವಿದೇಶದ್ದನ್ನು ಇಲ್ಲಿಗೆ ತಂದು ಹೇರುವುದು ಫ್ಯಾಷನ್ ಆಗಿ ಹೋಗಿದೆ' ಎಂದು ಟೀಕಿಸಿದರು.

'ನಮ್ಮಲ್ಲಿ ಮೂಲಸೌಕರ್ಯಗಳು ಹಾಗೂ ಬೋಧಕರ ಕೊರತೆಯಿಂದ ಅತಿಥಿ ಉಪನ್ಯಾಸಕರನ್ನೇ ನೆಚ್ಚಿಕೊಳ್ಳಬೇಕಾಗಿದೆ. ಈ ಸಮಸ್ಯೆಗಳನ್ನು ಪರಿಹರಿಸದೇ ವಿದೇಶಗಳ ಶಿಕ್ಷಣ ವ್ಯವಸ್ಥೆ ಅಳವಡಿಸಿಕೊಳ್ಳುವುದು ಎಷ್ಟರ ಮಟ್ಟಿಗೆ ಸರಿಯಾಗುತ್ತದೆ ಎಂಬುದನ್ನು ಅವಲೋಕಿಸಬೇಕು' ಎಂದರು.

'ವಿಶ್ವವಿದ್ಯಾಲಯಗಳ ಬೆಳವಣಿಗೆಗೆ ರಾಜ್ಯ ಸರ್ಕಾರದ ಪಾಲೆಷ್ಟು, ಜವಾಬ್ದಾರಿ ಏನಿದೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಹಲವು ವಿಷಯಗಳಲ್ಲಿ ರಾಜ್ಯ ಸರ್ಕಾರದ ಅಧಿಕಾರ ಮೊಟಕುಗೊಳಿಸಲಾಗುತ್ತಿದೆ. ದಿಢೀರನೆ ಬದಲಾವಣೆಗಳನ್ನು ತರುವ ಪ್ರಯತ್ನಗಳು ನಡೆದಿವೆ. ಅವುಗಳಿಗೆ ರಾಜ್ಯ ಸರ್ಕಾರವೇ ಉತ್ತರ ಕೊಡಬೇಕಾದ ಪರಿಸ್ಥಿತಿ ಇದೆ' ಎಂದರು.

ರಾಮಚಂದ್ರಪ್ಪಗೆ ಜಾಮೀನು ಮತ್ತೆ ಬಂಧನ

ಮಧುಗಿರಿ (ತುಮಕೂರು): ದೂರು ನೀಡಲು ಕಚೇರಿಗೆ ಬಂದಿದ್ದ ಮಹಿಳೆ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದ ಆರೋಪದಡಿ ಅಮಾನತುಗೊಂಡು ಜೈಲು ಸೇರಿದ್ದ ಡಿವೈಎಸ್‌ಪಿ ಎ.ರಾಮಚಂದ್ರಪ್ಪ, ಸೆಷನ್ಸ್ ನ್ಯಾಯಾಲಯದಿಂದ ಜಾಮೀನು ಪಡೆದು ಶನಿವಾರ ಹೊರಬರುತ್ತಲೇ ಮತ್ತೊಂದು ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ ಬಂಧನಕ್ಕೊಳಗಾದರು.

ರಾಮಚಂದ್ರಪ್ಪ

ರಾಮಚಂದ್ರಪ್ಪ ತನ್ನ ಮೇಲೂ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ ಎಂದು ಮತ್ತೊಬ್ಬ ಮಹಿಳೆ ದೂರು ನೀಡಿದ್ದರು. ಆ ಪ್ರಕರಣದಲ್ಲಿ ರಾಮಚಂದ್ರಪ್ಪ ಅವರನ್ನು ಮಧುಗಿರಿ ಪೊಲೀಸರು ಬಂಧಿಸಿ, ತುಮಕೂರು ನ್ಯಾಯಾಲಯಕ್ಕೆ ಹಾಜರು ಪಡಿಸಿದರು. ಅವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

₹2ಲಕ್ಷ ಮೌಲ್ಯದ ಶ್ಯೂರಿಟಿ ಬಾಂಡ್ ಮತ್ತು ಇತರ ಷರತ್ತುಗಳ ಮೇಲೆ ನ್ಯಾಯಾಧೀಶ ಕೆ.ಯಾದವ್ ಗುರುವಾರ ಜಾಮೀನು ಮಂಜೂರು ಮಾಡಿದ್ದರು.

ಆದರೆ, ಷರತ್ತು ಪೂರೈಸಲು ರಾಮಚಂದ್ರಪ್ಪ ವಿಫಲರಾಗಿದ್ದರಿಂದ ಶುಕ್ರವಾರವೂ ಜೈಲಿನಲ್ಲಿ ಕಳೆದರು.

ಮಧುಗಿರಿ ನ್ಯಾಯಾಲಯಕ್ಕೆ ಶನಿವಾರ ಶ್ಯೂರಿಟಿ ಬಾಂಡ್, ಇಬ್ಬರ ಜಾಮೀನು ನೀಡಿ ಹೊರಬಂದ ಅವರನ್ನು ತಕ್ಷಣ ಮಧುಗಿರಿ ಪೊಲೀಸರು ಬಂಧಿಸಿದರು.

ಎಸ್‌ಎಸ್‌ಎಲ್‌ಸಿ: ಕೌಶಲ ವಿಷಯ • ಅನುತ್ತೀರ್ಣರಾದರೆ 1 ವರ್ಷ ವ್ಯರ್ಥ!

ಪ್ರಾಯೋಗಿಕ ಪರೀಕ್ಷೆಗಿಲ್ಲ 3 ಅವಕಾಶ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಎಸ್‌ಎಲ್‌ಎಲ್‌ಸಿಗೆ ಮೂರು ವಾರ್ಷಿಕ ಪರೀಕ್ಷೆ ಬರೆಯಲು ಅವಕಾಶ ಇದ್ದರೂ, ಪ್ರೌಢಶಾಲೆಗಳಲ್ಲಿ ಕೌಶಲ ವಿಷಯ ಆಯ್ಕೆಮಾಡಿಕೊಂಡ ವಿದ್ಯಾರ್ಥಿಗಳು ಪ್ರಾಯೋಗಿಕ ಪರೀಕ್ಷೆಯಲ್ಲಿ ಉತ್ತೀರ್ಣರಾದರೆ ಒಂದು ವರ್ಷ ಮನೆಯಲ್ಲೇ ಕುಳಿತುಕೊಳ್ಳಬೇಕು.

ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗೆ ಪ್ರೇರೇಪಿಸಲು, ಉದ್ಯೋಗಕ್ಕೆ ಅಗತ್ಯ ಕೌಶಲ, ಸಾಮರ್ಥ್ಯವನ್ನು ವೃದ್ಧಿಸಲು, ಸಾಮಾನ್ಯ ಶಿಕ್ಷಣದಲ್ಲಿ ವೃತ್ತಿ ಶಿಕ್ಷಣದ ವಿಷಯಗಳನ್ನು ವಿದ್ಯಾರ್ಥಿಗಳ ಆಸಕ್ತಿ ಆಧರಿಸಿ ಕಲಿಸಲು ರಾಷ್ಟ್ರೀಯ ವೃತ್ತಿಶಿಕ್ಷಣ ಚೌಕಟ್ಟಿನಡಿ (ಎನ್‌ಎಸ್‌ಕ್ಯೂಎಫ್) ಕೌಶಲ ವಿಷಯಗಳನ್ನು ಪ್ರೌಢಶಿಕ್ಷಣದಲ್ಲೇ ಪರಿಚಯಿಸಲಾಗಿದೆ.

ಸಮಗ್ರ ಶಿಕ್ಷಣ ಕರ್ನಾಟಕದ ಮೂಲಕ ರಾಜ್ಯದಲ್ಲೂ 2023–24ನೇ ಸಾಲಿನಿಂದ ವೃತ್ತಿ ಕೌಶಲ ವಿಷಯಗಳನ್ನು ಪರಿಚಯಿಸಲಾಗಿದೆ. 9 ಹಾಗೂ 10ನೇ ತರಗತಿ ವಿದ್ಯಾರ್ಥಿಗಳು ತೃತೀಯ ಭಾಷೆ ಬದಲಿಗೆ ಮಾಹಿತಿ ತಂತ್ರಜ್ಞಾನ, ರೀಟೇಲ್, ಬ್ಯೂಟಿ, ವೆಲ್‌ನೆಸ್, ಎಲೆಕ್ಟ್ರಾನಿಕ್ಸ್ ಮತ್ತು ಹಾರ್ಡ್‌ವೇರ್, ಹೋಂ ಫರ್ನಿಷಿಂಗ್ ಕೋರ್ಸ್‌ಗಳಲ್ಲಿ ಒಂದನ್ನು ತೆಗೆದುಕೊಳ್ಳಬಹುದಾಗಿದೆ.

ಜಂಟಿ ಪ್ರಮಾಣಪತ್ರ ಪತ್ರ: ಆಯ್ಕೆ ಮಾಡಿಕೊಂಡ ವಿದ್ಯಾರ್ಥಿಗಳಿಗೆ ನಡೆಸುವ 100 ಅಂಕದ ಪರೀಕ್ಷೆಯಲ್ಲಿ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ ತಾತ್ವಿಕ (ಥಿಯರಿ) ಹಾಗೂ ಆಂತರಿಕ ಮೌಲ್ಯಮಾಪನ ಒಳಗೊಂಡ 50 ಅಂಕಗಳ ಪರೀಕ್ಷೆಯನ್ನು ಹಾಗೂ ವಲಯ ಕೌಶಲಾಭಿವೃದ್ಧಿ ಮಂಡಳಿ 50 ಅಂಕಗಳ ಪ್ರಾಯೋಗಿಕ ಪರೀಕ್ಷೆ ನಡೆಸಲಿದೆ. ಎರಡೂ ಪರೀಕ್ಷೆಗಳಲ್ಲಿ ತೇರ್ಗಡೆಯಾದವರಿಗೆ ಎರಡೂ ಮಂಡಳಿಗಳು ಜಂಟಿ ಪ್ರಮಾಣಪತ್ರ ನೀಡುತ್ತವೆ.

ಮುಖ್ಯಶಿಕ್ಷಕರೇ ಹೊಣೆ: ಉನ್ನತ ವ್ಯಾಸಂಗಕ್ಕೆ ವೃತ್ತಿ ಕೌಶಲ ಕೋರ್ಸ್ ತೇರ್ಗಡೆಯಾದ ಜಂಟಿ ಪ್ರಮಾಣಪತ್ರ ಪಡೆಯುವುದು ಕಡ್ಡಾಯವಾಗಿದೆ. ವಿದ್ಯಾರ್ಥಿ ತಾತ್ವಿಕ ಪರೀಕ್ಷೆಯಲ್ಲಿ ಅನುತ್ತೀರ್ಣರಾದರೆ ಅದೇ ವರ್ಷ ಪರೀಕ್ಷೆ–2 ಪರೀಕ್ಷೆ–3 ಬರೆಯಲು ಅವಕಾಶ ಇರುತ್ತದೆ. ಆದರೆ, ಪ್ರಾಯೋಗಿಕ ಪರೀಕ್ಷೆಯಲ್ಲಿ ಅನುತ್ತೀರ್ಣರಾದರೆ ಅಂತಹ ಅವಕಾಶ ಇಲ್ಲ. ಒಂದು ವರ್ಷ ಕಾಯುವುದು ಅನಿವಾರ್ಯ. ಇದು ಜಂಟಿ ಪ್ರಮಾಣಪತ್ರ ವಿತರಣೆಗೂ ತೊಡಕಾಗುತ್ತದೆ. ಹಾಗಾಗಿ, ಯಾವ ವಿದ್ಯಾರ್ಥಿಯೂ ಆಯಾ ಶೈಕ್ಷಣಿಕ ವರ್ಷದಲ್ಲಿ ಪ್ರಾಯೋಗಿಕ ಪರೀಕ್ಷೆಗೆ ಗೈರು ಹಾಜರಾಗದಂತೆ ನೋಡಿಕೊಳ್ಳುವ ಹೊಣೆಗಾರಿಕೆಯನ್ನು ಮುಖ್ಯ ಶಿಕ್ಷಕರು ನಿಭಾಯಿಸಬೇಕಿದೆ. ತಪ್ಪಿದರೆ ಅವರನ್ನೇ ಹೊಣೆ ಮಾಡಲಾಗುವುದು ಎಂದು ಪರೀಕ್ಷಾ ಮಂಡಳಿ ಸುತ್ತೋಲೆ ಹೊರಡಿಸಿದೆ.

295 ಕೌಶಲ ವಿಷಯ ಅಳವಡಿಸಿಕೊಂಡ ಪ್ರೌಢಶಾಲೆಗಳು

25 ಒಂದು ವಿಷಯಕ್ಕೆ ದಾಖಲಿಸುವ ಕನಿಷ್ಠ ವಿದ್ಯಾರ್ಥಿಗಳು

100 ಕೌಶಲ ವಿಷಯ ಪರೀಕ್ಷೆಯ ಗರಿಷ್ಠ ಅಂಕ

ಒಂದೇ ವಿಷಯ ಪ್ರತ್ಯೇಕ

ವೃತ್ತಿ ಕೌಶಲದ ವಿಷಯಗಳನ್ನು ಆಯ್ಕೆ ಮಾಡಿಕೊಂಡ ವಿದ್ಯಾರ್ಥಿಗಳು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಇತರ ವಿದ್ಯಾರ್ಥಿಗಳಂತೆ ಪ್ರಥಮ, ದ್ವಿತೀಯ ಭಾಷೆ, ಗಣಿತ, ಸಮಾಜ ವಿಜ್ಞಾನ ಹಾಗೂ ವಿಜ್ಞಾನದ ಐದು ವಿಷಯಗಳನ್ನು ಬರೆಯಲಿದ್ದಾರೆ.

ತೃತೀಯ ಭಾಷೆ ಬದಲಿಗೆ ಆಯ್ಕೆ ಮಾಡಿಕೊಂಡ ವೃತ್ತಿ ಕೌಶಲ ವಿಷಯದ ಪರೀಕ್ಷೆಯನ್ನು 100 ಅಂಕಗಳಿಗೆ ಬರೆಯಬೇಕಿದೆ. ಈ ಪರೀಕ್ಷೆಯು ತಾತ್ವಿಕ (ಥಿಯರಿ)–30, ಆಂತರಿಕ ಮೌಲ್ಯಮಾಪಕ–20 ಹಾಗೂ 50 ಅಂಕಗಳ ಪ್ರಾಯೋಗಿಕ ಪರೀಕ್ಷೆ ಒಳಗೊಂಡಿರುತ್ತದೆ. ತಾತ್ವಿಕ ಪರೀಕ್ಷೆಯಲ್ಲಿ ಅನುತ್ತೀರ್ಣರಾದರೆ ಅಥವಾ ಕಡಿಮೆ ಅಂಕಗಳು ಬಂದರೆ ಉಳಿದ ಎರಡು ಪರೀಕ್ಷೆ ಬರೆಯಬಹುದು. ಪ್ರಾಯೋಗಿಕ ಪರೀಕ್ಷೆಯಲ್ಲಿ ಅನುತ್ತೀರ್ಣರಾದರೆ ಪೂರಕ ಪರೀಕ್ಷೆಗೆ ಅವಕಾಶ ಇಲ್ಲ. ಅವರು ಮುಂದಿನ ಶೈಕ್ಷಣಿಕ ವರ್ಷದ ಕೊನೆಯಲ್ಲಿ ನಡೆಯುವ ಪ್ರಾಯೋಗಿಕ ಪರೀಕ್ಷೆಗೆ ಹಾಜರಾಗಿ, ಫಲಿತಾಂಶ ಪಡೆಯಬೇಕು.

> ಪ್ರಾಯೋಗಿಕ ಪರೀಕ್ಷೆಯಲ್ಲಿ ಅನುತ್ತೀರ್ಣರಾದ, ಹಾಜರಾಗಲು ಸಾಧ್ಯವಾದ ವಿದ್ಯಾರ್ಥಿಗಳಿಗೆ ಅದೇ ವರ್ಷ ಮತ್ತೊಂದು ಅವಕಾಶ ನೀಡಬೇಕು. ವಲಯ ಕೌಶಲಾಭಿವೃದ್ಧಿ ಮಂಡಳಿಗೆ ಸೂಚನೆ ನೀಡಬೇಕು
>
> **ಬಿ. ಸಿದ್ದಬಸಪ್ಪ,** ಅಧ್ಯಕ್ಷ, ಕರ್ನಾಟಕ ರಾಜ್ಯ ಪ್ರೌಢಶಾಲಾ ಸಹಶಿಕ್ಷಕರ ಸಂಘ

> ಪ್ರಾಯೋಗಿಕ ಪರೀಕ್ಷೆಯನ್ನು ವಲಯ ಕೌಶಲಾಭಿವೃದ್ಧಿ ಮಂಡಳಿ ನಡೆಸುತ್ತದೆ. ಅನುತ್ತೀರ್ಣರಾದ ವಿದ್ಯಾರ್ಥಿಗಳು ಪ್ರತಿ ಮಾರ್ಚ್‌ನಲ್ಲಿ ನಡೆಯುವ ಮುಖ್ಯ ಪರೀಕ್ಷೆಗೆ ಪುನರಾವರ್ತಿತ ಅಭ್ಯರ್ಥಿಯಾಗಿ ಹಾಜರಾಗಬಹುದು
>
> **ಎಚ್.ಎನ್. ಗೋಪಾಲಕೃಷ್ಣ**, ನಿರ್ದೇಶಕರು, ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಪರೀಕ್ಷಾ ಮಂಡಳಿ

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ
ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ ಕಲಬುರಗಿ

ಸಂಖ್ಯೆ: ಕಾನಿಅ/ಪಂರಾಇಂ/ವಿಕ/ತಾಶಾ5/ಟೆಂಡರ/2024–25/3723 ದಿನಾಂಕ : 17/01/2025

ಇ–ಪ್ರೊಕ್ಯೂರಮೆಂಟ್ ಅಲ್ಪಾವಧಿ ಟೆಂಡರ ಪ್ರಕಟಣೆ –2ನೇ ಕರೆ ದ್ವಿ–ಲಕೋಟೆ ಪದ್ಧತಿಯಲ್ಲಿ

1) ಕಾಮಗಾರಿಗಳ ಇಂಡೆಂಟ್ ಸಂಖ್ಯೆ: ಜೇವರ್ಗಿ ತಾಲೂಕಿನ ದೇಸಣಗಿ ಗ್ರಾಮದಿಂದ ಮೋರಟಗಿ ಗ್ರಾಮದವರೆಗೆ ರಸ್ತೆ ನಿರ್ಮಾಣ ಕಾಮಗಾರಿಯ ಇಂಡೆಂಟ್ ಸಂಖ್ಯೆ: **6137/2ನೇ ಕರೆ**, 2) ಲೆಕ್ಕ ಶೀರ್ಷಿಕೆ : 2022–23ನೇ ಸಾಲಿನ 5054 ವಿಶೇಷ ಅನುದಾನ, 3) ಟೆಂಡರಿಗಿಟ್ಟ ಅಂದಾಜು ಮೊತ್ತ: **ಇಂಟೆಂಟ್ ಸಂಖ್ಯೆ: 6137/2ನೇ ಕರೆ : ರೂ. 1,31,94,786.27,** 4) ಗುತ್ತಿಗೆದಾರರ ಅರ್ಹತೆ: 3ನೇ ದರ್ಜೆ ಮತ್ತು ಮೇಲ್ಪಟ್ಟು, 5) ಟೆಂಡರ ಫಾರಂ ಪಡೆಯುವ ದಿನಾಂಕ: **17–01–2025 ರಿಂದ 29–01–2025 ಸಾಯಂಕಾಲ 4:00 ಗಂಟೆವರೆಗೆ,** 6) ಟೆಂಡರ ಅರ್ಜಿ ಬೆಲೆ: ಇ–ಪ್ರೊಕ್ಯೂರಮೆಂಟ್ ನಿಯಮಾನುಸಾರ, 7) ಇ.ಎಂ.ಡಿ. : ಇಂಡೆಂಟ್ ಸಂಖ್ಯೆ: 6137/2ನೇ ಕರೆ : ರೂ. 2,00,000.00, 8) ಟೆಂಡರ ಸಲ್ಲಿಸುವ ದಿನಾಂಕ: **17–01–2025 ರಿಂದ 29–01–2025 ಸಾಯಂಕಾಲ 4:00 ಗಂಟೆವರೆಗೆ,** 9) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **30–01–2025 ಸಾಯಂಕಾಲ 4:00 ಗಂಟೆ ನಂತರ,** 10) ಆರ್ಥಿಕ ಬಿಡ್ ತೆರೆಯುವ ದಿನಾಂಕ: **31–01–2025 ಬೆಳಿಗ್ಗೆ 11:00 ಗಂಟೆ ನಂತರ,** 11) ಕೆಲಸ ಮುಗಿಸಲು ಕಾಲಮಿತಿ : 6 ತಿಂಗಳು ಮಳೆಗಾಲ ಸಹಿತ, 12) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ: ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ, ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ ಕರ್ನಾಟಕ ಗ್ರಾಮೀಣ ಬ್ಯಾಂಕ ಎದುರಿಗೆ ಕುಸನೂರ ರಸ್ತೆ ರಾಜಾಪೂರ ಕಲಬುರಗಿ, 12) ಅಂತರಜಾಲ ತಾಣದ ವಿಳಾಸ: www.kppp.karnataka.gov.in

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು
ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ ಕಲಬುರಗಿ

ವಾ.ಸಾ.ಸಂ.ಇ/ಕಲಬುರಗಿ/856/ಕೆ.ಎಸ್.ಎಂ.ಸಿ.&ಎ/2024–25

ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ
ಕಾರ್ಯನಿರ್ವಾಹಕ ಅಭಿಯಂತರರ ಕಚೇರಿ (ಘವನಿ), ಹುಬ್ಬಳ್ಳಿ–580029

ಅಲ್ಪಾವದಿ ಟೆಂಡರ್ ಪ್ರಕಟಣೆ
(ಕೆ.ಪಿ.ಪಿ ಪೋರ್ಟಲ್ ಮೂಲಕ ಮಾತ್ರ)

ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯು ಈ ಕೆಳಕಂಡ ಕಾಮಗಾರಿಗಳಿಗಾಗಿ ನೋಂದಾಯಿತ ಅರ್ಹ ಏಜೆನ್ಸಿಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಕ್ರ. ಸಂ	ಟೆಂಡರ ಇಂಡೆಂಟ ಸಂಖ್ಯೆ	ಟೆಂಡರ್‌ಗಿಟ್ಟ ಮೊತ್ತ (ರೂ.ಗಳಲ್ಲಿ)	ಇಎಂಡಿ ಮೊತ್ತ (ರೂ.ಗಳಲ್ಲಿ)	ಟೆಂಡರ್ ಪೂರ್ವಭಾವಿ ಸಭೆ ದಿನಾಂಕ ಮತ್ತು ಸಮಯ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ
1	DMA/2024-25/ IND4130	1,05,90,475.00	1,58,857.00	23–01–2025 ಸಮಯ ಬೆಳಿಗ್ಗೆ 10:30 ಗಂಟೆ	28–01–2025 ಸಮಯ ಸಂಜೆ 4:00 ಘಂಟೆ	30–01–2025 ಸಮಯ ಮುಂಜಾನೆ 10.30 ಘಂಟೆ
2	DMA/2024-25/ IND4132	95,81,250.00	1,91,625.00	–		
3	DMA/2024-25/ IND4131	1,21,36,250.00	1,82,043.00	23.01.2025 ಸಮಯ ಬೆಳಿಗ್ಗೆ 10:30 ಗಂಟೆ		

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಯನ್ನು ದಿನಾಂಕ: **20–01–2025** ರಿಂದ www.kppp.karnataka.gov.in ಗೆ ಲಾಗಿನ್ ಆಗಿ ಪಡೆಯಬಹುದು, ಹೆಚ್ಚಿನ ವಿವರಗಳಿಗೆ ಕೆಳ ಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

ದಿನಾಂಕ: 18–01–2024
ವಾ.ಸಾ.ಇ/870/ದೇಶಪಾಂಡೆಪಬ್ಲಿಸಿಟಿ/2024–25

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ಘವನಿ)
ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ ಹುಬ್ಬಳ್ಳಿ

ಕರ್ನಾಟಕ ಗೃಹ ಮಂಡಳಿ
Karnataka Housing Board — Building Communities
ಗೃಹ ಆಯುಕ್ತರವರ ಕಛೇರಿ, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು–560 009.

ಸಂಖ್ಯೆ: ಕಗೃಮಂ/ಕಾ/ಹಂಚಿಕೆ/ಲಾಟರಿ/2024–25 ದಿನಾಂಕ: 18–01–2025

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ಗೃಹ ಮಂಡಳಿ ವತಿಯಿಂದ ಬೆಂಗಳೂರು ದಕ್ಷಿಣ ತಾಲ್ಲೂಕು, ಚುಂಚುನಕುಪ್ಪೆ, ಬ್ಯಾಲಾಳು ದೋಣೇನಹಳ್ಳಿ ಬಡಾವಣೆಯಲ್ಲಿ ಅಭಿವೃದ್ಧಿಪಡಿಸಿರುವ ನಿವೇಶನಗಳನ್ನು ಹಂಚಿಕೆ ಮಾಡುವ ಸಂಬಂಧ, ದಿನಾಂಕ: 01–10–2024 ರಂದು ಇ–ಲಾಟರಿ ಮೂಲಕ ಹಂಚಿಕೆ ಮಾಡಲು ದಿನಾಂಕ: 06–09–2024 ರಂದು ಪ್ರಜಾವಾಣಿ ಮತ್ತು ವಿಜಯ ಕರ್ನಾಟಕ ದಿನಪತ್ರಿಕೆಗಳಲ್ಲಿ ಪ್ರಕಟಣೆ ನೀಡಲಾಗಿತ್ತು. ದಿನಾಂಕ: 01–10–2024 ರಂದು ನಡೆಯಬೇಕಿದ್ದ EWS ವರ್ಗದ ನಿವೇಶನಗಳ ಹಂಚಿಕೆಯನ್ನು ಕಾರಣಾಂತರಗಳಿಂದ ಮುಂದೂಡಲಾಗಿದ್ದು, EWS ವರ್ಗದ ನಿವೇಶನಗಳ ಇ–ಲಾಟರಿ ದಿನಾಂಕವನ್ನು ನಂತರದಲ್ಲಿ ತಿಳಿಸಲಾಗುವುದು ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿತ್ತು.

EWS ವರ್ಗದಲ್ಲಿ ನಿಗಧಿತ ಆರಂಭಿಕ ಠೇವಣಿ ಮೊತ್ತದೊಂದಿಗೆ ಅರ್ಜಿ ಸಲ್ಲಿಸಿದ ಅರ್ಜಿದಾರರಿಗೆ ಕರ್ನಾಟಕ ಗೃಹ ಮಂಡಳಿ ಹಂಚಿಕೆ ನಿಯಮಾವಳಿ 1983ರ ನಿಯಮ 9ರ ಅನ್ವಯ ಪ್ರವರ್ಗವಾರು ಮೀಸಲಾತಿಯಡಿಯಲ್ಲಿ ಲಾಟರಿ ಮುಖಾಂತರ ಹಂಚಿಕೆ ಮಾಡಲು ತಾತ್ಕಾಲಿಕ & ಅಂತಿಮ ಅರ್ಹ/ಅನರ್ಹ ಅರ್ಜಿದಾರರ ಪಟ್ಟಿಯನ್ನು ಪ್ರಕಟಿಸಿ ಇ–ಲಾಟರಿ ಮೂಲಕ ಹಂಚಿಕೆ ಮಾಡಲು ಈ ಕೆಳಕಂಡಂತೆ ವೇಳಾಪಟ್ಟಿಯನ್ನು ನಿಗಧಿಪಡಿಸಲಾಗಿದೆ.

ಲಾಟರಿ ಮಾಡುವ ಸ್ಥಳ: ಕರ್ನಾಟಕ ಗೃಹ ಮಂಡಳಿ ಆವರಣ, ಕೇಂದ್ರ ಕಛೇರಿ, ಕಾವೇರಿ ಭವನ, ಕೆ. ಜಿ. ರಸ್ತೆ, ಬೆಂಗಳೂರು.

ಕ್ರ. ಸಂ.	ಬಡಾವಣೆ	ಅರ್ಹ & ಅನರ್ಹ ಅರ್ಜಿದಾರರ ತಾತ್ಕಾಲಿಕ ಪಟ್ಟಿ ಪ್ರಕಟಣೆ ದಿನಾಂಕ	ಆಕ್ಷೇಪಣೆ ಸಲ್ಲಿಸಲು ಕೊನೆಯ ದಿನಾಂಕ	ಅರ್ಹ & ಅನರ್ಹ ಅರ್ಜಿದಾರರ ಅಂತಿಮ ಪಟ್ಟಿ ಪ್ರಕಟಣೆ ದಿನಾಂಕ	ಲಾಟರಿ ದಿನಾಂಕ ಮತ್ತು ಸಮಯ
1	ಬೆಂಗಳೂರು ದಕ್ಷಿಣ ತಾ॥ ಚುಂಚುನಕುಪ್ಪೆ, ಬ್ಯಾಲಾಳು ದೋಣೇನಹಳ್ಳಿ.	22-01-2025	28-01-2025	31-01-2025	04-02-2025 ಬೆಳಗ್ಗೆ 11.30 ಗಂಟೆಗೆ

ಮಂಡಳಿ ಪ್ರಸ್ತುತ ದರ (ಪ್ರತಿ ಚದರಡಿಗೆ): EWS Rs.875/-

ವಿಶೇಷ ಸೂಚನೆ: ಅರ್ಜಿದಾರರ ತಾತ್ಕಾಲಿಕ ಮತ್ತು ಅಂತಿಮ ಅರ್ಹ/ಅನರ್ಹ ಅರ್ಜಿಗಳ ವಿವರಗಳನ್ನು ಮಂಡಳಿಯ ವೆಬ್‌ಸೈಟ್, ಕೇಂದ್ರ ಕಛೇರಿಯ ಸೂಚನಾಫಲಕದಲ್ಲಿ ಹಾಗೂ ಆಯಾ ಜಿಲ್ಲಾ ಯೋಜನಾ ಕಛೇರಿಯಲ್ಲಿ ಮೇಲೆ ತಿಳಿಸಿರುವ ಆಯಾ ದಿನಾಂಕಗಳಂದು ಪ್ರಕಟಿಸಲಾಗುವುದು. ಅನರ್ಹ ಅರ್ಜಿದಾರರು ಆಕ್ಷೇಪಣೆ ಸಲ್ಲಿಸಲು ತಿಳಿಸಿರುವ ಕೊನೆಯ ದಿನಾಂಕದೊಳಗೆ ಮಾಹಿತಿ/ದಾಖಲೆಯನ್ನು ಸಂಬಂಧಿಸಿದ ಜಿಲ್ಲಾ ಯೋಜನಾ ಕಛೇರಿಗಳಲ್ಲಿ ಅಥವಾ ಕೇಂದ್ರ ಕಛೇರಿ, ಹಂಚಿಕೆ ಶಾಖೆ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು ಇಲ್ಲಿ ಸಲ್ಲಿಸಲು ಕೋರಲಾಗಿದೆ. ಇಲ್ಲವಾದಲ್ಲಿ ತಮ್ಮ ಅರ್ಜಿಗಳನ್ನು ಲಾಟರಿ ಅಂತಿಮ ಅರ್ಹ ಅರ್ಜಿದಾರರ ಪಟ್ಟಿಗೆ ಪರಿಗಣಿಸಲಾಗುವುದಿಲ್ಲ.

ಹೆಚ್ಚಿನ ಮಾಹಿತಿಗಾಗಿ **ಸಹಾಯಕ ಕಾರ್ಯಪಾಲಕ ಅಭಿಯಂತರರು, ಕಗೃಮಂ, ಬೆಂಗಳೂರು ನಗರ ಜಿಲ್ಲಾ ಯೋಜನಾ ಕಛೇರಿ, ಮೊಬೈಲ್ ನಂ.9845600099 ಹಾಗೂ ಸಹಾಯಕ ಕಂದಾಯ ಅಧಿಕಾರಿ, ಹಂಚಿಕೆ ಶಾಖೆ, ಕರ್ನಾಟಕ ಗೃಹ ಮಂಡಳಿ, 4ನೇ ಮಹಡಿ, ಕಾವೇರಿ ಭವನ, ಬೆಂಗಳೂರು ಇವರನ್ನು ಖುದ್ದಾಗಿ ಅಥವಾ ಮೊಬೈಲ್ ನಂ.9164839817, ದೂರವಾಣಿ ಸಂಖ್ಯೆ: 080–22273511 ವಿಸ್ತರಣೆ: 307/309** ರಲ್ಲಿ ಸಂಪರ್ಕಿಸಬಹುದು ಹಾಗೂ ವೆಬ್‌ಸೈಟ್: **www.khb.karnataka.gov.in** ಯಿಂದ ಮಾಹಿತಿ ಪಡೆಯಬಹುದು.

ಸಹಿ/– ಗೃಹ ಆಯುಕ್ತರು,
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು.

DIPR/CP/RO4412/AAPL/2024-25

ಕೇಂದ್ರ ಸರ್ಕಾರ ತೀರ್ಮಾನ: ಎಚ್‌.ಡಿ.ಕುಮಾರಸ್ವಾಮಿ

ಉಕ್ಕು ಕಾರ್ಖಾನೆ ಪುನಶ್ಚೇತನಕ್ಕೆ ಪ್ಯಾಕೇಜ್

ಪ್ರಜಾವಾಣಿ ವಾರ್ತೆ

ನವದೆಹಲಿ: ತೀವ್ರ ಆರ್ಥಿಕ ನಷ್ಟಕ್ಕೆ ಸಿಲುಕಿ ಖಾಸಗೀಕರಣದ ಹೊಸ್ತಿಲಲ್ಲಿದ್ದ ಆಂಧ್ರಪ್ರದೇಶದ ವಿಶಾಖಪಟ್ಟಣದ ರಾಷ್ಟ್ರೀಯ ಉಕ್ಕು ಕಾರ್ಖಾನೆಯನ್ನು ₹11,440 ಕೋಟಿ ವೆಚ್ಚದಲ್ಲಿ ಪುನಶ್ಚೇತನಗೊಳಿಸಲಾಗುವುದು ಎಂದು ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕೆ ಸಚಿವ ಎಚ್‌.ಡಿ. ಕುಮಾರಸ್ವಾಮಿ ತಿಳಿಸಿದರು.

ಇಲ್ಲಿನ ಉಕ್ಕು ಸಚಿವಾಲಯದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಖಾನೆಯ ಪುನಶ್ಚೇತನದ ಪ್ಯಾಕೇಜ್ ಅನ್ನು ಘೋಷಣೆ ಮಾಡಿದರು.

ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಗುರುವಾರ ನಡೆದ ಆರ್ಥಿಕ ವ್ಯವಹಾರಗಳ ಸಂಪುಟ ಸಮಿತಿ ಸಭೆಯಲ್ಲಿ ವೈಜಾಗ್ ಸ್ಟೀಲ್ ಪುನಶ್ಚೇತನ ಪ್ಯಾಕೇಜ್‌ಗೆ ಅನುಮೋದನೆ ನೀಡಲಾಗಿದೆ ಎಂದು ಹೇಳಿದರು.

ಕಾರ್ಖಾನೆಯ ಪುನಶ್ಚೇತನ ಪ್ಯಾಕೇಜ್‌ನ ಪೂರ್ಣ ವಿವರಗಳನ್ನು ಶೀಘ್ರದಲ್ಲಿಯೇ ಪ್ರಕಟಿಸಲಾಗುವುದು. ಕೆಲವೇ ತಿಂಗಳಲ್ಲಿ ಇಡೀ ಕಾರ್ಖಾನೆ ಪೂರ್ಣ ಪ್ರಮಾಣದಲ್ಲಿ ಉಕ್ಕು ಉತ್ಪಾದನೆಗೆ ಅಗತ್ಯವಾದ ಎಲ್ಲಾ ವ್ಯವಸ್ಥೆ ಮಾಡುತ್ತೇವೆ ಎಂದು ತಿಳಿಸಿದರು.

ಅಲ್ಲದೆ, ಕಾರ್ಖಾನೆ ಹೊಂದಿರುವ ಸಾಲವನ್ನು ಗಮನದಲ್ಲಿಟ್ಟುಕೊಂಡು ಉತ್ಪಾದನೆಯ ದಕ್ಷತೆ, ಕ್ಷಮತೆಯನ್ನು ಹೆಚ್ಚಿಸುತ್ತೇವೆ. ವಾರ್ಷಿಕ 7.3 ದಶಲಕ್ಷ ಟನ್ ಉಕ್ಕು ಉತ್ಪಾದನೆಯ ಗುರಿ ಮುಟ್ಟಲು ಎಲ್ಲಾ ಕ್ರಮಗಳನ್ನು ಕೈಗೊಳ್ಳುತ್ತೇವೆ ಎಂದು ಕುಮಾರಸ್ವಾಮಿ ಹೇಳಿದರು.

ಈ ಪ್ಯಾಕೇಜ್‌ನಲ್ಲಿ ₹10,300 ಕೋಟಿ ಹೂಡಿಕೆ ಮಾಡಲಾಗುವುದು. ₹1,140 ಕೋಟಿಯನ್ನು ಷೇರು ರೂಪದಲ್ಲಿ ನಿರ್ವಹಣಾ ಬಂಡವಾಳವಾಗಿ ತೊಡಗಿಸಲಾಗುವುದು. ಈ ಷೇರು ಹಣವನ್ನು ಹತ್ತು ವರ್ಷಗಳವರೆಗೂ ವಾಪಸ್ ಪಡೆಯಲು ಅವಕಾಶ ಇರುವುದಿಲ್ಲ ಎಂದು ಹೇಳಿದರು.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

ಮೊದಲನೇ ವರ್ಷದ ಪುಣ್ಯಸ್ಮರಣೆ
ಪೂಜ್ಯ ನೀಲಮ್ಮನವರು
ದಿನಾಂಕ: 19.1.2025
ನಮ್ಮೆಲ್ಲರ ಬದುಕು ರೂಪಿಸಿ, ನಿಮ್ಮ ಸರಳ ನಿಷ್ಕಲ್ಮಷ ಜೀವನವೇ ನಮಗೆ ಆದರ್ಶದ ದಾರಿದೀಪ, ನಿಮ್ಮ ಪವಿತ್ರ ದಿವ್ಯಾತ್ಮವು ಭಗವಂತನ ಪದತಳದಲ್ಲಿ ಚಿರಶಾಂತಿ ಕರುಣಿಸಲೆಂದು
ನಿಮ್ಮ ನೆನಪಿನಲ್ಲಿರುವ
ಎಂ.ಕೃಷ್ಣಪ್ಪ. ತೀರ್ಥಪ್ರಸಾದ್.ಕೆ. ಡಾ|| ಸುನೀಲ್ ಕುಮಾರ್. ಕೆ ಮತ್ತು ಕುಟುಂಬ, ಬಂಧು ವರ್ಗದವರು.

ಸವಿನೆನಪು

ಎಲ್. ಮುನಿನಾಥರೆಡ್ಡಿ

ಪಿ. ನಾಗರತ್ನಮ್ಮ

ಎಂ. ಸುರೇಶ್‌ರೆಡ್ಡಿ
ನೀವುಗಳು ನಮ್ಮನ್ನಗಲಿದರೂ ನಿಮ್ಮ ಸರಳತೆ, ಆದರ್ಶಗಳೇ ನಮಗೆ ದಾರಿದೀಪ, ನಿಮ್ಮ ಆತ್ಮಕ್ಕೆ ಭಗವಂತನು ಚಿರಶಾಂತಿ ನೀಡಲೆಂದು ಪ್ರಾರ್ಥಿಸುತ್ತಾ ಸದಾ ನಿಮ್ಮ ನೆನಪಿನಲ್ಲಿರುವ...
ಜಿ.ಎನ್.ಆರ್. ಜಮುನ ಮೋಹನ್ ಮತ್ತು ಕುಟುಂಬದವರು

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Engg/ Production Technical

MECHANICAL ENGINEER or Diploma with 6 to 7 years experience in QC for ISO engineering company in Peenya call 6360471436

ಬೆಂಗಳೂರು ಮತ್ತು ಕರ್ನಾಟಕ ರಾಜ್ಯದ ಇತರೆ ಕೇಂದ್ರಗಳಲ್ಲಿ ಕೆಲಸ ಮಾಡಲು ಮಾರುಕಟ್ಟೆ ಸಂಶೋಧನಾ ಏಜೆನ್ಸಿ ಅಥವಾ ಮೇಲ್ವಿಚಾರಕರು ಬೇಕಾಗಿದ್ದಾರೆ . ಆಸಕ್ತಿ ಇದ್ದವರು ಕೂಡಲೇ ಸಂಪರ್ಕಿಸಿ : fkmr@franciskanoi.com ಅಥವಾ 044 - 26163303 / 6374175665

Drivers

ಅನುಭವಿ ಬಸ್ ಡ್ರೈವರ್ ಗಳು ಬೇಕಾಗಿದ್ದಾರೆ. ಕೂಡಲೇ ಸಂಪರ್ಕಿಸಿ: ಕಾಮ್ಲಿನ್ ಆಂಗ್ಲಶಾಲೆ, 6ನೇ 'ಸಿ' ಮೇನ್, 4ನೇ ಕ್ರಾಸ್, ಹಂಪಿನಗರ, ಬೆಂಗಳೂರು:104. 08023301363

WANTED PERSONAL car driver staying near Vijaynagar, Chandra Layout. Salary 16500 Ph: 7022647659

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

Wanted

ದರ್ಶಿನಿಯಲ್ಲಿ ಕೆಲಸ ಮಾಡಲು ಪುರುಷ ಹಾಗೂ ಮಹಿಳೆಯರು ಬೇಕಾಗಿದ್ದಾರೆ 1) ಕೌಂಟರ್ ಸರ್ವಿಸಿಗೆ (ರೂ. 12000/- ರಿಂದ 15000/ ವರೆಗೆ ಸಂಬಳ) 2) ಇಡ್ಲಿ ಹಾಗೂ ಉದ್ದಿನ ವಡೆ ಮಾಡಲು (ರೂ. 15000/ ರಿಂದ 20000/- ವರೆಗೆ ಸಂಬಳ) ಸಂಪರ್ಕಿಸಿರಿ: ಬೆಂಗಳೂರು ಟಿಫಿನ್ ಸೆಂಟರ್ ಶ್ರೀರಾಮ ಮಂದಿರ ಎದುರುಗಡೆ ರಾಜಾಜಿನಗರ, 4ನೇ ಬ್ಲಾಕ್, ಬೆಂಗಳೂರು. 8073725562

ಲಾಂಡ್ರಿಗೆ ಫ್ಯಾಕ್ಟರಿ ಹೆಲ್ಪರ್ ಬೇಕಾಗಿದ್ದಾರೆ. ಬನ್ನೇರುಘಟ್ಟ ರಸ್ತೆ, ಬೆಂಗಳೂರು. ವೇತನ: 17-25 ಸಾವಿರ. ಊಟ+ವಸತಿ ಸೌಲಭ್ಯ ನೀಡಲಾಗುತ್ತದೆ. ಸಮಯ: ಬೆಳಿಗ್ಗೆ 8 ರಿಂದ ರಾತ್ರಿ8. ಸಂ: 8050666007/ 9880266007

ರಿಯಲ್ ಎಸ್ಟೇಟ್ ಸೆಲ್ಲಿಂಗ್

Agricultural Land

Tumkur

3ACRES AGRICULTURE Land for Sale in Prime Spot near Gubbi, Very fertile Soil with Borewell &120 coconut trees. Call: 9902030976.

Residential/ Commercial

J P Nagar

NORTH FACING 30x40 Semi Commercial building for sale @ JP Nagar 5th Phase Near AV Education School 6362905595

Sites

Peenya

4800SQFT. PLOT For Sale in Nelagadaranahalli (N.G.Halli), Prime Spot near NTTF Suitable for Residential/ Commercial Purposes. Contact: 9902030976.

Magadi

4 ಎಕರೆ, 18ಗುಂಟೆ, 2 ಬೋರ್ ವೆಲ್ ಇರುವ ಜಮೀನು ಮಾರಾಟಕ್ಕಿದೆ. ವಿಳಾಸ: ಮಾಗಡಿ ತಾಲ್ಲೂಕು, ಸೋಲೂರು ಹೋಬಳಿ, ಉಡುಕುಂಟೆ, ಶಿವಗಂಗೆ ರೋಡ್ ಹತ್ತಿರ. ಫೋನ್: 7483917592

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

Laggere

CORNER PLOT 3 sides Road, 3plots 600-1200sft each just 9kms from Majestic JC nagar WOC Road BBMP A khata commercial for sale @very reasonable price. Contact: 9886582447, 9743602580

ವೈಯಕ್ತಿಕ

Change of Name

ಹೆಸರು ಬದಲಾವಣೆ
ಬಿ.ವಿ.ರಘು ಆದ ನಾನು ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲ್ಲೂಕು, ಚನ್ನರಾಯಪಟ್ಟಣ ಹೋಬಳಿ, ಬೆಟ್ಟಕೋಟೆ ಗ್ರಾಮದ ನಿವಾಸಿಯಾಗಿದ್ದು, ನನ್ನ ಮಗಳ ಹೆಸರಾದ ಬಿ.ಆರ್.ಶ್ರೀವೈಭವಿ ಎಂಬ ಹೆಸರನ್ನು ಈಗ ಸಿರಿಕ್ಷಾ ಆರ್ ಎಂದು ಬದಲಾಯಿಸಿದ್ದೇವೆ. ಇದನ್ನು ಅಫಿಡವಿಟ್‌ನಲ್ಲಿ ನೋಟರಿಯವರಾದ ಎಸ್.ಪಿ.ಗಾಂಧಿ, ಬೆಂಗಳೂರು ಅವರ ಮುಂದೆ ಬದಲಾಯಿಸಿ ಪ್ರಮಾಣೀಕರಿಸಿದ್ದೇನೆ. ಇನ್ನು ಮುಂದೆ ನನ್ನ ಮಗಳ ಹೆಸರನ್ನು ಸಿರಿಕ್ಷಾ ಆರ್. ಎಂದು ಕರೆಯಲಾಗುವುದು.

ಪ್ರವಾಸ

Travel

ಭಾರತಪರಂಪರ ದರ್ಶನ: 10.2.25 7ದಿನ ನವಗ್ರಹಸಹಿತ ರಾಮೇಶ್ವರಂ. 8.3.25 7ದಿನ ಕಾಶಿ,ಅಯೋಧ್ಯ,ಗಯಾ. 17.3.25 11ದಿನ ಮುಕ್ತಿನಾಥ್ ಸಹಿತ ಕಾಶಿ,ಅಯೋಧ್ಯ. ಪ್ರಕಾಶ್ ಹೆಬ್ಬಾರ್ 9448792891.

ಮಹಾಕುಂಭಮೇಳ ಸ್ಪೆಷಲ್: ವಿಮಾನದಲ್ಲಿ 4.2.2025, 11.2.2025 ರಿಂದ 7 ದಿನಗಳು ಪ್ರಯಾಗ್ ರಾಜ್,ಕಾಶಿ ಅಯೋಧ್ಯ,ಗಯಾ. ಸಂಪರ್ಕಿಸಿ: ಕೆ.ಪಿ.ಟೂರ್ಸ್ ಅಂಡ್ ಟ್ರಾವೆಲ್ಸ್, ಬೆಂಗಳೂರು.9741024122, 9740311411.

ದೆಹಲಿ ಆಗ್ರಾ, ಅಯೋಧ್ಯೆ 7 ದಿನಗಳು. ವೈಷ್ಣೋದೇವಿ 7ದಿನಗಳು, ನೇಪಾಳ,ಮುಕ್ತಿನಾಥ ಯಾತ್ರಾ 7 ದಿನಗಳು. ಸಂಪರ್ಕಿಸಿ: ವಿಜಯ ಟ್ರಾವಲ್ಸ್, ಮಲ್ಲೇಶ್ವರಂ ಬೆಂಗಳೂರು. 9448294477

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ರಿಯಲ್ ಎಸ್ಟೇಟ್
ಪ್ರತಿ ಶನಿವಾರ + ಭಾನುವಾರ
ಕರ್ನಾಟಕದ ಎಲ್ಲಾ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ
@ 2244/-* FOR 15 WORDS
www.dhclassifieds.com
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9845114560 | +91 9901641752 | 080-45557163/164
*Conditions apply

ಕಲಬುರಗಿ: 2 ಲಕ್ಷ ಟನ್ ಖರೀದಿ ಗುರಿ

ತೊಗರಿ ದರ ಕುಸಿತ ರೈತರು ಕಂಗಾಲು

ಕಲಬುರಗಿಯ ಎಪಿಎಂಸಿಗೆ ಆವಕವಾದ ತೊಗರಿಯ ಸ್ವಚ್ಛತೆಯಲ್ಲಿ ನಿರತವಾಗಿರುವ ಮಹಿಳೆ ಚಿತ್ರ: ತಾಜುದ್ದೀನ್ ಆಜಾದ್

• ಮಲ್ಲಿಕಾರ್ಜುನ ನಾಲವಾರ

ಕಲಬುರಗಿ: ಜಿಲ್ಲೆಯಲ್ಲಿ ತೊಗರಿ ಕಟಾವು ಮುಗಿಯುತ್ತಾ ಬಂದಿದ್ದು, ಈ ಬಾರಿ 5 ಲಕ್ಷ ಟನ್‌ನಷ್ಟು ಉತ್ಪಾದನೆಯನ್ನು ನಿರೀಕ್ಷಿಸಲಾಗಿದೆ.

ಇಲ್ಲಿನ ಕೃಷಿ ಉತ್ಪನ್ನ ಮಾರುಕಟ್ಟೆಗೆ ಪ್ರತಿದಿನ ತೊಗರಿ ಆವಕ ಪ್ರಮಾಣ ಹೆಚ್ಚಾಗುತ್ತಿದೆ. ಇದರಿಂದ ಮುಕ್ತ ಮಾರುಕಟ್ಟೆಯಲ್ಲಿ ದರ ಕೂಡ ಇಳಿಕೆಯ ಹಾದಿ ಹಿಡಿದಿದ್ದು, ಬೆಳೆಗಾರರು ಕಂಗಾಲಾಗಿದ್ದಾರೆ.

ಎಪಿಎಂಸಿಯಲ್ಲಿ ಕಳೆದ ಒಂದು ತಿಂಗಳ ಅಂತರದಲ್ಲಿ ಕ್ವಿಂಟಲ್‌ಗೆ ಸುಮಾರು ₹1 ಸಾವಿರದಷ್ಟು ಬೆಲೆ ಇಳಿಕೆಯಾಗಿದೆ. ಸದ್ಯ ಪ್ರತಿ ಕ್ವಿಂಟಲ್‌ಗೆ ₹8,169 ದರವಿದೆ. ಮುಂದಿನ ದಿನಗಳಲ್ಲಿ ಆವಕ ಮತ್ತಷ್ಟು ಹೆಚ್ಚಳವಾಗಲಿದೆ. ಇದರಿಂದ ಧಾರಣೆಯು ಮತ್ತಷ್ಟು ಇಳಿಕೆಯಾಗಬಹುದು ಎಂದು ರೈತರು ಹೇಳುತ್ತಾರೆ. ಇಡೀ ರಾಜ್ಯದಲ್ಲಿಯೇ ಕಲಬುರಗಿ ಜಿಲ್ಲೆಯಲ್ಲಿ ಅತಿಹೆಚ್ಚು ತೊಗರಿ ಉತ್ಪಾದನೆಯಾಗುತ್ತದೆ.

> **ರಾಯಚೂರು ಜಿಲ್ಲೆಯ 81,566 ಹೆಕ್ಟೇರ್‌ನಲ್ಲಿ ತೊಗರಿ ಬಿತ್ತನೆ ಮಾಡಲಾಗಿದೆ. ಒಟ್ಟು 44,862 ಟನ್ ಉತ್ಪಾದನೆಯಾಗುವ ನಿರೀಕ್ಷೆ ಇದೆ**
> **ಜಯಪ್ರಕಾಶ**
> ಕೃಷಿ ಜಂಟಿ ನಿರ್ದೇಶಕ, ರಾಯಚೂರು

> **ಕೊಪ್ಪಳ ಜಿಲ್ಲೆಯ 29,090 ಹೆಕ್ಟೇರ್‌ನಲ್ಲಿ ತೊಗರಿ ಬಿತ್ತನೆಯಾಗಿದ್ದು, 19,074 ಟನ್ ಉತ್ಪಾದನೆ ನಿರೀಕ್ಷಿಸಲಾಗಿದೆ. ಒಟ್ಟು 8 ಖರೀದಿ ಕೇಂದ್ರ ತೆರೆಯಲಾಗಿದೆ**
> **ರುದ್ರೇಶಪ್ಪ ಟಿ.ಎಸ್.**
> ಕೃಷಿ ಜಂಟಿ ನಿರ್ದೇಶಕ, ಕೊಪ್ಪಳ

ಸದ್ಯ ದರ ಕುಸಿತದಿಂದಾಗಿ ಬೆಳೆಗಾರರು ಮಾರುಕಟ್ಟೆಗೆ ತೊಗರಿ ತರಲು ಹಿಂದೇಟು ಹಾಕುತ್ತಿದ್ದಾರೆ. ಕಳೆದ 12 ದಿನಗಳ ವಹಿವಾಟಿನಲ್ಲಿ (ಜನವರಿ 1ರಿಂದ 16ರ ನಡುವೆ) 27,867 ಕ್ವಿಂಟಲ್ ಮಾರಾಟವಾಗಿರುವುದೇ ಇದಕ್ಕೆ ಸಾಕ್ಷಿ. ಕಳೆದ ವರ್ಷದ ಇದೇ ಅವಧಿಯಲ್ಲಿ 75,182 ಕ್ವಿಂಟಲ್ ಮಾರಾಟ ಆಗಿತ್ತು ಎಂದು ಅಧಿಕಾರಿಗಳು ಹೇಳುತ್ತಾರೆ.

'ಬೆಂಬಲ ಬೆಲೆ ಅಡಿ ಕಲಬುರಗಿ ಜಿಲ್ಲೆಯಿಂದ 2 ಲಕ್ಷ ಟನ್ ತೊಗರಿ ಖರೀದಿಸಲಾಗುತ್ತದೆ' ಎಂದು ಜಿಲ್ಲಾ ಕೃಷಿ ಇಲಾಖೆಯ ಜಂಟಿ ನಿರ್ದೇಶಕ ಸಮದ್ ಪಟೇಲ್ 'ಪ್ರಜಾವಾಣಿ'ಗೆ ತಿಳಿಸಿದರು.

ಪ್ರೋತ್ಸಾಹ ಧನ ಘೋಷಣೆಗೆ ಆಗ್ರಹ

ಕೇಂದ್ರ ಸರ್ಕಾರವು ಪ್ರತಿ ಕ್ವಿಂಟಲ್ ತೊಗರಿಗೆ ₹7,550 ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ನಿಗದಿಪಡಿಸಿದೆ. ಎಕರೆಗೆ ಗರಿಷ್ಠ 4 ಕ್ವಿಂಟಲ್‌ನಂತೆ ಪ್ರತಿ ರೈತರಿಂದ ಗರಿಷ್ಠ 40 ಕ್ವಿಂಟಲ್‌ವರೆಗೆ ಎಫ್‌ಎಕ್ಯೂ ಗುಣಮಟ್ಟದ ತೊಗರಿ ಖರೀದಿಸಲಿದೆ.

'ಸರ್ಕಾರ ನಿಗದಿಪಡಿಸಿರುವ ಬೆಂಬಲ ಬೆಲೆಯು ಮುಕ್ತ ಮಾರುಕಟ್ಟೆಯ ದರಕ್ಕಿಂತ ಕಡಿಮೆಯಿದೆ. ಹಾಗಾಗಿ, ಜಿಲ್ಲೆಯಲ್ಲಿ 127 ಖರೀದಿ ಕೇಂದ್ರ ತೆರೆದಿದ್ದರೂ ಬೆಳೆಗಾರರು ಹೆಸರು ನೋಂದಣಿಗೆ ಮುಂದಾಗುತ್ತಿಲ್ಲ' ಎನ್ನುತ್ತಾರೆ ರೈತ ಮುಖಂಡ ಶರಣಬಸಪ್ಪ ಮಮಶೆಟ್ಟಿ.

'ಬೆಂಬಲ ಬೆಲೆಯ ಜತೆಗೆ ಕೇಂದ್ರ ಸರ್ಕಾರದಿಂದ ₹1,000 ಪ್ರೋತ್ಸಾಹ ಧನ ಹಾಗೂ ರಾಜ್ಯ ಸರ್ಕಾರದಿಂದ ₹500 ಆವರ್ತ ನಿಧಿ ಘೋಷಿಸಬೇಕು. ಇದರಿಂದ ರೈತರಿಗೆ ಹೆಚ್ಚಿನ ಅನುಕೂಲವಾಗಲಿದೆ' ಎಂಬುದು ಅವರ ಒತ್ತಾಯ.

ತಾಂತ್ರಿಕ ಸಮಸ್ಯೆ: ರೈತರ ನೋಂದಣಿಗೆ ವಿಘ್ನ

ಖರೀದಿ ಕೇಂದ್ರಗಳಿಗೆ ಬೆಳೆಗಾರರ ನಿತ್ಯ ಅಲೆದಾಟ • ಎಂಎಸ್‌ಪಿಗಿಂತಲೂ ಕಡಿಮೆಯಾದ ಧಾರಣೆ

• ಬಸವರಾಜ ಹವಾಲ್ದಾರ

ಬಾಗಲಕೋಟೆ: ಕನಿಷ್ಠ ಬೆಂಬಲ ಬೆಲೆಯಡಿ ತೊಗರಿ ಖರೀದಿಸಲು ಕೇಂದ್ರ ಸರ್ಕಾರ ಅನುಮತಿ ನೀಡಿ ಹದಿನೈದು ದಿನಗಳು ಕಳೆದಿವೆ. ಆದರೆ, ತಾಂತ್ರಿಕ ತೊಂದರೆಯಿಂದಾಗಿ ಇನ್ನೂ ಖರೀದಿ ಆರಂಭವಾಗಿಲ್ಲ ಇದರಿಂದ ರೈತರು ಖರೀದಿ ಕೇಂದ್ರಗಳಿಗೆ ಅಲೆದಾಡುವಂತಾಗಿದೆ.

ಎಪಿಎಂಸಿಗಳಲ್ಲಿ ಡಿಸೆಂಬರ್ ಆರಂಭದಿಂದಲೇ ತೊಗರಿ ಮಾರಾಟವಾಗುತ್ತಿದೆ. ಉತ್ಪಾದನೆಯಾಗಿರುವ ಪೈಕಿ ಅರ್ಧಕ್ಕೂ ಹೆಚ್ಚು ತೊಗರಿ ಮಾರಾಟವಾಗಿದ್ದರೂ, ಖರೀದಿ ಕೇಂದ್ರಗಳು ನೋಂದಣಿ ಆರಂಭಿಸಿಲ್ಲ.

ಬಾಗಲಕೋಟೆ ಎಪಿಎಂಸಿಯಲ್ಲಿ ಕ್ವಿಂಟಲ್ ತೊಗರಿಗೆ ಸರಾಸರಿ ₹6,234 ಬೆಲೆ ಇದೆ. ಜಿಲ್ಲೆಯ 73,301 ಹೆಕ್ಟೇರ್‌ನಲ್ಲಿ ತೊಗರಿ ಬೆಳೆಯಲಾಗಿದೆ. 7.33 ಲಕ್ಷ ಟನ್ ಇಳುವರಿ ನಿರೀಕ್ಷಿಸಲಾಗಿದೆ. ತಿಂಗಳ ಹಿಂದೆ ಪ್ರತಿ ಕ್ವಿಂಟಲ್‌ಗೆ ಕನಿಷ್ಠ ₹8 ಸಾವಿರದಿಂದ ಗರಿಷ್ಠ ₹10 ಸಾವಿರ ದರ ಇತ್ತು. ಈಗ ₹2,087ರಿಂದ ₹7,123 ಇದೆ. ಜಿಲ್ಲೆಯ 18 ಕಡೆಗಳಲ್ಲಿ ಖರೀದಿ ಕೇಂದ್ರಗಳನ್ನು ಗುರುತಿಸಿ ವಾರವೇ ಕಳೆದಿದೆ. ಎರಡು ದಿನಗಳ ಹಿಂದೆ ರೈತರ ನೋಂದಣಿಗಾಗಿ ಲಾಗಿನ್ ಐಡಿ ನೀಡಲಾಗಿದೆ. ಆದರೆ, ರೈತರ ಫ್ರೂಟ್ ಐಡಿ ಹಾಕಿದರೆ ಸಾಫ್ಟ್‌ವೇರ್‌ನಲ್ಲಿ ಓಪನ್ ಆಗದ್ದರಿಂದ ನೋಂದಣಿ ಸಾಧ್ಯವಾಗುತ್ತಿಲ್ಲ.

ಬಾಗಲಕೋಟೆ ಎಪಿಎಂಸಿಗೆ ರೈತರು ಮಾರಾಟಕ್ಕೆ ತಂದಿರುವ ತೊಗರಿ

ಅಂಕಿ ಅಂಶ

15.02 ಲಕ್ಷ ಹೆಕ್ಟೇರ್
ರಾಜ್ಯದಲ್ಲಿ ತೊಗರಿ ಬೆಳೆದಿರುವ ಪ್ರದೇಶ

11.96 ಲಕ್ಷ ಟನ್
ಈ ವರ್ಷದ ಉತ್ಪಾದನೆ ಅಂದಾಜು

3.06 ಲಕ್ಷ ಟನ್
ಬೆಂಬಲ ಬೆಲೆಯಡಿ ಖರೀದಿಗೆ ಅನುಮತಿ

'ಲೋಕಾಪುರ, ಮುಧೋಳ ಸೇರಿ ವಿವಿಧೆಡೆ ರೈತರ ಮಾಹಿತಿ ದಾಖಲಿಸಲು ಯತ್ನಿಸಿದ್ದೇವೆ. ತಾಂತ್ರಿಕ ಕಾರಣದಿಂದ ನೋಂದಣಿ ಸಾಧ್ಯವಾಗಿಲ್ಲ' ಎಂದು ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳದ ವ್ಯವಸ್ಥಾಪಕಿ ಸುಪ್ರಿಯಾ ಮುರನಾಳ ತಿಳಿಸಿದರು.

> **ತಾಂತ್ರಿಕ ಸಮಸ್ಯೆಯಿಂದಾಗಿ ನೋಂದಣಿ ಸಾಧ್ಯವಾಗುತ್ತಿಲ್ಲ. ಜನವರಿ 21ರಿಂದ ನೋಂದಣಿ ಪ್ರಕ್ರಿಯೆ ಆರಂಭವಾಗಲಿದೆ**
> **ಸುಪ್ರಿಯಾ ಮುರನಾಳ,** ವ್ಯವಸ್ಥಾಪಕಿ, ರಾಜ್ಯ ಸಹಕಾರ ಮಾರಾಟ ಮಹಾಮಂಡಳ

ಹುಳುಗಳ ಕಾಟ: ತೊಗರಿಕಾಳನ್ನು ಸಂಗ್ರಹಿಸಿಡಲು ಸೂಕ್ತ ವ್ಯವಸ್ಥೆಯಿಲ್ಲ. ಮನೆಯಲ್ಲಿಯೇ ಇಟ್ಟರೆ ಬುರಬುರಿ (ಹುಳುಗಳ) ಹತ್ತುತ್ತವೆ. ಇದರಿಂದಾಗಿ ತೊಗರಿಕಾಳು ತೂತು ಬಿದ್ದು, ಮಾರುಕಟ್ಟೆಯಲ್ಲಿ ಬೆಲೆ ಕಡಿಮೆಯಾಗುತ್ತದೆ ಎಂಬುದು ರೈತರ ಆತಂಕ.

'ತೊಗರಿ ಬಿತ್ತನೆಬೀಜ, ರಸಗೊಬ್ಬರ, ಔಷಧ ಸಿಂಪಡಣೆ ಸೇರಿ ವಿವಿಧ ಕಾರಣಗಳಿಗಾಗಿ ಸಾಲ ಮಾಡಿರುತ್ತೇವೆ. ಬೆಳೆ ಬಂದ ತಕ್ಷಣ ಕೊಡುವ ಕರಾರಿನ ಮೇಲೆ ಸಾಲ ಕೊಟ್ಟಿರುತ್ತಾರೆ. ರಾಶಿಯಾದ ಕೂಡಲೇ ಮಾರಾಟ ಮಾಡುತ್ತೇವೆ' ಎಂದು ರೈತ ಹನುಮಂತಗೌಡ ಪಾಟೀಲ ಹೇಳಿದರು.

ದಲ್ಲಾಳಿ, ವರ್ತಕರ ಪಾಲು

• ಆನಂದ ರಾಠೋಡ

ವಿಜಯಪುರ: ಜಿಲ್ಲೆಯಲ್ಲಿ ಕಳಪೆ ಬಿತ್ತನೆ ಬೀಜ ಹಾಗೂ ಹವಾಮಾನ ವೈಪರೀತ್ಯದಿಂದಾಗಿ ತೊಗರಿ ಬೆಳೆ ಹಾನಿಗೀಡಾಗಿದೆ. ಇದರಿಂದ ಕಂಗಾಲಾಗಿರುವ ರೈತರಿಗೆ ದಿನದಿಂದ ದಿನಕ್ಕೆ ಧಾರಣೆ ಕುಸಿಯುತ್ತಿರುವುದು ಗಾಯದ ಮೇಲೆ ಬರೆ ಎಳೆದಂತಾಗಿದೆ.

ಸೆಪ್ಟೆಂಬರ್–ಅಕ್ಟೋಬರ್‌ನಲ್ಲಿ ಕ್ವಿಂಟಲ್ ತೊಗರಿಗೆ ಕನಿಷ್ಠ ₹10 ಸಾವಿರದಿಂದ ಗರಿಷ್ಠ ₹12 ಸಾವಿರದವರೆಗೆ ದರವಿತ್ತು. ಈಗ ₹6,500ದಿಂದ ₹7,400ಕ್ಕೆ ಕುಸಿದಿದೆ. ಜಿಲ್ಲೆಯಲ್ಲಿ ಈ ಬಾರಿ 5.34 ಲಕ್ಷ ಹೆಕ್ಟೇರ್‌ನಲ್ಲಿ ತೊಗರಿ ಬಿತ್ತನೆ ಮಾಡಲಾಗಿದೆ. ವಿವಿಧ ಕಾರಣಗಳಿಂದ ಇಳುವರಿ ಕುಂಠಿತಗೊಂಡಿದೆ. ಕೆಲವು ರೈತರು ಉತ್ತಮ ಇಳುವರಿಯ ನಿರೀಕ್ಷೆಯಲ್ಲಿದ್ದಾರೆ. ಆದರೆ, ದರ ಕಡಿಮೆಯಾಗುತ್ತಿರುವುದು ಅವರಲ್ಲಿ ಆತಂಕ ಹೆಚ್ಚಿಸಿದೆ.

ಜಿಲ್ಲೆಯಲ್ಲಿ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ 55 ಖರೀದಿ ಕೇಂದ್ರಗಳನ್ನು ತೆರೆದು ಖರೀದಿ ಪ್ರಕ್ರಿಯೆ ಆರಂಭಿಸುವಂತೆ ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳಕ್ಕೆ ರಾಜ್ಯ ಸರ್ಕಾರವು ಸೂಚಿಸಿತ್ತು. ಆದರೆ, ಈವರೆಗೂ ರೈತರ ಹೆಸರು ನೋಂದಣಿಯೇ ಆರಂಭವಾಗಿಲ್ಲ. ಇನ್ನು ಖರೀದಿ ಆರಂಭಿಸುವುದು ಯಾವಾಗ? ಎಂದು ರೈತ ಮುಖಂಡರು ಪ್ರಶ್ನಿಸುತ್ತಾರೆ.

'ಜಿಲ್ಲೆಯಲ್ಲಿ ತೊಗರಿ ಕಟಾವು ಮುಗಿದರೂ ಖರೀದಿ ಕೇಂದ್ರಗಳು ಆರಂಭವಾಗಿಲ್ಲ. ಹಾಗಾಗಿ, ರೈತರು ಸಿಕ್ಕಷ್ಟು ದರಕ್ಕೆ ವರ್ತಕರು, ದಲ್ಲಾಳಿಗಳಿಗೆ ತೊಗರಿ ಮಾರಾಟ ಮಾಡುತ್ತಿದ್ದಾರೆ. ಸರ್ಕಾರವು ನೆಪ ಮಾತ್ರಕ್ಕೆ ಖರೀದಿ ಕೇಂದ್ರ ತೆರೆಯುವುದಾಗಿ ಘೋಷಿಸಿದರೆ ಸಾಲದು. ಸಂಕಷ್ಟದಲ್ಲಿರುವ ರೈತರ ನೆರವಿಗೆ ಬರಬೇಕು. ಬೆಂಬಲ ಬೆಲೆ ಹೆಚ್ಚಿಸಿ ಶೀಘ್ರವೇ ಖರೀದಿ ಆರಂಭಿಸಬೇಕು' ಎಂದು ಒತ್ತಾಯಿಸುತ್ತಾರೆ ರೈತ ಸಂಘ ಹಾಗೂ ಹಸಿರು ಸೇನೆಯ ಜಿಲ್ಲಾ ಘಟಕದ ಅಧ್ಯಕ್ಷ ಸಂಗಮೇಶ ಸಗರ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹520
12 ಕ್ಕೆ	₹70
ಮೈಸೂರು	
100ಕ್ಕೆ	₹520

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹432-657
ದ್ವಿತಳಿ (ಬಿ.ವಿ)	₹122-962

ಸಂಕ್ಷಿಪ್ತ ಸುದ್ದಿ

ಕೋಟಕ್ ಬ್ಯಾಂಕ್ ನಿವ್ವಳ ಲಾಭ ಶೇ 10ರಷ್ಟು ಏರಿಕೆ

ಮುಂಬೈ (ಪಿಟಿಐ): 2024–25ನೇ ಆರ್ಥಿಕ ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ಕೋಟಕ್ ಮಹೀಂದ್ರ ಬ್ಯಾಂಕ್ ₹4,701 ಕೋಟಿ ನಿವ್ವಳ ಲಾಭ ಗಳಿಸಿದೆ.

ಕಳೆದ ಆರ್ಥಿಕ ವರ್ಷದ ಇದೇ ತ್ರೈಮಾಸಿಕದಲ್ಲಿ ₹4,265 ಕೋಟಿ ಲಾಭ ಗಳಿಸಲಾಗಿತ್ತು. ಈ ಲಾಭದ ಪ್ರಮಾಣಕ್ಕೆ ಹೋಲಿಸಿದರೆ ಶೇ 10ರಷ್ಟು ಹೆಚ್ಚಳವಾಗಿದೆ. ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ₹5,044 ಕೋಟಿ ಲಾಭ ಗಳಿಸಲಾಗಿತ್ತು ಎಂದು ಬ್ಯಾಂಕ್ ತಿಳಿಸಿದೆ.

ಡಿಸೆಂಬರ್ ತ್ರೈಮಾಸಿಕದ ವರಮಾನದಲ್ಲೂ ಏರಿಕೆಯಾಗಿದ್ದು, ಒಟ್ಟು ₹16,050 ಕೋಟಿ ಗಳಿಸಿದೆ. ವಸೂಲಾಗದ ಸರಾಸರಿ ಸಾಲದ ಪ್ರಮಾಣವು (ಜಿಎನ್‌ಪಿಎ) ಶೇ 1.49ರಿಂದ ಶೇ 1.50ಕ್ಕೆ ಏರಿಕೆಯಾಗಿದೆ.

ಬಜೆಟ್ ಅಧಿವೇಶನದಲ್ಲಿ ಐ.ಟಿ ಮಸೂದೆ ಮಂಡನೆ?

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ಆರು ದಶಕದಷ್ಟು ಹಳೆಯದಾದ ಆದಾಯ ತೆರಿಗೆ ಕಾಯ್ದೆ 1961ರ ಸಮಗ್ರ ಬದಲಾವಣೆಗೆ ನಿರ್ಧರಿಸಿದೆ. ಹಾಗಾಗಿ, ಬಜೆಟ್ ಅಧಿವೇಶನದಲ್ಲಿ ಹೊಸ ಐ.ಟಿ ಮಸೂದೆ ಮಂಡಿಸುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ.

ಸದ್ಯ ಕಾಯ್ದೆಯ ಶೇ 60ರಷ್ಟು ಪುಟಗಳನ್ನು ಕಡಿಮೆ ಮಾಡುವ ಸಾಧ್ಯತೆಯಿದೆ. ಕಳೆದ ವರ್ಷದ ಜುಲೈನಲ್ಲಿ ಮಂಡಿಸಿದ್ದ 2024–25ನೇ ಸಾಲಿನ ಬಜೆಟ್‌ನಲ್ಲಿ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಕಾಯ್ದೆಯ ಪರಾಮರ್ಶೆ ಬಗ್ಗೆ ಪ್ರಸ್ತಾಪಿಸಿದ್ದರು.

'ಹಾಲಿ ಇರುವ ಕಾಯ್ದೆಯನ್ನು ತಿದ್ದುಪಡಿ ಮಾಡುವುದಿಲ್ಲ. ಕರಡು ಪ್ರತಿಯನ್ನು ಕೇಂದ್ರ ಕಾನೂನು ಸಚಿವಾಲಯವು ಪರಿಶೀಲಿಸಿದೆ' ಎಂದು ಮೂಲಗಳು ತಿಳಿಸಿವೆ.

ಡೊನಾಲ್ಡ್ ಟ್ರಂಪ್ ಅಧಿಕಾರ ಸ್ವೀಕಾರಕ್ಕೆ ಕ್ಷಣಗಣನೆ

ವಾಷಿಂಗ್ಟನ್ (ಎಪಿ/ ಪಿಟಿಐ): ಅಮೆರಿಕದ 47ನೇ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಲು ಚುನಾಯಿತ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಶನಿವಾರ ವಾಷಿಂಗ್ಟನ್ ತಲುಪಿದರು. ಇದರ ಬೆನ್ನಲ್ಲೇ, ಅವರ ಬೆಂಬಲಿಗರು ಸಂಭ್ರಮಾಚರಣೆಗೆ ಅಣಿಯಾಗಿದ್ದಾರೆ.

ಶನಿವಾರ ವರ್ಜಿನಿಯಾದಲ್ಲಿ ಟ್ರಂಪ್, ತಮ್ಮ ಮಾಲೀಕತ್ವದ ಗಾಲ್ಫ್ ಕ್ಲಬ್‌ನಲ್ಲಿ ಅದ್ದೂರಿ ಔತಣಕೂಟ ಆಯೋಜಿಸಿದ್ದರು. ಸಿಡಿಮದ್ದುಗಳ ಪ್ರದರ್ಶನ ನಡೆಯಿತು. ಉಪಾಧ್ಯಕ್ಷರಾಗಿ ಚುನಾಯಿತರಾಗಿರುವ ಜೆ.ಡಿ ವ್ಯಾನ್ಸ್ ಕೂಡ ಭಾಗಿಯಾಗಿದ್ದರು.

ಹಸ್ತಾಂತರ ಸುಗಮ: 4 ವರ್ಷದ ಹಿಂದೆ ನಡೆದ ಪರಾಭವಗೊಂಡಿದ್ದ ಟ್ರಂಪ್ ಅಧಿಕಾರ ಹಸ್ತಾಂತರಿಸಲು ವಿಳಂಬ ಮಾಡಿದ್ದರು. ನಂತರ ಜೋ ಬೈಡನ್ ಅಧಿಕಾರ ಸ್ವೀಕರಿಸುವ ವೇಳೆ ಸಂಪ್ರದಾಯ ಮುರಿದು ಗೈರಾಗಿದ್ದರು.

ಆದರೆ, ಟ್ರಂಪ್ ಸ್ವಾಗತಿಸಲು ಬೈಡನ್ ಸಿದ್ಧತೆ ನಡೆಸಿದ್ದಾರೆ. ಶ್ವೇತಭವನದಲ್ಲಿ ಪ್ರಮಾಣ ವಚನ ಸಮಾರಂಭದಲ್ಲಿ ಬೈಡನ್ ಭಾಗವಹಿಸುವರು ಎಂದು ಮೂಲಗಳು ತಿಳಿಸಿವೆ.

ಒಹಿಯೊ ಗವರ್ನರ್ ಸ್ಥಾನದ ಮೇಲೆ ವಿವೇಕ್ ಕಣ್ಣು?: ಟ್ರಂಪ್ ಆಪ್ತರಾದ ಭಾರತ ಮೂಲದ ವಿವೇಕ್ ರಾಮಸ್ವಾಮಿ ಅವರು ಒಹಿಯೊ ಗವರ್ನರ್ ಹುದ್ದೆಗೇರಲು ತೀವ್ರ ಪ್ರಯತ್ನ ನಡೆಸುತ್ತಿದ್ದಾರೆ ಎಂದು ಸ್ಥಳೀಯ ಮಾಧ್ಯಮವು ವರದಿ ಮಾಡಿದೆ. ಆಪ್ತರ ಹೇಳಿಕೆ ಆಧರಿಸಿ ಅವರು 39 ವರ್ಷದ ವಿವೇಕ್ ಗವರ್ನರ್ ಸ್ಥಾನದ ಆಕಾಂಕ್ಷಿ ಎಂದು 'ವಾಷಿಂಗ್ಟನ್ ಪೋಸ್ಟ್' ಪತ್ರಿಕೆ ವರದಿ ಮಾಡಿದೆ.

ಉದ್ಯೋಗದಾತ ಸಂಸ್ಥೆಯ ಪರಿಶೀಲನೆ ಅಗತ್ಯವಿಲ್ಲ: ಕೇಂದ್ರ

ಇಪಿಎಫ್: ಸ್ವವಿವರ ನೋಂದಣಿ ಸುಲಭ

ನವದೆಹಲಿ (ಪಿಟಿಐ): ನೌಕರರ ಭವಿಷ್ಯ ನಿಧಿ ಸಂಘಟನೆಯ (ಇಪಿಎಫ್‌ಒ) ಚಂದಾದಾರರು ಇನ್ನು ಮುಂದೆ ಸ್ವಂತ ಹೆಸರು, ಜನ್ಮ ದಿನಾಂಕ ಸೇರಿ ವೈಯಕ್ತಿಕ ವಿವರವನ್ನು ಉದ್ಯೋಗದಾತ ಸಂಸ್ಥೆ ಅಥವಾ ಇಪಿಎಫ್‌ಒದಿಂದ ದೃಢೀಕರಣ ಇಲ್ಲದೆಯೇ ಆನ್‌ಲೈನ್ ಮೂಲಕ ನೇರವಾಗಿ ಬದಲಾವಣೆ ಮಾಡಲು ಅವಕಾಶ ಕಲ್ಪಿಸಲಾಗಿದೆ.

ಈ ಹೊಸ ಸೌಲಭ್ಯವು ಶನಿವಾರದಿಂದ ಜಾರಿಗೆ ಬಂದಿದೆ. ಇದರಿಂದ 7.8 ಕೋಟಿಗೂ ಹೆಚ್ಚು ಚಂದಾದಾರರಿಗೆ ಅನುಕೂಲವಾಗಲಿದೆ.

ಚಂದಾದಾರರು ವೈಯಕ್ತಿಕ ವಿವರವನ್ನು ಆನ್‌ಲೈನ್‌ನಲ್ಲಿ ಅಪ್‌ಡೇಟ್ ಮಾಡುತ್ತಿದ್ದರು. ಬಳಿಕ ಇದಕ್ಕೆ ಸಂಬಂಧಪಟ್ಟ ಕಂಪನಿ ಅಥವಾ ಇಪಿಎಫ್‌ಒದಿಂದ ಪರಿಶೀಲನೆ ನಡೆಸಿದ ನಂತರ ಅನುಮೋದಿಸಲಾಗುತ್ತಿತ್ತು. ಈ ಪ್ರಕ್ರಿಯೆಯು ಹಲವು ದಿನಗಳವರೆಗೆ ಹಿಡಿಯುತ್ತಿತ್ತು. ಇದರಿಂದ ಉದ್ಯೋಗಿಗಳು ತೊಂದರೆ ಅನುಭವಿಸುತ್ತಿದ್ದರು.

'ಸದ್ಯ ಇಪಿಎಫ್‌ಒ ಪೋರ್ಟಲ್ ಅನ್ನು ಸರಳೀಕರಣಗೊಳಿಸಲಾಗಿದೆ. ಇದರಿಂದ ಚಂದಾದಾರರು ತಮ್ಮ ವೈಯಕ್ತಿಕ ವಿವರವನ್ನು ಅಪ್‌ಡೇಟ್ ಮಾಡುವಾಗ ಎದುರಾಗುತ್ತಿದ್ದ ಸಮಸ್ಯೆಯು ನಿವಾರಣೆಯಾಗಿದೆ' ಎಂದು ಕೇಂದ್ರ ಕಾರ್ಮಿಕ ಸಚಿವ ಮನ್ಸುಖ್ ಮಾಂಡವೀಯ ತಿಳಿಸಿದ್ದಾರೆ.

ಹೆಸರು, ಜನ್ಮ ದಿನಾಂಕ, ಲಿಂಗ, ರಾಷ್ಟ್ರೀಯತೆ, ತಂದೆ/ತಾಯಿ ಹೆಸರು, ವೈವಾಹಿಕ ಸ್ಥಿತಿ, ಹೆಂಡತಿ ಹೆಸರು, ಕಂಪನಿಗೆ ಸೇರಿದ ದಿನಾಂಕ, ಕಂಪನಿ ತೊರೆದ ದಿನಾಂಕ ಇತ್ಯಾದಿ ವಿವರವನ್ನು ಅಪ್‌ಡೇಟ್ ಮಾಡಬಹುದಾಗಿದೆ ಎಂದು ತಿಳಿಸಿದ್ದಾರೆ.

ಇಪಿಎಫ್ ಖಾತೆಗೆ ಆಧಾರ್ ಸಂಖ್ಯೆ ಜೋಡಣೆ ಮಾಡಿ ಇ–ಕೆವೈಸಿ ಪೂರ್ಣಗೊಳಿಸಿರುವ ಚಂದಾದಾರರು ಇನ್ನು ಮುಂದೆ ಆಧಾರ್ ಒಟಿಪಿ ಮೂಲಕ ಪಿಎಫ್ ಹಣದ ಕ್ಲೇಮುಗೆ ನೇರವಾಗಿ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ. ಉದ್ಯೋಗದಾತ ಸಂಸ್ಥೆಯ ಮಧ್ಯಪ್ರವೇಶ ಇಲ್ಲದೆಯೇ ಈ ಪ್ರಕ್ರಿಯೆ ಪೂರ್ಣಗೊಳಿಸಲು ಅವಕಾಶ ಕಲ್ಪಿಸಲಾಗಿದೆ ಎಂದು ಹೇಳಿದ್ದಾರೆ.

ಈ ಸೌಲಭ್ಯವು 2017ರ ಅಕ್ಟೋಬರ್ 1ರ ಬಳಿಕ ಸಾರ್ವತ್ರಿಕ ಖಾತೆ ಸಂಖ್ಯೆ (ಯುಎಎನ್) ಪಡೆದವರಿಗೆ ದೊರೆಯಲಿದೆ ಎಂದು ತಿಳಿಸಿದ್ದಾರೆ.

ಉಕ್ರೇನ್ ಮೇಲೆ ಕ್ಷಿಪಣಿ ದಾಳಿ, ನಾಲ್ಕು ಸಾವು

ಕೀವ್ (ಎಪಿ): ಉಕ್ರೇನ್ ರಾಜಧಾನಿ ಕೀವ್ ಗುರಿಯಾಗಿಸಿ ರಷ್ಯಾ ಸೇನೆ ಶನಿವಾರ ಮುಂಜಾನೆ ಡ್ರೋನ್, ಕ್ಷಿಪಣಿಗಳ ದಾಳಿ ನಡೆಸಿದೆ. ಕನಿಷ್ಠ ನಾಲ್ಕು ಮಂದಿ ಮೃತಪಟ್ಟಿದ್ದಾರೆ.

'39 ಶಹೀದ್ ಡ್ರೋನ್, ನಾಲ್ಕು ಕ್ಷಿಪಣಿ ಪ್ರಯೋಗಿಸಲಾಗಿದೆ. ಈ ಪೈಕಿ 24 ಡ್ರೋನ್, ಎರಡು ಕ್ಷಿಪಣಿ ಹೊಡೆದುರುಳಿಸಲಾಗಿದೆ' ಎಂದು ಉಕ್ರೇನ್‌ನ ವಾಯುಪಡೆ ತಿಳಿಸಿದೆ.

ದಾಳಿಯಿಂದ ಶೆವ್‌ಚೆಂಕಿವ್‌ಸ್ಕಿ ಜಿಲ್ಲೆಯಲ್ಲಿ ಕಟ್ಟಡಗಳ ಕಿಟಕಿಗಳು ಹಾನಿಗೊಂಡಿವೆ. ದಟ್ಟ ಹೊಗೆ ಮೂಡಿತ್ತು. ನೀರು ಸರಬರಾಜು ಕೊಳವೆಗಳು, ಲುಕ್ಯಾನಿವ್‌ಸ್ಕಾ ಮೆಟ್ರೊ ನಿಲ್ದಾಣದ ಪ್ರವೇಶದ್ವಾರಕ್ಕೂ ಹಾನಿಯಾಗಿದೆ ಎಂದು ಮೇಯರ್ ವಿಟಾಲಿ ಕ್ಲಿಟ್ಸ್‌ಚ್ಕೊ ಅವರು ತಿಳಿಸಿದ್ದಾರೆ.

ಭಾನುವಾರ ಬೆಳಿಗ್ಗೆ 8.30ರಿಂದ ಜಾರಿ • 15 ತಿಂಗಳ ಅನಿಶ್ಚಿತತೆ ಅಂತ್ಯ

ಗಾಜಾಪಟ್ಟಿ: ಕದನ ವಿರಾಮ ಘೋಷಣೆ

ಕೈರೊ, ಜೆರುಸಲೇಂ (ಎ.ಪಿ): ಕದನ ವಿರಾಮ ಘೋಷಿಸಲು ಇಸ್ರೇಲ್ ಸೇನೆ ಮತ್ತು ಹಮಾಸ್ ಬಂಡುಕೋರರ ಸಂಘಟನೆ ಸಮ್ಮತಿಸಿವೆ. ಕದನ ವಿರಾಮ ಸ್ಥಳೀಯ ಕಾಲಮಾನ ಭಾನುವಾರ ಬೆಳಿಗ್ಗೆ 6.30ರಿಂದ (ಭಾರತೀಯ ಕಾಲಮಾನ ಶನಿವಾರ ರಾತ್ರಿ 12ಗಂಟೆ) ಜಾರಿಗೆ ಬರಲಿದೆ.

ಗಾಜಾಪಟ್ಟಿಯಲ್ಲಿ ಕದನ ವಿರಾಮ ಘೋಷಣೆ ಕುರಿತು ಉಭಯತ್ರರ ನಡುವೆ ಮೂಡಿದ್ದ ಒಡಂಬಡಿಕೆಗೆ ಇಸ್ರೇಲ್‌ನ ಸಚಿವ ಸಂಪುಟವು ಅನುಮೋದನೆ ನೀಡಿತು. ಮಾತುಕತೆಗೆ ಕತಾರ್ ಮಧ್ಯಸ್ಥಿಕೆ ವಹಿಸಿತ್ತು.

ಈ ಮೂಲಕ ಇತ್ತೀಚಿನ ವರ್ಷಗಳಲ್ಲಿ ಸುದೀರ್ಘ ಅವಧಿ ನಡೆದ ಭೀಕರ, ಗಂಭೀರ ಸ್ವರೂಪದ ಯುದ್ಧವು, 15 ತಿಂಗಳ ತರುವಾಯ ತಾತ್ಕಾಲಿಕವಾಗಿ ಅಂತ್ಯಗೊಂಡಂತಾಗಿದೆ.

ಒಡಂಬಡಿಕೆಯ ಪ್ರಕಾರ, ಹಮಾಸ್ ಬಂಡುಕೋರರು ಮುಂದಿನ ಆರು ವಾರಗಳಲ್ಲಿ 33 ಒತ್ತೆಯಾಳುಗಳನ್ನು ಬಿಡುಗಡೆ ಮಾಡುವರು. ಪ್ರತಿಯಾಗಿ, ಇಸ್ರೇಲ್ ಸೇನೆಯು ತಾನು ಸೆರೆ ಇಟ್ಟುಕೊಂಡಿರುವ ಪ್ಯಾಲೆಸ್ಟೀನ್‌ನ ನೂರಾರು ಯುದ್ಧ ಕೈದಿಗಳ ಬಿಡುಗಡೆ ಮಾಡಲಿದೆ.

ಉಳಿದಂತೆ, ಪುರುಷ ಕೈದಿಗಳು ಎರಡನೇ ಹಂತದಲ್ಲಿ ಬಿಡುಗಡೆ ಆಗುವರು. ಈ ಕುರಿತು ಮೊದಲ ಹಂತದ ಬಿಡುಗಡೆ ಬಳಿಕ ಮಾತುಕತೆ ನಡೆಯಲಿದೆ.

ಇಸ್ರೇಲ್, ತನ್ನ ಸೇನೆಯನ್ನು ಪೂರ್ಣ ವಾಪಸು ಕರೆಯಿಸಿಕೊಳ್ಳದ ಮತ್ತು ದಾಳಿ ನಿಲ್ಲದ ಹೊರತಾಗಿ ಉಳಿದ ಒತ್ತೆಯಾಳುಗಳ ಬಿಡುಗಡೆ ಮಾಡುವುದಿಲ್ಲ ಎಂದು ಹಮಾಸ್ ಹೇಳಿದೆ.

ಒಡಂಬಡಿಕೆ ಪ್ರಕಾರ, ಹಮಾಸ್ ಬಂಡುಕೋರರು ಮೊದಲ ದಿನ ಮೂವರು ಮಹಿಳಾ ಒತ್ತೆಯಾಳುಗಳು, 7ನೇ ದಿನ ನಾಲ್ವರು, ಮುಂದಿನ ಐದು ವಾರಗಳಲ್ಲಿ 26 ಮಂದಿಯನ್ನು ಬಿಡುಗಡೆ ಮಾಡುವರು. ಇದೇ ಅವಧಿಯಲ್ಲಿ ಪ್ಯಾಲೆಸ್ಟೀನ್ ಕೈದಿಗಳ ಬಿಡುಗಡೆ ಆಗಲಿದ್ದು, ಮೊದಲಿಗೆ ಬಿಡುಗಡೆ ಆಗುವವರಲ್ಲಿ ಯುವಜನರು, ಮಹಿಳೆಯರು ಸೇರಿದ್ದಾರೆ.

ಅಕ್ಟೋಬರ್ 7, 2023ರಂದು ಹಮಾಸ್ ಬಂಡುಕೋರರು ಇಸ್ರೇಲ್ ಗುರಿಯಾಗಿಸಿ ಅಪ್ರಚೋದಿತ ದಾಳಿ ನಡೆಸಿದ್ದು, ಯುದ್ಧದ ಕಿಡಿ ಹೊತ್ತಿಸಿತ್ತು. ಆ ದಾಳಿಯಲ್ಲಿ ಇಸ್ರೇಲ್‌ನಲ್ಲಿ 1,200 ಮಂದಿ ಸತ್ತಿದ್ದರು. 250 ಜನರನ್ನು ಒತ್ತೆಯಾಳಾಗಿ ಕರೆದೊಯ್ಯಲಾಗಿತ್ತು.

ಪ್ರತಿಯಾಗಿ ಹಿಂದೆಯೇ ಇಸ್ರೇಲ್ ಸೇನೆಯು ಹಮಾಸ್ ಬಂಡುಕೋರರ ನೆಲೆ ಗುರಿಯಾಗಿಸಿ ಗಾಜಾಪಟ್ಟಿಯ ಮೇಲೆ ನಿರಂತರ ದಾಳಿ ನಡೆಸುತ್ತಿದೆ. ಇದುವರೆಗೂ, ಈ ದಾಳಿಗೆ ಅಧಿಕೃತ ಮಾಹಿತಿ ಪ್ರಕಾರ 46,000 ಪ್ಯಾಲೆಸ್ಟೀನಿಯರು ಸತ್ತಿದ್ದಾರೆ. ಭಾರಿ ಆಸ್ತಿ ಹಾನಿ ಸಂಭವಿಸಿದೆ.

> **ಬಿಡುಗಡೆಯಾಗುವ ಒತ್ತೆಯಾಳುಗಳ ಸ್ವಾಗತಕ್ಕೆ ವಿಶೇಷ ಕಾರ್ಯಪಡೆ ಕ್ರಮವಹಿಸಬೇಕು ಮತ್ತು ಅವರ ಕುಟುಂಬ ಸದಸ್ಯರಿಗೂ ಒಪ್ಪಂದ ಕುರಿತು ಮಾಹಿತಿ ನೀಡಬೇಕು**
> **ಬೆಂಜಮಿನ್ ನೇತನ್ಯಾಹು**
> ಇಸ್ರೇಲ್ ಪ್ರಧಾನಿ

> **ಕದನ ವಿರಾಮ ಭಾನುವಾರ ಬೆಳಿಗ್ಗೆಯಿಂದ ಜಾರಿಗೆ ಬರಲಿದೆ. ಗಾಜಾಪಟ್ಟಿಯಲ್ಲಿ ಜನತೆ ಹೆಚ್ಚು ಜಾಗ್ರತೆ ವಹಿಸಬೇಕು. ಅಧಿಕಾರಿಗಳು ನೀಡುವ ಸೂಚನೆಗಳನ್ನು ಪಾಲಿಸಬೇಕು**
> **ಮಾಜಿದ್ ಅಲ್ ಅನ್ಸಾರಿ**
> ವಿದೇಶಾಂಗ ಸಚಿವ, ಕತಾರ್

> **ಕದನ ವಿರಾಮ ಘೋಷಣೆ ಸ್ವಾಗತಾರ್ಹ. ನ. 27ರ ಬಳಿಕ ಇಸ್ರೇಲ್‌ನ ಸೇನೆ ನೂರಾರು ಬಾರಿ ಯುದ್ಧದ ನಿಯಮ ಉಲ್ಲಂಘಿಸಿದೆ. ನಮ್ಮ ತಾಳ್ಮೆ ಪರೀಕ್ಷಿಸಬಾರದು**
> **ನಯೀಂ ಕಾಸ್ಸೆಂ**
> ಹೆಜ್ಬುಲ್ಲಾ ನಾಯಕ, ಲೆಬನಾನ್

ಇಸ್ರೇಲ್‌ನಿಂದ 700 ಕೈದಿಗಳ ಪಟ್ಟಿ ಬಿಡುಗಡೆ

- ಇಸ್ರೇಲ್‌ನಿಂದ ಮೊದಲ ಹಂತದಲ್ಲಿ ಬಿಡುಗಡೆ ಆಗುವ ಪ್ಯಾಲೆಸ್ಟೀಯನ್‌ನ 700 ಕೈದಿಗಳ ಪಟ್ಟಿ ಬಿಡುಗಡೆ
- ಈ ಪಟ್ಟಿಯಲ್ಲಿ ಹಮಾಸ್, ಇಸ್ಲಾಮಿಕ್ ಬಂಡುಕೋರ ಸಂಘಟನೆಗಳ ಸದಸ್ಯರು, ಸಜೆಗೆ ಒಳಗಾದವರು. ಆದರೆ, ವೆಸ್ಟ್‌ಬ್ಯಾಂಕ್‌ನ ನಾಯಕ, 64ವರ್ಷದ ಮಾರ್ವಾನ್ ಬಾರ್ಗೌಟಿ ಹೆಸರಿಲ್ಲ. ಇವರ ಬಿಡುಗಡೆಗೂ ಹಮಾಸ್ ಬಂಡುಕೋರರು ಪ್ರಮುಖ ಬೇಡಿಕೆ ಇಟ್ಟಿದ್ದರು
- ಸದ್ಯ ಗಾಜಾಪಟ್ಟಿಯಿಂದ ಇಸ್ರೇಲ್ ಸೇನೆ ಹಿಂದೆ ಸರಿಯಲಿದೆ. ಇದು, ಪ್ಯಾಲೆಸ್ಟೀನಿಯರು ತಮ್ಮ ಮನೆಗಳಿಗೆ ಮರಳಲು ಆಸ್ಪದವಾಗಲಿದೆ
- ಸೇನೆ ನೆಲೆಯೂರಿರುವ ಕಡೆ ನಿವಾಸಿಗಳು ಮರಳಲು ಸದ್ಯ ಅವಕಾಶ ಇಲ್ಲ. ಕದನವಿರಾಮ ಘೋಷಣೆ ಹಿಂದೆಯೇ ಇಸ್ರೇಲ್ ಪಡೆ ಗುರಿಯಾಗಿಸಿ ನಡೆಯುವ ಬೆದರಿಕೆ ಯತ್ನಗಳಿಗೆ 'ತಕ್ಕ ಉತ್ತರ' ಸಿಗಲಿದೆ ಎಂದು ಸೇನೆ ಎಚ್ಚರಿಕೆ

ವಾಮಾಚಾರದ ಶಂಕೆ: ವೃದ್ಧೆಗೆ ಮೂತ್ರ ಕುಡಿಸಿ, ಹಲ್ಲೆ

ಅಮರಾವತಿ (ಪಿಟಿಐ): ವಾಮಾಚಾರ ನಡೆಸುತ್ತಿದ್ದಾರೆ ಎಂಬ ಶಂಕೆಯ ಮೇಲೆ 77 ವರ್ಷದ ವೃದ್ಧೆ ಮೇಲೆ ಹಲ್ಲೆ ನಡೆಸಿ, ನಂತರ ಅವರಿಗೆ ಮೂತ್ರ ಕುಡಿಸಿದ ಪ್ರಕರಣ ಮಹಾರಾಷ್ಟ್ರದ ಅಮರಾವತಿ ಜಿಲ್ಲೆಯಲ್ಲಿ ನಡೆದಿದೆ.

ಸಂತ್ರಸ್ತೆಯು ಚಿಕಲಾದಾರ ತಾಲ್ಲೂಕಿನ ರೆತ್ಯಾಖೇಡಾ ಗ್ರಾಮದ ನಿವಾಸಿ ಎಂದು ಗುರುತಿಸಲಾಗಿದೆ. ಡಿ.30ರಂದೇ ಈ ಘಟನೆ ನಡೆದಿದೆ. ತಿಂಗಳ ಆರಂಭದಲ್ಲಿಯೇ ಪ್ರಕರಣ ದಾಖಲಾಗಿದ್ದು, ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ಸಂತ್ರಸ್ತೆಯ ಮಗ ಹಾಗೂ ಅಳಿಯ ಶುಕ್ರವಾರ ಹಿರಿಯ ಪೊಲೀಸ್ ಅಧಿಕಾರಿಗಳನ್ನು ಭೇಟಿಯಾಗಿ ಮನವಿ ಮಾಡಿದ್ದಾರೆ.

‘ಡಿ.30ರಂದು ತಾಯಿ ಮನೆಯಲ್ಲಿ ಒಬ್ಬರೇ ಇದ್ದರು. ಈ ವೇಳೆ ವಾಮಾಚಾರ ಮಾಡಿದ್ದಾರೆ ಎಂದು ಆರೋಪಿಸಿ, ನೆರೆಹೊರೆಯವರು ಅವರನ್ನು ಹಿಡಿದು, ಮರದ ಬಡಿಗೆಯಿಂದ ಹೊಡೆದು, ಥಳಿಸಿದ್ದಾರೆ. ನಂತರ ಕಾದ ಕಬ್ಬಿಣದಿಂದ ಕೈ, ಕಾಲುಗಳ ಮೇಲೆ ಬರೆ ಎಳೆದಿದ್ದಾರೆ’ ಎಂದು ಜಿಲ್ಲಾಧಿಕಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ಬರೆದ ಪತ್ರದಲ್ಲಿ ಅವರ ಪುತ್ರ ತಿಳಿಸಿದ್ದಾರೆ. ‘ನಂತರ ಅವರ ಕತ್ತಿಗೆ ಚಪ್ಪಲಿ ಹಾರ ಹಾಕಿ ಮೆರವಣಿಗೆ ಮಾಡಿ, ಬಲವಂತದಿಂದ ಮೂತ್ರ ಕುಡಿಸಿದ್ದು, ನಾಯಿ ಮಲ ತಿನ್ನುವಂತೆ ಒತ್ತಾಯಿಸಿದ್ದಾರೆ’ ಎಂದು ತಿಳಿಸಿದ್ದಾರೆ.

ಘಟನೆ ನಡೆದ ವೇಳೆ ವೃದ್ಧೆಯ ಮಗ ಹಾಗೂ ಸೊಸೆ ಕೆಲಸದ ನಿಮಿತ್ತ ಹೊರಗೆ ಹೋಗಿದ್ದರು. ಜ.5ರಂದು ಈ ವಿಷಯ ಅರಿವಿಗೆ ಬಂದಿದ್ದು, ತಕ್ಷಣವೇ ದೂರು ದಾಖಲಿಸಿದ್ದಾರೆ. ‘ಘಟನೆ ಗಂಭೀರವಾಗಿದ್ದು, ಪರಿಶೀಲಿಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು’ ಎಂದು ಎಸ್‌ಪಿ ವಿಶಾಲ್ ತಿಳಿಸಿದ್ದಾರೆ.

ದೆಹಲಿ ಚುನಾವಣೆಯಲ್ಲಿ ಧರ್ಮವನ್ನು ಬಳಸಿಕೊಳ್ಳುತ್ತಿರುವ ಎಎಪಿ ಮತ್ತು ಬಿಜೆಪಿ

ಚುನಾವಣಾ ಪ್ರಚಾರಕ್ಕೆ ಕೇಸರಿ ಸ್ಪರ್ಶ

ನವದೆಹಲಿ (ಪಿಟಿಐ): ಅರ್ಚಕರು ಹಾಗೂ ಇತರರಿಗೆ ಅತಿಹೆಚ್ಚಿನ ನೆರವು ಸಿಗುವುದು ತನ್ನಿಂದ ಎಂಬ ಪಟ್ಟಕ್ಕಾಗಿ ಬಿಜೆಪಿ ಮತ್ತು ಎಎಪಿ ನಡುವೆ ಪೈಪೋಟಿ ನಡೆದಿದ್ದು, ದೆಹಲಿಯ ವಿಧಾನಸಭಾ ಚುನಾವಣೆ ಪ್ರಚಾರಕ್ಕೆ ಕೇಸರಿ ಸ್ಪರ್ಶ ಸಿಕ್ಕಿದೆ.

ಚುನಾವಣಾ ಪ್ರಚಾರದಲ್ಲಿ ಎಎಪಿಯು ಧರ್ಮವನ್ನು ಬಳಸಿಕೊಳ್ಳುವ ಹಾದಿಯಲ್ಲಿ ಸಾಗಿರುವಂತೆ ಕಾಣುತ್ತಿದೆ. ಹಿಂದೂ ಮತಬ್ಯಾಂಕ್ ತನ್ನ ಕೈತಪ್ಪದಂತೆ ನೋಡಿಕೊಳ್ಳುವ ಕೆಲಸಕ್ಕೆ ಬಿಜೆಪಿಯನ್ನು ಕಟ್ಟಿಹಾಕುವ ಉದ್ದೇಶದಿಂದ ಎಎಪಿ ಈ ರೀತಿ ಮಾಡುತ್ತಿದೆ ಎನ್ನಲಾಗಿದೆ.

ತಾನು ಅಧಿಕಾರಕ್ಕೆ ಮರಳಿದರೆ ದೇವಸ್ಥಾನಗಳ ಅರ್ಚಕರಿಗೆ ಮತ್ತು ಗುರು ದ್ವಾರಗಳ ಗ್ರಂಥಿಗಳಿಗೆ ತಿಂಗಳಿಗೆ ₹18 ಸಾವಿರ ಗೌರವಧನ ನೀಡಲಾಗುತ್ತದೆ ಎಂದು ಎಎಪಿ ಈಚೆಗೆ ಘೋಷಿಸಿದೆ. ಇದಕ್ಕೆ ಪ್ರತಿಯಾಗಿ ಬಿಜೆಪಿಯು, ದೇವಸ್ಥಾನಗಳು ಮತ್ತು ಗುರುದ್ವಾರಗಳು ಸೇರಿದಂತೆ ಪೂಜಾ ಸ್ಥಳಗಳಿಗೆ ತಿಂಗಳಿಗೆ 500 ಯೂನಿಟ್ ವಿದ್ಯುತ್ ಉಚಿತ ಎಂಬ ಘೋಷಣೆ ಮಾಡುವ ಸಾಧ್ಯತೆ ಇದೆ.

ಅಕ್ರಮ ವಲಸಿಗರಿಗೆ ಉತ್ತೇಜನ ನೀಡಿ, ಹಿಂದೂಗಳಲ್ಲಿನ ಬಡವರು ಮತ್ತು ಶೋಷಣೆಗೆ ಗುರಿಯಾದವರಿಗೆ ಕಡಿಮೆ ಹಣಕಾಸಿನ ನೆರವು ಕೊಟ್ಟು ವಂಚಿಸಲಾಗಿದೆ ಎಂಬ ಆರೋಪವನ್ನು ಬಿಜೆಪಿ ಮತ್ತು ಎಎಪಿ ಪರಸ್ಪರರ ವಿರುದ್ಧ ಹೊರಿಸಿವೆ. ಅಯೋಧ್ಯೆಯ ರಾಮ ಮಂದಿರ ಉದ್ಘಾಟನೆಯ ಮೊದಲ ವಾರ್ಷಿಕೋತ್ಸವದ ದಿನ ದೆಹಲಿಯಲ್ಲಿ ರ‍್ಯಾಲಿಯೊಂದನ್ನು ಉದ್ದೇಶಿಸಿ ಮಾತನಾಡಿದ ಕೇಂದ್ರ ಗೃಹ ಸಚಿವ ಅಮಿತ್ ಶಾ, ‘ಜೈ ಶ್ರೀರಾಂ’ ಘೋಷಣೆ ಕೂಗಿದರು. ಕೊಳೇಗೇರಿ ನಿವಾಸಿಗಳು ಸರ್ಕಾರವನ್ನು ಬದಲಾಯಿಸುವ ಮೂಲಕ ದೆಹಲಿಯ ವಿಮೋಚಕರಾಗಬೇಕು ಎಂದು ಕರೆ ನೀಡಿದ್ದರು.

ವಾಲ್ಮೀಕಿ ಮಂದಿರ ಪ್ರದೇಶದಲ್ಲಿ 44 ಮಂದಿ ಮತದಾರರ ಹೆಸರನ್ನು ಅಳಿಸಲು ಆಡಳಿತಾರೂಢ ಎಎಪಿ ಅರ್ಜಿ ಸಲ್ಲಿಸಿದೆ, ಅರವಿಂದ ಕೇಜ್ರಿವಾಲ್ ಅವರು ದಲಿತ ವಿರೋಧಿ ಎಂದು ಬಿಜೆಪಿ ಈಚೆಗೆ ಆರೋಪಿಸಿತು. ಚುನಾವಣಾ ಆಯೋಗವು ವಾಲ್ಮೀಕಿ ಮಂದಿರ ಪ್ರದೇಶದಲ್ಲಿ ಮತದಾರರ ಹೆಸರು ಪರಿಶೀಲಿಸುವ ಕೆಲಸ ಮಾಡುತ್ತಿದೆ, ಆದರೆ ಮಸೀದಿ ಮತ್ತು ದರ್ಗಾ ಇರುವ ಪ್ರದೇಶಗಳಲ್ಲಿ ಈ ಕೆಲಸ ಮಾಡುತ್ತಿಲ್ಲ ಎಂದು ಬಿಜೆಪಿಯ ಪರ್ವೇಶ್ ವರ್ಮಾ ಆರೋಪಿಸಿದರು.

ತಾನು ಹನುಮನ ಭಕ್ತ ಎಂದು ಹೇಳಿಕೊಂಡಿರುವ ಕೇಜ್ರಿವಾಲ್ ಅವರು, ವಾಲ್ಮೀಕಿ ದೇವಸ್ಥಾನ ಮತ್ತು ಹನುಮಾನ್ ಮಂದಿರದಲ್ಲಿ ಪೂಜೆ ಸಲ್ಲಿಸಿದ ನಂತರ ನಾಮಪತ್ರ ಸಲ್ಲಿಸಿದರು. ಮುಖ್ಯಮಂತ್ರಿ ಆತಿಶಿ ಅವರು ಕಲ್ಕಾಜಿ ದೇವಸ್ಥಾನ ಹಾಗೂ ಗುರುದ್ವಾರವೊಂದರಲ್ಲಿ ಪೂಜೆ ಸಲ್ಲಿಸಿದ ನಂತರ ನಾಮಪತ್ರ ಸಲ್ಲಿಕೆ ಮೆರವಣಿಗೆ ಆರಂಭಿಸಿದರು.

ಎಎಪಿ ನಾಯಕ ಮನೀಶ್ ಸಿಸೋಡಿಯಾ ಅವರು ತಮಗೆ ಟಿಕೆಟ್ ಘೋಷಣೆಯಾದ ನಂತರ ಪ್ರಮುಖ ದೇವಸ್ಥಾನಗಳಿಗೆ ಭೇಟಿ ನೀಡಿದರು. ನಾಮಪತ್ರ ಸಲ್ಲಿಸುವ ಮೊದಲು ಕಾಳಿ ಮಾತೆಯ ಆಶೀರ್ವಾದ ಪಡೆದರು. ಪ್ರಚಾರ ಆರಂಭಿಸುವ ಮೊದಲು ಸಿಸೋಡಿಯಾ ಅವರು ಹನುಮಾನ್ ಚಾಲೀಸಾ ಪಠಿಸಿದರು.

ಮುಖ್ಯಾಂಶಗಳು
- ಮತಬ್ಯಾಂಕ್ ಉಳಿಸಲು ಬಿಜೆಪಿಯನ್ನು ಕಟ್ಟಿಹಾಕಲು ತಂತ್ರ
- ಪೂಜಾ ಸ್ಥಳಗಳಿಗೆ ಉಚಿತ ವಿದ್ಯುತ್ ಘೋಷಣೆ ಸಾಧ್ಯತೆ
- ಪ್ರಚಾರದಲ್ಲಿ ದೇವರ ನಾಮ ಸ್ಮರಿಸುತ್ತಿರುವ ಎಎಪಿ ನಾಯಕರು

ಪ್ರಜಾ ಮತ ಜನತಂತ್ರದ ಹಬ್ಬ

‘ಅನ್‌ಬ್ರೇಕೆಬಲ್’ ಸಾಕ್ಷ್ಯಚಿತ್ರ ಪ್ರದರ್ಶನಕ್ಕೆ ಪೊಲೀಸರ ಅಡ್ಡಿ

ನವದೆಹಲಿ (ಪಿಟಿಐ): ‘ರಹಸ್ಯ’ವಾಗಿ ಹಾಗೂ ‘ಕುತಂತ್ರ’ದಿಂದ ಆಮ್ ಆದ್ಮಿ ಪಕ್ಷದ ನಾಯಕರನ್ನು ಬಂಧಿಸಿದ ಕುರಿತು ನಿರ್ಮಿಸಿರುವ ‘ಅನ್‌ಬ್ರೇಕೆಬಲ್’ ಸಾಕ್ಷ್ಯಚಿತ್ರವನ್ನು ಪ್ರದರ್ಶಿಸಲು ದೆಹಲಿ ಪೊಲೀಸರು ಅನುವು ಮಾಡಿಕೊಡುತ್ತಿಲ್ಲ’ ಎಂದು ಸಂಚಾಲಕ ಅರವಿಂದ ಕೇಜ್ರಿವಾಲ್ ಅವರು ಶನಿವಾರ ಆರೋಪಿಸಿದರು.

‘ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ಸಾಕ್ಷ್ಯಚಿತ್ರ ಪ್ರದರ್ಶಕ್ಕೆ ಅನುಮತಿ ಪಡೆದುಕೊಳ್ಳಬೇಕಾಗುತ್ತದೆ’ ಎಂದು ದೆಹಲಿಯ ಹಿರಿಯ ಪೊಲೀಸ್ ಅಧಿಕಾರಿಗಳು ಪ್ರತಿಕ್ರಿಯಿಸಿದರು.

ಇದನ್ನು ಪ್ರಶ್ನಿಸಿದ ಕೇಜ್ರಿವಾಲ್, ‘ಇದೊಂದು ಖಾಸಗಿ ಪ್ರದರ್ಶನ. ಇಲ್ಲಿನ ಮತಯಾಚನೆ ಮಾಡುವುದಿಲ್ಲ. ಯಾವುದೇ ಪಕ್ಷದ ವಿರುದ್ಧವೂ ಈ ಪ್ರದರ್ಶನ ಏರ್ಪಡಿಸಿಲ್ಲ. ಇದಕ್ಕೆ ಯಾಕೆ ಅನುಮತಿ ಪಡೆಯಬೇಕು’ ಎಂದರು.

‘ಬಿಜೆಪಿಯು ಸಂಪೂರ್ಣವಾಗಿ ಭಯಗ್ರಸ್ತಗೊಂಡಿದೆ. ಜೊತೆಗೆ ಪೊಲೀಸರ ಮೇಲೆ ಒತ್ತಡ ಹೇರಿ ಪ್ರದರ್ಶನಕ್ಕೆ ಅಡ್ಡಿ ಮಾಡುತ್ತಿದೆ’ ಎಂದರು.

‘ವಾಟ್ಸ್‌ಆ್ಯಪ್‌ನಲ್ಲಿ ಕಳುಹಿಸಬಹುದು. ನಮ್ಮ ಮನೆಗೆ ಕರೆದು ತೋರಿಸಬಹುದು. ಹೇಗಾದರೂ ಸರಿ, ಈ ಸಾಕ್ಷ್ಯಚಿತ್ರವನ್ನು ಜನರ ಬಳಿಗೆ ತೆಗೆದುಕೊಂಡು ಹೋಗುತ್ತೇವೆ’ ಎಂದು ಪಕ್ಷದ ನಾಯಕ ಸೌರಭ್ ಭಾರದ್ವಾಜ್ ಹೇಳಿದರು.

‘ಕೇಜ್ರಿವಾಲ್ ಕಾರಿಗೆ ಕಲ್ಲೆಸೆತ’

‘ನವದೆಹಲಿ ಕ್ಷೇತ್ರದಲ್ಲಿ ಶನಿವಾರ ಪ್ರಚಾರ ನಡೆಸುತ್ತಿದ್ದ ವೇಳೆ ಅರವಿಂದ ಕೇಜ್ರಿವಾಲ್ ಅವರಿದ್ದ ಕಾರಿನ ಮೇಲೆ ಇದೇ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಪರೇಶ್ ವರ್ಮಾ ಅವರ ಬೆಂಬಲಿಗರು ಕಲ್ಲು ಎಸೆದಿದ್ದಾರೆ’ ಎಂದು ಎಎಪಿ ಗಂಭೀರ ಆರೋಪ ಮಾಡಿದೆ.

ಘಟನೆಯ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಕಪ್ಪು ಪಟ್ಟಿ ಹಿಡಿದ ಕೆಲವರು ಕೇಜ್ರಿವಾಲ್ ಅವರಿದ್ದ ಕಾರಿನ ಎದುರಿಗೆ ಬಂದ ದೃಶ್ಯ, ಪ್ರತಿಭಟನಕಾರರನ್ನು ಸರಿಸಿ, ಕೇಜ್ರಿವಾಲ್ ಅವರ ಕಾರಿಗೆ ಪೊಲೀಸರು ದಾರಿ ಮಾಡಿಕೊಟ್ಟ ದೃಶ್ಯ ಮತ್ತು ಕಪ್ಪು ಬಣ್ಣದ ಬಟ್ಟೆ ತುಂಡನ್ನು ಹಾಗೂ ವ್ಯಕ್ತಿಯೊಬ್ಬರು ಕಲ್ಲು ಎಸೆದ ದೃಶ್ಯಗಳೂ ವಿಡಿಯೊದಲ್ಲಿವೆ.

‘ಕೇಜ್ರಿವಾಲ್ ಅವರಿದ್ದ ಕಾರಿನತ್ತ ಯಾರೂ ಕಲ್ಲೆಸೆದಿಲ್ಲ’ ಎಂದು ದೆಹಲಿ ಪೊಲೀಸರು ಹೇಳಿದ್ದಾರೆ. ‘ಕೆಲವರು ಮಾಜಿ ಮುಖ್ಯಮಂತ್ರಿ ಅವರಿಗೆ ಕಪ್ಪುಬಟ್ಟೆ ಪ್ರದರ್ಶಿಸಲು ಬಂದಿದ್ದರು ಅಷ್ಟೆ’ ಎಂದು ಹೇಳಿದ್ದಾರೆ.

ಎಎಪಿ ಬೆಳವಣಿಗೆಯಿಂದ ಬಿಜೆಪಿಗೆ ಅನುಕೂಲ: ಮಾಕನ್

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಎಎಪಿ ಅಧಿಕಾರದಲ್ಲಿದ್ದಾಗಲೂ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯ ಗೆಲುವನ್ನು ತಡೆಯಲಾಗಲಿಲ್ಲ ಎಂದು ಜರಿದಿರುವ ಕಾಂಗ್ರೆಸ್ ಖಜಾಂಚಿ ಅಜಯ್ ಮಾಕನ್, ಎಎಪಿಯ ಬೆಳವಣಿಗೆಯಿಂದ ಕೇಸರಿ ಪಾಳಯಕ್ಕೆ ಮಾತ್ರ ಪ್ರಯೋಜನ ಎಂದು ವಾಗ್ದಾಳಿ ನಡೆಸಿದರು.

ಕಾಂಗ್ರೆಸ್‌ನ ನೂತನ ಕಚೇರಿಯಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು.

‘ಎಎಪಿ ಸಂಚಾಲಕ ಅರವಿಂದ ಕೇಜ್ರಿವಾಲ್ ಅವರನ್ನು ದೇಶ ವಿರೋಧಿ ಎಂದು ನಾನು ಈ ಹಿಂದೆ ನೀಡಿದ್ದ ಹೇಳಿಕೆಗೆ ಈಗಲೂ ಬದ್ಧನಿದ್ದೇನೆ. ಆದರೆ ಇದು ನನ್ನ ವೈಯಕ್ತಿಕ ಅಭಿಪ್ರಾಯವಷ್ಟೇ’ ಎಂದು ಅವರು ಪ್ರತಿಕ್ರಿಯಿಸಿದರು.

‘ದೆಹಲಿಯಲ್ಲಿ ಕಾಂಗ್ರೆಸ್ ಸರ್ಕಾರವಿದ್ದಾಗ, ಅಲ್ಲಿನ ಏಳೂ ಲೋಕಸಭಾ ಕ್ಷೇತ್ರಗಳಲ್ಲಿ ನಾವು ಜಯಿಸಿದ್ದೆವು. ಈ ಮೂಲಕ ರಾಷ್ಟ್ರ ಮಟ್ಟದಲ್ಲಿ ಬಿಜೆಪಿ ಬೆಳವಣಿಗೆಗೆ ತಡೆಯೊಡ್ಡಿದ್ದೆವು. ಆದರೆ ಎಎಪಿ ಅವಧಿಯಲ್ಲಿ ಅದು ಉಲ್ಟಾ ಆಗಿದೆ’ ಎಂದು ಅವರು ಆರೋಪಿಸಿದರು.

ದೆಹಲಿ ಚುನಾವಣೆಯಲ್ಲಿ ಅತಂತ್ರ ಸ್ಥಿತಿ ನಿರ್ಮಾಣವಾದರೆ ಎಎಪಿಯನ್ನು ಕಾಂಗ್ರೆಸ್ ಬೆಂಬಲಿಸುತ್ತದೆಯೇ ಎಂಬ ಪ್ರಶ್ನೆಗೆ, ‘ಕೇಜ್ರಿವಾಲ್ ಬೆಳೆದರೆ, ಅದರಿಂದ ಬಿಜೆಪಿಗೆ ಅನುಕೂಲವಾಗುತ್ತದೆ. ಬಿಜೆಪಿಯನ್ನು ಸೋಲಿಸಲು ರಾಷ್ಟ್ರಮಟ್ಟದಲ್ಲಿ ಕಾಂಗ್ರೆಸ್ ಅನ್ನು ಬಲಿಷ್ಠಗೊಳಿಸಬೇಕಾದ ಅನಿವಾರ್ಯತೆಯಿದೆ. ರಾಜಧಾನಿಯಲ್ಲಿ ನಮ್ಮ ಸಂಘಟನೆ ದುರ್ಬಲವಾಗಿದ್ದರೆ, ಬಿಜೆಪಿಯನ್ನು ಕಟ್ಟಿಹಾಕುವುದು ಅಸಾಧ್ಯ’ ಎಂದರು.

ಮದರಸಾದಲ್ಲಿ ಎನ್‌ಸಿಇಆರ್‌ಟಿ ಪಠ್ಯ

ಡೆಹ್ರಾಡೂನ್ (ಪಿಟಿಐ): ಎನ್‌ಸಿಇಆರ್‌ಟಿ ಪಠ್ಯಕ್ರಮ ಹೊಂದಿರುವ ರಾಜ್ಯದ ಮೊದಲ ಆಧುನಿಕ ಮದರಾಸವನ್ನು ಉತ್ತರಾಖಂಡ ವಕ್ಫ್ ಬೋರ್ಡ್ ಸ್ಥಾಪಿಸಿದೆ. ಇಲ್ಲಿ ಅರೇಬಿಕ್ ಜೊತೆಗೆ ಸಂಸ್ಕೃತವನ್ನು ಐಚ್ಛಿಕ ವಿಷಯವಾಗಿ ಅಧ್ಯಯನ ಮಾಡುವ ಅವಕಾಶವನ್ನೂ ನೀಡಲಾಗಿದೆ.



‘₹50 ಲಕ್ಷ ವೆಚ್ಚದಲ್ಲಿ ಡಾ. ಎ.ಪಿ.ಜೆ ಅಬ್ದುಲ್ ಕಲಾಂ ಆಧುನಿಕ ಮದರಾಸವನ್ನು ಅಭಿವೃದ್ಧಿಗೊಳಿಸಲಾಗಿದೆ. ಮುಂದಿನ ಶೈಕ್ಷಣಿಕ ವರ್ಷದ ಮಾರ್ಚ್‌ನಿಂದ ಇಲ್ಲಿ ತರಗತಿಗಳು ಆರಂಭವಾಗಲಿವೆ’ ಎಂದು ರಾಜ್ಯ ವಕ್ಫ್ ಬೋರ್ಡ್ ಅಧ್ಯಕ್ಷ ಶದಾಬ್ ಶಾಮ್ಸ್ ತಿಳಿಸಿದರು. ಇಲ್ಲಿನ ವಿದ್ಯಾರ್ಥಿಗಳು ಬೆಳಿಗ್ಗೆ ಎನ್‌ಸಿಇಆರ್‌ಟಿ ಪಠ್ಯಕ್ರಮದಲ್ಲಿ ಸಾಮಾನ್ಯ ವಿಷಯಗಳನ್ನು ಅಧ್ಯಯನ ಮಾಡಲಿದ್ದಾರೆ. ಸಂಜೆ ಧರ್ಮಕ್ಕೆ ಸಂಬಂಧಿಸಿದ ಶಿಕ್ಷಣ ಪಡೆಯಲಿದ್ದಾರೆ. ಕುರಾನ್, ಪ್ರವಾದಿ ಮೊಹಮ್ಮದರ ಪ್ರವಚನಗಳು ಅಥವಾ ರಾಮನಿಗೆ ಸಂಬಂಧಿಸಿದ ವಿಷಯಗಳನ್ನು ಆಯ್ಕೆ ಮಾಡಿಕೊಳ್ಳಬಹುದು.

ಲೈಂಗಿಕ ದೌರ್ಜನ್ಯ ಪ್ರಕರಣ: ಸುಪ್ರೀಂ ಕೋರ್ಟ್ ಅಭಿಪ್ರಾಯ

‘ಗಾಯ ಇರಲೇಬೇಕು ಎನ್ನಲಾಗದು’

ಪ್ರಜಾವಾಣಿ ವಾರ್ತೆ

ನವದೆಹಲಿ: ಸಂತ್ರಸ್ತ ವ್ಯಕ್ತಿಯ ಮೇಲೆ ಲೈಂಗಿಕ ದೌರ್ಜನ್ಯ ನಡೆದಿದೆ ಎಂಬುದನ್ನು ಸಾಬೀತು ಮಾಡಲು, ದೇಹದ ಮೇಲೆ ಗಾಯಗಳು ಇರಲೇಬೇಕು ಎನ್ನಲಾಗದು ಎಂದು ಸುಪ್ರೀಂ ಕೋರ್ಟ್ ಹೇಳಿದೆ.

‘ಇಂತಹ ಪ್ರಕರಣಗಳಲ್ಲಿ ಎಲ್ಲರೂ ಒಂದೇ ಬಗೆಯಲ್ಲಿ ಪ್ರತಿಕ್ರಿಯೆ ತೋರಿರುತ್ತಾರೆ ಎಂಬುದನ್ನು ನಿರೀಕ್ಷಿಸುವುದು ಸರಿಯಲ್ಲ, ವಾಸ್ತವವಾದುದೂ ಅಲ್ಲ’ ಎಂದು ನ್ಯಾಯಮೂರ್ತಿಗಳಾದ ಹೃಷಿಕೇಶ್ ರಾಯ್ ಮತ್ತು ಎಸ್.ವಿ.ಎನ್. ಭಟ್ಟಿ ಅವರು ಇರುವ ವಿಭಾಗೀಯ ಪೀಠ ಹೇಳಿದೆ.

ಲೈಂಗಿಕ ದೌರ್ಜನ್ಯದ ಸಂದರ್ಭದಲ್ಲಿ ಗಾಯಗಳು ಆಗಿರುತ್ತವೆ ಎಂಬುದು ಬಹಳ ವ್ಯಾಪಕವಾಗಿರುವ ನಂಬಿಕೆ ಮಾತ್ರ ಎಂದು ಪೀಠವು ವಿವರಿಸಿದೆ.

‘ಗಾಯ, ಯಾತನೆಗೆ ಸಂತ್ರಸ್ತರು ಪ್ರತಿಕ್ರಿಯಿಸುವ ಬಗೆ ಭಿನ್ನವಾಗಿರುತ್ತದೆ. ಭೀತಿ, ಆಘಾತ, ಸಾಮಾಜಿಕ ಕಳಂಕ ಹೊತ್ತುಕೊಳ್ಳುವ ಭಯ, ಅಸಹಾಯಕತೆ ಯಂತಹ ಅಂಶಗಳು ಅವರು ಪ್ರತಿಕ್ರಿಯಿಸುವ ಬಗೆಯ ಮೇಲೆ ಪ್ರಭಾವ ಬೀರುತ್ತವೆ. ಲೈಂಗಿಕ ದೌರ್ಜನ್ಯದ ಜೊತೆ ಅಂಟಿಕೊಂಡಿರುವ ಕಳಂಕವು ಮಹಿಳೆಯರ ಪಾಲಿಗೆ ಅಡ್ಡಿಗಳನ್ನು ಸೃಷ್ಟಿಸುತ್ತದೆ, ಘಟನೆಯ ಬಗ್ಗೆ ಅವರು ಇತರರಿಗೆ ಮಾಹಿತಿ ನೀಡುವುದು ಕಷ್ಟವಾಗುವಂತೆ ಮಾಡುತ್ತದೆ’ ಎಂದು ಪೀಠವು ಹೇಳಿದೆ.

ಸೈಬರ್ ಅಪರಾಧ ಅಮೆರಿಕ–ಭಾರತ ಒಪ್ಪಂದ

ನವದೆಹಲಿ (ಪಿಟಿಐ): ‘ಸೈಬರ್ ಅಪರಾಧ ಗೂಢಚರ್ಯೆ ಮತ್ತು ಡಿಜಿಟಲ್ ವಿಧಿವಿಜ್ಞಾನ ಕುರಿತ ಸಹಕಾರ ವೃದ್ಧಿಗೆ ಹಾಗೂ ತರಬೇತಿ ಕುರಿತಂತೆ ಅಮೆರಿಕ ಹಾಗೂ ಭಾರತ ಒಪ್ಪಂದ ಮಾಡಿಕೊಂಡಿವೆ’ ಎಂದು ಭಾರತೀಯ ವಿದೇಶಾಂಗ ಸಚಿವಾಲಯ ಶನಿವಾರ ಹೇಳಿದೆ.

ಅಮೆರಿಕ ಅಧ್ಯಕ್ಷ ಜೋ ಬೈಡನ್ ಅವರು ಚುನಾಯಿತ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗೆ ಅಧಿಕಾರ ಹಸ್ತಾಂತರ ಮಾಡುವುದಕ್ಕೆ ಕೆಲವೇ ದಿನಗಳು ಬಾಕಿ ಇರುವಾಗಲೇ ಈ ಒಪ್ಪಂದ ಮಾಡಿಕೊಳ್ಳಲಾಗಿದೆ.

ಭಾರತದ ರಾಯಭಾರಿ ವಿನಯ್ ಮೋಹನ್ ಕ್ವಾತ್ರಾ ಹಾಗೂ ಅಮೆರಿಕದ ಗೃಹ ಇಲಾಖೆಯ ಹಂಗಾಮಿ ಉಪ ಕಾರ್ಯದರ್ಶಿ ಕ್ರಿಷ್ಟಿ ಕ್ಯಾನಗಾಲೊ ಅವರು ಶುಕ್ರವಾರ ವಾಷಿಂಗ್ಟನ್‌ನಲ್ಲಿ ಒಪ್ಪಂದಕ್ಕೆ ಸಹಿ ಹಾಕಿದ್ದಾರೆ.

ಪಾದ್ರಿ ಅಂತ್ಯಸಂಸ್ಕಾರಕ್ಕೆ ಅವಕಾಶ ನಿರಾಕರಣೆ ಛತ್ತೀಸಗಢ ಸರ್ಕಾರಕ್ಕೆ ‘ಸುಪ್ರೀಂ’ ನೋಟಿಸ್

ನವದೆಹಲಿ (ಪಿಟಿಐ): ಪಾದ್ರಿಯೊಬ್ಬರ ಮೃತದೇಹವನ್ನು ಚಿಂದ್‌ವಾಡಾ ಗ್ರಾಮದ ಸ್ಮಶಾನದಲ್ಲಿ ಹೂಳಲು ಅವಕಾಶ ನಿರಾಕರಿಸಿದ ಪ್ರಕರಣದ ಕುರಿತು ಛತ್ತೀಸಗಢ ಹೈಕೋರ್ಟ್ ನೀಡಿರುವ ಆದೇಶ ಪ್ರಶ್ನಿಸಿ ಸಲ್ಲಿಸಿರುವ ಅರ್ಜಿಯ ಸಂಬಂಧ ಛತ್ತೀಸಗಢ ಸರ್ಕಾರವನ್ನು ಸುಪ್ರೀಂ ಕೋರ್ಟ್ ತರಾಟೆಗೆ ತೆಗೆದುಕೊಂಡಿದ್ದು ಈ ಕುರಿತು ನೋಟಿಸ್ ಜಾರಿ ಮಾಡಿದೆ.

ಮೃತ ಪಾದ್ರಿಯ ಮಗ ರಮೇಶ್ ಬಘೇಲ್ ಅವರು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದಾರೆ. ಜ.7ರಂದು ಪಾದ್ರಿ ಮೃತಪಟ್ಟಿದ್ದರು. ಅಂತ್ಯಸಂಸ್ಕಾರಕ್ಕೆ ಗ್ರಾಮಸ್ಥರು ಅವಕಾಶ ನೀಡದ ಕಾರಣ ಪಾದ್ರಿಯ ಮೃತದೇಹವು ಕಳೆದ 12 ದಿನಗಳಿಂದ ಜಿಲ್ಲಾಸ್ಪತ್ರೆಯ ಶವಾಗಾರದಲ್ಲಿಯೇ ಇದೆ. ಈ ಬಗ್ಗೆ ನ್ಯಾಯಮೂರ್ತಿಗಳಾದ ಬಿ.ವಿ. ನಾಗರತ್ನ ಹಾಗೂ ಸತೀಶ್ ಚಂದ್ರ ಶರ್ಮಾ ಅವರು ಆಶ್ಚರ್ಯ ವ್ಯಕ್ತಪಡಿಸಿದರು.

‘ಗ್ರಾಮದಲ್ಲಿ ಕ್ರಿಶ್ಚಿಯನ್ನರಿಗೆ ಪ್ರತ್ಯೇಕ ಸ್ಮಶಾನ ಇಲ್ಲ’ ಎಂದು ಗ್ರಾಮ ಪಂಚಾಯಿತಿಯು ನೀಡಿದ ಪ್ರಮಾಣ ಪತ್ರದ ಆಧಾರದಲ್ಲಿ ರಮೇಶ್ ಅವರ ಅರ್ಜಿಯನ್ನು ಹೈಕೋರ್ಟ್ ತಿರಸ್ಕರಿಸಿತ್ತು. ‘ಅಂತ್ಯಸಂಸ್ಕಾರಕ್ಕೆ ಅವಕಾಶ ನೀಡಿದರೆ ದಂಗೆ ಆಗಬಹುದು. ಆದ್ದರಿಂದ 20–25 ಕಿ.ಮೀ. ದೂರದ ಊರಿನಲ್ಲಿ ಅಂತ್ಯಸಂಸ್ಕಾರ ಮಾಡಿ’ ಎಂದು ಹೈಕೋರ್ಟ್ ಹೇಳಿತ್ತು.

‘ಗ್ರಾಮ ಪಂಚಾಯಿತಿಯನ್ನು ಬಿಡಿ, ಹೈಕೋರ್ಟ್ ಕೂಡ ಇಂಥ ವಿಚಿತ್ರ ಆದೇಶ ನೀಡಿದೆ. ರಾಜ್ಯ ಸರ್ಕಾರ ಏನು ಮಾಡುತ್ತಿದೆ’ ಎಂದು ಪೀಠ ಪ್ರಶ್ನಿಸಿತು. ‘ಗ್ರಾಮದ ಸ್ಮಶಾನದಲ್ಲಿ ಬೇಡ, ನನ್ನ ಜಮೀನಿನಲ್ಲಿಯೇ ಅಂತ್ಯಸಂಸ್ಕಾರ ಮಾಡುತ್ತೇನೆ ಎಂದರೂ ಗ್ರಾಮಸ್ಥರು ಅವಕಾಶ ನೀಡಲಿಲ್ಲ’ ಎಂದು ರಮೇಶ್ ಅವರು ತಮ್ಮ ಅರ್ಜಿಯಲ್ಲಿ ಹೇಳಿದ್ದಾರೆ. ಮುಂದಿನ ವಿಚಾರಣೆಯನ್ನು ಜ.20ಕ್ಕೆ ಮುಂದೂಡಲಾಯಿತು.

ರಾಮ ಮಂದಿರ ಕುರಿತ ಸೆಮಿನಾರ್: ನ್ಯಾ. ಶೇಖರ್ ನಕಾರ

ಮಹಾಕುಂಭ ನಗರ (ಉತ್ತರ ಪ್ರದೇಶ) (ಪಿಟಿಐ): ‘...ಬಹುಸಂಖ್ಯಾತರಿಗೆ ಬೇಕಾದಂತೆ ದೇಶವು ನಡೆಯಬೇಕು. ಅದುವೇ ಕಾನೂನು...’ ಎಂದಿದ್ದ ಅಲಹಾಬಾದ್ ಹೈಕೋರ್ಟ್‌ನ ನ್ಯಾಯಮೂರ್ತಿ ಶೇಖರ್ ಕುಮಾರ್ ಯಾದವ್ ಅವರು ರಾಮ ಮಂದಿರಕ್ಕಾಗಿ ನಡೆದ ಹೋರಾಟ ಕುರಿತು ಜ.22ರಂದು ಇಲ್ಲಿ ನಡೆಯಬೇಕಿದ್ದ ಸೆಮಿನಾರ್‌ನಲ್ಲಿ ಭಾಗವಹಿಸುವುದಿಲ್ಲ ಎಂದು ಹೇಳಿದ್ದಾರೆ.

ರಾಮ ಮಂದಿರ ನಿರ್ಮಾಣಗೊಂಡು ವರ್ಷ ಕಳೆದ ಸಂಭ್ರದ ಆಚರಣೆಗಾಗಿ ‘ರಾಷ್ಟ್ರೀಯ ಸಂಗೋಷ್ಠಿ: ರಾಮ ಮಂದಿರ ಆಂದೋಲನ ಮತ್ತು ಗೋರಕ್ಷಾಪೀಠ’ ಹೆಸರಿನ ಸೆಮಿನಾರ್ ಅನ್ನು ಮಹಾಕುಂಭ ನಗರದಲ್ಲಿ ಆಯೋಜಿಸಲಾಗಿತ್ತು. ‘ಜ.22 ಕೆಲಸದ ದಿನವಾಗಿದ್ದರಿಂದ ಸೆಮಿನಾರ್‌ನಲ್ಲಿ ಭಾಗವಹಿಸಲು ಸಾಧ್ಯವಾಗುವುದಿಲ್ಲ’ ಎಂದು ನ್ಯಾ.ಶೇಖರ್ ತಿಳಿಸಿದ್ದರು.

ದೀಕ್ಷೆ ಉತ್ತರ ಪ್ರದೇಶದ ಪ್ರಯಾಗ್‌ರಾಜ್‌ನಲ್ಲಿ ನಡೆಯುತ್ತಿರುವ ಮಹಾಕುಂಭ ಮೇಳದಲ್ಲಿ ಹೊಸದಾಗಿ ದೀಕ್ಷೆ ಪಡೆದ ನಾಗಾ ಸಾಧುಗಳು ಸಂಗಮ್ ಪ್ರದೇಶದಲ್ಲಿ ಶನಿವಾರ ಧಾರ್ಮಿಕ ಆಚರಣೆಗಳನ್ನು ಪೂರೈಸಿದರು – ಪಿಟಿಐ ಚಿತ್ರ

65 ಲಕ್ಷ ಆಸ್ತಿ ಪತ್ರ ವಿತರಣೆ

ನವದೆಹಲಿ (ಪಿಟಿಐ): ‘ಸ್ವಾಮಿತ್ವ’ ಯೋಜನೆಯಡಿ 65 ಲಕ್ಷ ಆಸ್ತಿ ಪತ್ರಗಳನ್ನು ಶನಿವಾರ ವಿತರಿಸಿದ ಪ್ರಧಾನಿ ನರೇಂದ್ರ ಮೋದಿ ಅವರು, ‘ಇದು ಆರ್ಥಿಕ ಚಟುವಟಿಕೆಗಳನ್ನು ಉತ್ತೇಜಿಸಲಿದೆ ಮತ್ತು ಬಡತನ ನಿರ್ಮೂಲನೆಗೆ ಸಹಾಯ ಮಾಡಲಿದೆ' ಎಂದು ಹೇಳಿದರು.

ವರ್ಚುವಲ್ ವೇದಿಕೆ ಮೂಲಕ ನಡೆದ ಕಾರ್ಯಕ್ರಮದಲ್ಲಿ ಪ್ರಧಾನಿ ಮೋದಿ ಅವರು ಕೆಲ ಫಲಾನುಭವಿಗಳ ಜೊತೆ ಸಂವಾದ ನಡೆಸಿದರು.

ನರೇಂದ್ರ ಮೋದಿ

‘65 ಲಕ್ಷ ಜನರಿಗೆ ಆಸ್ತಿ ಪತ್ರ ವಿತರಿಸಲಾಗಿದ್ದು, ಒಟ್ಟು 2.24 ಕೋಟಿ ಫಲಾನುಭವಿಗಳಿದ್ದಾರೆ. ಅಧಿಕೃತ ಆಸ್ತಿ ಪತ್ರಗಳಿಂದಾಗಿ ಅವರಿಗೆ ಸಾಲ ಮತ್ತು ಸರ್ಕಾರಿ ಸೌಲಭ್ಯಗಳು ಸುಲಭವಾಗಿ ದೊರಕಲಿದೆ’ ಎಂದು ಮೋದಿ ಹೇಳಿದರು.

ಛತ್ತೀಸಗಢ, ಗುಜರಾತ್, ಹಿಮಾಚಲಪ್ರದೇಶ, ಮಧ್ಯಪ್ರದೇಶ, ಮಹಾರಾಷ್ಟ್ರ, ಮಿಜೋರಾಂ, ಒಡಿಶಾ, ಪಂಜಾಬ್, ರಾಜಸ್ಥಾನ, ಉತ್ತರ ಪ್ರದೇಶ ಮತ್ತು ಕೇಂದ್ರಾಡಳಿತ ಪ್ರದೇಶಗಳಾದ ಜಮ್ಮು–ಕಾಶ್ಮೀರ ಮತ್ತು ಲಡಾಖ್‌ನ 50 ಸಾವಿರಕ್ಕೂ ಅಧಿಕ ಗ್ರಾಮಗಳಲ್ಲಿನ ಜನರಿಗೆ ಆಸ್ತಿ ಪತ್ರ ವಿತರಣೆಯಾಗಲಿದೆ.

ಭೌತಿಕವಾಗಿ ಆಸ್ತಿ ಪತ್ರಗಳ ವಿತರಣೆಗಾಗಿ 230 ಜಿಲ್ಲೆಗಳಲ್ಲಿ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಕೇಂದ್ರ ಸರ್ಕಾರದ 13 ಸಚಿವರು ಈ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಸಾಧ್ಯತೆಗಳಿವೆ.

ಸಂಜಯ್ ರಾಯ್ ಅಪರಾಧಿ: ಕೋರ್ಟ್

ಒಂದನೇ ಪುಟದಿಂದ...

ಅಪರಾಧ ಕೃತ್ಯ ನಡೆದ 162ನೆಯ ದಿನ ಈ ಆದೇಶ ಪ್ರಕಟವಾಗಿದೆ. ಪ್ರಕರಣದ ಗೋಪ್ಯ ವಿಚಾರಣೆಯು ಸರಿಸುಮಾರು ಎರಡು ತಿಂಗಳು ನಡೆದಿತ್ತು. ಭಾರತೀಯ ನ್ಯಾಯ ಸಂಹಿತೆಯ (ಬಿಎನ್‌ಎಸ್) ಸೆಕ್ಷನ್ 64 (ಅತ್ಯಾಚಾರ), ಸೆಕ್ಷನ್ 66 (ಮಹಿಳೆಯ ಸಾವಿಗೆ ಕಾರಣವಾಗುವುದು) ಹಾಗೂ ಸೆಕ್ಷನ್ 103(1) (ಹತ್ಯೆ) ಅಡಿಯಲ್ಲಿ ರಾಯ್ ಅಪರಾಧಿ ಎಂದು ನ್ಯಾಯಾಧೀಶರು ಹೇಳಿದ್ದಾರೆ. ರಾಯ್ ವಿರುದ್ಧದ ಎಲ್ಲ ಆರೋಪಗಳನ್ನು ಸಿಬಿಐ ಸಾಬೀತುಪಡಿಸಿದೆ ಎಂದು ಅವರು ಹೇಳಿದ್ದಾರೆ.

ಸೆಕ್ಷನ್ 103(1)ರ ಅಡಿಯಲ್ಲಿ ಮರಣದಂಡನೆ ಅಥವಾ ಜೀವಾವಧಿ ಶಿಕ್ಷೆ ವಿಧಿಸಲು ಅವಕಾಶ ಇದೆ.

ರಾಯ್‌ನ ಹೇಳಿಕೆಯನ್ನು ಸೋಮವಾರ ಮಧ್ಯಾಹ್ನ 12.30ಕ್ಕೆ ಆಲಿಸಲಾಗುವುದು. ನಂತರ ಶಿಕ್ಷೆಯ ಪ್ರಮಾಣವನ್ನು ಪ್ರಕಟಿಸಲಾಗುವುದು ಎಂದು ನ್ಯಾಯಾಧೀಶ ದಾಸ್ ತಿಳಿಸಿದ್ದಾರೆ. ನ್ಯಾಯಾಧೀಶರು ಆದೇಶ ನೀಡುತ್ತಿದ್ದ ಸಂದರ್ಭದಲ್ಲಿ ರಾಯ್, ಈ ಪ್ರಕರಣದಲ್ಲಿ ತನ್ನನ್ನು ಸಿಲುಕಿಸಲಾಗಿದೆ ಎಂದು ಹೇಳಿಕೊಂಡ.

‘ನಾನು ರುದ್ರಾಕ್ಷಿಯ ಹಾರ ಹಾಕಿಕೊಳ್ಳುತ್ತೇನೆ. ನಾನು ಅಪರಾಧ ಎಸಗಿದ್ದಿದ್ದರೆ ಅದು ತುಂಡಾಗಬೇಕಿತ್ತು’ ಎಂದು ರಾಯ್ ತನ್ನನ್ನು ಸಮರ್ಥಿಸಿಕೊಂಡಿದ್ದ.

ಆದೇಶ ಪ್ರಕಟವಾದ ನಂತರ ಪೊಲೀಸರು ರಾಯ್‌ನನ್ನು ಬಿಗಿ ಭದ್ರತೆಯಲ್ಲಿ ನ್ಯಾಯಾಲಯದಿಂದ ಹೊರಗೆ ಕರೆದೊಯ್ದರು. ರಾಯ್ ಮತ್ತು ಮಾಧ್ಯಮ ಪ್ರತಿನಿಧಿಗಳ ನಡುವೆ ಯಾವುದೇ ಮಾತುಕತೆ ನಡೆಯಲು ಪೊಲೀಸರು ಅವಕಾಶ ನೀಡಲಿಲ್ಲ.

‘ಇತರರಿಗೂ ಶಿಕ್ಷೆಯಾಗಬೇಕು’

ಒಂದನೇ ಪುಟದಿಂದ...

ಜೀವನದ ಕೊನೆಯವರೆಗೂ ತಾವು ಮತ್ತು ತಮ್ಮ ಪತಿ ನ್ಯಾಯಕ್ಕಾಗಿ ಹೋರಾಟ ನಡೆಸುವುದಾಗಿ ಅವರು ಹೇಳಿದ್ದಾರೆ. ‘ನಮ್ಮ ಮಗಳ ಕೊಲೆಯಲ್ಲಿ ಭಾಗಿಯಾದ ಇತರರಿಗೆ ಶಿಕ್ಷೆಯಾದಾಗ ಈ ಪ್ರಕರಣ ಅಂತ್ಯಗೊಳ್ಳುತ್ತದೆ. ಆ ದಿನಕ್ಕಾಗಿ ನಾವು ಕಾಯುತ್ತೇವೆ... ಅಲ್ಲಿಯವರೆಗೆ ನಮಗೆ ನಿದ್ದೆ ಬರುವುದಿಲ್ಲ’ ಎಂದು ಅವರು ಹೇಳಿದ್ದಾರೆ.

‘ಸೈಫ್‌ಗೆ ಇರಿತ: ಭೂಗತ ಗ್ಯಾಂಗ್ ನಂಟಿಲ್ಲ’

ಮುಂಬೈ (ಪಿಟಿಐ): ಬಾಲಿವುಡ್ ನಟ ಸೈಫ್ ಅಲಿ ಖಾನ್‌ಗೆ ಚಾಕುವಿನಿಂದ ಇರಿದಿರುವ ಕೃತ್ಯದ ಹಿಂದೆ ಭೂಗತ ಪಾತಕಿಗಳ ನಂಟು ಇಲ್ಲ ಎಂದು ಮಹಾರಾಷ್ಟ್ರದ ಗೃಹ ಸಚಿವ ಯೋಗೇಶ್ ಕದಂ ಶನಿವಾರ ಹೇಳಿದ್ದಾರೆ.

‘ಆರೋಪಿಯ ಕೃತ್ಯದ ಹಿಂದಿನ ಉದ್ದೇಶ ದರೋಡೆ ಮಾಡುವುದಾಗಿದೆ ಮತ್ತು ಚಾಕು ಇರಿತದಲ್ಲಿ ಯಾವುದೇ ಭೂಗತ ಪಾತಕಿಗಳ ಗುಂಪು ಭಾಗಿಯಾಗಿಲ್ಲ. ಈ ಅಂಶಗಳು ತನಿಖೆಯಲ್ಲಿ ಕಂಡುಬಂದಿವೆ’ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಗುರುವಾರ ನಸುಕಿನಲ್ಲಿ ಸೈಫ್‌ಗೆ ಚಾಕುವಿನಿಂದ ಇರಿದು ಪರಾರಿಯಾಗಿರುವ ಆರೋಪಿಯ ಬಂಧನಕ್ಕೆ ಪೊಲೀಸರ 30ಕ್ಕೂ ಹೆಚ್ಚು ತಂಡಗಳು ತೀವ್ರ ಶೋಧ ನಡೆಸುತ್ತಿವೆ.

‘ಪ್ರಾಥಮಿಕ ತನಿಖೆಯ ಪ್ರಕಾರ, ದಾಳಿಕೋರನು ಯಾವುದೇ ಕ್ರಿಮಿನಲ್ ಗ್ಯಾಂಗ್ ಜತೆ ಸಂಪರ್ಕ ಹೊಂದಿರುವುದು ಕಂಡುಬಂದಿಲ್ಲ. ಬಹುಶಃ ಆತನಿಗೆ ತಾನು ಯಾರ ಮನೆಗೆ ನುಗ್ಗಿದ್ದೇನೆ ಎನ್ನುವ ಅರಿವು ಇರಲಿಕ್ಕಿಲ್ಲ’ ಎಂದು ಪೊಲೀಸರು ತಿಳಿಸಿದ್ದಾರೆ.

ಎರಡು–ಮೂರು ದಿನಗಳಲ್ಲಿ ಸೈಫ್ ಮನೆಗೆ: ಲೀಲಾವತಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಸೈಫ್ ಚೇತರಿಸಿಕೊಳ್ಳುತ್ತಿದ್ದು, ಇನ್ನು ಎರಡು ಮೂರು ದಿನಗಳಲ್ಲಿ ಅವರನ್ನು ಆಸ್ಪತ್ರೆಯಿಂದ ಬಿಡುಗಡೆ ಮಾಡುವ ನಿರೀಕ್ಷೆಯಿದೆ ಎಂದು ಅವರಿಗೆ ಚಿಕಿತ್ಸೆ ನೀಡುತ್ತಿರುವ ವೈದ್ಯರು ಶನಿವಾರ ತಿಳಿಸಿದ್ದಾರೆ.

ಇಯರ್‌ಫೋನ್ ಖರೀದಿ: ಸೈಫ್ ಅಲಿ ಖಾನ್ ಅವರಿಗೆ ಚಾಕುವಿನಿಂದ ಇರಿದು ಪರಾರಿಯಾದ ನಂತರ ಶಂಕಿತ ಆರೋಪಿ ದಾದರ್‌ನಲ್ಲಿನ ಮೊಬೈಲ್ ಅಂಗಡಿಯೊಂದರಲ್ಲಿ ಇಯರ್‌ಫೋನ್ ಖರೀದಿಸಿರುವುದು ಅಂಗಡಿಯ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ.

‘ದಾಳಿಕೋರ ಆಭರಣ ಮುಟ್ಟಿಲ್ಲ’

‘ದಾಳಿಕೋರನಿಗೆ ಸೈಫ್ ಪ್ರತಿರೋಧ ತೋರಿದಾಗ, ದಾಳಿಕೋರ ತುಂಬಾ ಆಕ್ರಮಣಕಾರಿಯಾಗಿ ಸೈಫ್‌ಗೆ ಹಲವು ಬಾರಿ ಇರಿದಿದ್ದಾನೆ. ಆದರೆ, ಕೊಠಡಿಯಲ್ಲಿ ಹೊರಗೆ ಕಾಣುವಂತೆ ಇಟ್ಟಿದ್ದ ಆಭರಣಗಳನ್ನು ಮುಟ್ಟಿರಲಿಲ್ಲ’ ಎಂದು ಸೈಫ್ ಅಲಿ ಖಾನ್ ಅವರ ಪತ್ನಿ ಮತ್ತು ನಟಿ ಕರೀನಾ ಕಪೂರ್ ಅವರು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ.

ಬಾಂದ್ರಾದಲ್ಲಿರುವ ಬಾಲಿವುಡ್ ತಾರಾ ಜೋಡಿಯ ಅಪಾರ್ಟ್‌ಮೆಂಟ್‌ನಲ್ಲಿ ಗುರುವಾರ ನಸುಕಿನಲ್ಲಿ ನಡೆದ ದಾಳಿಯ ನಂತರ ಪೊಲೀಸರು ನಟಿಯ ಹೇಳಿಕೆ ದಾಖಲಿಸಿಕೊಂಡಿದ್ದಾರೆ ಎಂದು ಅಧಿಕಾರಿಯೊಬ್ಬರು ಶನಿವಾರ ತಿಳಿಸಿದ್ದಾರೆ.

ಛತ್ತೀಸಗಢದಲ್ಲಿ ಶಂಕಿತ ವಶಕ್ಕೆ

ಮುಂಬೈ: ಬಾಲಿವುಡ್ ನಟ ಸೈಫ್ ಅಲಿ ಖಾನ್ ಅವರಿಗೆ ಚಾಕುವಿನಿಂದ ಇರಿದ ಪ್ರಕರಣದಲ್ಲಿ ಶಂಕಿತನನ್ನು ಛತ್ತೀಸಗಢದಲ್ಲಿ ಶನಿವಾರ ರೈಲಿನಲ್ಲಿದ್ದಾಗ ವಶಕ್ಕೆ ಪಡೆಯಲಾಗಿದೆ.

ಶಂಕಿತನನ್ನು ಆಕಾಶ್ ಕೈಲಾಶ್ ಕನೋಜಿಯಾ (31) ಎಂದು ಗುರುತಿಸಲಾಗಿದೆ. ಗುಪ್ತಚರ ಮಾಹಿತಿ ಆಧರಿಸಿ ರೈಲ್ವೆ ಸುರಕ್ಷತಾ ಪಡೆಯು (ಆರ್‌ಪಿಎಫ್) ಈತನನ್ನು ವಶಕ್ಕೆ ಪಡೆದಿದೆ. ಶಂಕಿತನನ್ನು ಟ್ರಾನ್ಸಿಟ್ ರಿಮ್ಯಾಂಡ್ ಅಡಿಯಲ್ಲಿ ವಶಕ್ಕೆ ಪಡೆಯಲು ಮುಂಬೈ ಪೊಲೀಸರ ತಂಡವು ನೆರೆಯ ರಾಜ್ಯಕ್ಕೆ ತೆರಳಿದೆ.

ಮುಂಬೈನ ಲೋಕಮಾನ್ಯ ತಿಲಕ್ ನಿಲ್ದಾಣದಿಂದ ಶಾಲಿಮಾರ್ ಕೋಲ್ಕತ್ತ ನಿಲ್ದಾಣದ ನಡುವೆ ಸಂಚರಿಸುವ ಜ್ಞಾನೇಶ್ವರಿ ಎಕ್ಸ್‌ಪ್ರೆಸ್ ರೈಲಿನಲ್ಲಿ ಶಂಕಿತ ಪತ್ತೆಯಾಗಿದ್ದಾನೆ ಎಂದು ತಿಳಿದುಬಂದಿದೆ.

ಮುಂಬೈ ಪೊಲೀಸರು ಶಂಕಿತನ ಫೋಟೊವನ್ನು ಮಹಾರಾಷ್ಟ್ರ ಮತ್ತು ನೆರೆಯ ರಾಜ್ಯಗಳ ಠಾಣೆಗಳಿಗೆ ಕಳುಹಿಸಿದ್ದರು. ರಾಜನಂದಗಾಂವ್ ರೈಲು ನಿಲ್ದಾಣದಲ್ಲಿ ಪರಿಶೀಲನೆ ನಡೆಸಿದಾಗ ಶಂಕಿತ ಪತ್ತೆಯಾಗಿರಲಿಲ್ಲ. ದುರ್ಗ್ ನಿಲ್ದಾಣಕ್ಕೆ ಬಂದ ನಂತರ ವಿವಿಧ ತಂಡಗಳು ಪರಿಶೀಲಿಸಿದಾಗ ರೈಲಿನ ಸಾಮಾನ್ಯ ಬೋಗಿಯಲ್ಲಿ ಪತ್ತೆಯಾಗಿದ್ದಾನೆ. ನಂತರ ಆರ್‌ಪಿಎಫ್ ತಂಡವು ಮುಂಬೈ ಪೊಲೀಸರಿಗೆ ಆತನ ಫೋಟೊವನ್ನು ಕಳುಹಿಸಿತ್ತು. ಅವರು ಆತನ ಗುರುತನ್ನು ಖಚಿತಪಡಿಸಿದರು.

ಸಮಾವೇಶವನ್ನು ಸಚಿವ ಶಿವರಾಜ್‌ಸಿಂಗ್ ಚೌಹಾಣ್ ಅವರು ಅಡಿಕೆಯ ಹಿಂಗಾರ ಬಿಡಿಸುವ ಮೂಲಕ ಉದ್ಘಾಟಿಸಿದರು. ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಹರತಾಳು ಹಾಲಪ್ಪ, ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ, ಶಾಸಕ ಗೋಪಾಲಕೃಷ್ಣ ಬೇಳೂರು, ಮಾಜಿ ಸಚಿವ ಕಾಗೋಡು ತಿಮ್ಮಪ್ಪ, ಸಚಿವ ಮಧು ಬಂಗಾರಪ್ಪ ಹಾಗೂ ಸಂಸದ ಬಿ.ವೈ.ರಾಘವೇಂದ್ರ ಉಪಸ್ಥಿತರಿದ್ದರು

‘ಕೃಷಿ ಉತ್ಪನ್ನ ಸಾಗಾಣಿಕೆ ವೆಚ್ಚ ಭರಿಸಲಿದೆ ಸರ್ಕಾರ’

ಒಂದನೇ ಪುಟದಿಂದ...

‘ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆಯಡಿ ದೇಶದಾದ್ಯಂತ ರೈತರು ವರ್ಷಕ್ಕೆ ₹ 10,000 ಸಹಾಯ ಧನ ಪಡೆಯುತ್ತಿದ್ದಾರೆ. ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಯೋಜನೆಗೆ ರಾಜ್ಯದ ಪಾಲಿನ ಕೊಡುಗೆ ನಿಲ್ಲಿಸಿದೆ. ಆದರೆ, ಮಧ್ಯಪ್ರದೇಶದಲ್ಲಿ ಬಿಜೆಪಿ ಸರ್ಕಾರ ಆಡಳಿತ ನಡೆಸುತ್ತಿರುವುದರಿಂದ ಅಲ್ಲಿನ ರೈತರಿಗೆ ಇದರ ಲಾಭ ದೊರೆಯುತ್ತಿದೆ’ ಎಂದರು.

‘ಬೆಳೆಗಾರರ ಆತಂಕ ದೂರ ಮಾಡಿ’: ‘ಅಡಿಕೆ ಕ್ಯಾನ್ಸರ್‌ಕಾರಕ ಅಲ್ಲ ಎಂದು ಕೇಂದ್ರ ಸರ್ಕಾರ ಅಧಿಕೃತವಾಗಿ ಘೋಷಣೆ ಮಾಡಬೇಕು. ಆ ಮೂಲಕ ಬೆಳೆಗಾರರಲ್ಲಿರುವ ಆತಂಕ ದೂರ ಮಾಡಬೇಕು’ ಎಂದು ಸಮಾವೇಶದಲ್ಲಿ ಪಾಲ್ಗೊಂಡಿದ್ದ ಜಿಲ್ಲಾ ಉಸ್ತುವಾರಿ ಸಚಿವ ಮಧು ಬಂಗಾರಪ್ಪ, ಕೇಂದ್ರ ಸಚಿವ ಚೌಹಾಣ್ ಅವರಿಗೆ ಒತ್ತಾಯಿಸಿದರು.

‘ತೀರ್ಥಹಳ್ಳಿಯಲ್ಲಿ ₹500 ಕೋಟಿ ವೆಚ್ಚದಲ್ಲಿ ರಾಷ್ಟ್ರಮಟ್ಟದ ಅಡಿಕೆ ಸಂಶೋಧನಾ ಕೇಂದ್ರ ಸ್ಥಾಪಿಸುವುದಾಗಿ ಆರು ವರ್ಷಗಳ ಹಿಂದೆ ಕೇಂದ್ರದ ಗೃಹ ಸಚಿವ ಅಮಿತ್ ಶಾ ಘೋಷಣೆ ಮಾಡಿದ್ದರು. ಆ ಭರವಸೆ ಈಡೇರಿಸಿ’ ಎಂದು ಆಗ್ರಹಿಸಿದರು.

ಹೈಕೋರ್ಟ್ ಆದೇಶ ಪ್ರಶ್ನಿಸಿ ಸುಪ್ರೀಂ ಮೆಟ್ಟಿಲೇರಿದ ಡಿವೈಎಸ್‌ಪಿ

ನವದೆಹಲಿ (ಪಿಟಿಐ): ಮದುವೆಯಾಗುವ ಭರವಸೆ ನೀಡಿ ಅತ್ಯಾಚಾರ ನಡೆಸಿದ ಆರೋಪಕ್ಕೆ ಸಂಬಂಧಿಸಿದಂತೆ ಐಪಿಎಸ್ ಅಧಿಕಾರಿ ವಿರುದ್ಧ ದಾಖಲಾಗಿದ್ದ ಎಫ್‌ಐಆರ್ ಅನ್ನು ರದ್ದು ಮಾಡಿದ ಪಟ್ನಾ ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ ಬಿಹಾರದ ಮಹಿಳಾ ಉಪ ಪೊಲೀಸ್ ವರಿಷ್ಠಾಧಿಕಾರಿ (ಡಿವೈಎಸ್‌ಪಿ) ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದಾರೆ.

ನ್ಯಾಯಮೂರ್ತಿಗಳಾದ ಪಂಕಜ್ ಮಿಥಲ್ ಮತ್ತು ಅಹಸಾನುದ್ದೀನ್ ಅಮಾನುಲ್ಲಾಹ್ ಅವರು ಸೋಮವಾರ ಅರ್ಜಿಯ ವಿಚಾರಣೆ ನಡೆಸುವ ಸಾಧ್ಯತೆ ಇದೆ. ಹೈಕೋರ್ಟ್ 2024ರ, ಸೆಪ್ಟೆಂಬರ್ 19ರಂದು ನೀಡಿದ ತೀರ್ಪು, ಪ್ರಕರಣದ ವಾಸ್ತವಾಂಶಗಳಿಗೆ ಮತ್ತು ಸ್ಥಾಪಿತ ಕಾನೂನಿಗೆ ವಿರುದ್ಧವಾಗಿದೆ ಎಂದು ಡಿವೈಎಸ್‌ಪಿ ಪರ ವಕೀಲರು ತಿಳಿದ್ದಾರೆ.

ಮಹಿಳಾ ಅಧಿಕಾರಿ ನೀಡಿದ ದೂರಿನ ಅನ್ವಯ ಐಪಿಎಸ್ ಅಧಿಕಾರಿ ಪುಷ್ಕರ್ ಆನಂದ್, ಅವರ ಪೋಷಕರ ವಿರುದ್ಧ ಎಫ್‌ಐಆರ್ ದಾಖಲಾಗಿತ್ತು.

ದೇಶದಾದ್ಯಂತ ಜಾತಿಗಣತಿಗೆ ರಾಹುಲ್ ಗಾಂಧಿ ಒತ್ತಾಯ

‘ಮೀಸಲಾತಿ ಮಿತಿ ಕೈಬಿಡಲು ಸಕಾಲ’

ಪ್ರಜಾವಾಣಿ ವಾರ್ತೆ

ಪಟ್ನಾ: ದೇಶದಾದ್ಯಂತ ಜಾತಿಗಣತಿ ನಡೆಸುವ ಮತ್ತು ಮೀಸಲಾತಿಗೆ ನಿಗದಿಪಡಿಸಿರುವ ಶೇ 50ರ ಮಿತಿಯನ್ನು ತೆಗೆದುಹಾಕುವ ಅಗತ್ಯವನ್ನು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಶನಿವಾರ ಒತ್ತಿ ಹೇಳಿದರು.

ಬಿಹಾರ ರಾಜಧಾನಿ ಪಟ್ನಾದಲ್ಲಿ ನಡೆದ ‘ಸಂವಿಧಾನ ಉಳಿಸಿ ಸಮ್ಮೇಳನ’ ಉದ್ದೇಶಿಸಿ ಮಾತನಾಡಿದ ಅವರು, ಒಟ್ಟು ಜನಸಂಖ್ಯೆಯಲ್ಲಿ ಇತರೆ ಹಿಂದುಳಿದ ವರ್ಗ (ಒಬಿಸಿ) , ಪರಿಶಿಷ್ಟ ಜಾತಿ (ಎಸ್‌ಸಿ), ಪರಿಶಿಷ್ಟ ಪಂಗಡ (ಎಸ್‌ಟಿ) ಮತ್ತು ಅಲ್ಪಸಂಖ್ಯಾತ ಸಮುದಾಯದವರು ಶೇ 80ರಷ್ಟಿದ್ದಾರೆ. ಆದರೆ ಪ್ರತಿ 100 ಉನ್ನತ ಅಧಿಕಾರಿಗಳ ಪೈಕಿ, ಶೇ 10ರಷ್ಟು ಜನರು ಮಾತ್ರ ಒಬಿಸಿ/ಎಸ್‌ಸಿ/ ಎಸ್‌ಟಿ ಸಮುದಾಯಕ್ಕೆ ಸೇರಿದವರಾಗಿದ್ದಾರೆ ಎಂದು ಹೇಳಿದರು.

ಹಂಚಿಕೆಯಾದ ಬಜೆಟ್ ಅನುದಾನದ ಬಳಕೆಯಲ್ಲಿಯೂ ಇದೇ ರೀತಿ ಆಗುತ್ತದೆ. ಬಜೆಟ್‌ನಲ್ಲಿ ಮೀಸಲಿಟ್ಟ ಪ್ರತಿ ₹100ರಲ್ಲಿ ಹಿಂದುಳಿದ ಅಥವಾ ಶೋಷಿತ ವರ್ಗದ ಅಧಿಕಾರಿಗಳು ಖರ್ಚು ಮಾಡಲು ಕೇವಲ ₹6 ಪಡೆಯುತ್ತಾರೆ. ಉಳಿದ ಭಾಗವನ್ನು ಶ್ರೀಮಂತ ವರ್ಗದ ಅಧಿಕಾರಿಗಳು ಪಡೆಯುತ್ತಾರೆ. ಇದೇ ಕಾರಣಕ್ಕಾಗಿ ದೇಶದಾದ್ಯಂತ ಜಾತಿಗಣತಿ ನಡೆಸಲು ಇದು ಸಕಾಲ. ಇದರಿಂದ ವಿವಿಧ ವರ್ಗಗಳ ಜನರು ಜನಸಂಖ್ಯೆಗೆ ಅನುಗುಣವಾಗಿ ತಮ್ಮ ಪಾಲನ್ನು ಪಡೆಯಬಹುದು ಎಂದು ಹೇಳಿದರು.

ಮೀಸಲಾತಿಗೆ ಇರುವ ಮಿತಿಯನ್ನು ತೆಗೆದುಹಾಕುವ ಅಗತ್ಯವನ್ನು ಒತ್ತಿ ಹೇಳಿದ ಅವರು, ಎಕ್ಸ್‌–ರೇ ಅಥವಾ ಎಂಆರ್‌ಐ ವರದಿ ಪರಿಶೀಲಿಸಿದ ನಂತರವೇ ವೈದ್ಯರು ಔಷಧವನ್ನು ಬರೆದುಕೊಡುತ್ತಾರೆ. ಅದರಂತೆ ಸಂಖ್ಯಾಬಾಹುಳ್ಯ ಹೊಂದಿದ್ದರೂ ಸರ್ಕಾರಿ ವಲಯದಲ್ಲಿ ಕಡಿಮೆ ಪ್ರಾತಿನಿಧ್ಯ ಹೊಂದಿರುವ ಶೋಷಿತ ವರ್ಗಗಳಿಗಾಗಿ ನಾವು ಜಾತಿಗಣತಿ ನಡೆಸಬೇಕಿದೆ ಎಂದು ಹೇಳಿದರು.

ಒಬಿಸಿ, ದಲಿತ ಸಂಸದರೊಂದಿಗೆ ಸಂವಾದ ನಡೆಸಿದೆ. ‘ನಾವು ಜನರ ಪ್ರತಿನಿಧಿಗಳಾಗಿರಬಹುದು ಆದರೆ ಪಕ್ಷದ ಅಧಿಕಾರವು ಬೇರೆಡೆ ಕೇಂದ್ರೀಕೃತವಾಗಿದೆ. ಹೀಗಾಗಿ ಉಸಿರುಗಟ್ಟುವಂತೆ ಅನಿಸುತ್ತಿದೆ’ ಎಂದು ಅಳಲು ತೋಡಿಕೊಂಡರು ಎಂದು ಅವರು ಹೇಳಿದರು.

ಭಾಗವತ್ ವಿರುದ್ಧ ವಾಗ್ದಾಳಿ

ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಅವರು ಇತ್ತೀಚೆಗೆ, ‘ಭಾರತವು ವಾಸ್ತವವಾಗಿ 1947 ಆಗಸ್ಟ್ 15ರಂದು ಸ್ವಾತಂತ್ರ್ಯ ಪಡೆದಿಲ್ಲ’ ಎಂದು ಹೇಳಿದ್ದನ್ನು ಉಲ್ಲೇಖಿಸಿ ಅವರ ವಿರುದ್ಧ ರಾಹುಲ್ ವಾಗ್ದಾಳಿ ನಡೆಸಿದರು. ಭಾಗವತ್ ಅವರು ಭಾರತದ ಸಂವಿಧಾನವನ್ನು ಮತ್ತು ಬಿ.ಆರ್ ಅಂಬೇಡ್ಕರ್, ಮಹಾತ್ಮ ಗಾಂಧೀಜಿ, ಸ್ವಾತಂತ್ರ್ಯ ಹೋರಾಟಗಾರರನ್ನು ಅವಮಾನಿಸಿದ್ದಾರೆ ಎಂದು ಹರಿಹಾಯ್ದರು.

ರಾಹುಲ್ ಗಾಂಧಿ

ಪ್ರಜಾವಾಣಿ
ಭಾನುವಾರದ ಪುರವಣಿ
ಭಾನುವಾರ, 19 ಜನವರಿ 2025

ಧರೆಯ ನಕ್ಷತ್ರಗಳು ಈ ಮಿಂಚುಹುಳುಗಳು... 11

ಕ್ಯಾನ್ವಾಸ್ ಮೇಲೆ ಕರುಣೆಯ ಕಡಲು... 12

ಬ್ಲೇಡ್ಸ್ ಆಫ್ ಗ್ಲೋರಿ ಪುಣೆಯ ಕ್ರಿಕೆಟ್ ದೇಗುಲ 13

ಇರಬೇಕಾ ಮನೆ ತುಂಬಾ ಮಕ್ಕಳು?

ಮಕ್ಕಳಿರಲವ್ವ ಮನೆ ತುಂಬ–ಈ ಮಾತು ತುಂಬಾ ಸವಕಲಾಯಿತು. ಆರತಿಗೊಂದು, ಕೀರುತಿಗೊಂದು ಎನ್ನುವ ಘೋಷಣೆ ಗೋಡೆ ಮೇಲೆ ದಪ್ಪ ಅಕ್ಷರದಲ್ಲಿ ಮೂಡಿ ಮಾಸಿಹೋಯಿತು. ಒಂದು ಸಾಕು, ಎರಡು ಬೇಡ ಎನ್ನುವುದು ಈಗಿನ ಮಾತು. ಆದರೆ, ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್, ಹವ್ಯಕ ಸಮಾಜದ ಸ್ವಾಮೀಜಿಗಳು, ಆಂಧ್ರಪ್ರದೇಶದ ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ಎರಡು ಅಥವಾ ಮೂರಕ್ಕಿಂತ ಹೆಚ್ಚು ಮಕ್ಕಳನ್ನು ಹೊಂದುವಂತೆ ಕರೆ ನೀಡಿದ್ದಾರೆ. ಒಟ್ಟು ಫಲವತ್ತತೆ ದರ (ಟಿಎಫ್‌ಆರ್) 2.1 ಕ್ಕಿಂತ ಕಡಿಮೆ ಇರಬಾರದು. ಇದಕ್ಕಿಂತ ಕಡಿಮೆಯಾದರೆ ಯಾವುದೇ ಬಿಕ್ಕಟ್ಟು ಇಲ್ಲದಿದ್ದರೂ ಆ ಸಮಾಜ ನಾಶವಾಗುತ್ತದೆ. ಕುಟುಂಬ ಸುಭದ್ರವಾಗಿದ್ದರೆ, ಸಮಾಜವೂ ಗಟ್ಟಿಯಾಗಿರುತ್ತದೆ ಎನ್ನುವುದು ಅವರ ಪ್ರತಿಪಾದನೆ. ಆದರೆ, ಈ ಕುರಿತು ಮಹಿಳೆಯರು, ವಿಷಯ ತಜ್ಞರು ಹೇಳಿರುವ ಅಭಿಪ್ರಾಯಗಳನ್ನು **ರಶ್ಮಿ ಎಸ್** ಕ್ರೋಡೀಕರಿಸಿದ್ದಾರೆ.

ಕಾಲಕ್ರಮೇಣ ಈ ಕರೆ ಮರೆತು ಹೋಗಬಹುದು

ಹೆಚ್ಚು ಮಕ್ಕಳನ್ನು ಹೆರಬೇಕು ಎನ್ನುವ ಸ್ವಾಮೀಜಿಗಳ ದೂರದೃಷ್ಟಿಯನ್ನು ಶ್ಲಾಘಿಸುತ್ತೇನೆ. ಹೆಚ್ಚುವರಿ ಅಥವಾ ಖರ್ಚಿಗೆ ಹೊರೆಯೆನಿಸಿದರೆ ಮಕ್ಕಳನ್ನು ಮಠಕ್ಕೆ ಒಪ್ಪಿಸಿ ಎನ್ನುವ ಅವರ ಕಾಳಜಿಯನ್ನೂ ಪ್ರಶಂಸಿಸುತ್ತೇನೆ. ಆದರೆ ಇವೆಲ್ಲ ವಾಸ್ತವದಲ್ಲಿ ಸಾಧ್ಯವೇ? ಪ್ರಾಯೋಗಿಕವಾಗಿ ಇವನ್ನು ಅನುಷ್ಠಾನಕ್ಕೆ ತರುವುದು ಕಷ್ಟವಾಗಬಹುದು. ಬಹುತೇಕ ಹೆತ್ತವರು ತಮ್ಮ ಮಕ್ಕಳನ್ನು ತಮ್ಮೊಂದಿಗೇ ಇರಿಸಿಕೊಳ್ಳುವುದಕ್ಕೆ ಆದ್ಯತೆ ನೀಡುತ್ತಾರೆ. ಸ್ವಾಮೀಜಿಗಳು ಈಗ ಶಿಕ್ಷಣದ ಖರ್ಚು ವೆಚ್ಚಕ್ಕೆ ಸಹಾಯ ನೀಡುವುದಾಗಿ, ಮಠಕ್ಕೆ ಒಪ್ಪಿಸಬೇಕಾಗಿ ಕರೆ ನೀಡಿರುವುದನ್ನು ನಮ್ಮ ಸಮುದಾಯ ಕಾಲಕ್ರಮೇಣ ಮರೆತುಹೋಗಬಹುದು.

ಇದರ ಬದಲು ಪರ್ಯಾಯವಾಗಿ ನಮ್ಮ ಸಮುದಾಯದಲ್ಲಿ ವಿವಾಹಿತರ ಸಂಖ್ಯೆ ಹೆಚ್ಚುವಂತೆ ಮಾಡಬೇಕಿದೆ. ಉತ್ತರ ಭಾರತ ಅಥವಾ ದೇಶದ ಇತರ ಭಾಗಗಳಿಂದ ವಧುಗಳನ್ನು ತಂದು ಮದುವೆ ಮಾಡಿಸಬೇಕು. ದಂಪತಿಯೂ ಎರಡು ಮಕ್ಕಳನ್ನು ಹೆತ್ತಾಗ, ಮೂರನೆಯ ಮಗು ಮಾಡಿಕೊಳ್ಳದೆಯೂ ಸಮತೋಲನ ಸಾಧಿಸಿದಂತಾಗುತ್ತದೆ.

ಮೇಘಾ ಅರುಣ್, ಕಾರ್ಪೊರೇಟ್ ಉದ್ಯೋಗಿ

ಸತ್ ಸಂತಾನ ಸೃಷ್ಟಿಯಾಗಲಿ

ಇತ್ತೀಚೆಗೆ ಭಾರತೀಯರಲ್ಲಿ ಇರಬೇಕಾದ ಋಷಿನೋಟ ಮರೆಯಾಗುತ್ತಿದೆ. ಸ್ಥೂಲದೃಷ್ಟಿಗೆ ಮಾತ್ರ ಸೀಮಿತವಲ್ಲದೇ ಇನ್ನೂ ಆಳವಾದ ಆಧ್ಯಾತ್ಮಿಕ ಸೂಕ್ಷ್ಮದೃಷ್ಟಿಯೇ ಭಾರತೀಯತೆ. ಸಮಾಜದಲ್ಲಿ ವಿರಳವಾಗುತ್ತಿರುವ ಸಂತತಿಯ ಕಾರಣವಾಗಿ ಪ್ರಾದೇಶಿಕತೆ ನಶಿಸಿ ಹೋಗುತ್ತಿದೆ. ದೇಶಾಚಾರ, ಸಂಪ್ರದಾಯ, ಪರಂಪರೆ ಎಲ್ಲವು ಮುಂದುವರೆಸಿಕೊಂಡು ಹೊಗುವವರಿಲ್ಲದ ಕಾರಣ ಕಾಣೆಯಾಗುತ್ತಿದೆ. ಬಹುಸಂಸ್ಕೃತಿಯೇ ಪ್ರಧಾನವಾದ ದೇಶದಲ್ಲಿ ಬಹುತ್ವ ನಾಶವಾಗಿ ಏಕತ್ವಕ್ಕೂ ಮಾರಕವಾದ ಕಾಲ ಸನ್ನಿಹಿತವಾಗುತ್ತಿದೆ. ಈ ಕಾಲಘಟ್ಟದಲ್ಲಿ ಒಂದು ಉತ್ತಮವಾದ, ಉತ್ಕೃಷ್ಟವಾದ ಚಿಂತನೆಯನ್ನು, ಆಚಾರ ವಿಚಾರಗಳನ್ನು, ಸಂಸ್ಕಾರಗಳನ್ನು ಹೊಂದಿದ ಸಮಾಜ ಎಂದು ಹೆಸರಾದ ಹವ್ಯಕ ಸಮಾಜದ ಗುರುಗಳಿಬ್ಬರು ಹೆಚ್ಚು ಹೆಚ್ಚು ಸತ್ ಸಂತಾನಗಳನ್ನು ಪಡೆಯಿರಿ, ಸಕಾಲದಲ್ಲಿ ವಿವಾಹವಾದಲ್ಲಿ ಅದು ಸಾಧ್ಯ. ನಿಮಗೆ ಲೌಕಿಕವಾಗಿ, ಆರ್ಥಿಕವಾಗಿ ಕಷ್ಟವಾದಲ್ಲಿ ಮಠಗಳು ನಿಮ್ಮೊಂದಿಗಿವೆ ಎಂಬ ಕರೆ ಕೊಟ್ಟಿರುವುದು ಮೇಲೆ ಹೇಳಿದ ಎಲ್ಲ ವಿಷಯಗಳ ಹಿನ್ನೆಲೆಯಿಂದ ಕೂಡಿದ್ದಾಗಿದೆ.

ಆಳವಾದ ಅಧ್ಯಯನ, ಋಷಿನೋಟ, ವಿಶಿಷ್ಟವಾದ ಜ್ಞಾನ, ಧರ್ಮಚಿಂತನೆ, ದೇಶದ ಹಿತ ಹಾಗೂ ಸ್ವಸ್ಥ ಸಮಾಜದ ಪರಿಕಲ್ಪನೆಯಿಂದ ಆಡಿದ ನುಡಿ ಇದಾಗಿದೆ. ಒಳ್ಳೆಯ ಸಂತಾನ ಸಮಾಜ ಹಾಗೂ ರಾಷ್ಟ್ರಕ್ಕೆ ಆಸ್ತಿಯಾಗುವುದು ಎಂಬುವುದು ಅವರ ಚಿಂತನೆ. ಸ್ವಸ್ಥ ಕುಟುಂಬ ವ್ಯವಸ್ಥೆಯಿಂದ ಸ್ವಸ್ಥ ಸಮಾಜ ನಿರ್ಮಾಣ. ಸ್ವಸ್ಥ ಸಮಾಜ ನಿರ್ಮಾಣದಿಂದ ಉತ್ತಮ ರಾಷ್ಟ್ರ ಸಾಧ್ಯ.

ಚಂಪಕಾ ಭಟ್, ಶಿಕ್ಷಕಿ, ವಿಷ್ಣುಗುಪ್ತ ವಿಶ್ವವಿದ್ಯಾಪೀಠ, ಗೋಕರ್ಣ

ನಮಗಾಗಿ ಅಲ್ಲ, ನಮ್ಮಿಂದ ಮಕ್ಕಳು

ನಮ್ಮ ಮಕ್ಕಳು ಕೇವಲ ನಮ್ಮಿಂದ ಹುಟ್ಟುತ್ತವೆ. ಅವನ್ನು ಮಠ ಮಾನ್ಯಗಳಿಗೆ ಬಿಟ್ಟುಕೊಡಲು ಸಾಧ್ಯವೇ? ಮಕ್ಕಳ ಮೋಹವೇ ಬಲು ದೊಡ್ಡದು ಎಂದು ಕೇಳಿರುತ್ತೇವೆ. ನಮ್ಮ ಕೆರಿಯರ್ ಮತ್ತು ಆರೋಗ್ಯವನ್ನು ಪಣಕ್ಕಿಟ್ಟು ಮಕ್ಕಳನ್ನು ಹೆತ್ತು ಕೊಡುವಷ್ಟು ಧಾರಾಳಿಯಂತೂ ನಾನಲ್ಲ. ನನ್ನ ಬದುಕಿಗೆ ಆರೋಗ್ಯವಂತ ಮಗುವಿನ ಅಗತ್ಯ ಇರುವಂತೆಯೇ ಪ್ರತಿ ಮಗುವಿಗೂ ಆರೋಗ್ಯವಂತ ಅಮ್ಮನಿರಬೇಕಿರುವುದೂ ಅಷ್ಟೇ ಮುಖ್ಯ. ಕುಟುಂಬ ಮುಂದುವರಿಯಲೆಂದು ಮಗು ಮಾಡಿಕೊಳ್ಳುತ್ತೇವೆ. ಅದು ಹೆಣ್ಣಾಗಿರಲಿ, ಗಂಡಾಗಿರಲಿ. ನಮ್ಮ ಕರುಳಿನ ಕುಡಿ. ನಮಗಾಗಿಯೇ ಇರುತ್ತದೆ. ಒಂದು ಅಥವಾ ಎರಡು ಮಗು ಮಾಡಿಕೊಂಡರೂ ಎರಡನೆಯ ಮಗುವಿನ ಲಾಲನೆ ಪಾಲನೆಗೆ ನಾವು ಸದೃಢರಾಗಿದ್ದರೆ ಮಾತ್ರ ಆ ನಿರ್ಧಾರ ಕೈಗೊಳ್ಳುತ್ತೇವೆ. ಮೊದಲನೆಯ ಪ್ರಯತ್ನದಲ್ಲಿಯೇ ಅವಳಿಗಳಾದರೆ, ತ್ರಿವಳಿಗಳಾದರೂ ಅವರನ್ನು ಬೆಳೆಸುವ ಜವಾಬ್ದಾರಿ ನಮ್ಮದೇ ಆಗಿರುತ್ತದೆ. ಮಗು ಹೆರುವ ತೀರ್ಮಾನ ಯಾವತ್ತಿದ್ದರೂ ಹೆಣ್ಣುಮಕ್ಕಳದ್ದೇ ಆಗಿರಬೇಕು.

ಸೌಮ್ಯ ರಾಜಗುರು, ಬೆಂಗಳೂರು

ಎಷ್ಟು ಮಕ್ಕಳು ಅಂತ ಯೋಚಿಸಿಲ್ಲ

ಸದ್ಯಕ್ಕೆ ಒಂದು ಮಗು ಅಂತ ಅಂದುಕೊಂಡಿದ್ದೇವೆ. ಆಮೇಲೆ ಯೋಚನೆ ಮಾಡಬೇಕು.

ಎಲ್ಲ ಮಠಗಳ ಮತ್ತು ನಾಯಕರಿಂದ ಮಕ್ಕಳ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯಕ್ರಮ ನಡೀತಾ ಇದೆ. ಅವರ ಭಾವನೆಯನ್ನ ಗೌರವಿಸುತ್ತೇನೆ. ಆದರೆ ಸಮಾಜ ಬೆಳೆಯುವುದು ಸುಸಂಸ್ಕೃತ ಮಕ್ಕಳಿಂದ. ಮಕ್ಕಳಿಗೆ ಒಳ್ಳೆ ಸಂಸ್ಕಾರ ಮತ್ತು ವಿದ್ಯೆ ಕೊಡುವುದು ಅವಶ್ಯಕ. ಮೊದಲಿನಿಂದಲೂ ನಮ್ಮ ಪರಂಪರೆ, ಸಂಸ್ಕೃತಿಯ ಪರಿಚಯ ಮತ್ತು ಅದರ ಆಚರಣೆ, ಮುಂದಿನ ಪೀಳಿಗೆಗೆ ಕೊಂಡೊಯ್ಯುವಿಕೆ ಇದನ್ನು ಮಕ್ಕಳಲ್ಲಿ ಬಿತ್ತುವುದು ಉತ್ತಮ.

ಈಗಿನ ಕಾಲಘಟ್ಟದಲ್ಲಿ ಯೋಚನೆ ಮಾಡಿ ಮಕ್ಕಳ ಸಂಖ್ಯೆಯನ್ನ ನಿರ್ಧರಿಸುವುದು ಉತ್ತಮ ಎಂದು ನನ್ನ ಅಭಿಪ್ರಾಯ. ಸಮಾಜ ಬೆಳೆಯಲು ಮಕ್ಕಳ ಸಂಖ್ಯೆ ಎಷ್ಟು ಮಹತ್ವವೋ ಅದಕ್ಕೂ ಹೆಚ್ಚಿನ ಮಹತ್ವವನ್ನು ಸಮಾಜದ ಮಕ್ಕಳಲ್ಲಿ ವಿದ್ಯೆ ಮತ್ತು ಸಂಸ್ಕಾರ ರೂಪಿಸಲು ಕೊಡಬೇಕು. ಆಗ ತಾನಾಗಿಯೇ ಒಂದು ಸಮಾಜ ಒಳ್ಳೆಯ ರೀತಿಯಲ್ಲಿ ಬೆಳೆಯಬಹುದು. ಅದಕ್ಕೆ ಮುಂದಿನ ಪೀಳಿಗೆಯ ಸಂಖ್ಯೆಯಷ್ಟೇ ಮಹತ್ವ ಅವರ ಬೆಳವಣಿಗೆ ಮತ್ತು ವಿದ್ಯೆಗೆ ಕೊಡಬೇಕು.

ಸ್ನೇಹಾ, ಬೆಂಗಳೂರು

ಆರೋಗ್ಯದ ಮೇಲೆ ಗಂಭೀರ ಪರಿಣಾಮ

ಹೆಚ್ಚು ಮಕ್ಕಳನ್ನು ಹಡೆಯಬೇಕೆಂಬ ಒತ್ತಡವು ಮಹಿಳೆಯರ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಬೀರಬಹುದು. ಸತತ ಗರ್ಭಧಾರಣೆ ದೇಹದ ಮೇಲೆ ಒತ್ತಡ ಹೇರುತ್ತದೆ. ರಕ್ತಹೀನತೆ (ಅನಿಮಿಯಾ), ನಿರ್ಜಲೀಕರಣ ಮತ್ತು ರಕ್ತದೊತ್ತಡದಂತಹ ಸಮಸ್ಯೆಗಳನ್ನು ಹೆಚ್ಚಿಸುತ್ತದೆ. ಇದು ಮಾನಸಿಕ ಒತ್ತಡವನ್ನೂ ಹೆಚ್ಚಿಸುತ್ತದೆ. ಮನಸ್ಸಿನ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ.

ಈ ಕಾಲದಲ್ಲಿ ಮಕ್ಕಳನ್ನು ಬೆಳೆಸುವುದು ಪಾಲಕರಿಗೆ ಹೆಚ್ಚು ಒತ್ತಡದ ಕೆಲಸವಾಗಿದೆ. ವೃತ್ತಿಜೀವನದ ಒತ್ತಡದ ಜೊತೆಗೆ, ಮಕ್ಕಳ ಶಿಕ್ಷಣ, ಸುರಕ್ಷತೆ ಮತ್ತು ಭವಿಷ್ಯದ ಬಗ್ಗೆ ಕಾಳಜಿ ವಹಿಸುವುದು ಹೆಚ್ಚುತ್ತಿದೆ. ಸಾಮಾಜಿಕ ಮಾಧ್ಯಮ ಮತ್ತು ತಂತ್ರಜ್ಞಾನದ ಬಳಕೆ ಮುಂತಾದ ಮಕ್ಕಳ ಆನ್‌ಲೈನ್ ಚಟುವಟಿಕೆಗಳನ್ನು ನಿಯಂತ್ರಿಸುವುದು ಸೃಷ್ಟಿಯಾಗಿರುವ ಹೊಸ ಒತ್ತಡ. ಆರ್ಥಿಕ ಸವಾಲುಗಳು, ಕುಟುಂಬದ ಸಮತೋಲನ ಮತ್ತು ವೈಯಕ್ತಿಕ ಸಮಯದ ಕೊರತೆ ಪಾಲಕರ ಮಾನಸಿಕ ಮತ್ತು ದೈಹಿಕ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ. ಪಾಲಕರಿಗೆ ಸಹಾಯಕಾರಿ ಸಂಪನ್ಮೂಲಗಳು, ಸಮುದಾಯದ ಬೆಂಬಲ ಮತ್ತು ಸ್ವಲ್ಪ ಮಟ್ಟಿಗೆ ವೈಯಕ್ತಿಕ ಸಮಯ ಅತ್ಯಗತ್ಯವಾಗಿದೆ. ಪಾಲಕತ್ವದ ಒತ್ತಡವನ್ನು ಕಡಿಮೆ ಮಾಡಲು, ಸಮತೋಲನದ ಜೀವನಶೈಲಿ, ಮಕ್ಕಳೊಂದಿಗೆ ಗುಣಮಟ್ಟದ ಸಮಯ ಕಳೆಯುವುದು ಮತ್ತು ವೈಯಕ್ತಿಕ ಆರೋಗ್ಯದ ಬಗ್ಗೆ ಕಾಳಜಿ ವಹಿಸುವುದು ಮುಖ್ಯವಾಗುತ್ತದೆ.

ಡಾ.ಅಲೋಕ ಕುಲಕರ್ಣಿ, ಹಿರಿಯ ಮನೋರೋಗ ತಜ್ಞ, ಮಾನಸ ಮನೋವೈದ್ಯಕೀಯ ಸಂಸ್ಥೆ, ಹುಬ್ಬಳ್ಳಿ.

ಜೀವನ ಗುಣಮಟ್ಟದಲ್ಲಿ ಕುಸಿತ

ಹೆಚ್ಚು ಮಕ್ಕಳಿದ್ದರೆ ಕುಟುಂಬದ ಆರ್ಥಿಕ ವ್ಯವಸ್ಥೆಗೆ ಅನುಕೂಲಕರ ಎಂಬುದು ಹಳೆಯ ನಂಬಿಕೆ. ಬದಲಾದ ಕಾಲಮಾನದಲ್ಲಿ ಮಕ್ಕಳ ಶಿಕ್ಷಣ, ಪೋಷಣೆಯ ವೆಚ್ಚ ಹೆಚ್ಚಾಗಿದೆ. ಹೆಚ್ಚು ಮಕ್ಕಳಿದ್ದರೆ ಎಲ್ಲರಿಗೂ ಉತ್ತಮ ಗುಣಮಟ್ಟದ ಶಿಕ್ಷಣ, ಜೀವನ ನೀಡಲಾಗದು. ಮಕ್ಕಳಿಗೆ ಆರ್ಥಿಕ ಸಬಲೀಕರಣವೂ ಕಷ್ಟವಾಗುತ್ತದೆ. ಕುಟುಂಬದ ಜೀವನ ಗುಣಮಟ್ಟದಲ್ಲಿ ಕುಸಿತ ಕಂಡು ಬರುತ್ತದೆ.

ಮಹಿಳೆಯರೂ ಆರ್ಥಿಕ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವುದು ಕಡಿಮೆ ಆಗುತ್ತದೆ. ಅವರ ದೈಹಿಕ ಆರೋಗ್ಯ ಮತ್ತು ಪ್ರಸವಕಾಲೀನ ರಜೆಗಳು ಉದ್ಯೋಗಸ್ಥ ಮಹಿಳೆ ಉದ್ಯೋಗದಲ್ಲಿ ಮುಂದುವರಿಯದಂತೆ ತಡೆ ಹಾಕಬಹುದು. ಕುಟುಂಬದ ಆರ್ಥಿಕ ಸ್ಥಿತಿ, ಮಹಿಳಾ ಆರ್ಥಿಕ ಮತ್ತು ಸಾಮಾಜಿಕ ಸಬಲೀಕರಣವೂ ನೇಪಥ್ಯಕ್ಕೆ ಸರಿದಂತಾಗುವುದು. ನಮ್ಮ ದೇಶದ ಈಗಿನ ಸಂಪನ್ಮೂಲ ಕೊರತೆಯನ್ನು ಗಮನಿಸಿದರೆ ಹೆಚ್ಚು ಮಕ್ಕಳಾದಷ್ಟೂ, ಜನಸಂಖ್ಯೆ ಹೆಚ್ಚಿದಷ್ಟೂ ಉತ್ತಮ ಸೌಲಭ್ಯಗಳನ್ನು ನೀಡುವುದು ಅಸಾಧ್ಯ. ಆರೋಗ್ಯ, ಶಿಕ್ಷಣ ನೀಡುವುದು ಕಷ್ಟವಾಗುತ್ತದೆ. ದೇಶದಲ್ಲಿ ಬಡತನ ಹೆಚ್ಚುತ್ತದೆ. ಮಿತವಾದ ಕುಟುಂಬವು ಉತ್ತಮ ಗುಣಮಟ್ಟದ ಜೀವನಕ್ಕೆ ಮತ್ತು ದೇಶದ ಪ್ರಗತಿಗೆ ಯಾವತ್ತಿದ್ದರೂ ಅನುಕೂಲಕರ.

ಭಾರತದಲ್ಲಿ ಶೇ 70ರಷ್ಟು ಜನಸಂಖ್ಯೆ ಗ್ರಾಮೀಣ ಭಾಗದಲ್ಲಿದೆ. ಗ್ರಾಮೀಣ ಭಾಗದಲ್ಲಿ ಉದ್ಯೋಗಾವಕಾಶಗಳು ಕಡಿಮೆ. ಈಗಾಗಲೇ ಭೂ ಹಿಡುವಳಿ ಪ್ರದೇಶ ಗಣನೀಯ ಪ್ರಮಾಣದಲ್ಲಿ ಕಡಿಮೆ ಆಗಿದೆ. ಇಂತಹ ಸಂದರ್ಭದಲ್ಲಿ ಹೆಚ್ಚು ಮಕ್ಕಳನ್ನು ಹೆರುವುದರಿಂದ ಜನಸಂಖ್ಯಾ ಸ್ಫೋಟವಾಗುತ್ತದೆ. ಕೌಟುಂಬಿಕ ವೆಚ್ಚ ಹೆಚ್ಚುತ್ತದೆ. ತಲಾ ಆದಾಯ ಕಡಿಮೆ ಆಗುತ್ತದೆ. ಬಡತನ ಹೆಚ್ಚುತ್ತದೆ.

ಬಸವರಾಜ ನಾಗೂರ, ಅರ್ಥಶಾಸ್ತ್ರಜ್ಞರು

ಫಲವಂತಿಕೆಯ ದರ ಆತಂಕ ಬೇಡ

ಫಲವಂತಿಕೆಯು ಕಡಿಮೆ ಆಗುತ್ತಿದೆ. ಹೆಚ್ಚುತ್ತಿರುವ ಪಾಲಿಸಿಸ್ಟಿಕ್ ಓವೆರಿಯನ್ ಸಿಂಡ್ರೋಮ್ (ಪಿಸಿಓಡಿ) ಸಂತಾನೋತ್ಪತ್ತಿ ವಯಸ್ಸಿನಲ್ಲಿ ಹತ್ತರಲ್ಲಿ ನಾಲ್ಕು ಮಹಿಳೆಯರನ್ನು ಬಾಧಿಸುತ್ತಿದೆ. ಅಂಡೋತ್ಪತ್ತಿಯಾಗದೇ ಬಂಜೆತನ ಉಂಟಾಗಲು ಈ ಪಿ.ಸಿ.ಓ.ಎಸ್. ಅತಿಮುಖ್ಯ ಕಾರಣ. ತಪ್ಪಾದ ಜೀವನಶೈಲಿಯಿಂದ ಪುರುಷರಲ್ಲಿಯೂ ಉದರದ ಬೊಜ್ಜು ಹೆಚ್ಚುತ್ತಿದ್ದು ಅವರಲ್ಲೂ ವೀರ್ಯಾಣುಗಳ ಸಂಖ್ಯೆ ಕಡಿಮೆಯಾಗುತ್ತಿದ್ದು, ಪುರುಷ ಬಂಜೆತನವೂ ಹೆಚ್ಚುತ್ತಿದೆ.

ಫಲವಂತಿಕೆಯ ದರ ಕಡಿಮೆ ಎಂದು ಆತಂಕಪಡಬೇಕಾಗಿಲ್ಲ. ಫಲವಂತಿಕೆಯ ದರ ಎಂದರೆ ಋತುಮತಿಯಾದ ನಂತರ ಋತುಬಂಧದವರೆಗೂ ಮಕ್ಕಳನ್ನು ಹೆರುವ ಅಥವಾ ಸಂತಾನೋತ್ಪತ್ತಿಯ ಸಾಮರ್ಥ್ಯದ ಸರಾಸರಿ ದರ ಆಗಿರುತ್ತದೆ. ಈಗ ಕುಸಿತ ಕಂಡುಬಂದಿದೆ ಎಂದು ಅಧ್ಯಯನಗಳು ಹೇಳುತ್ತಿವೆ. ಅದಕ್ಕೆ ಮೂಲ ಕಾರಣ, ಮಹಿಳೆಯರ ಮದುವೆಯ ವಯಸ್ಸು ತಡವಾಗುತ್ತಿರುವುದು, ಸಂತಾನ ನಿಯಂತ್ರಣ ಚಿಕಿತ್ಸೆಯ ಕುರಿತು ಹೆಚ್ಚು ಜಾಗೃತಿ ಮೂಡಿರುವುದು, ಸಂತಾನ ಶಕ್ತಿ ಹರಣ ಚಿಕಿತ್ಸೆಯತ್ತ ಹೆಚ್ಚು ಜನ ಹೆಣ್ಣುಮಕ್ಕಳು ಒಲವು ತೋರುತ್ತಿರುವುದು. ಶಿಶುಮರಣ ದರ ಕಡಿಮೆಯಾಗಿರುವುದರಿಂದಲೂ ಹೆಣ್ಣುಮಕ್ಕಳು ಕಡಿಮೆ ಮಕ್ಕಳನ್ನು ಪಡೆಯುತ್ತಿದ್ದಾರೆ. ಗ್ರಾಮೀಣ ಭಾಗದಲ್ಲಿಯೂ ಸುಧಾರಿತ ಆರೋಗ್ಯ ಚಿಕಿತ್ಸೆಗಳು ದೊರೆಯುತ್ತಿರುವುದರಿಂದ ಕಡಿಮೆ ಮಕ್ಕಳನ್ನು ಹೆರುತ್ತಿದ್ದಾರೆ. ಈ ಕಾರಣದಿಂದ ಫಲವಂತಿಕೆಯ ದರದಲ್ಲಿ ಕುಸಿತ ಕಂಡು ಬಂದಿದೆ.

ಫಲವಂತಿಕೆ ಮಹಿಳೆಯರಲ್ಲಿ ಹೆಚ್ಚಿರುವುದು ಸರಾಸರಿ 22 ರಿಂದ 29 ವಯಸ್ಸಿನ ಒಳಗೆ. ಹೀಗಾಗಿ ಈ ಅವಧಿಯಲ್ಲಿ ಮದುವೆಯಾಗುವುದು ಒಳ್ಳೆಯದು. ಅಂಡಾಶಯದ ಮೀಸಲು ಸಾಮರ್ಥ್ಯ ಹೆಚ್ಚಿದ್ದು ಅಂಡೋತ್ಪತ್ತಿ ಸರಿಯಾಗಿ ಆಗುತ್ತದೆ. ಗರ್ಭಧಾರಣೆಯೂ ಸಲೀಸು, ಸಹಜ ಹೆರಿಗೆಯ ಸಂಭವವೂ ಹೆಚ್ಚು.

ಆಧುನಿಕ ಜೀವನಶೈಲಿಯ ಮಹಿಳೆಯರಲ್ಲಿ ಗರ್ಭಧಾರಣೆಯ ಸಂಖ್ಯೆ ಹೆಚ್ಚಿದ ಹಾಗೇ ಮಹಿಳೆಯರ ತೂಕ ಮಗುವಿನ ತೂಕ ಹೆಚ್ಚುವ ಸಂಭವವಿದೆ. ಗರ್ಭಧಾರಣೆಯಲ್ಲಿ ಮಹಿಳೆಗೆ ಮಧುಮೇಹ ಬರುವ ಸಂಭವವೂ ಹೆಚ್ಚು. ಭಾರತದಲ್ಲಿ ಅರ್ಧದಷ್ಟು ಮಹಿಳೆಯರಲ್ಲಿ ರಕ್ತಹೀನತೆ ಇದೆ.

ಎರಡು ಹೆರಿಗೆಯ ನಡುವೆ ಕನಿಷ್ಠ ಎರಡು ಮೂರು ವರ್ಷ ಅಂತರವಿಲ್ಲದಿದ್ದಾಗ ಮಕ್ಕಳ ಲಾಲನೆ ಪಾಲನೆಯೂ ಕಷ್ಟಕರ. ಹೆಚ್ಚು ಮಕ್ಕಳನ್ನು ಪಡೆಯುವ ಹಂಬಲವಿರುವ ಮಹಿಳೆಯರ ಆರೋಗ್ಯ ಗರ್ಭಧಾರಣೆಗೂ ಮೊದಲೇ ಹದವಾಗಿರಬೇಕು. ರಕ್ತಹೀನತೆ ಅಪೌಷ್ಟಿಕತೆ ಇರದ ಹಾಗೇ ಕಾಳಜಿ ವಹಿಸಬೇಕು.

ಡಾ.ವೀಣಾ ಭಟ್, ಪ್ರಸೂತಿ ತಜ್ಞೆ

ಗುಲಬರ್ಗಾ ವಿ.ವಿ. ಕ್ಯಾಂಪಸ್ ಥೀಮ್ ಪಾರ್ಕ್ ಸೆಳೆತ

ಮನೋಜಕುಮಾರ್ ಗುದ್ದಿ

ಈ ಕ್ಯಾಂಪಸ್‌ನಲ್ಲಿ ನೂರಾರು ಮರಗಳಿವೆ. ಆದರೆ, ಅವು ಯಾವುವೂ ಈ ನಾಲ್ಕು ಪುಟ್ಟ ಮರಗಳಷ್ಟು ಥಟ್ಟನೆ ಗಮನ ಸೆಳೆಯುವುದಿಲ್ಲ. ಏಕೆಂದರೆ, ಈ ಮರಗಳ ಎಲೆಗಳು ಮಾಮೂಲಿಗಿಂತ ಹೆಚ್ಚು ದೊಡ್ಡದಾಗಿವೆ. ಅವುಗಳ ಮೇಲೆ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರು, ಸಮಾಜ ಸುಧಾರಕರು, ರಾಷ್ಟ್ರಕವಿಗಳ ಚಿತ್ರಗಳು ಜೀವತಳೆದಿವೆ....

ಹೌದು, ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ವಿಭಾಗದ ಆವರಣದಲ್ಲಿ ಕಲಾತ್ಮಕವಾಗಿ ನಿರ್ಮಾಣಗೊಂಡಿರುವ ನಾಲ್ಕು ಕಟ್ಟೆಗಳಲ್ಲಿರುವ ಮರಗಳು ಸಾಹಿತ್ಯಾಸಕ್ತರನ್ನು ಸೂಜಿಗಲ್ಲಿನಂತೆ ಸೆಳೆಯುತ್ತವೆ.

ಮರದ ಒಂದು ಎಲೆ ಮೇಲೆ ಬುದ್ಧ, ಮತ್ತೊಂದರ ಮೇಲೆ ಬಸವಣ್ಣ, ಮಗದೊಂದರ ಮೇಲೆ ಡಾ.ಬಾಬಾಸಾಹೇಬ್ ಅಂಬೇಡ್ಕರ್ ಕಂಗೊಳಿಸುತ್ತಿದ್ದಾರೆ. ಇನ್ನೊಂದು ಕಟ್ಟೆಯಲ್ಲಿರುವ ಮರದ ಮೇಲೆ ಮೂರು ಎಲೆಗಳಿದ್ದು, ರಾಷ್ಟ್ರಕವಿಗಳಾದ ಎಂ.ಗೋವಿಂದ ಪೈ, ಕುವೆಂಪು, ಜಿ.ಎಸ್.ಶಿವರುದ್ರಪ್ಪ ಅವರ ಚಿತ್ರಗಳಿವೆ. ಮೂರನೇ ಕಟ್ಟೆಯ ಮರದಲ್ಲಿ ಎಂಟು ಎಲೆಗಳಿವೆ. ಅಲ್ಲಿ ಕನ್ನಡಕ್ಕೆ ಜ್ಞಾನಪೀಠ ಪ್ರಶಸ್ತಿಯನ್ನು ತಂದುಕೊಟ್ಟ ಕುವೆಂಪು, ದ.ರಾ. ಬೇಂದ್ರೆ, ಕೆ.ಶಿವರಾಮ ಕಾರಂತ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ವಿ.ಕೃ.ಗೋಕಾಕ್, ಯು.ಆರ್. ಅನಂತಮೂರ್ತಿ, ಗಿರೀಶ ಕಾರ್ನಾಡ, ಚಂದ್ರಶೇಖರ ಕಂಬಾರ ಅರಳಿದ್ದಾರೆ. ನಾಲ್ಕನೇ ಕಟ್ಟೆಯ ಮರದಲ್ಲಿ ಬುದ್ಧ, ಕನಕದಾಸ, ಸಮಾಜ ಸುಧಾರಕ ನಾರಾಯಣ ಗುರು, ವಚನಕಾರ್ತಿ ಅಕ್ಕ ಮಹಾದೇವಿ, ಸಂತ ಶಿಶುನಾಳ ಷರೀಫ, ಕಲಬುರಗಿಯ ತತ್ವ ಪದಕಾರ ಕಡಕೋಳ ಮಡಿವಾಳಪ್ಪ, ಜಾತಿ ವ್ಯವಸ್ಥೆಯ ವಿರುದ್ಧ ಹೋರಾಡಿದ ಮಹಾರಾಷ್ಟ್ರದ ಜ್ಯೋತಿಬಾ ಫುಲೆ, ದ್ರಾವಿಡ ಚಳವಳಿಯ ನೇತಾರ ರಾಮಸ್ವಾಮಿ ಪೆರಿಯಾರ್ ಹಾಗೂ ಸರ್ವಜ್ಞರು ಮೈದಳೆದಿದ್ದಾರೆ.



ಚಿತ್ರಗಳು: ತಾಜುದ್ದೀನ್ ಆಜಾದ್

ದೃಶ್ಯ ಬೆಳಕು ಸಂಸ್ಥೆಯ ಕೈಚಳಕ

ಸಾಹಿತಿಗಳು, ಸಮಾಜ ಸುಧಾರಕರನ್ನು ನೆನಪಿಸುವ ಈ ಕಟ್ಟೆಗಳನ್ನು ಕಲಬುರಗಿಯ ದೃಶ್ಯ ಬೆಳಕು ಸಂಸ್ಥೆಯ ಕಲಾವಿದರು ಸಾಕಾರಗೊಳಿಸಿದ್ದಾರೆ. ಸ್ಟೀಲ್, ಸಿಮೆಂಟ್, ಫೈಬರ್, ಫೋಮ್‌ಶೀಟ್, ಡಿಜಿಟಲ್ ಪ್ರಿಂಟ್‌ಗಳನ್ನು ಬಳಸಿಕೊಂಡು ಮಿಶ್ರಮಾಧ್ಯಮದಲ್ಲಿ ಕಲಾಕೃತಿಗಳನ್ನು ರೂಪಿಸಲಾಗಿದೆ. ಕಲಾವಿದರಾದ ಬಾಬುರಾವ್ ಎಚ್., ಪರಶುರಾಮ್ ಪಿ. ಹಾಗೂ ಸಹ ಕಲಾವಿದರು ಇವುಗಳನ್ನು ತಯಾರಿಸಿದ್ದಾರೆ. ಬಿಸಿಲಿನ ಪ್ರದೇಶವಾದ ಕಲಬುರಗಿಯಲ್ಲಿ ಈ ಚಿತ್ರಗಳು ಕೆಲಕಾಲದ ಬಳಿಕ ಮಸುಕಾಗುವ ಸಾಧ್ಯತೆಯಿದೆ. ಬಿಸಿಲಿನಿಂದ ರಕ್ಷಿಸುವ ಚಿಂತನೆ ನಡೆದಿದೆ.

ಕನ್ನಡ ಅಧ್ಯಯನ ಸಂಸ್ಥೆಯ ಪ್ರಾಧ್ಯಾಪಕರು, ವಿದ್ಯಾರ್ಥಿಗಳು, ಸಂಶೋಧನಾ ವಿದ್ಯಾರ್ಥಿಗಳು, ಹಳೆಯ ವಿದ್ಯಾರ್ಥಿಗಳು ಈ ಕಟ್ಟೆಗಳ ನಿರ್ಮಾಣ ಯೋಜನೆ ಕಾರ್ಯಗತಗೊಳಿಸಲು ಶ್ರಮಿಸಿದ್ದಾರೆ. ಇದರ ನಿರ್ವಹಣೆಯನ್ನು ಅಧ್ಯಯನ ಸಂಸ್ಥೆಯ ಸಿಬ್ಬಂದಿ ವಹಿಸಿಕೊಂಡಿದ್ದಾರೆ.

ಗುಲಬರ್ಗಾ ವಿಶ್ವವಿದ್ಯಾಲಯ ಕಾಲೇಜು ಅಧ್ಯಾಪಕರ ಸಂಘದ ಅಧ್ಯಕ್ಷ ಈಚನಾಳ ಖಾಜಾವಲಿ, ‘ವಿಶ್ವವಿದ್ಯಾಲಯ ಕ್ಯಾಂಪಸ್‌ನಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಸ್ಫೂರ್ತಿ ಸಿಗಲಿ ಎಂಬ ಉದ್ದೇಶದಿಂದ ಇಂತಹ ವಿಶಿಷ್ಟ ಕಟ್ಟೆಗಳ ನಿರ್ಮಾಣಕ್ಕೆ ಕೈಜೋಡಿಸಿದೆವು. ಇದಕ್ಕಾಗಿ ₹3 ಲಕ್ಷ ಸಂಗ್ರಹಿಸಿ ಕೊಟ್ಟಿದ್ದೇವೆ’ ಎನ್ನುತ್ತಾರೆ.

11ನೇ ಪುಟಕ್ಕೆ...

ವರ್ಣನೆಗೆ ನಿಲುಕದ ವರ್ಲಿ ಚಿತ್ತಾರ

ಸುರೇಂದ್ರ ಪೈ

ಚಿತ್ರಗಳು ಮಾತನಾಡುತ್ತವೆ ಎಂಬುದನ್ನು ಅಲ್ಲಗಳೆಯುವಂತಿಲ್ಲ. ಚಿತ್ರಗಳು ಒಬ್ಬ ವ್ಯಕ್ತಿ, ಒಂದು ಸಮುದಾಯ, ಒಂದು ಸಂಸ್ಕೃತಿ ಮತ್ತು ಪರಂಪರೆಯ ಹಿಂದಿನ ಸಾವಿರಾರು ಕಥೆಗಳನ್ನು, ಭಾವನೆಗಳನ್ನು ಜೀವಂತವನ್ನಾಗಿಸುವ ಕೆಲಸವನ್ನು ಮಾಡುವ ಮಾಧ್ಯಮವಾಗಿವೆ.

ಖಾಲಿಗೋಡೆ ಮೇಲೆ ಎರಡು ಬಣ್ಣಗಳ ಸಮ್ಮಿಲನದಿಂದ ಮೂಡಿ ಬರುವ ಸುಂದರ ಕಥಾಹಂದರವುಳ್ಳ ಕಲಾಕೃತಿಯು ನೋಡುಗರ ಕಣ್ಮನ ಸೆಳೆದಾಗ ಅದನ್ನು ಆಸ್ವಾದಿಸುವ ಪರಿಯೇ ಸೊಗಸಾದದ್ದು. ಅದೊಂದು ವರ್ಣನಾತೀತವಾದ ಅನುಭವಕ್ಕೆ ಸಮ. ಅಂತಹ ಸುಂದರ ಅನುಭವ ನೀಡುವಂತಹ ಒಂದು ಜನಪದ ವರ್ಣಚಿತ್ರಕಲೆಯೇ ವರ್ಲಿ ಕಲೆ. ಈ ಕಲಾ ಪ್ರಕಾರವನ್ನು ಬಹುತೇಕರು ನೋಡಿರಬಹುದು, ನೋಡಿ ಮೆಚ್ಚಿರಲೂಬಹುದು.

ವರ್ಲಿ ಎಂಬುದು ಒಂದು ಬುಡಕಟ್ಟು ಜನಾಂಗ. ಮಹಾರಾಷ್ಟ್ರದ ಥಾಣೆ ಮತ್ತು ಪಾಲ್ಘರ್ ಜಿಲ್ಲೆಗಳ ಪಶ್ಚಿಮ ಘಟ್ಟಗಳಲ್ಲಿ ವಾಸಿಸುವ ಸ್ಥಳೀಯ ಜನರ ಗುಂಪಾಗಿದೆ. ವರ್ಲಿ ಎಂದರೆ ‘ಒಂದು ತುಂಡು ಭೂಮಿ’ ಎಂದರ್ಥ. ಈ ಕಲೆಯು ಬುಡಕಟ್ಟು ಜನಾಂಗದ ಪ್ರಕೃತಿ ಮತ್ತು ಕಾಡಿನೊಂದಿಗೆ ಸಹಬಾಳ್ವೆಯಿಂದ ಪ್ರೇರಿತವಾಗಿದೆ. ಇದು ಹತ್ತನೇ ಶತಮಾನ ಅಥವಾ ಅದಕ್ಕಿಂತ ಮೊದಲು ಹುಟ್ಟಿಕೊಂಡ ಭಾರತದ ಅತ್ಯಂತ ಮಹತ್ವದ ವರ್ಣಚಿತ್ರ ಕಲೆಗಳಲ್ಲಿ ಒಂದಾಗಿದೆ.

ಜೀವ್ಯಾ ಸೋಮ ಮಾಶೆ

ಈ ಕಲೆಯನ್ನು ಆಧುನಿಕ ಜಗತ್ತಿಗೆ ಹೆಚ್ಚು ಹತ್ತಿರವಾಗುವಂತೆ ಮಾಡಿದ ಕೀರ್ತಿ ‘ಜೀವ್ಯಾ ಸೋಮ ಮಾಶೆ’ಗೆ ಸಲ್ಲುತ್ತದೆ. ಅವರು 1970ರ ದಶಕದಲ್ಲಿ ಚಿತ್ರಿಸಲು ಪ್ರಾರಂಭಿಸಿದಾಗ ಈ ಜನಪದ ಕಲೆಯು ಬೇರೆಯದೇ ತಿರುವನ್ನು ಪಡೆದುಕೊಂಡಿತು. ಅವರು ತಮ್ಮ ಬುಡಕಟ್ಟು ಸಂಸ್ಕೃತಿ, ಸಂಪ್ರದಾಯ ಮತ್ತು ಪರಿಸರದೊಂದಿಗೆ ಆಳವಾಗಿ ಸಂಪರ್ಕ ಹೊಂದಿರುವ ವಿವಿಧ ಅಂಶಗಳನ್ನು ಥೀಮ್ ಮೂಲಕ ಜೀವ ತುಂಬಲು ಚಿತ್ರದ ಹಿನ್ನೆಲೆಗಾಗಿ ಕಂದುಮಣ್ಣಿನ ಬಣ್ಣವನ್ನು ಹಾಗೂ ಅದರ ಮೇಲೆ ಚುಕ್ಕೆ ಅಥವಾ ಸಪೂರ ಗೆರೆಗಳ ಮೂಲಕ ಚಿತ್ರ ಬಿಡಿಸಲು ಬಿಳಿಬಣ್ಣವನ್ನು ಬಳಸಿದರು. ಹಾಗಾಗಿ ಇವೆರಡು ಬಣ್ಣಗಳು ವರ್ಲಿ ವರ್ಣಚಿತ್ರಕ್ಕೆ ಜೀವಾಳ. ಜೀವ್ಯಾ ಅವರನ್ನು ವರ್ಲಿ ಚಿತ್ರಕಲೆಯ ಆಧುನಿಕ ಪಿತಾಮಹ ಎಂದು ಕರೆಯಲಾಗುತ್ತದೆ. ಅವರ ಈ ಸಾಧನೆಗೆ 2011ರಲ್ಲಿ ಪದ್ಮಶ್ರೀ ಗೌರವ ಸಂದಿದೆ.

ವರ್ಲಿ ವರ್ಣಚಿತ್ರಕಲೆ ಈಗ ಶಾಲೆ, ಗ್ರಂಥಾಲಯ, ಆಸ್ಪತ್ರೆ, ಸರ್ಕಾರಿ ಕಚೇರಿ ಗೋಡೆ, ದೇವಸ್ಥಾನ, ಮದುವೆ ಮನೆ, ಬಸ್ ನಿಲ್ದಾಣ, ಪಾರ್ಕ್, ರಸ್ತೆಬದಿ ಗೋಡೆ ಹಾಗೂ ಬಹುತೇಕ ಮನೆಗಳ ಹೊರ ಮತ್ತು ಒಳಾಂಗಣದ ವಿನ್ಯಾಸದಲ್ಲಿ ಅನಾವರಣಗೊಂಡಿರುವುದನ್ನು ಕಾಣಬಹುದು. ಕೆಲವು ಮಹಾನಗರ ಪಾಲಿಕೆ, ಪುರಸಭೆಗಳು ತಮ್ಮ ನಗರಗಳ ಸೌಂದರ್ಯ ಹೆಚ್ಚಿಸುವ ದೃಷ್ಟಿಯಿಂದ ಪ್ರಮುಖ ಬೀದಿಗಳ ಗೋಡೆಗಳನ್ನು ಈ ಕಲೆಯಿಂದ ಕಂಗೊಳಿಸುವಂತೆ ಮಾಡಿದ ಉದಾಹರಣೆಗಳು ಸಾಕಷ್ಟಿವೆ. ಅಷ್ಟೇ ಅಲ್ಲದೇ ಮದುವೆಯ ಕರೆಯೋಲೆ, ಭಿತ್ತಿಚಿತ್ರಗಳು, ಆಮಂತ್ರಣ ಪತ್ರಿಕೆ ಹಾಗೂ ಸಭೆ ಸಮಾರಂಭಗಳ ವೇದಿಕೆಯ ಹಿಂಭಾಗದ ಅಲಂಕಾರದಲ್ಲೂ ಈ ಸುಂದರ ವರ್ಲಿ ಕಲೆ ಬಿತ್ತರಗೊಳ್ಳುತ್ತಿದೆ.

ವರ್ಲಿ ಕಲೆಯಲ್ಲಿ ಧಾರ್ಮಿಕ ಚಿತ್ರಕಲೆ, ಆಚರಣೆಯ ವರ್ಣಚಿತ್ರ, ನೈಸರ್ಗಿಕ ಪ್ರಪಂಚದ ವರ್ಣಚಿತ್ರ, ಜ್ಯಾಮಿತೀಯ ವರ್ಣಚಿತ್ರ, ಸಾಮಾಜಿಕ ವ್ಯಾಖ್ಯಾನದ ವರ್ಣಚಿತ್ರಗಳು ಎಂಬ ವಿಧಗಳಿವೆ. ಬುಡಕಟ್ಟು ಜನಾಂಗದ ಕಲಾವಿದರು ಚಿತ್ರಿಸುವ ಥೀಮ್‌ಗಳಲ್ಲಿ ಮುಖ್ಯವಾಗಿ ಬುಡಕಟ್ಟು ಜನಾಂಗದವರ ನೃತ್ಯ, ಬೇಟೆಯಾಡುವ ದೃಶ್ಯ, ಪಕ್ಷಿ ಪ್ರಾಣಿ ಮತ್ತು ಕೀಟ, ಕಾಡಿನ ಜನ ಜೀವನದ ಚಿತ್ರಣ, ಮದುವೆಯ ಮೆರವಣಿಗೆ, ಜಾತ್ರೆ, ಭತ್ತ ಕುಟ್ಟುವ ದೃಶ್ಯ, ತೊಟ್ಟಿಲು ತೂಗುವ, ಬಿತ್ತನೆ ಮಾಡುವ, ಸುಗ್ಗಿ ಹಬ್ಬ, ದಸರಾ ವೈಭವದಂತಹ ಸಾಂಸ್ಕೃತಿಕ ಆಚರಣೆಗಳ ಚಿತ್ರಗಳು ಹೆಚ್ಚು ಪ್ರಚಲಿತವಾಗಿದೆ.

12ನೇ ಪುಟಕ್ಕೆ...



ಧರೆಯ ನಕ್ಷತ್ರಗಳು

ಈ ಮಿಂಚುಹುಳುಗಳು...

ಸತೀಶ್ ಜಿ.ಕೆ. ತೀರ್ಥಹಳ್ಳಿ

ಸಂಖ್ಯೆ ಮತ್ತು ಪರಿಸರದ ದೃಷ್ಟಿಯಿಂದ ಜೀವಿಗಳ ಪ್ರಪಂಚದಲ್ಲಿ ಮುಂಚೂಣಿ ಬಳಗವಾಗಿ ಭಾವಿಸಲಾಗುವ ಕೀಟಗಳದ್ದು ನಿಜಕ್ಕೂ ಬೆರಗಿನ ಲೋಕ. ಕೀಟಗಳ ವೈಶಿಷ್ಯತೆ, ಜೀವಚೈತನ್ಯ ಕಂಡುಕೇಳರಿಯದ ಕುತೂಹಲದ ಗಣಿ. ಹಾತಿ, ಚಿಟ್ಟೆ, ಜೇನ್ನೊಣ, ಜೀರುಂಡೆಗಳದು ಜೀವ ಪಸರಣೆಯ ಯಾನ.. ಗಾಳಿಗೊಡ್ಡಿದ ಗಾಯನ, ಪ್ರತಿ ಕೀಟವೂ ನಮೂನೆಯಲ್ಲಿ ಭಿನ್ನ, ತರತರದ ಬಣ್ಣ, ವಿನ್ಯಾಸವೇ ಚೆನ್ನ..ಕತ್ತಲಲ್ಲಿ ಕಂಗೊಳಿಸುವ ಮಿಂಚುಹುಳುಗಳಂತೂ ಬೆಳಕು ಚುಮ್ಮುವ ಪರಿಯೇ ಅದ್ಭುತ...

ಎಳವೆಯಲ್ಲಿ ಕಂಡ ಡಿಸೆಂಬರ್-ಜನವರಿ ಮಾಸದ ಕರ್ದಿಂಗಳು ಮನೆಯ ಹಿಂದಿನ ಬ್ಯಾಣದ ದೃಶ್ಯ ವೈಭವವೊಂದು ಬಿಡದೇ ಕಾಡುತ್ತಿತ್ತು, ಕರೆಯುತಿತ್ತು.. ಆ ದಿನಗಳ ಅನುಭೂತಿಯನ್ನು ನೆನೆನೆನೆದು ಮತ್ತೊಮ್ಮೆ ಅಂತಹುದೇ ಅನುಭವಕ್ಕೆ ಒಡ್ಡಿಕೊಳ್ಳುವ ಕಾತರಿಕೆಯಲ್ಲಿ ಹಳ್ಳಿಗೆ ತೆರಳಿದ್ದೆ.

ಅದು ಇರುಳ ಕಾರ್ಮುಗಿಲ ವಲಯ, ತಲೆ ಮೇಲೆ ಮಿನುಗು ನಕ್ಷತ್ರಗಳ ಬಳಗ.. ಕೆಳಗಿನ ಬ್ಯಾಣದ ಸುತ್ತಾ ಗಿಡಮರಗಳ ಕೋಟೆಗಂಟಿತ್ತು ಬೆಳಕಿನ ಅವತರಣಿಕೆ. ಕಾಡುತುಂಬಾ ನಕ್ಷತ್ರಗಳೇ ಉದುರಿ ಬಿದ್ದಿರುವ ತರಹ.. ಬೆಳಕಿನ ತುಂಡುಗಳೇ ಗಿಡಗಳಿಗಂಟಿಕೊಂಡ ಭಾವ. ಅಖಂಡರಾತ್ರಿ ಕಪ್ಪುಗಟ್ಟಿದ್ದ ಮರಗಿಡಗಳ ಹಿನ್ನೆಲೆಯಲ್ಲಿ ಬೆಳಕಿನ ಮಣಿಗಳ ಮಿಣಿಮಿಣಿ ವರ್ಣಾಲಂಕಾರ. ಕಗ್ಗಾಡಿನಲ್ಲಿ ಗಳಿಗೆಗೊಮ್ಮೆ ಮಿಂಚಿಮಾಯವಾಗುವ ಬೆಳಕಿನ ನರ್ತನ. ಫಳಕ್., ಫಳಕ್.. ವಿದ್ಯುತ್ ಸಂಚಾರ, ಒಂದರೆಗಳಿಗೆ ಕಾಡು ಕಂಗೊಳಿಸಿದರೆ ಮರುಕ್ಷಣ ಪೂರ್ತಿಕತ್ತಲು.. ಹೀಗೆ ಕತ್ತಲು-ಬೆಳಕಿನಾಟ, ಪದಗಳನ್ನು ಮೀರಿದ ಮಿಂಚುಹುಳುಗಳ ಲಯ-ಲಾಲಿತ್ಯ.

ಕತ್ತಲುಹೀರಿ ಬೆಳಕನು ಬೀರಿ ಹಾರಾಡುವ ಪುಟ್ಟ ಅಚ್ಚರಿಗಳಿಗೆ ಅದೆಲ್ಲಿಂದ ಬಂತೋ ಹೀಗೆ ಬೆಳಗುವ ಗುಣ?!. ವಿಶೇಷವೆಂದರೆ ಕಾಡಂಚಲ್ಲಿ ಹುಟ್ಟಿಬೆಳೆದ ಅದೆಷ್ಟೋ ಮಂದಿಗೂ ಈವರೆಗೂ ಈ ದೃಶ್ಯ ಅಗೋಚರ!. ಕಾಣುವ ಕುತೂಹಲದ ಕಣ್ಣಿನದೇ ಕೊರತೆ.

ಹೀಗೆ ಪ್ರಾಕೃತಿಕ ಸೊಗಸಿಗೆ ಕುರುಡಾಗಿ ಯಾಂತ್ರಿಕ ಸುಖದ ಸೋಗಿಗೆ ಬಿದ್ದ ವರ್ತಮಾನದ ಬಗ್ಗೆ ಬೇಸರವಿದೆ. ನಿಸರ್ಗದತ್ತವಾಗಿ ಪುಟ್ಟ ಹುಳುಗಳು ಕಂಡುಕೊಂಡ ಚಮತ್ಕಾರವೊಂದನ್ನು ಕಣ್ತುಂಬಿಕೊಂಡ ಬಗೆಗೆ ನನಗೊಂದು ಸಮಾಧಾನ ಕಡೆಗೆ.. ಕಾಡು ಕರಗುತ್ತಿರುವ ಹೊತ್ತಿನಲ್ಲಿ ಕಾಣೆಯಾಗುತ್ತಿರುವ ಇಂತಹ ಅಪರೂಪದ ವಿಸ್ಮಯಗಳನ್ನು ಕಾಪಿಟ್ಟುಕೊಳ್ಳುವ ಬಯಕೆಯೂ ಹೆಚ್ಚಾಯ್ತು.

ವಾಸ್ತವವಾಗಿ ಮಿಂಚುಹುಳುಗಳು ಅದ್ಭುತ ಜೀವಸೃಷ್ಟಿ. ಜೈವಿಕದೀಪ್ತಿಯ ಹಿನ್ನೆಲೆಯಲ್ಲಿ ಬೆಳಕು ಹೊತ್ತಿಸಿ ಕಾಡಕತ್ತಲನ್ನು ಬೆಳಗಬಲ್ಲ ಕೀಟಗಳಿವು. 'ಫೋಟುರಿಸ್ ಲೂಸಿರೆಸೆನ್ಸ್', 'ಲ್ಯಾಂಪ್ರಿಸ್ ನಾಕ್ಟಿಲೂಕ', 'ಲೂಸಿಯೋಲ ಲ್ಯಾಟೆರಾಲಿಸ್' ಮುಂತಾದ ವೈಜ್ಞಾನಿಕ ಹೆಸರುಗಳುಳ್ಳ ಸುಮಾರು ಎರಡು ಸಾವಿರ ಪ್ರಭೇದಗಳಲ್ಲಿ ಕಂಡುಬರುತ್ತವೆ. ಕೋಲಿಯಾಪ್ಟೀರಾ ವರ್ಗ ಮತ್ತು ಲ್ಯಾಂಪಿರಿಡೇ ಎಂಬ ಕುಟುಂಬಕ್ಕೆ ಸೇರಿದ ಉಷ್ಣ-ಸಮಶೀತೋಷ್ಣ ವಲಯದ ಪ್ರಮುಖ ದುಂಬಿಗಳಿವು.

ರೂಪ ಪರಿವರ್ತನೆಯ ವಿಶಿಷ್ಟ ವಿಧಾನದಲ್ಲಿ ಮೊಟ್ಟೆ, ಲಾರ್ವಾ, ಪ್ಯೂಪ ಮತ್ತು ವಯಸ್ಕಜೀವಿಗಳಾಗಿ ಸಾಗಿಬರುವ ಬಹುಹಂತಗಳ ಜೀವನಚಕ್ರ ಇವುಗಳದು. ಸುಮಾರಾಗಿ ಮೂರ್‍ನಾಲ್ಕು ವಾರಗಳಷ್ಟೇ ಮಿಂಚುಹುಳುಗಳು ಬದುಕಬಲ್ಲವು. ಆದರೆ ಕೆಲವು ಪ್ರಭೇದಗಳು ಆರು ತಿಂಗಳವರೆಗಿನ ಜೀವಿತಾವಧಿಯನ್ನೂ ಹೊಂದಿರುವ ಉದಾಹರಣೆಗಳಿವೆ. ತೇವಯುತ ಮಣ್ಣಿನಲ್ಲಿ ಮೊಟ್ಟೆಯನ್ನಿಟ್ಟು ಮರಿ ಮಾಡುತ್ತವೆ. ಲಾರ್ವಾಗಳು ಕೆಲವು ವಾರಗಳ ನಂತರ ಸಣ್ಣಕೀಟ, ಮೃದ್ವಂಗಿಗಳನ್ನು ತಿನ್ನುತ್ತಾ ವಯಸ್ಕಜೀವಿಯಾಗಿ ಮಾರ್ಪಡುತ್ತವೆ. ಕೆಲವೊಮ್ಮೆ ಶತ್ರುಗಳಿಂದ ಪಾರಾಗಲು ತಮ್ಮ ಮೈಬಣ್ಣ ಬದಲಾಯಿಸುವ ರಕ್ಷಣಾ ತಂತ್ರವನ್ನೂ ಅಳವಡಿಸಿಕೊಂಡಿರುತ್ತವೆ. ಇವುಗಳಿಗೆ ತೇವದ ವಾತಾವರಣದೊಟ್ಟಿಗೆ 15 ರಿಂದ 30 ಡಿಗ್ರಿ ಉಷ್ಣಾಂಶವು ಹಿತಕರ.

ಮಿಂಚುಹುಳುಗಳಿಗೊಂದು ಪರಿಸರಸ್ನೇಹಿ ಜೀವನಶೈಲಿ ಇದೆ. ಜೇನ್ನೊಣಗಳಂತೆಯೇ ಪರಾಗಸ್ಪರ್ಶಕ್ಕೆ ಇವುಗಳ ಕೊಡುಗೆ ಅಪಾರ. ಕೆಲವೊಮ್ಮೆ ಇವುಗಳ ಲಾರ್ವಾಗಳು ಸಾವಯವ ಪದಾರ್ಥಗಳನ್ನು ವಿಭಜಿಸಿ ಪ್ರಕೃತಿಯಲ್ಲಿ ಪೋಷಕಾಂಶಗಳ ಚಕ್ರೀಯ ಚಲನೆಗೂ ನೆರವಾಗುವುದಿದೆ. ಹಲವು ಬಗೆಯ ಪಕ್ಷಿಗಳು, ಬಾವಲಿ, ಜೇಡ ಮುಂತಾದವುಗಳಿಗೆ ಆಹಾರವಾಗಿಯೂ ಇವು ಆಹಾರ ಸರಪಳಿಯ ಕೊಂಡಿಯಲ್ಲಿ ಬಂಧಿಯಾಗುಳಿದಿವೆ.

ಜೈವಿಕದೀಪ್ತಿ...

ಜೀವಿಗಳು ತಮ್ಮೊಳಗೆ ಬೆಳಕನ್ನು ಉತ್ಪಾದಿಸುವಂತಹ ಒಂದು ವೈಶಿಷ್ಟ್ಯ ವಿದ್ಯಮಾನವೇ ಬಯೋಲುಮಿನೆಸೆನ್ಸ್ (ಜೈವಿಕದೀಪ್ತಿ). ಪ್ರಮುಖವಾಗಿ ಲೂಸಿಫೆರೇಸ್ ಕಿಣ್ವಗಳು ರಾಸಾಯನಿಕವಾದ ಲೂಸಿಫೆರಿನ್ ಮತ್ತು ಆಕ್ಸಿಜನ್ ನ ಉತ್ಕರ್ಷಣೆ ಮಾಡಿ ಬೆಳಕಿನೋತ್ಪತ್ತಿಗೆ ಕಾರಣವಾಗುತ್ತವೆ. ನೂರರಷ್ಟು ಶಕ್ತಿಯನ್ನು ಬೆಳಕಿನ ಉತ್ಪಾದನೆಗಾಗಿ ಉಪಯೋಗಿಸುವ ಮಿಂಚುಹುಳುಗಳಲ್ಲಿ ಉದರದ ಕೆಳಭಾಗದಲ್ಲೊಂದು ವಿಶಿಷ್ಟಾಂಗವಿದ್ದು, ಅದು ಕೆಲವು ರಾಸಾಯನಿಕ ಮತ್ತು ಕಿಣ್ವಗಳ ಸಹಾಯದಿಂದ ಬೆಳಕನ್ನು ಉತ್ಪಾದಿಸುತ್ತವೆ. ಮಿಂಚುಹುಳು ಹಲವು ಬಗೆಯಲ್ಲಿ ಜೈವಿಕದೀಪ್ತಿಯನ್ನು ಬಳಸಿಕೊಳ್ಳುವುದಿದೆ. ಪ್ರಮುಖವಾಗಿ ನಿಶಾಚರಿಗಳಾದ ಇವು ರಾತ್ರಿ ಸಂಗಾತಿ ಹುಡುಕಾಟ ಮತ್ತು ತಮ್ಮೊಟ್ಟಿಗಿರುವ ಇತರೆ ಸದಸ್ಯರೊಂದಿಗಿನ ಸಂವಹನ ಸಾಧನವಾಗಿ ಬೆಳಕನ್ನು ಹೊರಹೊಮ್ಮಿಸುತ್ತವೆ. ಶತ್ರುಗಳನ್ನು ಓಡಿಸಲು, ಆಹಾರವನ್ನು ಮತ್ತು ತಮ್ಮ ವಲಯವನ್ನು ಹುಡುಕಿಕೊಳ್ಳಲು, ಮುಂತಾಗಿ ಮಿಂಚುಹುಳುಗಳಲ್ಲಿ ಬೆಳಕು ಚಿಮ್ಮುವುದಿದೆ. ದೂರದ ಅಂತರಕ್ಕೆ ಸಂದೇಶ ಕಳಿಸುವುದು ಕೂಡ ಇವು ಬೆಳಕಿನ ಮೂಲಕವೇ. ಬೆಳಕು ಹೊಮ್ಮಿಸುವ ವಿಧಾನದಲ್ಲಿಯೂ ವೈವಿಧ್ಯತೆಯನ್ನು ತೋರುವಂತವು. ಮಿಂಚುಹುಳುಗಳ ಬೆರಗಿಗೆ ಕಾರಣವಾಗಿದ್ದು ಅವುಗಳ ಬೆಳಕನ್ನು ನಿಯಂತ್ರಿಸಬಲ್ಲ ಸಾಮರ್ಥ್ಯ. ಕೆಲವೊಮ್ಮೆ ಸ್ವಿಚ್ ಆಫ್ ಮತ್ತು ಸ್ವಿಚ್ ಆನ್ ತಂತ್ರಗಳನ್ನು ಬಳಸುವಾಗ ನೋಡುವ ಕಣ್ಣುಗಳಿಗೆ ಹಬ್ಬ. ಕಾಡಿನೊಳಗೊಂದು ವಿದ್ಯುದ್ದೀಪಗಳ ಸಾಲು, 'ಸೀರಿಯಲ್ ಸೆಟ್ಟಿನ' ಕಲ್ಪನೆಯನ್ನು ಕಣ್ಣೆದುರು ತಂದು ಹೊಸದೊಂದು ಬೆಳಕಿನ-ಬೆಡಗಿನ ಲೋಕವನ್ನು ಅನಾವರಣಗೊಳಿಸುತ್ತವೆ. ಪ್ರತಿಕ್ಷಣಗಳನ್ನೂ ರೋಮಾಂಚನಗೊಳಿಸುತ್ತವೆ.

ನೈಸರ್ಗಿಕ ಆವಾಸ ನಾಶ

ಮಿಂಚುಹುಳುಗಳನ್ನೊಳಗೊಂಡ ಜೀವ ಸಮುದಾಯ ಎದುರಿಸುತ್ತಿರುವ ಬಹುಮುಖ್ಯ ಸಮಸ್ಯೆ- ಸವಾಲು ಎಂದರೆ ಜೀವಿಗಳ ನೈಸರ್ಗಿಕ ಆವಾಸದ ನಾಶ. ಪರಿಣಾಮವಾಗಿ ಮಿಂಚುಹುಳಗಳ ಸಂಖ್ಯೆಯೂ ದಿನೇದಿನೇ ಕ್ಷೀಣಿಸುತ್ತಿದೆ. ತೀವ್ರಗತಿಯ ಅರಣ್ಯನಾಶದ ಪರಿಣಾಮವಾಗಿ ಪರಿಸರಸೂಕ್ಷ್ಮ ಕೀಟಗಳಾಗಿರುವ ಮಿಂಚುಹುಳುಗಳ ಅಸ್ತಿತ್ವಕ್ಕೂ ಕುತ್ತು ಬಂದಿದೆ. ಮಾತ್ರವಲ್ಲ, ಹೊರಗಿನ ಕಣ್ಣು ಕೋರೈಸುವ ಕೃತಕ ವಿದ್ಯುದ್ದೀಪಗಳು ಮತ್ತು ಪ್ರಖರ ಬೆಳಕಿನ ಝಗಮಗಿಸುವಿಕೆಯಲ್ಲಿ ಮಿಂಚುಹುಳುಗಳ ದೀಪೋತ್ಪತ್ತಿ ಸಾಮರ್ಥ್ಯ ಕುಂದಿರುವ ಬಗ್ಗೆ ಅಧ್ಯಯನ ತಿಳಿಸುತ್ತದೆ. ಕೆಲವೆಡೆ ಕೀಟನಾಶಕ ಹಾಗೂ ರಾಸಾಯನಿಕಗಳ ಅತಿಯಾದ ಬಳಕೆ ಮತ್ತು ಪರಿಸರ ಮಾಲಿನ್ಯದ ಪರಿಣಾಮವೂ ಮಿಂಚುಹುಳುಗಳ ಉಳಿವಿಗೆ ಅಪಾಯವೊಡ್ಡಿವೆ.

ನಮ್ಮೊಟ್ಟಿಗಿರುವ 'ಜೀವಪ್ರಭೇದಗಳ ಅಳಿವೆಂದರೆ ಅದು ನಮ್ಮದೇ ಅಳಿವಿನ ಕಣ್ಸನ್ನೆ' ಎಂಬ ಸೂಕ್ಷ್ಮವನ್ನು ಅರ್ಥಮಾಡಿಕೊಳ್ಳದಿದ್ದರೆ ಸಂಕಷ್ಟ ತಪ್ಪಿದ್ದಲ್ಲ. ಕೀಟಗಳಿಲ್ಲದ ಜೀವಜಗತ್ತಿನಲ್ಲಿ ನಾವು ಮುಂದುವರೆಯಲಾರೆವು. ನಮ್ಮ ಯಾಂತ್ರಿಕತೆ ಮತ್ತು ಕೃತಕತೆಗಳು ಪ್ರಕೃತಿಯ ಆಶಯದ ವಿರುದ್ಧ ದಿಕ್ಕಿನಲ್ಲಿರುವ ಬಗ್ಗೆ ಬೇಗನೆ ಅರಿತುಕೊಳ್ಳಬೇಕು. ವಿಷಮಯ ಗಾಳಿ, ನೀರು, ಮಣ್ಣು ಇವು ಜೀವ ಪ್ರಭೇದಗಳನ್ನು ಬಲಿಪಡೆಯುತ್ತಿರುವ ಬಗ್ಗೆಯೂ ಎಚ್ಚರವಹಿಸಲೇಬೇಕು. ನಮ್ಮ ಉಳಿವಿಗಾಗಿಯಾದರೂ ಜೀವಚರಗಳ ಬದುಕಿಗೆ ಅನುವಾಗುವ ಬಗೆಯೊಂದನ್ನು ನಾವಿಲ್ಲಿ ತುರ್ತಾಗಿ ಯೋಚಿಸಬೇಕು ಮತ್ತು ಯೋಜಿಸಬೇಕು.

ದಯಾನದಿಯ ದಂಡೆಯ ಮೇಲೆ ಶಾಂತಿಯ ಹಂಬಲ

ಜಡೇಕುಂಟೆ ಮಂಜುನಾಥ್

ನಾಟಕದ ದೃಶ್ಯ

ಇತ್ತೀಚಿಗೆ ಚಿತ್ರದುರ್ಗದ ತ.ರಾ.ಸು. ರಂಗಮಂದಿರದಲ್ಲಿ ಕವಿ ಮೋದೂರು ತೇಜ ಅವರು ರಚಿಸಿರುವ 'ದಯಾನದಿಯ ದಂಡೆಯ ಮೇಲೆ' ನಾಟಕ ಧೀಮಂತ್ ರಾಮ್ ನಿರ್ದೇಶನದಲ್ಲಿ ಪ್ರದರ್ಶನ ಕಂಡಿತು. ಈ ನಾಟಕದಲ್ಲಿ ಅಭಿನಯಿಸಿದ ಕಲಾವಿದರೆಲ್ಲರೂ ಚಿತ್ರದುರ್ಗದ ಸರ್ಕಾರಿ ಪದವಿ ಕಲಾ ಕಾಲೇಜಿನ ಎನ್.ಎಸ್.ಎಸ್ ಘಟಕದ ವಿದ್ಯಾರ್ಥಿಗಳು. ಐತಿಹಾಸಿಕ ವಸ್ತುವನ್ನೊಳಗೊಂಡ ಗಂಭೀರ ನಾಟಕವನ್ನು ವಿದ್ಯಾರ್ಥಿಗಳ ಮೂಲಕ ರಂಗಕ್ಕೆ ತರುವಲ್ಲಿ ನಿರ್ದೇಶಕರ ಪ್ರಯತ್ನ ಮತ್ತು ಶ್ರದ್ಧೆ ಎದ್ದು ಕಾಣಿಸುತ್ತಿತ್ತು. ವಿದ್ಯಾರ್ಥಿಗಳು ತಮ್ಮ ಪಾತ್ರದ ಪರಕಾಯ ಪ್ರವೇಶ ಮಾಡಿದವರಂತೆ ನಟಿಸಿ ಪ್ರೇಕ್ಷಕರನ್ನು ಮಂತ್ರಮುಗ್ಧಗೊಳಿಸಿದರು. ಯುದ್ಧ ಎಲ್ಲಾ ಕಾಲಕ್ಕೂ ವಿನಾಶಕಾರಿಯಾದದ್ದೇ ಎನ್ನುವ ವಿಚಾರ ರಂಗದ ಮೇಲೆ ಧ್ವನಿ ಪೂರ್ಣವಾದ ದೃಶ್ಯಕಾವ್ಯವಾಗಿ ಮೂಡಿಬಂತು.

ಯುದ್ಧ ಎನ್ನುವುದು ಇತಿಹಾಸದ ಉದ್ದಕ್ಕೂ ತನ್ನ ಇರುವಿಕೆಯನ್ನು ತೋರಿಸುತ್ತಾ ಬಂದಿದೆ. ಈಗಾಗಲೇ ನಡೆದು ಹೋಗಿರುವ ಎರಡು ಜಾಗತಿಕ ಮಹಾಯುದ್ಧಗಳಿಂದ ಪಾಠ ಕಲಿತಿಲ್ಲ. ಯುದ್ಧದ ಭೀಕರತೆಯ ಬಗ್ಗೆ, ಅದರಿಂದ ಪರಿಣಾಮದಿಂದ ಅಪಾರ ಸಾವು ನೋವು ಆಗಿವೆ. ಅವುಗಳ ಬಗ್ಗೆ ಅರಿವಿದ್ದರೂ ಯಾವುದೋ ಉನ್ಮಾದಕ್ಕೆ ಒಳಗಾದವರಂತೆ ವರ್ತಿಸುತ್ತಿದ್ದೇವೆ. ಇಂತಹ ಯುದ್ಧ ಮಾಡುವ ಜಿದ್ದಿಗೆ ಬಿದ್ದು ಜನಸಾಮಾನ್ಯರಿಗೆ ಇನ್ನಿಲ್ಲದ ಸಂಕಟಗಳನ್ನು ತಂದೊಡ್ಡುತ್ತೇವೆ. ಇಂತಹ ವಿನಾಶಕಾರಿ ಯುದ್ಧವನ್ನು ವಿರೋಧಿಸಿ, ಶಾಂತಿ ಸ್ಥಾಪನೆಯ ಹಂಬಲಕ್ಕಾಗಿ ಪ್ರಾಮಾಣಿಕ ಪ್ರಯತ್ನ ಮಾಡಿದವರಲ್ಲಿ ಗೌತಮ ಬುದ್ಧ ಮೇಲ್ಪಂಕ್ತಿಯಲ್ಲಿ ನಿಲ್ಲುತ್ತಾನೆ. ಆತನ ವಿಚಾರಗಳಿಂದ ಪ್ರಭಾವಿತನಾದ ಸಾಮ್ರಾಟ ಅಶೋಕ, ಕಳಿಂಗ ಯುದ್ಧದ ನಂತರ ಮನಃಪರಿವರ್ತನೆಯಾಗಿ ಯುದ್ಧದಿಂದ ವಿಮುಖನಾಗಿ ಅಖಂಡ ಭರತಖಂಡವನ್ನು ಶಾಂತಿಯುತವಾಗಿ ಆಳಿದ ಮೊಟ್ಟ ಮೊದಲ ಚಕ್ರವರ್ತಿಯಾಗಿ ಚರಿತ್ರೆಯಲ್ಲಿ ನಿಲ್ಲುತ್ತಾನೆ.

ಅಶೋಕ ನಡೆಸಿದ ಕಳಿಂಗ ಯುದ್ಧದ ವಿಷಯ ಗೊತ್ತಿರುವುದೆ. ಆದರೆ, ಅದರ ಹಿಂದಿನ ಕಾಲಘಟ್ಟದಲ್ಲಿ ಅಶೋಕನ ಮನಸ್ಸಿನ ತಾಕಲಾಟವನ್ನು ಈ ನಾಟಕ ಶೋಧಿಸುತ್ತದೆ. ಬಿಂದುಸಾರ ಕಾಲವಾದ ನಂತರ ಮೌರ್ಯ ಸಾಮ್ರಾಜ್ಯದ ಉತ್ತರಾಧಿಕಾರಕ್ಕಾಗಿ ಸಹೋದರರ ನಡುವೆ ನಡೆಯುವ ಪಿತೂರಿಗಳು, ಕಲಹಗಳು ವರ್ತಮಾನದ ರಾಜಕಾರಣಕ್ಕೆ ಮುಖಾಮುಖಿಯಾಗುವುದರೊಂದಿಗೆ ಕಾಲಾತೀತವಾಗಿ ಈ ನಾಟಕ ತುಂಬಾ ಪ್ರಸ್ತುತವೆನಿಸುತ್ತದೆ.

ಕಳಿಂಗದ ದೊರೆ ಅನಂತಪದ್ಮನಾಭನ ಉದ್ದಟತನದಿಂದ ಕೋಪಗೊಂಡ ಅಶೋಕ ಕಳಿಂಗದ ಮೇಲೆ ದಂಡೆತ್ತಿ ಹೋಗಿ ಕೊನೆ ಮೊದಲಿಲ್ಲದ ಸಾವು ನೋವುಗಳಿಗೆ ಕಾರಣವಾದ ಕಳಿಂಗ ಯುದ್ಧ ನಡೆಯುವುದೇ ಈ ದಯಾನದಿ ದಂಡೆಯ ಮೇಲೆ. ಎಂಥ ವಿಪರ್ಯಾಸ ನೋಡಿ! ಆ ಯುದ್ಧದಲ್ಲಿ ತನ್ನ ಅಂಗರಕ್ಷಕನೂ ಗೆಳೆಯನೂ ಆದ ವಜ್ರದೇಹನನ್ನು ಕಳೆದುಕೊಂಡು ದುಃಖಿಸುವ ಅಶೋಕ ಪ್ರೇಕ್ಷಕರ ಕಣ್ಣಾಲಿಯನ್ನು ತೇವಗೊಳಿಸುತ್ತಾನೆ. ಯುದ್ಧ ನಡೆದು ಜಯ ದೊರೆಕಿದ ಮೇಲೆ ವಿಜಯದ ಉತ್ಸಾಹದಲ್ಲಿ ಮೈಮರೆಯುವ ರಾಜರೇ ಅಧಿಕ. ಆದರೆ, ಅಶೋಕ ಯುದ್ಧ ಭೂಮಿಗೆ ಹೋಗಿ ಅಲ್ಲಿನ ಸಾವು ನೋವುಗಳನ್ನು ಕಂಡು ಮಮ್ಮಲ ಮರುಗುತ್ತಾನೆ. ನಾಟಕದ ವಸ್ತುವಿನ ಗಟ್ಟಿತನ, ಪ್ರೇಕ್ಷಕರ ಮನಸಿಗೆ ತಾಕುವಂತಹ ಸಂಭಾಷಣೆ, ನುರಿತ ನಟರಂತೆ ಅಭಿನಯಿಸಿದ ವಿದ್ಯಾರ್ಥಿಗಳ ಸಹಜ ಅಭಿನಯ, ವಸ್ತ್ರವಿನ್ಯಾಸ ನಾಟಕದ ಯಶಸ್ಸಿಗೆ ಸಹಕಾರಿಯಾದ ಅಂಶಗಳು.

'ಏಸೊಂದು ರೂಪಗಳೊ ಅಣ್ಣ, ಈ ಯುದ್ಧವೆಂಬ ರಕ್ಕಸನಿಗೆ ಏಸೊಂದು ಬಣ್ಣಗಳೊ ಅಣ್ಣ' ಎನ್ನುವ ಹಾಡನ್ನು ಇಡೀ ನಾಟಕಕ್ಕೆ ರೂಪಕವಾಗಿ ಬಳಸಿಕೊಂಡು ಸಂಗೀತ ನೀಡಿದ ರಾಘವ ಕಮ್ಮಾರ, ಬೆಳಕಿನ ವಿನ್ಯಾಸದ ಮೂಲಕ ದೃಶ್ಯಗಳ ಪರಿಣಾಮವನ್ನು ಹೆಚ್ಚಿಸಿದ ಶಂಕರ್, ರಿದಂ ನುಡಿಸಿದ ಹೇಮಂತ ಸಂಡೂರು ಇವರೆಲ್ಲರೂ ನಾಟಕ ಅರ್ಥಪೂರ್ಣವಾಗಲು ಶ್ರಮಿಸಿದ್ದಾರೆ.

ಯುದ್ಧದಿಂದ ಧಾರ್ಮಿಕ ಸಂಘರ್ಷಗಳಿಂದ ಕ್ಷೋಭೆಗೊಂಡು ನರಳುತ್ತಿರುವ ಜಗತ್ತಿಗೆ ಬುದ್ಧನ ಕರುಣಾ ಮೈತ್ರಿಯ ವಿಚಾರಗಳು ಮದ್ದಾಗಬಲ್ಲವು ಎನ್ನುವುದನ್ನು ನಾಟಕದ ಆಶಯವಾಗಿಸುವಲ್ಲಿ ನಾಟಕಕಾರರು ಹಾಗೂ ನಿರ್ದೇಶಕರು ಸಫಲತೆಯನ್ನು ಸಾಧಿಸಿದ್ದಾರೆ. 'ತನಗೂ ಒಂದು ದಿನ ಸಾವಿದೆ ಎಂದು ತಿಳಿದ ಮನುಷ್ಯ ಇನ್ನೊಬ್ಬರಿಗೆ ಕೇಡು ಬಯಸಲಾರ' ಬುದ್ಧನ ಈ ಮಾತು ನಾಟಕ ಮುಗಿದ ನಂತರವೂ ಪ್ರೇಕ್ಷಕರನ್ನು ಕಾಡುತ್ತದೆ. ಆತ್ಮಾವಲೋಕನಕ್ಕೆ ಪ್ರೇರೇಪಿಸುತ್ತದೆ.

...ಥೀಮ್ ಪಾರ್ಕ್ ಸೆಳೆತ

ಥೀಮ್ ಪಾರ್ಕ್‌ನಲ್ಲಿ ಸೆಲ್ಫಿ ತೆಗೆದುಕೊಳ್ಳುತ್ತಿರುವ ವಿದ್ಯಾರ್ಥಿನಿಯರು

10ನೇ ಪುಟದಿಂದ..

ಕಲ್ಯಾಣ ಕರ್ನಾಟಕ ಸಾಹಿತಿಗಳ ಗ್ಯಾಲರಿ

ಕನ್ನಡ ಅಧ್ಯಯನ ಸಂಸ್ಥೆಯು ನಾಲ್ಕು ಕಟ್ಟೆಗಳನ್ನು ನಿರ್ಮಿಸುವುದಕ್ಕೂ ಮುನ್ನ ಕಲ್ಯಾಣ ಕರ್ನಾಟಕ ಭಾಗದ ಪ್ರಶಸ್ತಿ ಪುರಸ್ಕೃತ ಸಾಹಿತಿಗಳ ವಿಭಾಗವನ್ನೇ ಸಂಸ್ಥೆಯಲ್ಲಿ ತೆರೆದಿದೆ. ಈ ವಿಭಾಗದಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಸಾಹಿತಿಗಳಾದ ಗೀತಾ ನಾಗಭೂಷಣ, ಕುಂ.ವೀರಭದ್ರಪ್ಪ, ಮಕ್ಕಳ ವಿಭಾಗದ ಪ್ರಶಸ್ತಿ ಪಡೆದ ಚಂದ್ರಕಾಂತ ಕರದಳ್ಳಿ, ಕೇಂದ್ರ ಸಾಹಿತ್ಯ ಅಕಾಡೆಮಿಯ ಯುವ ಪುರಸ್ಕಾರ ಪಡೆದ ಕವಿ ಆರಿಫ್ ರಾಜಾ, ಮಂಜುನಾಯಕ ಚೆಳ್ಳೂರ, ದಾದಾಪೀರ್ ಜೈಮನ್ ಅವರ ಭಾವಚಿತ್ರಗಳು ಹಾಗೂ ಪ್ರಶಸ್ತಿಗೆ ಆಯ್ಕೆಯಾದ ಅವರ ಕೃತಿಗಳನ್ನು ಇರಿಸಲಾಗಿದೆ.

ಅಲ್ಲದೇ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಕರ್ನಾಟಕ ನಾಟಕ ಅಕಾಡೆಮಿ, ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಶಸ್ತಿ, ಪುರಸ್ಕೃತರು, ಜಾನಪದ ಅಕಾಡೆಮಿ ಪ್ರಶಸ್ತಿ ಪುರಸ್ಕೃತರು ಸೇರಿದಂತೆ ಸರ್ಕಾರದ ವಿವಿಧ ಅಕಾಡೆಮಿಗಳ ಮಹತ್ವದ ಪ್ರಶಸ್ತಿಗಳನ್ನು ಪಡೆದ ಲೇಖಕರು ಭಾವಚಿತ್ರಗಳು, ಅವರ ವಿವರ ಹಾಗೂ ಕೃತಿಗಳನ್ನು ಇರಿಸಲಾಗಿದೆ.

'ಐರ್ಲೆಂಡ್‌ನ ವಿಶ್ವವಿದ್ಯಾಲಯಕ್ಕೆ ಭೇಟಿ ನೀಡಿದಾಗ ಅಲ್ಲಿನ ಸಾಹಿತಿಗಳ ಮನೆಗೆ ಹೋಗಿದ್ದೆ. ಅಲ್ಲಿದ್ದ ಗ್ಯಾಲರಿಗಳಲ್ಲಿ ಸಾಹಿತಿಗಳು ಬರೆದ ಪುಸ್ತಕಗಳು, ಜೀವನ ಸಾಧನೆಯನ್ನು ವಿವರಿಸಲಾಗಿತ್ತು. ಅದರಿಂದ ಸ್ಫೂರ್ತಿಗೊಂಡು ನಮ್ಮ ಸಂಸ್ಥೆಯಲ್ಲಿ ಕನ್ನಡದ ಮೇರು ಸಾಹಿತಿಗಳ ಬಗೆಗಿನ ಮಾಹಿತಿಯನ್ನು ವಿದ್ಯಾರ್ಥಿಗಳ ಮಸ್ತಕಕ್ಕಿಳಿಸುವ ಯೋಜನೆಯನ್ನು ಕೈಗೆತ್ತಿಕೊಂಡೆ' ಎನ್ನುತ್ತಾರೆ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕ ಪ್ರೊ.ಎಚ್.ಟಿ. ಪೋತೆ.

ಥೀಮ್ ಪಾರ್ಕ್‌ನಲ್ಲಿ ವಿದ್ಯಾರ್ಥಿಗಳು

ಕಲ್ಯಾಣ ಸಾಹಿತಿಗಳ ಪರಿಚಯಕ್ಕೆ ವೆಬ್‌ಸೈಟ್

ಕಲ್ಯಾಣ ಕರ್ನಾಟಕದ ಸಾಹಿತಿಗಳನ್ನು ಪರಿಚಯಿಸುವ ನಿಟ್ಟಿನಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯೇ ವೆಬ್‌ಸೈಟ್ ರೂಪಿಸಲು ಮುಂದಾಗಿದೆ. ಇದಕ್ಕಾಗಿ ಸಂಸ್ಥೆಯ ನಾಲ್ಕನೇ ಸೆಮಿಸ್ಟರ್ ವಿದ್ಯಾರ್ಥಿಗಳನ್ನು ಬಳಸಿಕೊಂಡಿದ್ದು, ಬೀದರ್, ಕಲಬುರಗಿ, ಯಾದಗಿರಿ, ರಾಯಚೂರು, ಕೊಪ್ಪಳ, ಬಳ್ಳಾರಿ ಹಾಗೂ ವಿಜಯನಗರ ಜಿಲ್ಲೆಗಳ ಸಾಹಿತಿಗಳ ಮಾಹಿತಿಯನ್ನು ಕಿರುಪ್ರಬಂಧ ರೂಪದಲ್ಲಿ ನೀಡುವಂತೆ ಸೂಚಿಸಲಾಗಿತ್ತು. ಈಗಾಗಲೇ 300ಕ್ಕೂ ಅಧಿಕ ಸಾಹಿತಿಗಳ ಮಾಹಿತಿ ಲಭ್ಯವಾಗಿದ್ದು, ಶೀಘ್ರವೇ ಸಾಹಿತಿಗಳ ಭಾವಚಿತ್ರ, ಅವರ ವಿವರ ಹಾಗೂ ಅವರು ರಚಿಸಿದ ಸಾಹಿತ್ಯವನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುತ್ತದೆ. ವಿಶ್ವವಿದ್ಯಾಲಯದ ಈ ಕಾರ್ಯ ಮೆಚ್ಚುವಂತದ್ದು.

ಮುನ್ನೋಟ 19-01-2025 ರಿಂದ 25-01-2025

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ

ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — **ಅಶ್ವಿನಿ, ಭರಣಿ, ಕೃತ್ತಿಕಾ 1**
ಸಂಸಾರದಲ್ಲಿ ಸಂತೋಷವಿದ್ದರೂ ಸ್ವಲ್ಪ ಕಸಿವಿಸಿಗಳಿರುತ್ತವೆ. ಆದಾಯವು ಉತ್ತಮವಾಗಿರುತ್ತದೆ. ಅಧ್ಯಾಪಕರ ಆದಾಯ ಹೆಚ್ಚುತ್ತದೆ. ನಿಮಗರಿವಿಲ್ಲದಂತೆ ಬಂಧುಗಳು ನಿಮ್ಮ ಕೆಲಸಗಳಿಗೆ ಅಡ್ಡಿ ಬರುತ್ತಾರೆ. ವಿದ್ಯಾರ್ಥಿಗಳಿಗೆ ನಿರೀಕ್ಷಿತ ಫಲಿತಾಂಶ ಸಿಗುತ್ತದೆ. ಸಂಗಾತಿಯ ಪ್ರಯತ್ನದಿಂದ ನಿಮ್ಮ ವ್ಯವಹಾರಗಳು ಸುಗಮವಾಗುತ್ತವೆ. ಪಾಲುದಾರಿಕೆಯ ವ್ಯವಹಾರಗಳಲ್ಲಿ ಸ್ವಲ್ಪ ಭಿನ್ನಾಭಿಪ್ರಾಯ ಮೂಡುತ್ತದೆ.

ವೃಷಭ — **ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2**
ಬಹಳ ಪ್ರಶಾಂತರಾಗಿರುವಿರಿ. ಆದಾಯವು ನಿರೀಕ್ಷೆಗಿಂತ ಸ್ವಲ್ಪ ಕಡಿಮೆ ಇರುತ್ತದೆ. ಹಿರಿಯರ ಆಸ್ತಿ ಲಭಿಸುವ ಸಾಧ್ಯತೆ ಇದೆ. ವಿದ್ಯಾರ್ಥಿಗಳಿಗೆ ಮಧ್ಯಮಗತಿಯ ಫಲಿತಾಂಶವಿರುತ್ತದೆ. ನಿಮ್ಮ ಸಂಗಾತಿ ಮಾಡುವ ಕೃಷಿಯಲ್ಲಿ ಹೆಚ್ಚಿನ ಆದಾಯವಿರುತ್ತದೆ. ನಿಮ್ಮದೇ ನಿರ್ಧಾರದಿಂದ ಕೆಲವು ಕೆಲಸಗಳಿಗೆ ಹಿನ್ನಡೆಯಾಗುತ್ತದೆ. ನಿಮ್ಮ ವೃತ್ತಿಯಲ್ಲಿ ಹಿರಿಯರಿಂದ ಸಹಕಾರ ದೊರೆಯುತ್ತದೆ.

ಮಿಥುನ — **ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3**
ಸ್ವಲ್ಪ ಆಲಸ್ಯ ಕಾಡುತ್ತದೆ. ಆದಾಯ ಕಡಿಮೆ ಇರುತ್ತದೆ. ಮಾತನಾಡುವಾಗ ಎಲ್ಲೆ ಮೀರದಿರಿ. ಹಿರಿಯರ ಸಲಹೆಯಿಂದ ವಿದ್ಯಾರ್ಥಿಗಳಿಗೆ ಫಲಿತಾಂಶದಲ್ಲಿ ಪ್ರಗತಿಯಿದೆ. ಹಲ್ಲಿನ ತೊಂದರೆಗಳು ಕೆಲವರಿಗೆ ಕಾಣಿಸಬಹುದು. ಸಂಗಾತಿ ಜೊತೆಗೂಡಿ ಮಾಡಿದ ವ್ಯವಹಾರಗಳಲ್ಲಿ ಲಾಭವಿರುತ್ತದೆ. ವಿದೇಶದಲ್ಲಿ ಉದ್ಯೋಗ ಅರಸುತ್ತಿರುವವರಿಗೆ ಉದ್ಯೋಗ ಸಿಗುವ ಸಾಧ್ಯತೆ ಇದೆ.

ಕಟಕ — **ಪುನರ್ವಸು 4 ಪುಷ್ಯ, ಆಶ್ಲೇಷ**
ದೇಹದಲ್ಲಿ ಸ್ವಲ್ಪ ಶಕ್ತಿ ಕುಂದಿದಂತೆ ಅನ್ನಿಸಬಹುದು. ಆದಾಯವು ನಿರೀಕ್ಷೆಯ ಹತ್ತಿರ ಬರಬಹುದು. ವಾಗ್ಮಿಗಳಿಗೆ ಉತ್ತಮ ವೇದಿಕೆ ದೊರೆಯುತ್ತದೆ. ಸೋದರಿಯರಿಂದ ತೊಂದರೆಯಾಗಬಹುದು. ಆಸ್ತಿ ವ್ಯವಹಾರ ಮಾಡುವವರಿಗೆ ಉತ್ತಮ ಅಭಿವೃದ್ಧಿ ಇರುತ್ತದೆ. ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶ ಲಭಿಸಲಿದೆ. ಕೆಲವರಿಗೆ ನರದೌರ್ಬಲ್ಯ ಕಾಡಬಹುದು.

ಸಿಂಹ — **ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1**
ನಿಮ್ಮ ನಿರ್ಧಾರಗಳು ಬಹಳ ಪೇಲವವಾಗಿರುತ್ತವೆ. ಆದಾಯದಲ್ಲಿ ಸ್ವಲ್ಪ ಏರಿಕೆ ಕಾಣಬಹುದು. ಆಸ್ತಿಗಾಗಿ ಹೂಡಿದ ಹಣ ನಷ್ಟವಾಗುವ ಸಾಧ್ಯತೆಗಳಿವೆ. ಗಣಿತ ವಿದ್ಯಾರ್ಥಿಗಳಿಗೆ ಹೆಚ್ಚಿನ ಫಲಿತಾಂಶ ಬರುತ್ತದೆ. ವ್ಯವಹಾರದಲ್ಲಿ ಸ್ವಲ್ಪ ಅಭಿವೃದ್ಧಿ ಇರುತ್ತದೆ. ಮೆದುಳಿನ ತೊಂದರೆ ಇರುವವರು ಎಚ್ಚರವಹಿಸಿ. ವೃತ್ತಿಯಲ್ಲಿ ಕ್ಲಿಷ್ಟ ಪರಿಸ್ಥಿತಿಯನ್ನು ಎದುರಿಸುವ ಸಂದರ್ಭ ಬರುತ್ತದೆ.

ಕನ್ಯಾ — **ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2**
ಮನಸ್ಸಿನಲ್ಲಿ ಹೊಸ ಆಲೋಚನೆಗಳು ಮೂಡುತ್ತವೆ. ಆದಾಯವು ಕಡಿಮೆ ಇರುತ್ತದೆ. ನಿಮ್ಮ ಕುಟುಂಬಕ್ಕೆ ಬಂಧುಗಳ ಸಹಕಾರ ದೊರೆಯುತ್ತದೆ. ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶವಿದ್ದು, ಉತ್ತಮ ಕೋರ್ಸುಗಳಿಗೆ ಪ್ರವೇಶ ದೊರೆಯುತ್ತದೆ. ಸ್ತ್ರೀಯರೊಡನೆ ಮಾಡುವ ಹಣಕಾಸು ವ್ಯವಹಾರಗಳು ನಷ್ಟಕ್ಕೆ ಕಾರಣವಾಗಬಹುದು. ಸಂಗಾತಿಯ ಬೇಜವಾಬ್ದಾರಿತನ ಸ್ವಲ್ಪ ಬೇಸರ ತರಿಸಬಹುದು.

ತುಲಾ — **ಚಿತ್ತಾ 3,4 ಸ್ವಾತಿ, ವಿಶಾಖಾ 1,2,3**
ಯಾವುದೇ ಕೆಲಸಗಳಲ್ಲಿ ನಿಮ್ಮ ಶ್ರಮಕ್ಕೆ ತಕ್ಕ ಫಲವಿರುತ್ತದೆ. ವೃತ್ತಿಯಿಂದ ಸ್ವಲ್ಪ ಆದಾಯ ಹೆಚ್ಚಾಗಬಹುದು. ನಿಮ್ಮ ಪಾಲುದಾರಿಕೆ ವ್ಯವಹಾರಗಳಲ್ಲಿ ಮುಸುಕಿನ ಗುದ್ದಾಟಗಳಿರುತ್ತವೆ. ವಿದ್ಯಾರ್ಥಿಗಳಿಗೆ ಮಿಶ್ರಫಲ ಇರುತ್ತದೆ. ಮಕ್ಕಳ ಬಗ್ಗೆ ನಿಗಾವಹಿಸುವುದು ಬಹಳ ಉತ್ತಮ. ಸಂಗಾತಿಯ ವೃತ್ತಿಯಲ್ಲಿ ತೊಳಲಾಟಗಳಿರುತ್ತವೆ. ಬ್ಯಾಂಕಿಂಗ್ ಕ್ಷೇತ್ರದಲ್ಲಿ ಕೆಲಸ ಮಾಡುವವರಿಗೆ ಅಭಿವೃದ್ಧಿ ಇರುತ್ತದೆ.

ವೃಶ್ಚಿಕ — **ವಿಶಾಖಾ 4 ಅನೂರಾಧ, ಜ್ಯೇಷ್ಠ**
ಹಿರಿಯರ ಆಸ್ತಿ ನಿಮಗೆ ದೊರಕುವ ಸಾಧ್ಯತೆಗಳಿವೆ. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ವ್ಯಾವಹಾರಿಕವಾಗಿ ಮಾತನಾಡಿ ಕೆಲಸ ಸಾಧಿಸುವಿರಿ. ಹಿರಿಯರ ಸಹಕಾರಗಳು ತಕ್ಕಮಟ್ಟಿಗೆ ಸಿಗುತ್ತವೆ. ವಿದೇಶದಲ್ಲಿ ಕಲಿಯಬೇಕೆನ್ನುವವರಿಗೆ ಅವಕಾಶ ಸಿಗುತ್ತದೆ. ಕೆಲವರಿಗೆ ವಿವಾಹ ಸಂಬಂಧಗಳು ಕೂಡಿಬರಬಹುದು. ಹಾಲಿನ ಉತ್ಪನ್ನಗಳನ್ನು ತಯಾರಿಸಿ ಮಾರುವವರಿಗೆ ಲಾಭ ಹೆಚ್ಚುತ್ತದೆ.

ಧನುಸ್ಸು — **ಮೂಲಾ, ಪೂರ್ವಾಷಾಢ, ಉತ್ತರಾಷಾಢ 1**
ಬಹಳ ವ್ಯಾವಹಾರಿಕವಾಗಿ ಯೋಚನೆ ಮಾಡುವಿರಿ. ನಿಮ್ಮ ಆದಾಯವು ಮಧ್ಯಮಗತಿಯಲ್ಲಿರುತ್ತದೆ. ನಿಮ್ಮ ನಡವಳಿಕೆಯಿಂದಲೇ ಶತ್ರುಗಳನ್ನು ಮಟ್ಟಹಾಕುವಿರಿ. ವಿದ್ಯಾರ್ಥಿಗಳಿಗೆ ನಿರೀಕ್ಷಿತ ಫಲಿತಾಂಶ ಸಿಗದಿರಬಹುದು. ಪಾಲುದಾರಿಕೆಯ ವ್ಯವಹಾರಗಳಲ್ಲಿ ಲಾಭವಿರುತ್ತದೆ. ದಿನಸಿ ವ್ಯಾಪಾರಿಗಳಿಗೆ ಲಾಭ ಹೆಚ್ಚುತ್ತದೆ. ವೃತ್ತಿಯಲ್ಲಿ ಪ್ರಗತಿಯನ್ನು ಕಾಣಬಹುದು.

ಮಕರ — **ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2**
ಆತ್ಮವಿಶ್ವಾಸ ಜಾಗೃತಿಯಾಗುತ್ತದೆ. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ಸಾಂಪ್ರದಾಯಿಕ ಕೃಷಿ ಮಾಡುವವರಿಗೆ ಸ್ವಲ್ಪ ಆದಾಯವಿರುತ್ತದೆ. ವಿದ್ಯಾರ್ಥಿಗಳಿಗೆ ಹೆಚ್ಚಿನ ಯಶಸ್ಸು ಇರುತ್ತದೆ. ನರ ದೌರ್ಬಲ್ಯ ಇರುವವರು ಹೆಚ್ಚು ಆಯಾಸಕರ ಕೆಲಸ ಮಾಡದಿರುವುದು ಒಳ್ಳೆಯದು. ಬಂಧುಗಳು ನಿಮ್ಮ ಜೊತೆ ಪಾಲುದಾರಿಕೆ ವ್ಯವಹಾರ ಮಾಡಲು ಬರಬಹುದು. ವೃತ್ತಿಯಲ್ಲಿ ಸ್ವಲ್ಪ ಅಭಿವೃದ್ಧಿ ಹೊಂದಬಹುದು.

ಕುಂಭ — **ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3**
ಧಾರ್ಮಿಕ ಉಪನ್ಯಾಸ ನೀಡುವವರಿಗೆ ಹೆಚ್ಚು ಗೌರವ ದೊರೆಯುತ್ತದೆ. ದಂತ ವೈದ್ಯರಿಗೆ ಬೇಡಿಕೆ ಹೆಚ್ಚುತ್ತದೆ. ಬಂಧುಗಳ ನಡುವಿನ ವ್ಯವಹಾರ ಸ್ವಲ್ಪ ನಷ್ಟ ತರಬಹುದು. ಆಸ್ತಿ ವ್ಯವಹಾರ ಮಾಡುವವರಿಗೆ ಬರಬೇಕಾಗಿದ್ದ ಕಮಿಷನ್ ಹಣ ಬರುತ್ತದೆ. ವಿದ್ಯಾwwರ್ಥಿಗಳಿಗೆ ನಿರೀಕ್ಷೆಯ ಹತ್ತಿರದ ಫಲಿತಾಂಶ ಬರುತ್ತದೆ. ಸ್ತ್ರೀಯರು ಮಾಡುವ ವ್ಯವಹಾರಗಳಲ್ಲಿ ಆದಾಯ ಕಡಿಮೆಯಾಗುತ್ತದೆ.

ಮೀನ — **ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ**
ಆದಾಯವು ಮಂದಗತಿಯಲ್ಲಿರುತ್ತದೆ. ವಿಜ್ಞಾನದಲ್ಲಿ ಸಾಧನೆ ಮಾಡುವವರಿಗೆ ಹೆಚ್ಚಿನ ಅವಕಾಶಗಳು ದೊರೆಯುತ್ತವೆ. ನೇತ್ರ ತಜ್ಞರಿಗೆ ಹೆಚ್ಚಿನ ಬೇಡಿಕೆ ಬರುತ್ತದೆ. ಕೆಲವರು ಅನಿರೀಕ್ಷಿತ ಪ್ರೀತಿಯಲ್ಲಿ ಬೀಳಬಹುದು. ಅಲಂಕಾರಿಕ ವಸ್ತುಗಳನ್ನು ತಯಾರಿಸುವವರಿಗೆ ಲಾಭ ಹೆಚ್ಚುತ್ತದೆ. ವೃತ್ತಿಯಲ್ಲಿ ಹಿರಿಯರನ್ನು ಓಲೈಸಿಕೊಂಡು ಇರಬೇಕಾಗುತ್ತದೆ. ಹಿರಿಯರಿಂದ ಸಹಕಾರ ದೊರೆಯುತ್ತದೆ.

ಪದಬಂಧ 2875



ಮೇಲಿನಿಂದ ಕೆಳಕ್ಕೆ

1. ಎಲ್ಲರಲ್ಲೂ ಶ್ರೇಷ್ಠ 4
2. ದ್ರವದ ಸುಂದರ ಕೊಡುಗೆ 4
3. ತಮಿಳು ಭಾಷಿಗರ ಈಶ ಪ್ರಿಯೆ 4
4. ಗಾಂಧಿಯ ಹೆಸರನ್ನು ನೆನಪಿಸುವ ನಮ್ಮ ದೇಶದ ಸೀಮಾ ಪ್ರದೇಶ 4
7. ರಾಗದಂತೆ ಹರಡಿದ ಬೆಳಗಿನ ಹೊತ್ತು 5
8. ದಾಖಲೆಯನ್ನು ದೃಢೀಕರಿಸುವ ಸಹಿ 2
9. ನಿಧಾನ, ನಿಲ್ಲು 2
10. ಹಣೆಯ ಮೇಲೆ ಎಳೆಯುವ ಹೆಸರಿನ ಬೋರ್ಡು 5
12. ಬರಿ ಆತುರದ ಆತಂಕ 3
13. 'ಹ'ಕಾರ ಪ್ರಿಯ ಆರು ಎಂದೊಡನೆ ಜಿಗಿಯುವುದೆ? 2
14. ಕಾಲು ಮೆಟ್ಟುವ ಚಪ್ಪಲಿ 2
15. ಕಾಲಡಿ ಚುರುಕಾಗಿ ಓಡಾಡುವ ದ್ರವ 4
16. ಸಾತ್ವಿಕಕ್ಕೂ ತಮಸ್ಸಿಗೂ ನಡುವಣ ಸ್ವಭಾವ 4
18. ತನಿಖೆಯಲ್ಲಿ ಪ್ರಶ್ನೆಗಳಿಗೆ ಗುರಿಪಡಿಸುವವ 4
19. ನಾಗಾಲಿಯ ಮೇಲೆ ದೇವರ ವಿಜೃಂಭಿತ ಮೆರವಣಿಗೆ 4

ಎಡದಿಂದ ಬಲಕ್ಕೆ

1. ವರವಾಗಿ ಬಂದಿದ್ದ ಹಿಂದಿನ ಕಾಲದ ಕೊಳ 4
3. ನಾಗರಿಕತೆಯಲ್ಲಿ ಕಲ್ಲಿನ ಕಾಲ 4
5. ಎಲ್ಲರೂ ಒಂದೇ ಎನ್ನುವ ತತ್ವಾಧಾರಿತ ಅಕ್ಕನ ಗಂಡ 5
6. ಈ ಮಂದಿ ಸಾಮಾನ್ಯದವರಲ್ಲ 5
9. ದ್ರಾವಿಡ ಭಾಷೆಯ ನಮ್ಮ ನೆರೆರಾಜ್ಯ 5
11. ಕೊನೆ ನಿಮಿಷದಲ್ಲಿ ಮಾಡುವ ದೇಸಿ ಆವಿಷ್ಕಾರ 3
13. ಬೇಜವಾಬ್ದಾರಿಯಿಂದ ಎಗರಿಸುವ ಉತ್ತರ 3
15. ವ್ಯಾಪಾರದ ಲಾಭವನ್ನು ಹಂಚಿಕೊಳ್ಳುವವರು 5
17. ಒಳ್ಳೆಯದನ್ನು ಮಾಡುವ ಶಿವ, ಸೂರ್ಯನ ಜೊತೆ ಸೇರಿದ್ದಾನೆ 5
20. ದೇಗುಲದ ಉನ್ನತ ಶಿಖರ 5
21. ತನ್ನದೆಲ್ಲವನ್ನೂ ಅರ್ಪಿಸುವ ಭಾವ 4
22. ಮುಂಜಾನೆ ಕಿವಿಗೆ ಬೀಳುವ ಹಕ್ಕಿಗಳ ಇಂಪಾದ ದನಿ 4

ಪದಬಂಧ ಉತ್ತರ -2874

ಮೇಲಿಂದ ಕೆಳಕ್ಕೆ

1.ಸಂಕ್ರಾಂತಿ 2.ಲೆಕ್ಕಾಚಾರ 3.ಸಂಧ್ಯಾರಾಗ 4.ರದನ 6.ಮಕರ 7.ಜಯಹೋ 8.ಸಜ್ಜನಸಂಗ 9.ತಿರುಮಲೇಶ 10.ಕೊಡವ 12.ಮನವಿ 15.ನಗಾರಿ 17.ದೇಗುಲ 19.ಡಿಕ್ಷನರಿ 20.ದೇವಧಾಮ 21.ಪುದೀನ 23.ಕ್ಷಣಿಕ

ಎಡದಿಂದ ಬಲಕ್ಕೆ

1.ಸಂಬಂಧಮಾಲೆ 3.ಸಂಕಟಹರ 5.ಮತಿ 7.ಜನ 8.ಸರಳಗತಿ 10.ಕೊರಗಜ್ಜ 11.ರುದ್ರಹೋಮ 13.ನಕ್ಷತ್ರನಾಮ 14.ವನವಾಸಂ 15.ಲೇವಾದೇವಿ 18.ಗಡಿಪ್ರದೇಶ 21.ಪುರಿ 22.ಲಕ್ಷ 24.ನವಿಲುಗರಿ 25.ಮಣಿಕರ್ಣಿಕ

ಶೇಷಣ್ಣನ ವೀಣಾವಾದನ ಮನಸೋತ ಗಾಂಧೀಜಿ

ರಮಾ ವಿ. ಬೆಣ್ಣೂರ್

1924ರ ಕಾಂಗ್ರೆಸ್ ಅಧಿವೇಶನದಲ್ಲಿ ವೀಣೆ ನುಡಿಸಿ ಗಾಂಧೀಜಿ ಮನ ಗೆದ್ದವರು ವೀಣೆ ಶೇಷಣ್ಣ. ಅವರ ವೀಣಾ ವಾದನಕ್ಕೆ ಮನಸೋತಿದ್ದ ಐದನೆಯ ಜಾರ್ಜ್ ದೊರೆಯು ಅವರನ್ನು ಇಂಗ್ಲೆಂಡ್‌ಗೆ ಕರೆಸಿಕೊಳ್ಳಲು ಸಾಕಷ್ಟು ಪ್ರಯತ್ನಪಟ್ಟಿದ್ದರು. ನಡುರಾತ್ರಿಯಲ್ಲಿಯೂ ನಾದಾಮೃತವನ್ನು ಉಣಬಡಿಸುತ್ತಿದ್ದ ಕಲಾವಿದನ ಬದುಕಿನ ಆಯ್ದ ಸನ್ನಿವೇಶಗಳನ್ನು ಲೇಖಕಿ ಇಲ್ಲಿ ಕಟ್ಟಿಕೊಟ್ಟಿದ್ದಾರೆ...

ಇಸವಿ 1924. ಭಾರತದ ದೇಶಭಕ್ತರೆಲ್ಲಾ ಸೇರಿ ಕಾಂಗ್ರೆಸ್ ಎಂಬ ಛತ್ರಿಯ ಅಡಿಯಲ್ಲಿ ಬೆಳಗಾವಿಯಲ್ಲಿ ನಡೆಸಿದ ಇಪ್ಪತ್ತನಾಲ್ಕನೆಯ ಅಧಿವೇಶನವು ತನ್ನದೇ ಆದ ರಾಜಕೀಯ, ಐತಿಹಾಸಿಕ ಕಾರಣಗಳಿಗಾಗಿ ಪ್ರಸಿದ್ಧಿಯಾಗಿದೆ. ನಾಡಿನ ಉದ್ದಗಲದಿಂದಲೂ ಬೆಳಗಾವಿಗೆ ಬಂದಿದ್ದ ರಾಜಕೀಯ ಧುರೀಣರ ಸೇವೆಗಾಗಿ ಒಂದು ಸಮಿತಿಯೇ ರಚಿತವಾಗಿತ್ತು. ಮುಂಜಾನೆಯಿಂದ ಒಂದೇ ಸಮನೆ ರಾಜಕೀಯ ಸಮಾಲೋಚನೆ, ಸಭೆ, ಮೀಟಿಂಗುಗಳಲ್ಲಿ ಭಾಗವಹಿಸುತ್ತಿದ್ದ ರಾಜಕೀಯ ಮುಖಂಡರ ಮನಸಿಗೆ ಮುದ ನೀಡುವ, ಮನಸನ್ನು ರಂಜಿಸುವ ಕಲಾ ಪ್ರಕಾರಗಳನ್ನು ಸಂಜೆಯ ವೇಳೆಗೆ ಏರ್ಪಾಟು ಮಾಡಬೇಕೆಂಬ ನಿರ್ಧಾರವನ್ನು ಸಮಿತಿಯು ತೆಗೆದುಕೊಂಡಿತು. ಅದಕ್ಕಾಗಿ ನಾಡಿನ ಖ್ಯಾತ ಕಲಾವಿದರನ್ನು ಆಹ್ವಾನಿಸಬೇಕೆಂದು ನಿಶ್ಚಯಿಸಿತು.

1911ರಲ್ಲಿ ಐದನೆಯ ಜಾರ್ಜ್ ದೊರೆಯ ಪಟ್ಟಾಭಿಷೇಕ ಮಹೋತ್ಸವವು ದೆಹಲಿಯಲ್ಲಿ ವಿಜೃಂಭಣೆಯಿಂದ ನೆರವೇರಿತ್ತು. ದೇಶದ ತುಂಬ ವೀಣೆಯ ಕಂಪನ್ನು ಬೀರಿದ್ದ ಮೈಸೂರಿನ ಹೆಸರಾಂತ ವೈಣಿಕ ವೀಣೆ ಶೇಷಣ್ಣನವರನ್ನು ಆ ಸಮಾರಂಭಕ್ಕೆ ವಿಶೇಷವಾಗಿ ಆಹ್ವಾನಿಸಲಾಗಿತ್ತು. ಜಾರ್ಜ್ ದೊರೆಯು ಅವರ ವೀಣೆಯನ್ನು ಮನಸಾರೆ ಮೆಚ್ಚಿ, ಅವರನ್ನು ಇಂಗ್ಲೆಂಡಿಗೆ ಆಹ್ವಾನಿಸಿದಾಗ, ಸಮುದ್ರಯಾನ ನಿಷಿದ್ಧವೆಂದು ಭಾವಿಸಿದ್ದ ಆ ಮಹಾನ್ ಕಲಾವಿದ ನಯವಾಗಿ ಅದನ್ನು ನಿರಾಕರಿಸಿದ್ದು, ದೊರೆಯು ಅವರ ಮುಖದ (ಎದೆ ಮಟ್ಟದ) ಪ್ರತಿಮೆಯನ್ನು ಮಾಡಿಸಿ ಬಕಿಂಗ್‌ಹ್ಯಾಮಿನ ತನ್ನ ಅರಮನೆಯಲ್ಲಿ ಇಡಲು ಒಯ್ದದ್ದು ಎಲ್ಲವೂ ಜನಜನಿತವಾಗಿತ್ತು. ಅವರನ್ನೇ ಕರೆಸುವುದೆಂದು ಸಮಿತಿಯು ತೀರ್ಮಾನ ಮಾಡಿ, ಮೈಸೂರು ಮಹಾರಾಜರಿಗೆ ಅವರನ್ನು ಕಳುಹಿಸಿಕೊಡಬೇಕೆಂಬ ಪ್ರಾರ್ಥನಾ ಪತ್ರವನ್ನು ಕಳುಹಿಸಿತು. ಮಹಾರಾಜರು ಅದಕ್ಕೆ ಒಪ್ಪಿ, ವೀಣೆ ಶೇಷಣ್ಣನವರನ್ನು ಬೆಳಗಾವಿಯ ಅಧಿವೇಶನಕ್ಕೆ ಕಳುಹಿಸಿದರು. ಪ್ರತಿನಿತ್ಯದ ಕಾರ್ಯಕಲಾಪದ ವರದಿಯನ್ನು ಅರಮನೆಗೆ ಕಳುಹಿಸಲು ಅರಮನೆಯ ಭಕ್ಷಿಗಳೂ ಸಹ ಹೋಗಿದ್ದರು.

ಚಿತ್ರ: ಕಣಕಾಲಮಠ

ಭೈರವಿ ಲಕ್ಷ್ಮಿನಾರಾಯಣಪ್ಪ

ಶೇಷಣ್ಣನವರೊಡನೆ ಅವರ ಏಳೆಂಟು ವರ್ಷದ ಮೊಮ್ಮಗ ಸ್ವರಮೂರ್ತಿ ವೆಂಕಟನಾರಾಯಣ ಮತ್ತು ಶಿಷ್ಯರಾಗಿದ್ದ ಭೈರವಿ ಲಕ್ಷ್ಮೀನಾರಣಪ್ಪ ಮತ್ತು ಭೀಮರಾವ್ ಅವರೂ ಜೊತೆಗಿದ್ದರು. ಕಲಾವಿದರಿಗೆ ಪ್ರತ್ಯೇಕ ಬಿಡಾರದ ವ್ಯವಸ್ಥೆ ಆಗಿತ್ತು. ಶೇಷಣ್ಣನವರ ವೀಣಾ ವಾದನಕ್ಕಾಗಿ ಸಂಜೆ ಅರ್ಧ ಗಂಟೆ ನಿಗದಿಯಾಗಿತ್ತು. ಆಗ ಮಹಾತ್ಮ ಗಾಂಧೀಜಿ ಮೌನವ್ರತದಲ್ಲಿದ್ದರು. ಸಂಜೆ ವಿಶೇಷ ಪೆಂಡಾಲಿನಲ್ಲಿ ಗಾಂಧಿ, ನೆಹರು, ವಲ್ಲಭಾಯಿ ಪಟೇಲ್, ಸರೋಜಿನಿದೇವಿ ನಾಯ್ಡು, ರಾಜೇಂದ್ರ ಪ್ರಸಾದ್ ಮುಂತಾದ ನಾಯಕರೆಲ್ಲರೂ ಆಸೀನರಾಗಿದ್ದರು. ಶೇಷಣ್ಣನವರ ವೀಣಾ ವಾದನವು ಎಲ್ಲ ಶ್ರೋತೃಗಳನ್ನೂ ಮುಗ್ಧವಾಗಿಸಿತ್ತು. ಆ ನಾದಲೋಕದಲ್ಲಿ ವಿಹರಿಸುತ್ತಿದ್ದವರಿಗೆ ಸಮಯ ಆದುದು ತಿಳಿಯಲಿಲ್ಲ. ಆದರೆ ಶೇಷಣ್ಣನವರು ತಮ್ಮ ನಿಗದಿತ ಸಮಯ ಮುಗಿದ ಕೂಡಲೇ ವೀಣೆಯನ್ನು ಕೆಳಗಿರಿಸಿದರು. ಕಣ್ಣು ಮುಚ್ಚಿ ಆಸ್ವಾದಿಸುತ್ತಿದ್ದ ಗಾಂಧೀಜಿ 'ಇದೇಕೆ?' ಎಂಬಂತೆ ನೋಡಿದರು. ಮತ್ತಷ್ಟು ಸಮಯ ವೀಣಾ ವಾದನವನ್ನು ಮುಂದುವರೆಸುವಂತೆ ಸನ್ನೆ ಮಾಡಿದರು. ಮತ್ತೆ ವೀಣಾ ವಾದನ ಮುಂದುವರೆಯಿತು. ಮತ್ತೆ ಅರ್ಧ ಗಂಟೆ ಆಯಿತು. ಗಾಂಧೀಜಿ ಪಕ್ಕದಲ್ಲಿದ್ದ ಅವರ ಆಪ್ತ ಕಾರ್ಯದರ್ಶಿ ಮಹದೇವ ದೇಸಾಯಿ ಚೀಟಿಯಲ್ಲಿ 'ತಮ್ಮ ಮುಂದಿನ ಕಾರ್ಯಕ್ರಮಕ್ಕೆ ತಡವಾಗುತ್ತಿದೆ' ಎಂದು ಬರೆದು ಗಾಂಧೀಜಿ ಮುಂದೆ ಇಟ್ಟರು. ಅದನ್ನು ಓದಿದ ಗಾಂಧೀಜಿ 'ಅದೆಲ್ಲವನ್ನೂ ರದ್ದು ಮಾಡು. ಇಂತಹ ದೈವಿಕ ವೀಣಾ ವಾದನವು ನಮಗೆ ಬೇಕೆಂದಾಗ ದೊರೆಯುವುದಿಲ್ಲ' ಎಂದು ಪ್ರತ್ಯುತ್ತರ ಬರೆದು ಕಣ್ಣು ಮುಚ್ಚಿದರು.

ಆದರೂ ಗಾಂಧೀಜಿಗೆ ತೃಪ್ತಿ ಆಗಲಿಲ್ಲ. ಆ ವೀಣಾ ವಾದನವನ್ನು ಮತ್ತಷ್ಟು ಕೇಳಬೇಕೆಂಬ ಆಸೆ. ಮರುದಿನ ಶೇಷಣ್ಣನವರನ್ನು ತಮ್ಮ ಬಿಡಾರಕ್ಕೇ ಕರೆಸಿಕೊಂಡು ಗಂಟೆ ಅದನ್ನು ಸವಿದರು. ಈ ಎಲ್ಲ ಆಗುಹೋಗುಗಳು ದರ್ಬಾರ್ ಭಕ್ಷಿಯವರು ಅರಮನೆಗೆ ಬರೆದ ಪತ್ರಗಳಲ್ಲಿ ದಾಖಲಾಗಿದೆ. ಗಾಂಧೀಜಿಯೊಡನೆ ಅವರ ಪತ್ನಿ ಕಸ್ತೂರಬಾ ಇದ್ದರು. ಅವರು ಶೇಷಣ್ಣನವರ ಮೊಮ್ಮಗನನ್ನು ತಮ್ಮ ತೊಡೆಯ ಮೇಲೆ ಕೂಡಿಸಿಕೊಂಡು ಅವನಿಂದ ಹಾಡಿಸಿದುದಲ್ಲದೆ, ಅವನಿಗೆ ತಲೆ ಬಾಚಿ, ಜಡೆ ಹೆಣೆದಿದ್ದುದನ್ನು ದ. ರಾ. ಬೇಂದ್ರೆ ನೆನಪಿಟ್ಟಿದ್ದರು.

ಆಗ ಚಳಿಗಾಲ. ರಾತ್ರಿಯಲ್ಲಿ ವಿಪರೀತ ಥಂಡಿ. ಇರುಳು ಸುಮಾರು ಹನ್ನೆರಡು ಅಥವಾ ಒಂದು ಗಂಟೆಯ ಸಮಯ. ಯಾರೋ ಬಾಗಿಲು ತಟ್ಟಿದ ಶಬ್ದ ಕೇಳಿ ಶೇಷಣ್ಣನವರ ಶಿಷ್ಯ ಭೀಮರಾವ್ ಹೊರಗೆ ಬಂದು ನೋಡುತ್ತಾರೆ, ಒಬ್ಬ ಪೊಲೀಸ್ ಕಾನ್‌ಸ್ಟೇಬಲ್. ಆತನಿಗೆ ಶೇಷಣ್ಣನವರ ವೀಣೆ ಕೇಳಬೇಕೆಂಬ ಹೆಬ್ಬಯಕೆ. ಆದರೆ ಇಡೀ ದಿನ ಕೆಲಸದ ಒತ್ತಡದಲ್ಲಿ ಬಿಡುವೆಂಬುದೇ ಇರುತ್ತಿರಲಿಲ್ಲ. ರಾತ್ರಿಯ ಕೆಲವು ಗಂಟೆಗಳಷ್ಟೇ ಬಿಡುವು ದೊರೆಯುತ್ತಿದ್ದುದು. ಅವರು ಮನಸ್ಸು ಮಾಡಿದರೆ, ವೀಣೆಯನ್ನು ಕೇಳಬಹುದೇನೋ ಎಂಬ ಆಸೆ. ಭೀಮರಾವ್ ಈ ಚಳಿಯಲ್ಲಿ ನಿದ್ದೆ ಮಾಡುತ್ತಿರುವ ಗುರುಗಳನ್ನು ಎಬ್ಬಿಸುವುದಂತೂ ಸಾಧ್ಯವಿಲ್ಲದ ಮಾತು ಎಂದು ಆತನನ್ನು ಗದರಿ ವಾಪಸ್ ಕಳುಹಿಸುವ ಯತ್ನದಲ್ಲಿದ್ದಾಗ ಗುರುಗಳಿಗೆ ಎಚ್ಚರವಾಯಿತು. 'ಭೀಮೂ, ಏನದು' ಎಂದರು. ಅನಿವಾರ್ಯವಾಗಿ ನಡೆದ ಸಂಗತಿಯನ್ನು ಗುರುಗಳಲ್ಲಿ ನಿವೇದಿಸಿದರು. 'ಹಾಗೆ ಬಂದವರನ್ನು ಎಂದೂ ವಾಪಸ್ ಕಳುಹಿಸಬಾರದು. ಎಲ್ಲಿ, ವೀಣೆ ತಗೊ' ಎಂದ ಶೇಷಣ್ಣನವರು ಸುಮಾರು ಒಂದೂವರೆ ಗಂಟೆ ಆ ಕಾನ್‌ಸ್ಟೇಬಲ್‌ಗೆ ನಾದಾಮೃತವನ್ನು ಉಣಬಡಿಸಿ ಕಳುಹಿಸಿದರು. ಇದು ಆ ಕಲೋಪಾಸಕನ ಸ್ವಭಾವ.

ಬೆಳಗಾವಿಯ ಆ ಅಧಿವೇಶನದಲ್ಲಿ ಪ್ರಾರ್ಥನೆ ಹಾಡಿದ್ದ ಮತ್ತೊಬ್ಬ ಮೈಸೂರಿಗರೆಂದರೆ ತಿರುಮಲೆ ರಾಜಮ್ಮನವರು. ಪತ್ರಿಕೋದ್ಯಮದ ಭೀಷ್ಮ ಎಂದೇ ಹೆಸರಾಗಿದ್ದ ತಿ.ತಾ.ಶರ್ಮರ ಪತ್ನಿ. ಅವರ ಗಾಯನವನ್ನೂ ಗಾಂಧೀಜಿ ಮೆಚ್ಚಿದ್ದರು. ಈಕೆಯೂ ಶೇಷಣ್ಣನವರಲ್ಲಿ ವೀಣಾಭ್ಯಾಸ ಮಾಡಿದ್ದವರೇ. ಹೀಗೆ 1924ರ ಕಾಂಗ್ರೆಸ್ ಅಧಿವೇಶನಕ್ಕೂ ಮೈಸೂರಿಗೂ ಒಂದು ಅವಿನಾಭಾವ ಸಂಬಂಧ ಉಂಟಾಗಿತ್ತು. ❖

ಕ್ಯಾನ್ವಾಸ್ ಮೇಲೆ ಕರುಣೆಯ ಕಡಲು...

ಈರಣ್ಣ ಬೆಂಗಾಲಿ

ಚಿತ್ರಕಲೆ ಗಡಿಯನ್ನು ಮೀರಿದ್ದು. ಹೀಗಾಗಿ ದೇಶ, ಭಾಷೆಯ ಹಂಗಿಲ್ಲದೆ ಕಲಾಕೃತಿಯನ್ನು ಅರ್ಥೈಸಿಕೊಳ್ಳಬಹುದು. ಜಗತ್ತಿನಲ್ಲಿ ಅದೆಷ್ಟೋ ಚಿತ್ರ ಕಲಾವಿದರು ವಿವಿಧ ಮಾಧ್ಯಮಗಳಲ್ಲಿ, ಅನೇಕ ಶೈಲಿಯ ಕಲಾಕೃತಿಗಳನ್ನು ರಚಿಸುತ್ತಿದ್ದಾರೆ. ಇವುಗಳ ಮಧ್ಯೆ ತಮ್ಮದೇ ಶೈಲಿ ಮತ್ತು ವಿಭಿನ್ನ ಆಲೋಚನೆಯಿಂದ ಚಿತ್ರಕಲಾಸಕ್ತರು ಮತ್ತು ಕಲಾಪ್ರೇಮಿಗಳ ಗಮನ ಸೆಳೆದ ಕಲಾಕೃತಿಗಳು ಇವೆ. ಇದೇ ರೀತಿ ರಾಯಚೂರು ಜಿಲ್ಲೆ ಮಾನ್ವಿಯ ಹಿರಿಯ ಕಲಾವಿದ, ಲಲಿತಾ ಕಲಾ ಅಕಾಡೆಮಿ ಮಾಜಿ ಸದಸ್ಯ ವಾಜಿದ್ ಸಾಜಿದ್ ಅವರ ಸೃಜನಶೀಲ ಕಲಾಕೃತಿಗಳು ಮನಸೂರೆಗೊಳ್ಳುತ್ತವೆ. ವಿಶೇಷವಾಗಿ ಇವರು ಮದರ್ ತೆರೆಸಾ ಅವರು ಜೀವನದುದ್ದಕ್ಕೂ ಸಲ್ಲಿಸಿದ ಸೇವೆಯ ವಿವಿಧ ಆಯಾಮಗಳನ್ನು ಕಲಾಕೃತಿಗಳ ಮೂಲಕ ಅಭಿವ್ಯಕ್ತಿಸಿದ್ದಾರೆ.

ಸ್ವಾರ್ಥ, ಯಾವ ಫಲಾಪೇಕ್ಷೆಯಿಲ್ಲದೆ ಬಡಜನರ ಸೇವೆ ಸಲ್ಲಿಸಿ ಇಡೀ ಜಗತ್ತಿಗೆ ಮಾನವೀಯತೆಯ ಸಂದೇಶ ಸಾರುವ ಮುಖಾಂತರ ಮಾದರಿಯಾದ ಧೀಮಂತ ಮಹಿಳೆ ಮದರ್ ತೆರೆಸಾ. ಮೂಲತಃ ಅಲ್ಬೇನಿಯಾದವರಾದರೂ ಭಾರತದ ಕಲ್ಕತ್ತಾದಲ್ಲಿ ನೆಲೆಸಿ ನಿರಾಶ್ರಿತ, ನಿರ್ಗತಿಕ, ಬಡವರ, ದೀನರ ಕಣ್ಣೀರನ್ನು ಒರೆಸಿ, ಮಮತೆ ತೋರಿದವರು. ಇಂಥ ವಿಶ್ವಮಾತೆಯ ಒಟ್ಟು ಹನ್ನೆರಡು ಕಲಾಕೃತಿಗಳನ್ನು ಅಕ್ರಲಿಕ್, ಆಯಿಲ್ ಮತ್ತು ಮಿಶ್ರಮಾಧ್ಯಮದಲ್ಲಿ ವಿವಿಧ ಗಾತ್ರದ ಕ್ಯಾನ್ವಾಸ್ ಮೇಲೆ ಮನೋಜ್ಞವಾಗಿ ಚಿತ್ರಿಸಿದ್ದಾರೆ. ಮನುಷ್ಯತ್ವವನ್ನು ಎತ್ತಿಹಿಡಿದ ಮದರ್ ತೆರೆಸಾ ಅವರ ಅಮೂಲ್ಯ ಸೇವೆ ಇವರಿಗೆ ಈ ಚಿತ್ರಕಲಾಕೃತಿಗಳ ರಚನೆಗೆ ಸ್ಫೂರ್ತಿಯಾಗಿದೆ.

ವಾಜಿದ್ ಸಾಜಿದ್

ಮಗುವಿಗೆ ಊಟ ಮಾಡಿಸಿ ಹಸಿವನ್ನು ತಣಿಸುತ್ತಿರುವುದು, ಮಗುವನ್ನು ಪ್ರೀತಿಯಿಂದ ಎತ್ತಿಕೊಂಡಿರುವುದು, ವಾತ್ಸಲ್ಯದಿಂದ ಅಪ್ಪಿಕೊಂಡಿರುವುದು, ಬಡಜನತೆಯ ಜೊತೆಗಿನ ಒಡನಾಟ, ಮಕ್ಕಳೊಂದಿಗೆ ಅಕ್ಕರೆಯಿಂದ ಮಾತನಾಡುತ್ತಿರುವುದು, ಕೈ ಮುಗಿದ ಕಲಾಕೃತಿಗಳು–ಹೀಗೆ ಮದರ್ ತೆರೆಸಾ ಅವರ ಜೀವನದ ಪ್ರಮುಖ ಘಟನಾವಳಿಗಳು ಜೀವಕಳೆ ತುಂಬಿಕೊಂಡಂತೆ ಸೊಗಸಾಗಿ ಚಿತ್ರಿಸಿದ್ದಾರೆ.

ಪದ್ಮಶ್ರೀ, ಭಾರತ ರತ್ನ, ನೊಬೆಲ್ ಶಾಂತಿ ಪ್ರಶಸ್ತಿ ಒಲಿದ ಮದರ್ ತೆರೆಸಾ ಅವರ ಸೇವೆ ಸದಾ ಸ್ಮರಣೀಯವಾಗಿದ್ದು, ಈ ಅಪರೂಪದ ಕಲಾಕೃತಿಗಳನ್ನು ವಾಜಿದ್ ಸಾಜಿದ್ ಅವರು ವಿವಿಧೆಡೆ ಪ್ರದರ್ಶನ ಮಾಡಿದ್ದಾರೆ. ಕ್ಯಾನ್ವಾಸ್ ಮೇಲೆ ಕರುಣೆಯ ಕಡಲನ್ನು ಕಂಡ ಅನೇಕರಲ್ಲಿ ಮಹಾಮಾತೆಯ ಸೇವಾಮನೋಭಾವ ಅವರ ಮನದಲ್ಲಿ ಅಚ್ಚೊತ್ತಿ, ತಾವೂ ತಮ್ಮ ಕೈಲಾದ ಸೇವೆಗೆ ಮುಂದಾಗುವಂತೆ ಪ್ರೇರೇಪಿಸಿದೆ. ❖

ವಾಜಿದ್ ಸಾಜಿದ್ ಕಲಾಕೃತಿಗಳಲ್ಲಿ ಕಂಡ ಮದರ್ ತೆರೆಸಾ

ಮೊದಲ ಓದು

ಜಾನಪದ ಸಂಶೋಧನೆಯ ಮೂಲತತ್ವಗಳು

ಲೇಖಕ ಬೇರೆ ಬೇರೆ ಸಂದರ್ಭದಲ್ಲಿ ಬರೆದ ಲೇಖನಗಳ ಸಂಕಲನ 'ದಲಿತ ಜಾನಪದ'. ಇದರಲ್ಲಿ 'ವಿದ್ರೋಹದ ಗೋವಿನ ಹಾಡು', 'ಬಲಿದಾನದ ಕಾವ್ಯಕ್ಕೆ ದನಿಯಾದವರು', 'ಎ.ಕೆ. ರಾಮಾನುಜನ್ನರ ದ್ರಾವಿಡ ಶೋಧ' ಸೇರಿದಂತೆ 13 ಭಿನ್ನ ಲೇಖನಗಳು ಇವೆ.

ಜನಪ್ರಿಯ ಗೋವಿನ ಹಾಡು ಕಥನ ಗೀತೆಯನ್ನು 'ವಿದ್ರೋಹದ ಗೋವಿನ ಹಾಡು' ಎಂಬ ಪ್ರಬಂಧದಲ್ಲಿ ಲೇಖಕರು ವಿಶ್ಲೇಷಣೆ ಮಾಡಿದ್ದಾರೆ. ಇದರಲ್ಲಿ ಪರಂಪರಾಗತವಾಗಿ ಬಂದಿದ್ದ ಭಾವುಕ ಅರಿವಿನ ವಿವರವನ್ನು ತಾರ್ಕಿಕವಾಗಿ ಪ್ರಶ್ನಿಸುತ್ತಾರೆ. ಸತ್ಯಕ್ಕೆ ತಲೆಬಾಗಿ ಜೀವ ತ್ಯಾಗ ಮಾಡುವ ಹುಲಿಯ ಪ್ರಾಣಕ್ಕೆ ಯಾವ ಮೌಲ್ಯ ಸಿಕ್ಕಿದೆ ಎನ್ನುವುದು ಇಲ್ಲಿನ ಸೂಕ್ಷ್ಮ ಒಳನೋಟ. ಅದನ್ನು ಗುರುತಿಸದೇ ಇರುವುದಕ್ಕೆ ಮೂಲ ಸಾಮಾಜಿಕ ವ್ಯವಸ್ಥೆಯ ಶ್ರೇಷ್ಠ ಕನಿಷ್ಠ ಮಾನದಂಡದಲ್ಲಿ ಅಡಗಿದೆ ಎನ್ನುತ್ತಾರೆ ಲೇಖಕರು. ಅದೇ ಹಿನ್ನೆಲೆಯಲ್ಲಿ ಸುದೀರ್ಘವಾಗಿ ಇಲ್ಲಿ ಚರ್ಚಿಸುತ್ತಾರೆ. ತುಮಕೂರಿನಲ್ಲಿ ಜರುಗಿದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಈ ಪ್ರಬಂಧವನ್ನು ಮಂಡಿಸಲಾಗಿತ್ತು. ಇದು ಅಂಕಣ ರೂಪದಲ್ಲಿ ಪತ್ರಿಕೆಯೊಂದರಲ್ಲಿ ಪ್ರಕಟಣೆಯಾದ ನಂತರ ದೊಡ್ಡ ಸಂವಾದವನ್ನೂ ಉಂಟುಮಾಡಿತ್ತು. ಅದಕ್ಕೆ ಯು.ಆರ್. ಅನಂತಮೂರ್ತಿ ಅವರ ಪ್ರತಿಕ್ರಿಯೆಗಳು, ಅದಕ್ಕೆ ಲೇಖಕ ನೀಡಿದ ಮರು ಉತ್ತರವನ್ನೂ ಸಂಗ್ರಹಿಸಿ ನೀಡಿದ್ದಾರೆ.

ಸಂಶೋಧಕರಾದ ಜೀಶಂಪ, ಎ.ಕೆ. ರಾಮಾನುಜನ್ ಅವರು ಕನ್ನಡ ಜಾನಪದ ಅಧ್ಯಯನಕ್ಕೆ ನೀಡಿದ ಕೊಡುಗೆಯನ್ನು ಸ್ಮರಿಸುತ್ತಾರೆ. ಕನ್ನಡದ್ದೇ ಆದ ಜಾನಪದ ಅಧ್ಯಯನದ ತತ್ವಗಳ ಅನಿವಾರ್ಯತೆ ಬಗ್ಗೆ ಮೊಗಳ್ಳಿ ಗಣೇಶ್ ಈ ಕೃತಿಯಲ್ಲಿ ಚರ್ಚಿಸುತ್ತಾರೆ.

ಪು: 200
₹225

ದಲಿತ ಜಾನಪದ
ಲೇ:ಮೊಗಳ್ಳಿ ಗಣೇಶ್
ಪ್ರ: ದಲಿತ ಪ್ರಕಾಶನ, ಹೊಸಪೇಟೆ
ಸಂ: 9483980959

ಸಂಬಂಧ ಮತ್ತು ಬಂಧಗಳ ನಡುವಿನ ಗಿಲಕಿ



ಸರ್ವೆ ನಂ. 97
ಲೇ: ಅನಿಲ್ ಗುನ್ನಾಪುರ
ಪ್ರ: ಹೊಂಗಿರಣ ಪ್ರಕಾಶನ, ವಿಜಯಪುರ
ಸಂ: 7406481629

ಪು: 120
₹120

ಆತ್ಮಸಾಕ್ಷಿ ಮತ್ತು ಆತ್ಮಗೌರವಗಳೇ ಮುಖ್ಯಪಾತ್ರವಾಗಿರುವ ಆರು ಕತೆಗಳ ಈ ಸಂಕಲನ ಓದುಗರ ಒಳಹೊರಗನ್ನು ಕಲಕುತ್ತದೆ. ಇಲ್ಲಿಯ ಕತೆಗಳು ಒಂದು ವಿಷಣ್ಣಭಾವವನ್ನು ಶಾಶ್ವತವಾಗಿ ಉಳಿಸುತ್ತವೆ. ಲಿಂಗಾಯತ ಖಾನಾವಳಿ, 'ಸರ್ವೆ ನಂ.97' ಕತೆಗಳಲ್ಲಿ ಸಾಮಾನ್ಯರಲ್ಲಿರುವ ಪಾಳೇಗಾರಿಕೆಯ ಮನೋಭಾವ, ಶಿಕ್ಷಿತರಲ್ಲದಿದ್ದರೂ ಜೀವಪರವಾಗಿ ತುಡಿಯುವ ಜೀವಗಳು, ಕತೆಯೊಳಗೊಂದು ಕತೆ ಹೇಳುತ್ತಲೇ ನಮ್ಮ ಒಳಮನಸಿನೊಂದಿಗೆ ಮುಖಾಮುಖಿಯಾಗಿ ನಿಲ್ಲಿಸುತ್ತಾರೆ.

ಹಳದಿಯುಂಗುರ ಕತೆಯಲ್ಲಿ ಸಾಮಾನ್ಯರ ಮೌಢ್ಯ ಮತ್ತು ನಂಬಿಕೆಗಳ ನಡುವೆ ಸದಾ ಲಾಭ ಪಡೆಯುವ ದಗಾಕೋರರ ಪರಿಚಯವಾಗುತ್ತಲೇ ನವತರುಣ ಬಲಿಯಾಗಿದ್ದಕ್ಕೆ ಮನಸು ವಿಲವಿಲವೆನಿಸುತ್ತದೆ. ಈ ಕತೆಗಳೆಲ್ಲ ಓದುಗರನ್ನು ಕಳೆದುಹೋಗುವಂತೆ ಮಾಡಿದರೂ, ಆತ್ಮಸಾಕ್ಷಿಯೊಡನೆ ಸಂವಾದಿಯಾಗುವಂತೆ ಮಾಡುತ್ತವೆ. ವಿಜಯಪುರ–ಬಾಗಲಕೋಟೆಯ ಸುತ್ತಲಿನ ಕತೆಗಳನ್ನು ಹೇಳುತ್ತ ಆ ನೆಲದೊಡನೆ, ಆ ಭಾಷೆಯೊಡನೆ ಓದುಗನು ಹತ್ತಿರವಾಗುತ್ತ ಹೋಗುವಂತೆ ಭಾಷೆಯನ್ನು ದುಡಿಸಲಾಗಿದೆ. ಮಾನವೀಯ ಸಂಬಂಧಗಳ ಕಥನದಲ್ಲಿ ಅಲ್ಲಲ್ಲಿ ಚಿಮ್ಮುವ ಅಂತಃಕರಣದ ಒರತೆ ಕತೆಗಳನ್ನು ಇನ್ನಷ್ಟು ಆರ್ದ್ರಗೊಳಿಸುತ್ತವೆ.

ಧಾರವಾಡ ಭಾಷೆ ದೊಡ್ಡವಾಡದ ಬದುಕಿನತ್ತ

ಧಾರವಾಡ ಮತ್ತು ದೊಡ್ಡವಾಡಗಳ ನಡುವೆ ಸುಳಿವ ಕತೆಯೊಳಗೆ ಒಂದಷ್ಟು ಉಪಕತೆಗಳು ಬರುತ್ತವೆ. ಪತ್ತಾರತಿ ತಾರಕ್ಕ, ತಾರಾಮತಿಯಾಗಿದ್ದು ಹೇಗೆ? ಪುಟ್ಟ ಹುಡುಗಿ ವಿಶಾರದ ತನ್ನ ಮಗನೊಂದಿಗೆ ಗ್ರಾಮಕ್ಕೆ ಬಂದಾಗ ಏನೆಲ್ಲ ಬದಲಾವಣೆಗಳಾಗಿವೆ. ವಿಶಾರದಾ ತನ್ನ ಬಾಲ್ಯದ ನೆನಪಿನ ಓಣಿಗಳಲ್ಲಿ ಓಡಾಡುತ್ತಲೇ ಕತೆಯೊಂದನ್ನು ನಿರೂಪಿಸುತ್ತ ಹಳ್ಳಿಯ ವಿಕ್ಷಿಪ್ತ ಪಾತ್ರಗಳನ್ನು ತೆರೆದಿಡುತ್ತದೆ. ಹನುಮನೆಂಬ ಪತ್ತಾರ, ಹೂ ಹುಡುಗಿ, ಪತ್ತಾರತಿ ತಾರಕ್ಕ, ಪಕ್ಕದ ಮನೆ ಶಾಂತಕ್ಕ ಇವರೆಲ್ಲರ ಸುತ್ತ ಗಿರಕಿ ಹಾಕುವ ಕಾದಂಬರಿ ಹಮ್ಮಾ ಹೂ.

ಕಾದಂಬರಿಗೇಕೆ ಈ ಹೆಸರು, ಈ ಹೆಸರಿನ ಅರ್ಥವೇನು ಎಂದರಿಯಲು ಕಾದಂಬರಿ ಕೊನೆಯವರೆಗೂ ಓದಿಸಿಕೊಂಡು ಹೋಗುತ್ತದೆ. ಧಾರವಾಡದ ಮಣ್ಣಿನ ಭಾಷಾ ಸೊಗಡು, ಅಲ್ಲಿಯ ಬೈಗುಳಗಳಲ್ಲಿಯೂ ಎದ್ದು ಕಾಣುತ್ತವೆ. ಬೊಕಾಡಿ, ಬೊಗುಣೀಯಂಥ ನೇಪಥ್ಯಕ್ಕೆ ಸರಿದ ಬೈಗುಳಗಳು ಓದುವಾಗ ಕಚಗುಳಿ ಇಡುತ್ತವೆ. ಸಂಭಾಷಣೆಗಳಲ್ಲಿ ಸ್ಥಳೀಯ ಭಾಷೆಯನ್ನೇ ಬಳಸಿರುವುದರಿಂದ 'ನ'ದಿಂದ ಅಂತ್ಯಗೊಳ್ಳುವ ಪದಗಳೆಲ್ಲ 'ಣ'ಕಾರದಿಂದ ಅಂತ್ಯಗೊಂಡು ಅತಿ ಸಹಜವೆನಿಸುತ್ತದೆ. ಬುತ್ತಿಯೂಟ, ಉಡುವ ಸೀರೆ, ತೊಡುವ ಆಭರಣಗಳೆಲ್ಲವೂ ಧಾರವಾಡ ಸೀಮೆಯ ಬದುಕನ್ನು ಸೂಕ್ಷ್ಮವಾಗಿ ಕಟ್ಟಿಕೊಡುತ್ತ ಹೋಗುತ್ತವೆ. ಗ್ರಾಮೀಣ ಬದುಕಿನ ಬಾಂಧವ್ಯಗಳಲ್ಲಿ ಕಂಡು ಬರುವ ಸಲುಗೆ, ಸಲುಗೆಯ ನೆಪದಲ್ಲಿ ಕಥಾನಾಯಕಿಗಾಗುವ ಕಿರುಕುಳ, ಅದನ್ನು ದೇವರ ಮುಂದೆ ಬಿಚ್ಚಿಡುತ್ತಲೇ ಗಂಭೀರವಾದ ವಿಷಯವನ್ನೂ ನಾಜೂಕಾಗಿ ನಿಭಾಯಿಸುತ್ತಾರೆ.

ಮಹಿಳಾ ಸಬಲೀಕರಣವೆಂಬುದು ಕೇವಲ ಆರ್ಥಿಕ ಸಬಲೀಕರಣವಷ್ಟೇ ಅಲ್ಲ, ನಿರ್ಣಾಯಕ ಸಮಯದಲ್ಲಿ ಆತ್ಮವಿಶ್ವಾಸದಿಂದ ಮುಂದುವರಿಯುವ ಬಗೆಯನ್ನು ಇಲ್ಲಿಯ ಸ್ತ್ರೀಪಾತ್ರಗಳು ನಿರೂಪಿಸುತ್ತ ಹೋಗುತ್ತವೆ.



ಪು: 152
₹185

ಹಮ್ಮಾ ಹೂ
ಲೇ: ಶ್ರೀದೇವಿ ಕಳಸದ
ಪ್ರ: ವೀರಲೋಕ
ಸಂ: 7022122121

ಪ್ರಜಾವಾಣಿ ವೀರಲೋಕ

ಯುಗಾದಿ ನಾಟಕ ರಚನಾ ಸ್ಪರ್ಧೆ 2025

ಸ್ಪರ್ಧೆಯ ನಿಯಮಗಳು

- ವಸ್ತುವಿನ ಆಯ್ಕೆಗೆ ಯಾವುದೇ ನಿರ್ಬಂಧಗಳಿಲ್ಲ.
- ನಾಟಕವು ಕನ್ನಡ ಭಾಷೆಯಲ್ಲಿನ ಸ್ವತಂತ್ರ ರಚನೆಯಾಗಿರಬೇಕು. ಯಾವುದೇ ಭಾಷೆಯ ಅನುವಾದವಾಗಿರಬಾರದು. ಈ ಮೊದಲು ಮಾಧ್ಯಮಗಳಲ್ಲಿ ಪ್ರಕಟ ಅಥವಾ ಪ್ರಸಾರವಾಗಿರಬಾರದು.
- ರಚನೆ ಮೂರು ಅಂಕದ್ದಾಗಿರಬೇಕು.
- ನಾಟಕೀಯತೆ ಪ್ರಧಾನ ಗುಣವಾಗಿರಬೇಕು.
- ರಚನೆಯನ್ನು ಕಡ್ಡಾಯವಾಗಿ ಟೈಪ್ ಮಾಡಿ ಎರಡು ಪ್ರತಿಗಳನ್ನು ಕಳುಹಿಸಬೇಕು.
- ಎ-4 ಅಳತೆಯಲ್ಲಿ 45 ರಿಂದ 50 ಪುಟಗಳ ಮಿತಿಯಲ್ಲಿರಬೇಕು. ಫಾಂಟ್ ಸೈಜ್ 12 ಇರಬೇಕು.
- ಪ್ರತ್ಯೇಕ ಪುಟದಲ್ಲಿ ಹೆಸರು, ಅಂಚೆ ವಿಳಾಸ, ಮೊಬೈಲ್ ನಂಬರ್, ಇ-ಮೇಲ್ ವಿಳಾಸ ಒದಗಿಸಬೇಕು. ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ವರ್ಣ ಭಾವಚಿತ್ರದೊಂದಿಗೆ ಕಿರು ಪರಿಚಯವನ್ನು ಕಳುಹಿಸಬೇಕು.
- ಪ್ರವೇಶಗಳ ಲಕೋಟೆಯ ಮೇಲೆ 'ಪ್ರಜಾವಾಣಿ ಯುಗಾದಿ ನಾಟಕ ರಚನಾ ಸ್ಪರ್ಧೆ'ಗಾಗಿ ಎಂದು ಸ್ಪಷ್ಟವಾಗಿ ಬರೆಯಬೇಕು.
- ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್‌ನ ಸಿಬ್ಬಂದಿ ಹಾಗೂ ಅವರ ಕುಟುಂಬದವರು ಸ್ಪರ್ಧೆಯಲ್ಲಿ ಭಾಗವಹಿಸುವಂತಿಲ್ಲ.
- ಸ್ಪರ್ಧೆಗೆ ಕಳುಹಿಸಿದ ರಚನೆಗಳನ್ನು ಹಿಂದಿರುಗಿಸುವುದಿಲ್ಲ.
- ಬಹುಮಾನಿತ ನಾಟಕಗಳನ್ನು ಯಾವುದೇ ಸ್ವರೂಪದಲ್ಲಿ ಯಾವಾಗ ಬೇಕಾದರೂ ಬಳಸುವ ಹಕ್ಕುಗಳನ್ನು ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್ ಕಾಯ್ದಿರಿಸಿಕೊಂಡಿದೆ.
- ಸಂಪಾದಕರ ತೀರ್ಮಾನವೇ ಅಂತಿಮ.

ಪ್ರವೇಶಗಳು ತಲುಪಲು ಕೊನೆಯ ದಿನಾಂಕ: ಫೆಬ್ರುವರಿ 28, 2025

ಮೊದಲನೇ ಬಹುಮಾನ ₹25,000
ಎರಡನೇ ಬಹುಮಾನ ₹15,000
ಮೂರನೇ ಬಹುಮಾನ ₹10,000

ತೀರ್ಪುಗಾರರ ಮೆಚ್ಚುಗೆ ಪಡೆದ ಇತರೆ ಐದು ನಾಟಕಗಳಿಗೆ ತಲಾ ₹ 5,000

ವಿಳಾಸ: ಸಂಪಾದಕರು, ಪ್ರಜಾವಾಣಿ ಯುಗಾದಿ ನಾಟಕ ರಚನಾ ಸ್ಪರ್ಧೆ ವಿಭಾಗ
ಪ್ರಜಾವಾಣಿ, ನಂ.75, ಮಹಾತ್ಮಗಾಂಧಿ ರಸ್ತೆ, ಬೆಂಗಳೂರು-560001

ವರ್ಣನೆಗೆ ನಿಲುಕದ ವರ್ಲಿ ಚಿತ್ತಾರ

ವರ್ಲಿ ಬಿಡಿಸುವುದರಲ್ಲಿ ನಿರತ ಕಲಾವಿದರು

10ನೇ ಪುಟದಿಂದ..

ನಮ್ಮ ಕರುನಾಡಿನ ಮಲೆನಾಡಿನ ದೀವರೂ ಎಂಬ ಆದಿಮ ಸಮುದಾಯದ ಹಸೆ ಚಿತ್ತಾರವೆಂಬ ಕಲಾ ಪ್ರಕಾರವೊಂದು ಹೇಗೆ ಆ ಭಾಗದಲ್ಲಿ ಹಾಸು ಹೊಕ್ಕಾಗಿದೆಯೋ, ಅಂತೆಯೇ ವರ್ಲಿ ವರ್ಣಚಿತ್ರಕಲೆಯೂ ದೇಶಾದ್ಯಂತ ವ್ಯಾಪಕವಾಗಿ ಆಕರ್ಷಿಸುತ್ತಿದೆ. ಆಧುನಿಕ ಜಗತ್ತಿನ ನೂರಾರು ತಂತ್ರಜ್ಞಾನಾಧಾರಿತ ಕಲಾ ಪ್ರಕಾರಗಳ ನಡುವೆಯೂ ಜನಪದ ಸೊಗಡಿನ ಸಾವಿರಾರು ಕಥೆಗಳನ್ನು, ನೋಡುಗರಿಗೆ ತನ್ನದೇ ಕಲಾಶೈಲಿಯ ಮೂಲಕ ತಲುಪಿಸುತ್ತದೆ. ವರ್ಲಿ ವರ್ಣಚಿತ್ರಕಲೆಯು ಇಂದು ಹೊಸದೊಂದು ಟ್ರೆಂಡ್ ಹುಟ್ಟು ಹಾಕುತ್ತಿದೆ. ಹೀಗೆ ಹೊಸಕಾಲದ ಹೊಸ ಅಗತ್ಯಕ್ಕೆ ತಕ್ಕಂತೆ ಬದಲಾಗುತ್ತ, ಬಾಳುತ್ತಿದೆ.

ಕುವೆಂಪು ಪದ ಸೃಷ್ಟಿ

ಜಿ.ಕೃಷ್ಣಪ್ಪ

ಚವರಿಬಿಜ್ಜಣ

ಚವರಿಬಿಜ್ಜಣ (ನಾ). ಚವರಿಯಿಂದ ಮಾಡಿದ ಬೀಸಣಿಗೆ

(ಚವರಿ + ಬಿಜ್ಜಣ)

ಯುದ್ಧದ ಎರಡನೆಯ ದಿನದಲ್ಲಿ ರಾಕ್ಷಸವೀರರಾದ ವಜ್ರದಂಷ್ಟ್ರ, ಧೂಮ್ರಾಕ್ಷ, ಅಕಂಪನರು ಮಡಿಯುವರು. ಆಗ ರಾವಣನು ಸರ್ವಸೇನಾಧ್ಯಕ್ಷ ಪ್ರಹಸ್ತನಿಗೆ ಮನ್ನಣೆಯ ವೀರೋಚಿತ ನುಡಿ ಹೇಳಿ ವಾನರರನ್ನು ಎದುರಿಸಲು ತಿಳಿಸುವನು. ಮಧ್ಯಾಹ್ನ ಕೋಟೆಯ ಎತ್ತರದ ಕೊತ್ತಳದಲ್ಲಿ ನಿಂತು ಯುದ್ಧವನ್ನು ನೋಡುತ್ತ ಶತಪಥ ತಿರುಗುವನು. ದೂತನೊಬ್ಬನು ಬಂದು ರಾಣಿ ಮಂಡೋದರಿಯು ಊಟಕ್ಕೆ ಬರಲು ಹೇಳಿರುವುದನ್ನು ತಿಳಿಸುವನು. ರಾವಣನು ಆಗ ಹಸಿಗಾಯದ ಕಾಡುಹಂದಿ ಹಸಿದು ಇಕ್ಕೆಗೆ ಹೋದಂತೆ ಹೋಗುವನು.

ಮಂಡೋದರಿ ಅವನಿಗೆ ಊಟ ಬಡಿಸಿ ಉಪಚರಿಸುವವಳು. ಅವಳು ಬೀಸುತ್ತಿದ್ದ ಬೀಸಣಿಗೆಯನ್ನು ಕುರಿತು ಕುವೆಂಪು ಹೊಸ ಪದ 'ಚವರಿಬಿಜ್ಜಣ' ರೂಪಿಸಿ ಪ್ರಯೋಗಿಸಿದ್ದಾರೆ. ಚವರಿ ಮೃಗದ ಕೂದಲಿನಿಂದ ಮಾಡಿದ್ದು.

ಪತಿಸೇವೆಗನುವಾಗಿ
ಚವರಿ ಬಿಜ್ಜಣ ವಿಡಿದು ಬಾಗಿರ್ದ ಮಯಕುವರಿ,
ಹೆದರುತಂಜುತೆ ಮೆಲ್ಲನೆಯೆ ಮಾತು ತೆಗೆದಳಾ
ದಿನದ ರಣವಾರ್ತೆಯಂ ಕೇಳ್ವನೆವದಿ.

ಕಥೆ
ಆಲೂರು ದೊಡ್ಡನಿಂಗಪ್ಪ ಅವರ
ನೀಲಾ
ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/short-story

ಕವನ
ತುರುವೇಕೆರೆ ಪ್ರಸಾದ್ ಅವರ
ಬೆಳಗಾಗುತ್ತದೆಂದರೆ....
ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/poetry

ಸಾದರ ಸ್ವೀಕಾರ
ಮಾರುಕಟ್ಟೆಯಲ್ಲಿನ ಹೊಸ ಪುಸ್ತಕಗಳ ಮಾಹಿತಿಗೆ ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಕಥೆ, ಕವಿತೆ, ಲೇಖನ, ಪ್ರತಿಕ್ರಿಯೆಗಳನ್ನು ಈ ಇ-ಮೇಲ್‌ಗೆ ಕಳುಹಿಸಿ
bhanuvara@prajavani.co.in

ಬ್ಲೇಡ್ಸ್ ಆಫ್ ಗ್ಲೋರಿ
ಪುಣೆಯ ಕ್ರಿಕೆಟ್ ದೇಗುಲ



ಭಾರತದಲ್ಲಿ ಕ್ರಿಕೆಟ್ ಅನ್ನು ಒಂದು ಧರ್ಮವನ್ನಾಗಿ ನೋಡಲಾಗುತ್ತದೆ. ಅಂತಹ ಆಟಕ್ಕೊಂದು ಅದ್ಭುತವಾದ ಮ್ಯೂಸಿಯಂ ಕಟ್ಟಿದ್ದಾರೆ ರಣಜಿಯ ಮಾಜಿ ಆಟಗಾರ ರೋಹನ್ ಪಾಟೆ. ಇಲ್ಲಿ ನೂರಾರು ದಿಗ್ಗಜ ಕ್ರಿಕೆಟ್ ಆಟಗಾರರು ಬಳಸಿದ ಬ್ಯಾಟ್, ಬಾಲ್‌ಗಳಿವೆ. ಅವುಗಳಲ್ಲಿ ಅವರದೇ ಹಸ್ತಾಕ್ಷರಗಳಿವೆ. ಕ್ರಿಕಟ್ ಕನಸು ಕಾಣುವ ಯುವ ಕಂಗಳಿಗೆ ಇದನ್ನು ಕ್ರಿಕೆಟ್ ದೇಗುಲವೆಂದರೆ ಅತಿಶಯೋಕ್ತಿಯಲ್ಲ...

ಶುಭಾ ಖಟಾವಕರ ಮೈತ್ರಸ್

ಅದು ಮ್ಯಾಚ್‌ನ ಕೊನೆಯ ಗಳಿಗೆ. ಪ್ರೇಕ್ಷಕರು ಕಾತುರರಾಗಿ ತಮ್ಮ ತಮ್ಮ ಸೀಟ್‌ಗಳಿಂದ ಎದ್ದು ನಿಂತಿದ್ದಾರೆ. ಶ್ರೀಲಂಕಾದ ಬೌಲರ್ ಧೋನಿಗೆ ಚೆಂಡನ್ನೆಸೆಯುತ್ತಾನೆ. 'ಧೋನಿ ಫಿನಿಶಿಸ್ ಆಫ್ ಇನ್ ಸ್ಟೈಲ್' ಎಂದು ವೀಕ್ಷಕ ವಿವರಣೆಗಾರ ಘೋಷಿಸುತ್ತಾನೆ. ಸ್ಟೇಡಿಯಂ ತುಂಬೆಲ್ಲ ಹರ್ಷೋನ್ಮಾದ! ಧೋನಿಯ ಈ ಸಿಕ್ಸ್ 2011ರಲ್ಲಿ ಭಾರತಕ್ಕೆ ವಿಶ್ವಕಪ್ ತಂದು ಕೊಡುತ್ತದೆ.

ಕರ್ಟ್ಲೀ ಆ್ಯಂಬ್ರೋಸ್, ಕಪಿಲ್ ದೇವ್, ವಾಸಿಂ ಅಕ್ರಂ ಮುಂತಾದ ದಿಗ್ಗಜ ಬೌಲರ್‌ಗಳ ಹಸ್ತಾಕ್ಷರ ಇರುವ ಕ್ರಿಕೆಟ್ ಬಾಲ್‌ಗಳು

ಪುಣೆಯ 'ಬ್ಲೇಡ್ಸ್ ಆಫ್ ಗ್ಲೋರಿ' ಎಂಬ ದೇಶದ ಮೊದಲ ಕ್ರಿಕೆಟ್ ಮ್ಯೂಸಿಯಂನಲ್ಲಿ ಪ್ರದರ್ಶಿತವಾದ ಪ್ರತಿಯೊಂದು ವಸ್ತುವೂ ಇಂತಹ ಅನೇಕ ರೋಚಕ ಕ್ಷಣಗಳನ್ನು ಸೆರೆಹಿಡಿದಿದೆ. ಕ್ರಿಕೆಟ್ ಅನ್ನು ನಿಷ್ಠೆಯಿಂದ ಆರಾಧಿಸುವ ಕೋಟ್ಯಂತರ ಜನರಿರುವ ಭಾರತದಲ್ಲಿ, ಕ್ರಿಕೆಟ್ ಆಟಕ್ಕೇ ಮೀಸಲಿರುವ ಇಂತಹ ಮ್ಯೂಸಿಯಂ ಇರುವುದು ಬಹಳಷ್ಟು ಜನರಿಗೆ ಗೊತ್ತಿರಲಿಕ್ಕಿಲ್ಲ. ರಣಜಿ ಕ್ರಿಕೆಟ್ ಮಾಜಿ ಆಟಗಾರ ರೋಹನ್ ಪಾಟೆ ಸ್ಥಾಪಿಸಿರುವ ಈ ಮ್ಯೂಸಿಯಂನಲ್ಲಿ ಕ್ರಿಕೆಟ್‌ಗೆ ಸಂಬಂಧಿಸಿದ ಸಾವಿರಾರು ವಸ್ತುಗಳು ಪ್ರದರ್ಶನಗೊಂಡಿವೆ. ಪ್ರವೇಶ ದ್ವಾರದಲ್ಲೇ ಕ್ರಿಕೆಟ್ ಬ್ಯಾಟ್‌ನ ಹಂತ ಹಂತವಾದ ವಿಕಾಸವನ್ನು ಪುಟ್ಟ ಮಾದರಿಗಳ ಮೂಲಕ ತೋರಿಸಲಾಗಿದೆ.

ರೋಹನ್ ತಮ್ಮ ರಿಯಲ್ ಎಸ್ಟೇಟ್ ಕಂಪನಿಗಾಗಿ ಸಚಿನ್ ತೆಂಡೂಲ್ಕರ್ ಅವರನ್ನು ಬ್ರಾಂಡ್ ಅಂಬಾಸಿಡರ್ ಆಗುವಂತೆ ಕೋರಲು 2010 ರಲ್ಲಿ ಭೇಟಿಯಾಗಿದ್ದರು. ಆ ಭೇಟಿಯಲ್ಲಿ ಸಚಿನ್ ಅವರ ನೆನಪಿನ ಕಾಣಿಕೆ ಎಂದು ಅವರ ಬ್ಯಾಟ್ ಅನ್ನು ರೋಹನ್ ಪಡೆದರು. ಆಗ ಅವರಿಗೆ ಸಚಿನ್ ಬ್ಯಾಟ್ ಸಿಕ್ಕಿದ್ದಾದರೆ, ಬೇರೆ ಆಟಗಾರರ ವಸ್ತುಗಳನ್ನು ಪಡೆಯಲು ಏಕೆ ಪ್ರಯತ್ನಿಸಬಾರದು ಎನ್ನುವ ಯೋಚನೆ ಬಂದಿತು. ಅದಕ್ಕಾಗಿ ದೇಶ ವಿದೇಶಗಳಲ್ಲಿ ಸಂಚರಿಸಿ ಆಟಗಾರರ ಹಸ್ತಾಕ್ಷರಗಳನ್ನು ಮತ್ತು ಅವರ ಕ್ರಿಕೆಟ್ ವಸ್ತುಗಳನ್ನು ಸಂಗ್ರಹಿಸಲಾರಂಭಿಸಿದರು. 2011ರ ವಿಶ್ವಕಪ್ ಕ್ರಿಕೆಟ್ ಪಂದ್ಯದಲ್ಲಿ ಬಹಳಷ್ಟು ಆಟಗಾರರ ಹಸ್ತಾಕ್ಷರವನ್ನು ಸಂಗ್ರಹಿಸಿದರು. ಮೇ 2, 2012 ರಂದು ಸಚಿನ್ ತೆಂಡೂಲ್ಕರ್ 'ಬ್ಲೇಡ್ಸ್ ಆಫ್ ಗ್ಲೋರಿ' ಮ್ಯೂಸಿಯಂ ಅನ್ನು ಉದ್ಘಾಟಿಸಿದರು.

ಸಚಿನ್ ಗಮನಿಸಿದ ಈ ಮ್ಯೂಸಿಯಂನ ವೈಶಿಷ್ಟ್ಯವೆಂದರೆ ಬೇರೆ ದೇಶಗಳ ಕ್ರಿಕೆಟ್ ಮ್ಯೂಸಿಯಂಗಳಲ್ಲಿ ಆಯಾ ದೇಶಗಳ ಆಟಗಾರರ ವಸ್ತುಗಳು ಮಾತ್ರ ಪ್ರದರ್ಶಿಸಲಾಗಿರುತ್ತದೆ. 'ಬ್ಲೇಡ್ಸ್ ಆಫ್ ಗ್ಲೋರಿ'ಯಲ್ಲಿ ಬೇರೆ ಬೇರೆ ದೇಶಗಳ ಮಹಿಳಾ ಹಾಗೂ ಪುರುಷ ಆಟಗಾರರ ಕ್ರಿಕೆಟ್ ವಸ್ತುಗಳೂ ಇವೆ.

ಒಂದು ಮ್ಯಾಚ್‌ನಲ್ಲಿ 300 ರನ್‌ಗಳನ್ನು ಗಳಿಸಿದ ಬ್ಯಾಟರ್‌ಗಳ ಹಸ್ತಾಕ್ಷರಗಳುಳ್ಳ ಅವರವರ ಬ್ಯಾಟ್‌ಗಳು, ಬೇರೆ ಬೇರೆ ವರ್ಷಗಳ ವಿಶ್ವಕಪ್ ಪಂದ್ಯಗಳಲ್ಲಿ ಗೆದ್ದ ತಂಡದ ಆಟಗಾರರ ಹಸ್ತಾಕ್ಷರಗಳುಳ್ಳ ಬ್ಯಾಟ್‌ಗಳು, ವಿವಿಧ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಹಿಳಾ ಮತ್ತು ಪುರುಷ ಆಟಗಾರರ ಜರ್ಸಿಗಳು, ಟಿ ಶರ್ಟ್‌ಗಳು, ಟ್ರ್ಯಾಕ್ ಪ್ಯಾಂಟ್‌ಗಳು, ಹೆಲ್ಮೆಟ್‌ಗಳು, ಹೆಚ್ಚು ವಿಕೆಟ್ ಪಡೆದು ದಾಖಲೆ ಮಾಡಿದ ಆಟಗಾರರ ಹಸ್ತಾಕ್ಷರಗಳುಳ್ಳ ಬಾಲ್‌ಗಳು–ಹೀಗೆ ಸಾವಿರಕ್ಕೂ ಹೆಚ್ಚು ವಸ್ತುಗಳು ಇಲ್ಲಿವೆ.

ಗತಕಾಲದ ನೆನಪಿನಲ್ಲಿ ಸಚಿನ್ ತೆಂಡೂಲ್ಕರ್. ಜೊತೆಗೆ ಮ್ಯೂಸಿಯಂ ಸ್ಥಾಪಕ ರೋಹನ್ ಪಾಟೆ

ವಿವಿಧ ವಿಶ್ವಕಪ್‌ಗಳಲ್ಲಿ ಗೆದ್ದ ತಂಡಗಳ ಆಟಗಾರರ ಹಸ್ತಾಕ್ಷರ ಇರುವ ಬ್ಯಾಟ್‌ಗಳ ಸಂಗ್ರಹ

ಕ್ರಿಕೆಟ್ ಧರ್ಮ ಎನ್ನುವ ದೇಶ

ಭಾರತದಲ್ಲಿ ಕ್ರಿಕೆಟ್ ಆಟಕ್ಕೆ ಬೇರೆ ಎಲ್ಲ ಆಟಗಳಿಗಿಂತ ಹೆಚ್ಚು ಮಹತ್ವ ನೀಡಲಾಗುತ್ತದೆ. ಒಂದು ವೇಳೆ ಕ್ರಿಕೆಟ್ ಅನ್ನು ಒಂದು ಧರ್ಮ ಎಂದು ಪರಿಗಣಿಸುವುದಾದರೆ, ಸಚಿನ್ ಅದರ ದೇವರು ಎಂದು ಭಾವಿಸಲಾಗುತ್ತದೆ. ಅವರ ಸಾಧನೆಯನ್ನು ನೋಡಿದರೆ ಇದರಲ್ಲಿ ಉತ್ಪ್ರೇಕ್ಷೆಯೇನೂ ಅನಿಸುವುದಿಲ್ಲ. ಅದನ್ನು ಗೌರವಿಸಲೆಂದು ಸಚಿನ್‌ಗಾಗಿಯೇ ಇಲ್ಲಿ ಪ್ರತ್ಯೇಕ ವಿಭಾಗವೇ ಇದೆ. ಸಚಿನ್ ನೂರು ಶತಕಗಳನ್ನು ಹೊಡೆದದ್ದು ಗೊತ್ತಿರುವ ವಿಷಯ. ಒಂದು ಗೋಡೆ ಮೇಲೆ ಪುಟ್ಟ ಪುಟ್ಟ ಬ್ಯಾಟ್‌ಗಳ ಮೇಲೆ ಯಾವ ವರ್ಷದಲ್ಲಿ ಯಾವ ದೇಶದ ವಿರುದ್ಧ ಎಷ್ಟು ರನ್‌ಗಳನ್ನು ಸಚಿನ್ ಹೊಡೆದರು ಎಂದು ಕ್ರಮವಾಗಿ ದಾಖಲಿಸಲಾಗಿದೆ. ಈ ಮ್ಯೂಸಿಯಂಗೆ ಭೇಟಿ ಕೊಡುವ ಆಟಗಾರರು, ಮುಖ್ಯವಾಗಿ ಸಚಿನ್‌ಗೆ ಬೌಲಿಂಗ್ ಮಾಡಿದ ವಾಸಿಂ ಅಕ್ರಂ, ಬ್ರೆಟ್ ಲೀ, ಅಲನ್ ಡೊನಾಲ್ಡ್... ಮುಂತಾದ ಬೌಲರ್‌ಗಳು ಈ ಗೋಡೆಯ ಎದುರು ನಿಂತು ಅವರು ತಮ್ಮ ಯಾವ ಬಾಲ್‌ಗೆ ಎಷ್ಟು ರನ್‌ಗಳನ್ನು ಹೊಡೆದರು ಮತ್ತು ಆ ಆಟಗಳ ವೈಶಿಷ್ಟ್ಯವನ್ನು ನೆನೆಸಿಕೊಂಡಿದ್ದಾರೆ. ಅದಲ್ಲದೆ ಸಚಿನ್ ಬಳಸಿದ ವಸ್ತುಗಳೊಂದಿಗೆ, ಅವರ ಬೇರೆ ಬೇರೆ ಮ್ಯಾಚ್‌ಗಳ ಮತ್ತು ದಾಖಲೆಗಳ ದತ್ತಾಂಶವನ್ನೂ ಇಲ್ಲಿ ಪ್ರದರ್ಶಿಸಲಾಗಿದೆ.

ಭಾರತದ ಅತ್ಯುತ್ತಮ ಆಟಗಾರ ವಿರಾಟ್ ಕೊಹ್ಲಿ ಅವರ ಗ್ಯಾಲರಿಯೂ ಇಲ್ಲಿದೆ. ಅಲ್ಲಿ ಸಚಿನ್‌ನಂತೆಯೇ ಅವರು ಬಳಸಿದ ವಸ್ತುಗಳು, ಟಿ ಶರ್ಟ್‌ಗಳು, ಜರ್ಸಿಗಳು, ಅನೇಕ ದಾಖಲೆಗಳು, ಇತ್ಯಾದಿಗಳು ಇವೆ.

ಸುಮಾರು 500ಕ್ಕೂ ಹೆಚ್ಚು ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಹಿಳಾ ಮತ್ತು ಪುರುಷ ಕ್ರಿಕೆಟ್ ಪಟುಗಳು ಈ ಮ್ಯೂಸಿಯಂಗೆ ಇಲ್ಲಿಯವರೆಗೆ ಭೇಟಿ ನೀಡಿದ್ದಾರೆ. ಪ್ರತಿದಿನ ನೂರಾರು ಆಸಕ್ತರು ಭೇಟಿ ನೀಡುತ್ತಾರೆ. ವಾರಾಂತ್ಯಕ್ಕೆ ಹೆಚ್ಚು ಜನರು ಭೇಟಿ ನೀಡುತ್ತಾರೆ. ಹೆಚ್ಚಿನ ಸಂಖ್ಯೆಯಲ್ಲಿ ಶಾಲಾ ಮಕ್ಕಳು ಬರುತ್ತಾರೆ.

ಈ ಮ್ಯೂಸಿಯಂ ಜನಸಾಮಾನ್ಯರು ಮತ್ತು ಆಕಾಂಕ್ಷೆಯುಳ್ಳ ಆಟಗಾರರಿಗಷ್ಟೇ ಅಲ್ಲದೇ ಈಗಾಗಲೇ ಹೆಸರು ಮಾಡಿರುವ ಆಟಗಾರರಿಗೂ ದೇಗುಲವಿದ್ದಂತೆ. ಸಚಿನ್, ಸುನೀಲ್ ಗವಾಸ್ಕರ್ ಆಟವನ್ನು ನೋಡುತ್ತ ಹಲವು ಆಟಗಾರರು ಬೆಳೆದಿದ್ದಾರೆ. ವಿರಾಟ್ ಕೊಹ್ಲಿ ಕೂಡಾ ಈ ಪಟ್ಟಿಯಲ್ಲಿದ್ದಾರೆ. ಅವರೆಲ್ಲ ಈ ಮ್ಯೂಸಿಯಂನಲ್ಲಿ ಏನೇನು ವಸ್ತುಗಳಿರಬೇಕೆಂದು ಸಲಹೆ ನೀಡುತ್ತಾರೆ. ಮಕ್ಕಳಷ್ಟೇ ಅಲ್ಲದೇ ನುರಿತ ಆಟಗಾರರೂ ಮ್ಯೂಸಿಯಂನಲ್ಲಿ ಪ್ರದರ್ಶಿತ ತಮ್ಮ ತಮ್ಮ ಹೀರೊಗಳ ವಸ್ತುಗಳನ್ನು ಸ್ಪರ್ಶಿಸಿ ಆನಂದಿಸುತ್ತಾರೆ. ಕೆಲವು ಆಟಗಾರರು ತಮ್ಮ ಮನೆಗೆ ಮರಳಿದ ನಂತರ ತಮ್ಮ ಕ್ರಿಕೆಟ್ ವಸ್ತುಗಳನ್ನು ಮ್ಯೂಸಿಯಂಗೆ ಕಳುಹಿಸುತ್ತಾರೆ.

ರೋಹನ್ ಅವರಿಗೆ ಈ ಮ್ಯೂಸಿಯಂ ಸ್ಥಾಪಿಸಲು ಸಾಕಷ್ಟು ಕಷ್ಟಗಳು ಎದುರಾಗಿದ್ದವು. ಆಟಗಾರರ ಹಸ್ತಾಕ್ಷರವನ್ನು ಸಂಗ್ರಹಿಸಿವುದು ಅಷ್ಟೇನೂ ಸುಲಭದ ಮಾತಾಗಿರಲಿಲ್ಲ. ಹೋಟೆಲ್‌ಗಳ ಲಾಬಿಗಳಲ್ಲಿ ಆಟಗಾರರು ಈಗ ಹೊರಬರುವರೋ ಆಗ ಹೊರಬರುವರೋ ಎಂದು ಕಾಯುತ್ತ ನಿಂತು, ಕೆಲವೊಂದು ಬಾರಿ ಸೆಕ್ಯೂರಿಟಿಯಿಂದ ಬೈಯಿಸಿಕೊಂಡಾದರೂ ಸರಿ, ವಸ್ತುಗಳನ್ನು ಸಂಗ್ರಹಿಸಿ, ಮ್ಯೂಸಿಯಂ ಬೆಳೆಸಿದ್ದಾರೆ. ಅವರು ಪ್ರಪಂಚದ ಅತ್ಯಂತ ಹೆಚ್ಚು ಕ್ರಿಕೆಟ್ ಸಾಮಗ್ರಿಗಳ ವೈಯಕ್ತಿಕ ಸಂಗ್ರಹಕಾರರಲ್ಲಿ ಒಬ್ಬರಾಗಿದ್ದಾರೆ.

ನಟ ವೆಂಕಟ್, ಸುನಿಲ್ ಶೆಟ್ಟಿ, ಅನುಷ್ಕಾ ಶರ್ಮಾ, ರಿತೇಶ್ ದೇಶಮುಖ್ ಸೇರಿದಂತೆ ಹಲವು ಸೆಲೆಬ್ರಿಟಿಗಳೂ ಮ್ಯೂಸಿಯಂಗೆ ಭೇಟಿ ಕೊಟ್ಟಿದ್ದಾರೆ. ಸೆಲೆಬ್ರಿಟಿ ಲೀಗ್ ಆಟಗಾರರು ಮತ್ತು ಕ್ರಿಕೆಟ್ ಬಗ್ಗೆ ಹೆಚ್ಚು ಮಾಹಿತಿ ಇಲ್ಲದ ಜನರು ಕೂಡ ಮ್ಯೂಸಿಯಂಗೆ ಬಂದು ಮಾಹಿತಿ ಪಡೆದಿದ್ದಾರೆ.

ಈ ಮ್ಯೂಸಿಯಂ ವಿವಿಧ ವಯೋಮಾನದವರಿಗೆ ವಿವಿಧ ರೀತಿಯಿಂದ ಪ್ರೇರಣೆ ನೀಡುತ್ತದೆ. ಕ್ರಿಕೆಟ್ ಪ್ರೇಮಿಗಳಾದ ಶಾಲಾ ಮಕ್ಕಳು ಮತ್ತು ಕ್ರಿಕೆಟ್ ತರಬೇತಿ ಪಡೆಯುತ್ತಿರುವ ಮಕ್ಕಳಿಗೆ ಇದೊಂದು ತೀರ್ಥಕ್ಷೇತ್ರವಾಗಿದೆ. ಒಬ್ಬ ಹುಡುಗನಿಗೆ ಸಚಿನ್ ಬಳಸಿದ ಬ್ಯಾಟ್ ಹಿಡಿಯಲು ಕೊಟ್ಟಾಗ ಅವನು ಇಡೀ ದಿನ ಕೈ ತೊಳೆಯಲಿಲ್ಲವಂತೆ. ಇನ್ನೊಂದು ಶಾಲಾ ವಿದ್ಯಾರ್ಥಿ ಹತ್ತು ವರ್ಷಗಳ ನಂತರ ತನ್ನ ಟೀ ಶರ್ಟ್ ಕೂಡ ಇಲ್ಲಿ ಪ್ರದರ್ಶನಗೊಳ್ಳಲಿದೆ ಎಂದು ಆತ್ಮವಿಶ್ವಾಸದಿಂದ ಹೇಳಿದನಂತೆ!

ನಮ್ಮಲ್ಲಿ ಮ್ಯೂಸಿಯಂ ಎಂಬ ಪರಿಕಲ್ಪನೆ ಈಗೀಗ ಜನಪ್ರಿಯವಾಗುತ್ತಿದೆ. ಹೊರ ದೇಶಗಳಲ್ಲಿ ಇದು ಸಾಮಾನ್ಯ. ಮ್ಯೂಸಿಯಂ ಪರ್ಯಟನೆ ಈಗ ಹೆಚ್ಚು ಹೆಚ್ಚು ಬೆಳೆಯುತ್ತಿದೆ.

'ಬ್ಲೇಡ್ಸ್ ಆಫ್ ಗ್ಲೋರಿ' ಹಿರಿಯರಿಂದ ಕಿರಿಯರವರೆಗೆ ಮತ್ತು ನುರಿತ ಆಟಗಾರರಿಂದ ಹಿಡಿದು ಗಲ್ಲಿ ಕ್ರಿಕೆಟ್ ಆಟಗಾರರವರೆಗೆ ಎಲ್ಲರಿಗೂ ಪ್ರೇರಣೆ ನೀಡುತ್ತದೆ...

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ



ಡಣ್ಣ ಚಕ್ಕು ಶೇಶ್ರಪ್ಪ ಕಥೆಯ — ಸವಾಲು ಗೆದ್ದ ಗುಂಡ

• ಕಲೆ–ಪರಿಕಲ್ಪನೆ: ಸಂತೋಷ್ ಸಸಿಹಿತ್ಲು



ಪಾರ್ಕ್‌ನಲ್ಲಿದ್ದ ಸೀಸಾದಲ್ಲಿ ತಾನು ಗೆಲ್ಲುತ್ತೇನೆ ಎಂದು ಗುಂಡ ತನಗಿಂತ ತೂಕದಲ್ಲಿ ಹೆಚ್ಚಿದ್ದ ತನ್ನ ಅಣ್ಣನಿಗೊಂದು ಸವಾಲು ಹಾಕಿದ. ತಮ್ಮನ ಸವಾಲು ಸ್ವೀಕರಿಸಿದ ಅಣ್ಣ ಸಾಕಷ್ಟು ಪ್ರಯತ್ನಿಸಿದ. ಆದರೆ ಸೋತುಹೋದ. ಗುಂಡ ಅದರಿಂದ ಎದ್ದಾಗಲೇ ಅಣ್ಣನಿಗೆ ತಮ್ಮನ ಕಿತಾಪತಿಯ ಅರಿವು ಆಯಿತು.

ಪದ ಸಂಕಲನ

ಇಲ್ಲಿ ಕೊಟ್ಟಿರುವ ಎರಡು ಪದ ಹಾಗೂ ಒಂದು ಅಕ್ಷರವನ್ನು ಕೂಡಿಸಿ ಅರ್ಥಬದ್ಧ ಒಂದೇ ಪದ ಮಾಡಿರಿ.

						=	
1	ಮರಿ	+	ಬಲೆ	+	ಶ	=	
2	ಗತ	+	ಕಣಿ	+	ಲೋ	=	
3	ಜೋರು	+	ಮನೆ	+	ಡ	=	
4	ಸರಿ	+	ಬಗೆ	+	ಕ	=	
5	ಮಾರ	+	ಚಾವಿ	+	ಡು	=	

ಜಾಣಪದ ಆಟ

ಇಲ್ಲಿ ಕೊಟ್ಟಿರುವ ಎರಡಕ್ಷರ ಪದದ ಮಧ್ಯದಲ್ಲಿ ಅಕ್ಷರ ಪಟ್ಟಿಯಿಂದ ಇನ್ನೆರಡಕ್ಷರ ಆಯ್ದು ತುಂಬಿ ಅರ್ಥಬದ್ಧ ನಾಲ್ಕಕ್ಷರ ಪದ ಮಾಡಿ.

ಅಕ್ಷರ ಪಟ್ಟಿ

ರ	ಚ	ಹು	ಪ
ಯಾ	ಯಂ	ದಾ	ದಾ
ಹ	ಣ	ಮಾ	ಹ
ಡಿ	ಲೋ	ರಿ	ರ
ನೋ	ಡಿ	ಬಿ	ಕಾ

1	ಬ			ನ
2	ಹ			ರ
3	ಆ			ನೆ
4	ಸಾ			ಲ
5	ಗ			ಡಿ
6	ಮ			ರ
7	ಗ			ತಿ
8	ಪ			ರ
9	ಗ			ರ
10	ಹ			ರಿ

ಮೋಜಿನ ENGLISH

ಇಲ್ಲಿ ಕೊಟ್ಟಿರುವ ಎರಡಕ್ಷರ ಪದಕ್ಕೆ ಅಕ್ಷರ ಪಟ್ಟಿಯಿಂದ ಇನ್ನೆರಡು ಅಕ್ಷರ ಆಯ್ಕೆ ಮಾಡಿಕೊಂಡು ಸೇರಿಸಿ ಅರ್ಥಬದ್ಧ ನಾಲ್ಕಕ್ಷರದ ಪದ ಮಾಡಿ.

L	T	T	L
L	A	L	L
N	A	L	L
E	E	E	M

1	B	E		
2	D	O		
3	G	O		
4	M	E		
5	N	O		
6	S	O		
7	T	O		
8	W	E		

ಪದ ಹುಡುಕಾಟ

ಇಲ್ಲಿರುವ ಪದಗಳಲ್ಲಿ ಓರ್ವ ಮಾಜಿ ಪ್ರಸಿದ್ಧ ಕ್ರಿಕೆಟ್ ಆಟಗಾರನ ಹೆಸರು ಹುಡುಕಿ

1.ಸುಪ್ರಸಿದ್ಧ ಗುಡಿ
2.ಸುನೀತಿ ಕಥನ
3.ಲಕ್ಷಾಧೀಶವ್ಯಕ್ತಿ
4.ಮೆಗಾಧಾರಾವಾಹಿ
5.ವಕಾಲತ್ತು ಮಾಡು
6.ಆಸ್ಕರ್ ಪ್ರಶಸ್ತಿ
7.ರಭಸದ ಮಳೆ

ಉತ್ತರ:

....

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸರಿ ಉತ್ತರ ಮುಂದಿನ ವಾರ..

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಕಳೆದ ಸಂಚಿಕೆಯ ಸರಿ ಉತ್ತರಗಳು

ವೆಜ್–ಕ್ವಿಜ್: 1.ಟೊಮ್ಯಾಟೊ 2.ಬೆಂಡೆಕಾಯಿ 3.ನುಗ್ಗೆಕಾಯಿ 4.ಕರ್ಚಿಕಾಯಿ 5.ಹಾಗಲಕಾಯಿ

ಮೋಜಿನ ಇಂಗ್ಲಿಷ್: Very, Baby, Easy, Gray, Holy, Lady, Many, Xray, City, Pity

ಜಾಣಪದ ಆಟ: 1.ಅರಗು 2.ಒರಗು 3.ಕರಗು 4.ಕೊರಗು 5.ಜರಗು 6.ದೊರಗು 7.ಬೆರಗು 8.ಬರಗು 9.ಹರಗು 10.ಸೆರಗು

ಪದಸಂಕಲನ: 1.ಗುರುಕಾಣಿಕೆ 2.ಹರಕೆಕುರಿ 3.ನಾಗರಹಾವು 4.ಗಾಯತ್ರಿಮಂತ್ರ 5.ಮಹಡಿಏರು

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು



ನಂದಿತಾ ಎಸ್.ಎಂ. ಬೆಂಗಳೂರು

ಮೋನಿಶ್ ಗೌಡ ವೈ.ಎಲ್. ಬೆಂಗಳೂರು

ತನ್ಮಯಿ ಮುತ್ತುರಾಜ ಪಾಟೀಲ, ಬಾಗಲಕೋಟೆ

ಧನುಷ್ ಕೆ.ಆರ್. ತುಮಕೂರು

ಅನ್ನಪೂರ್ಣ ಎ.ಸಿ. ಚಿಕ್ಕಮಗಳೂರು

ಸುಬ್ರಹ್ಮಣ್ಯ ಬನ್ನಿಗಿಡದ ನರಗುಂದ

ಸ್ಮರಣ್ ಅವಿಸ್ಮರಣೀಯ ಶತಕ • ಕರುಣ್ ಕಟ್ಟಿಹಾಕಿದ ಪ್ರಸಿದ್ಧ • ಮಯಂಕ್ ಪಡೆಗೆ ಐದನೇ ಪ್ರಶಸ್ತಿ

ಕರ್ನಾಟಕಕ್ಕೆ ವಿಜಯ್ ಹಜಾರೆ ಟ್ರೋಫಿ

ವಿಜಯ್ ಹಜಾರೆ ಟ್ರೋಫಿ ಗೆದ್ದ ಕರ್ನಾಟಕ ತಂಡದ ಆಟಗಾರರ ಸಂಭ್ರಮ –ಬಿಸಿಸಿಐ ಡೊಮೆಸ್ಟಿಕ್ ಎಕ್ಸ್ ಚಿತ್ರ

ವಡೋದರ: ಕರ್ನಾಟಕ ತಂಡವು ದೇಶಿ ಏಕದಿನ ಕ್ರಿಕೆಟ್‌ನ ಸಾರ್ವಭೌಮರನ್ನು ನಿರ್ಧರಿಸುವ ವಿಜಯ್ ಹಜಾರೆ ಟ್ರೋಫಿಯನ್ನು ಮುಡಿಗೇರಿಸಿಕೊಂಡಿತು. ಶನಿವಾರ ಕೋತಂಬಿ ಕ್ರೀಡಾಂಗಣದಲ್ಲಿ ನಡೆದ ರೋಚಕ ಫೈನಲ್ ಹಣಾಹಣಿಯಲ್ಲಿ ಮಯಂಕ್ ಅಗರವಾಲ್ ನಾಯಕತ್ವದ ಕರ್ನಾಟಕ ತಂಡ 36 ರನ್‌ಗಳಿಂದ ವಿದರ್ಭ ತಂಡದ ಮೇಲೆ ಜಯಗಳಿಸಿತು.

ರಾಜ್ಯ ತಂಡಕ್ಕೆ ಈ ಟೂರ್ನಿಯಲ್ಲಿ ಒಲಿದ ಐದನೇ ಟ್ರೋಫಿ ಇದಾಗಿದ್ದು, ತಮಿಳುನಾಡು ಹೆಸರಿನಲ್ಲಿದ್ದ ದಾಖಲೆ ಸರಿಗಟ್ಟಿತು. ಇಡೀ ಟೂರ್ನಿಯಲ್ಲಿ ಕರ್ನಾಟಕವು ತೋರಿದ ತಂಡ ಸ್ಫೂರ್ತಿ ಈ ಪಂದ್ಯದಲ್ಲಿ ಢಾಳಾಗಿ ಗೋಚರಿಸಿತು. ಇದರಿಂದಾಗಿ ಕನ್ನಡಿಗ ಕರುಣ್ ನಾಯರ್ ನಾಯಕತ್ವದ ವಿದರ್ಭ ತಂಡವನ್ನು ಸೋಲಿಸಲು ಕರ್ನಾಟಕ ತಂಡಕ್ಕೆ ಸಾಧ್ಯವಾಯಿತು.

ಸೈಯದ್ ಮುಷ್ತಾಕ್ ಅಲಿ ಟಿ20 ಟೂರ್ನಿಯಲ್ಲಿ ನಿರಾಶಾದಾಯಕವಾಗಿ ಆಡಿದ್ದ ಮಯಂಕ್ ಬಳಗವು ಇಲ್ಲಿ ಪುಟಿದೆದ್ದ ರೀತಿ ಅನನ್ಯವಾದದ್ದು. ಟಾಸ್ ಗೆದ್ದ ವಿದರ್ಭ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು.

ವಿಜಯ್ ಹಜಾರೆ ಟ್ರೋಫಿ ಕರ್ನಾಟಕ ಗೆದ್ದ ವರ್ಷ

ವರ್ಷ	ಫೈನಲ್ ಎದುರಾಳಿ	ಸ್ಥಳ
2013-14	ರೈಲ್ವೇಸ್	ಕೋಲ್ಕತ್ತ
2014-15	ಪಂಜಾಬ್	ಅಹಮದಾಬಾದ್
2017-18	ಸೌರಾಷ್ಟ್ರ	ದೆಹಲಿ
2019-20	ತಮಿಳುನಾಡು	ಬೆಂಗಳೂರು
2024-25	ವಿದರ್ಭ	ವಡೋದರ

ಮಧ್ಯಮ ಕ್ರಮಾಂಕದ ಉದಯೋನ್ಮುಖ ಪ್ರತಿಭೆಗಳಾದ ರವಿಚಂದ್ರನ್ ಸ್ಮರಣ್ (101; 92ಎ), ಕೆ.ಎಲ್. ಶ್ರೀಜಿತ್ (78; 74ಎ) ಮತ್ತು ಅಭಿನವ್ ಮನೋಹರ್ (79; 42ಎ) ಅವರ ಅಮೋಘ ಬ್ಯಾಟಿಂಗ್ ಬಲದಿಂದ ಕರ್ನಾಟಕ 50 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 349 ರನ್ ಗಳಿಸಿತು. ವಿದರ್ಭ ತಂಡ ಕೊನೆಯಲ್ಲಿ ಹೋರಾಟ ತೋರಿದರೂ 48.2 ಓವರ್‌ಗಳಲ್ಲಿ 312 ರನ್ ಗಳಿಸಿ ಸವಾಲು ಮುಗಿಸಿತು.

ದೇವದತ್ತ ಪಡಿಕ್ಕಲ್ (8), ಮಯಂಕ್ (32) ಸೇರಿದಂತೆ ಮೂರು ವಿಕೆಟ್‌ಗಳನ್ನು ಕರ್ನಾಟಕ 67 ರನ್ ಆಗುವುದರೊಳಗೆ ಕಳೆದುಕೊಂಡಿತ್ತು. ಆದರೆ ಸ್ಮರಣ್ ಮತ್ತು ಶ್ರೀಜಿತ್ 160 ರನ್‌ಗಳ ದೊಡ್ಡ ಜೊತೆಯಾಟವಾಡಿದರು. ಕೊನೆಯಲ್ಲಿ ಅಭಿನವ್ ಅವರ ಮಿಂಚಿನ ಆಟದಿಂದ ತಂಡ ದೊಡ್ಡ ಮೊತ್ತ ಕಲೆಹಾಕಲು ನೆರವಾಯಿತು.

ಆದರೆ ಟೂರ್ನಿಯಲ್ಲಿ ಐದು ಶತಕಗಳ ಸಹಿತ 752 ರನ್ ಗಳಿಸಿರುವ ಕರುಣ್ ನಾಯರ್, ಕಳೆದೆರಡೂ ಪಂದ್ಯಗಳಲ್ಲಿ ಶತಕ ಗಳಿಸಿದ್ದ ಧ್ರುವ ಶೋರೆ ಮತ್ತು ಸೆಮಿಫೈನಲ್‌ನಲ್ಲಿ ಶತಕ ಹೊಡೆದಿದ್ದ ಯಶ್ ರಾಥೋಡ್ ಅವರ ಅಮೋಘ ಲಯದ ಮುಂದೆ ಈ ಮೊತ್ತ ಅಸಾಧ್ಯವಲ್ಲ ಎಂಬ ಭಾವನೆಯು ಅಭಿಮಾನಿಗಳ ಮನದಲ್ಲಿ ಮೂಡಿತ್ತು. ಇದರಲ್ಲಿ ಧ್ರುವ ಶೋರೆ (110 ರನ್) ಅವರೊಬ್ಬರೇ ಶತಕ ಗಳಿಸುವಲ್ಲಿ ಯಶಸ್ವಿಯಾದರು. ಇದು ಅವರಿಗೆ ಟೂರ್ನಿಯಲ್ಲಿ ಸತತ ಮೂರನೇ ಶತಕ. ಆದರೆ ಈ ಸಲ ಹೊಡೆದ ಶತಕ ಫಲ ನೀಡಲಿಲ್ಲ.

ಯಶ್ ಅವರನ್ನು ಎಡಗೈ ವೇಗಿ ಅಭಿಲಾಷ್ ಶೆಟ್ಟಿ ಕಟ್ಟಿಹಾಕಿದರೆ, ಪ್ರಸಿದ್ಧಕೃಷ್ಣ ತಮ್ಮ ಗೆಳೆಯ ಕರುಣ್ ಅವರ ವಿಕೆಟ್ ಕಿತ್ತರು. ನಂತರದ ಆಟದಲ್ಲಿ ಬಹುತೇಕ ಕರ್ನಾಟಕ ಪ್ರಾಬಲ್ಯ ಮೆರೆದಂತೆ ಕಂಡಿತು. ಆದರೆ ಎಂಟನೇ ಕ್ರಮಾಂಕದ ಬ್ಯಾಟರ್ ಹರ್ಷ ದುಬೆ 30 ಎಸೆತಗಳಲ್ಲಿ 63 ರನ್ ಸಿಡಿಸುವ ಮೂಲಕ ವಿದರ್ಭ ತಂಡದಲ್ಲಿ ಗೆಲುವಿನ ಆಸೆ ಚಿಗುರಿಸಿದರು.

ಅವರ ಬೀಸಾಟ ಒಂದೆಡೆಯಾದರೆ, ಇನ್ನೊಂದೆಡೆ ಬೇರೆ ಬ್ಯಾಟರ್‌ಗಳು ಕ್ರೀಸ್‌ನಲ್ಲಿ ನಿಲ್ಲದಂತೆ ಬೌಲರ್‌ಗಳು ನೋಡಿಕೊಂಡರು. ಅದರಲ್ಲೂ ವಾಸುಕಿ ಕೌಶಿಕ್ (47ಕ್ಕೆ3) ಚಾಣಾಕ್ಷ ಬೌಲಿಂಗ್ ಪ್ರದರ್ಶಿಸಿದರು. ಜಿತೇಶ್ ಶರ್ಮಾ, ಅಪೂರ್ವ ವಾಂಖೆಡೆ ಮತ್ತು ನಚಿಕೇತ್ ಭೂತೆ ಅವರ ವಿಕೆಟ್‌ಗಳನ್ನು ಗಳಿಸಿದರು. ಎಡಗೈ ವೇಗಿ ಅಭಿಲಾಷ್ ಶೆಟ್ಟಿ ಮತ್ತು ಪ್ರಸಿದ್ಧ ಕೂಡ ತಲಾ ಮೂರು ವಿಕೆಟ್ ಗಳಿಸಿದರು. ಅಭಿಲಾಷ್ ಹಾಕಿದ 49ನೇ ಓವರ್‌ನಲ್ಲಿ ದುಬೆಯ ಕ್ಯಾಚ್ ಪಡೆದ ಮಯಂಕ್ ಅಗರವಾಲ್ ಅವರ ಹರ್ಷ ಮುಗಿಲುಮುಟ್ಟಿತು.

ಸಂಕ್ಷಿಪ್ತ ಸ್ಕೋರ್: ಕರ್ನಾಟಕ: 50 ಓವರ್‌ಗಳಲ್ಲಿ 6ಕ್ಕೆ 348 (ಮಯಂಕ್ ಅಗರವಾಲ್ 32, ಅನೀಶ್ ಕೆ.ವಿ 23, ಆರ್.ಸ್ಮರಣ್ 101, ಕೃಷ್ಣನ್ ಶ್ರೀಜಿತ್ 78, ಅಭಿನವ್ ಮನೋಹರ್ 79; ದರ್ಶನ್ ನಲ್ಕಂಡೆ 67ಕ್ಕೆ 2, ನಚಿಕೇತ್ ಭೂತೆ 70ಕ್ಕೆ2). ವಿದರ್ಭ: 48.3 ಓವರ್‌ಗಳಲ್ಲಿ 312 (ಧ್ರುವ್ ಶೋರೆ 110, ಯಶ್ ರಾಥೋಡ್ 22, ಕರುಣ್ ನಾಯರ್ 27, ಜಿತೇಶ್ ಶರ್ಮಾ 34, ಹರ್ಷ ದುಬೆ 68; ವಾಸುಕಿ ಕೌಶಿಕ್ 47ಕ್ಕೆ 3, ಪ್ರಸಿದ್ಧ ಕೃಷ್ಣ 84ಕ್ಕೆ3, ಅಭಿಲಾಷ್ ಶೆಟ್ಟಿ 58ಕ್ಕೆ 3). **ಫಲಿತಾಂಶ:** ಕರ್ನಾಟಕಕ್ಕೆ 36 ರನ್‌ಗಳ ಜಯ. **ಪಂದ್ಯದ ಆಟಗಾರ:** ಆರ್. ಸ್ಮರಣ್, ಸರಣಿಯ ಆಟಗಾರ: ಕರುಣ್ ನಾಯರ್

(ಮಾಹಿತಿ : ಬಿಸಿಸಿಐ ಡಾಟ್ ಟಿವಿ ಮತ್ತಿತರ ವೆಬ್‌ಸೈಟ್‌ಗಳು)

ಆಸ್ಟ್ರೇಲಿಯನ್ ಓಪನ್: ಟೇಲರ್, ಜಾಸ್ಮಿನ್‌ಗೆ ಆಘಾತ

ಸಿನ್ನರ್, ಶ್ವಾಂಟೆಕ್ ಮುನ್ನಡೆ

ಟೇಲರ್ ಫ್ರಿಟ್ಜ್ ಮತ್ತು ಜಾಸ್ಮಿನ್ ಪಾವ್ಲೀನಿ ಅವರಿಗೆ ಸಿಂಗಲ್ಸ್‌ನಲ್ಲಿ ಆಘಾತ ನೀಡಿದ ಫ್ರಾನ್ಸ್‌ನ ಗೇಲ್ ಮೊನ್ಫಿಲ್ಸ್ ಮತ್ತು ಅವರ ಪತ್ನಿ ಉಕ್ರೇನ್‌ನ ಎಲಿನಾ ಸ್ವಿಟೋಲಿನಾ

ಮೆಲ್ಬರ್ನ್ (ಎಎಫ್‌ಪಿ): ಗೆಲುವಿನ ನಾಗಾಲೋಟದಲ್ಲಿರುವ ಇಟಲಿಯ ಯಾನಿಕ್ ಸಿನ್ನರ್ ಮತ್ತು ಪೋಲೆಂಡ್‌ನ ಇಗಾ ಶ್ವಾಂಟೆಕ್ ಅವರು ಆಸ್ಟ್ರೇಲಿಯನ್ ಓಪನ್ ಟೆನಿಸ್ ಟೂರ್ನಿಯಲ್ಲಿ ಶನಿವಾರ ಪ್ರಿ ಕ್ವಾರ್ಟರ್ ಫೈನಲ್‌ಗೆ ಲಗ್ಗೆ ಹಾಕಿದರು.

ಪುರುಷರ ಸಿಂಗಲ್ಸ್‌ನ ನಾಲ್ಕನೇ ಶ್ರೇಯಾಂಕದ ಟೇಲರ್ ಫ್ರಿಟ್ಜ್ ಮತ್ತು ಮಹಿಳೆಯರ ಸಿಂಗಲ್ಸ್‌ನ ನಾಲ್ಕನೇ ಶ್ರೇಯಾಂಕಿತೆ ಜಾಸ್ಮಿನ್ ಪಾವ್ಲೀನಿ ಮೂರನೇ ಸುತ್ತಿನಲ್ಲೇ ಹೊರಬಿದ್ದರು. ಅವರಿಬ್ಬರನ್ನು ಸೋಲಿಸಿದ್ದು ದಂಪತಿ ಜೋಡಿ ಎಂಬುದು ಸ್ವಾರಸ್ಯದ ವಿಷಯವಾಯಿತು.

ರಾಡ್ ಲೇವರ್ ಅರೇನಾದಲ್ಲಿ ನಡೆದ ಪುರುಷರ ಸಿಂಗಲ್ಸ್‌ನ ಮೂರನೇ ಸುತ್ತಿನ ಪಂದ್ಯದಲ್ಲಿ ಹಾಲಿ ಚಾಂಪಿಯನ್, ವಿಶ್ವದ ಅಗ್ರಮಾನ್ಯ ಆಟಗಾರ ಸಿನ್ನರ್ 6-3, 6-4, 6-2ರಿಂದ ಶ್ರೇಯಾಂಕ ರಹಿತ ಆಟಗಾರ ಮಾರ್ಕೋಸ್ ಗಿರಾನ್ ಅವರನ್ನು ಹಿಮ್ಮೆಟ್ಟಿಸಿದರು. ಇಟಲಿಯ ಆಟಗಾರ ಮುಂದಿನ ಸುತ್ತಿನಲ್ಲಿ 13ನೇ ಶ್ರೇಯಾಂಕದ ಹೋಲ್ಗರ್ ರೂನ್ (ಡೆನ್ಮಾರ್ಕ್) ಅವರನ್ನು ಎದುರಿಸಲಿದ್ದಾರೆ.

ಫ್ರಾನ್ಸ್‌ನ ಅನುಭವಿ ಆಟಗಾರ ಗೇಲ್ ಮಾನ್ಫಿಲ್ಸ್ ಅವರು ಅಮೆರಿಕದ ಟೇಲರ್‌ಗೆ ಆಘಾತ ನೀಡಿದರು. 38 ವರ್ಷ ವಯಸ್ಸಿನ ಶ್ರೇಯಾಂಕರಹಿತ ಮಾನ್ಫಿಲ್ಸ್ 3-6, 7-5, 7-6 (7/1), 6-4ರಿಂದ ಗೆಲುವು ಸಾಧಿಸಿದರು.

ಪ್ರಸ್ತುತ 41ನೇ ಕ್ರಮಾಂಕ ಹೊಂದಿರುವ ಮಾನ್ಫಿಲ್ಸ್, 2016ರಲ್ಲಿ ವೃತ್ತಿಜೀವನದ ಅತ್ಯುನ್ನತ ಆರನೇ ರ‍್ಯಾಂಕ್ ತಲುಪಿದ್ದರು. ವಾರದ ಹಿಂದೆ ಆಕ್ಲೆಂಡ್ ಕ್ಲಾಸಿಕ್‌ನಲ್ಲಿ ಪ್ರಶಸ್ತಿ ಗೆದ್ದು, ಎಟಿಪಿ ಟೂರ್ ಇತಿಹಾಸದಲ್ಲಿ ಸಿಂಗಲ್ಸ್ ಕಿರೀಟ ಮುಡಿಗೇರಿಸಿಕೊಂಡ ಅತಿ ಹಿರಿಯ ಆಟಗಾರ ಎಂಬ ಹಿರಿಮೆಗೆ ಅವರು ಪಾತ್ರರಾಗಿದ್ದರು.

ಮಹಿಳೆಯರ ಸಿಂಗಲ್ಸ್‌ನ ಪಂದ್ಯದಲ್ಲಿ ಮಾನ್ಫಿಲ್ಸ್ ಅವರ ಪತ್ನಿ ಎಲಿನಾ ಸ್ವಿಟೋಲಿನಾ ಅವರು ಜಾಸ್ಮಿನ್ ಅವರಿಗೆ ಆಘಾತ ನೀಡಿದರು. ಉಕ್ರೇನ್‌ನ ಆಟಗಾರ್ತಿ ಆರಂಭಿಕ ಹಿನ್ನಡೆಯಿಂದ ಚೇತರಿಸಿಕೊಂಡು 2-6, 6-4, 6-0ರಿಂದ ಜಯ ಸಾಧಿಸಿದರು. 30 ವರ್ಷ ವಯಸ್ಸಿನ ಎಲಿನಾ ಅವರನ್ನು 2020ರಲ್ಲಿ ಗೇಲ್ ಮದುವೆಯಾಗಿದ್ದಾರೆ.

ಕಳೆದ ಬಾರಿಯ ರನ್ನರ್ ಅಪ್ ಡೇನಿಯಲ್ ಮೆಡ್ವೆಡೇವ್ ಅವರಿಗೆ ಆಘಾತ ನೀಡಿ ಮೂರನೇ ಸುತ್ತು ಪ್ರವೇಶಿಸಿದ್ದ ಕ್ವಾಲಿಫೈಯರ್, 19 ವರ್ಷ ವಯಸ್ಸಿನ ಲರ್ನರ್ ಟಿಯನ್ ಗೆಲುವಿನ ಓಟವನ್ನು ವಿಸ್ತರಿಸಿದರು. ಅಮೆರಿಕದ ಲರ್ನರ್ 7-6 (12/10), 6-3, 6-3ರಿಂದ ಫ್ರಾನ್ಸ್‌ನ ಕೊರೆಂಟಿನ್ ಮೌಟೆಟ್ ಅವರನ್ನು ಮಣಿಸಿದರು. 2005ರ ಬಳಿಕ ನಾಲ್ಕನೇ ಸುತ್ತು ಪ್ರವೇಶಿಸಿದ ಅತಿ ಕಿರಿಯ ಆಟಗಾರ ಎಂಬ ಹಿರಿಮೆಗೆ ಲರ್ನರ್ ಪಾತ್ರವಾದರು. 20 ವರ್ಷಗಳ ಹಿಂದೆ 18 ವರ್ಷ ವಯಸ್ಸಿನಲ್ಲಿ ನಡಾಲ್ ಈ ಸಾಧನೆ ಮಾಡಿದ್ದರು.

ಶ್ವಾಂಟೆಕ್ ಮುನ್ನಡೆ: ಎರಡನೇ ಶ್ರೇಯಾಂಕದ ಶ್ವಾಂಟೆಕ್ 6-1, 6-0ರಿಂದ ಇಂಗ್ಲೆಂಡ್‌ನ ಎಮ್ಮಾ ರಾಡುಕಾನು ಅವರನ್ನು ಹಿಮ್ಮೆಟ್ಟಿಸಿದರು.

ಹೊರಬಿದ್ದ ಬಾಲಾಜಿ- ಮಿಗೆಲ್ ಭಾರತದ ಎನ್.ಶ್ರೀರಾಮ್ ಬಾಲಾಜಿ ಮತ್ತು ಮೆಕ್ಸಿಕೊದ ಅವರ ಜೊತೆಗಾರ ಮಿಗೆಲ್ ಏಂಜೆಲ್ ರೇಯೆಸ್-ವರೆಲಾ ಅವರು ಆಸ್ಟ್ರೇಲಿಯನ್ ಓಪನ್ ಟೆನಿಸ್ ಟೂರ್ನಿಯ ಎರಡನೇ ಸುತ್ತಿನಲ್ಲಿ ಹೊರಬಿದ್ದಿದ್ದಾರೆ.

ಮೆಡ್ವೆಡೇವ್‌ಗೆ ₹65.79 ಲಕ್ಷ ದಂಡ

ಕಳೆದ ಬಾರಿಯ ರನ್ನರ್ ಅಪ್ ಡೇನಿಯಲ್ ಮೆಡ್ವೆಡೇವ್ ಅವರು ಪಂದ್ಯದ ವೇಳೆ ತೋರಿದ್ದ ಅನುಚಿತ ವರ್ತನೆಗಾಗಿ ₹65.79 ಲಕ್ಷ ದಂಡ ವಿಧಿಸಲಾಗಿದೆ.

ಮೆಡ್ವೆಡೇವ್ ಅವರು ಮೊದಲ ಸುತ್ತಿನಲ್ಲಿ ಥಾಯ್ಲೆಂಡ್‌ನ ಕಸಿದಿತ್ ಸಮ್ರೇಜ್ ವಿರುದ್ಧ ಪಂದ್ಯದಲ್ಲಿ ರ‍್ಯಾಕೆಟ್ ಅನ್ನು ನೆಲಕ್ಕೆ ಕುಕ್ಕಿ ಹಾಳುಗೆಡವಿದ್ದರು. ಅಲ್ಲದೆ, ನೆಟ್ ಕ್ಯಾಮೆರಾವನ್ನು ನಾಶಗೊಳಿಸಿದ್ದರು. ಇದಕ್ಕಾಗಿ ₹8.65 ಲಕ್ಷ ದಂಡ ವಿಧಿಸಲಾಗಿದೆ. ಎರಡನೇ ಸುತ್ತಿನ ಪಂದ್ಯದಲ್ಲಿ ಅಮೆರಿಕದ ಲರ್ನರ್ ಟಿಯೆನ್ ವಿರುದ್ಧ ಸೋತ ಅವರು ರಾಕೆಟ್ ಅನ್ನು ಎಸೆದಿದ್ದಾರೆ. ಅಂಪೈರ್ ಜೊತೆ ಪದೇಪದೇ ವಾದ ನಡೆಸಿದ್ದ ಅವರು, ಪಂದ್ಯದ ನಂತರದ ಪತ್ರಿಕಾಗೋಷ್ಠಿಯನ್ನು ತಪ್ಪಿಸಿಕೊಂಡಿದ್ದರು. ಈ ಕಾರಣಕ್ಕಾಗಿ ₹57.14 ಲಕ್ಷ ದಂಡ ಹಾಕಲಾಗಿದೆ

ರಣಜಿ ಟ್ರೋಫಿ ಕ್ರಿಕೆಟ್: ಕೊಹ್ಲಿ ಗೈರು, ರಾಹುಲ್ ಅಲಭ್ಯ?

ಮುಂದಿನ ಪಂದ್ಯಕ್ಕೆ ಲಭ್ಯ: ರೋಹಿತ್



ಕೊಹ್ಲಿ

ರಾಹುಲ್

ಮುಂಬೈ/ಬೆಂಗಳೂರು/ನವದೆಹಲಿ (ಪಿಟಿಐ): ರಣಜಿ ಟ್ರೋಫಿ ಟೂರ್ನಿಯಲ್ಲಿ ಜಮ್ಮು ಮತ್ತು ಕಾಶ್ಮೀರ ವಿರುದ್ಧ ಮುಂಬೈ ತಂಡದ ಮುಂದಿನ ಪಂದ್ಯಕ್ಕೆ ಲಭ್ಯರಿರುವುದಾಗಿ ಭಾರತ ತಂಡದ ನಾಯಕ ರೋಹಿತ್ ಶರ್ಮಾ ಖಚಿತಪಡಿಸಿದ್ದಾರೆ. ಮುಂಬೈ ಈ ಪಂದ್ಯವನ್ನು ಎಂಸಿಎ-ಬಿಕೆಸಿ ಮೈದಾನದಲ್ಲಿ ಜನವರಿ 23ರಿಂದ ಆಡಲಿದೆ.

ಇದೇ ವೇಳೆ ತಾರಾ ವರ್ಚಸ್ಸಿನ ಆಟಗಾರರು ದೇಶಿ ಟೂರ್ನಿಯಲ್ಲಿ ಭಾಗವಹಿಸುವುದಕ್ಕೆ ಸಂಬಂಧಿಸಿ ಪ್ರಸ್ತಾಪಿಸಿದ ಅವರು ಬಿಡುವಿಲ್ಲದ ವೇಳಾಪಟ್ಟಿಯ ನಡುವೆ ಅವರಿಗೂ ವಿರಾಮ ಬೇಕಾಗುತ್ತದೆ. ಯಾರೂ ದೇಶಿ ಕ್ರಿಕೆಟ್ ಟೂರ್ನಿಗಳನ್ನು ಲಘುವಾಗಿ ತೆಗೆದುಕೊಳ್ಳುತ್ತಿಲ್ಲ ಎಂದು ಸ್ಪಷ್ಟ ಮಾತುಗಳಲ್ಲಿ ಹೇಳಿದ್ದಾರೆ.

ಕಳೆದ6-7 ವರ್ಷಗಳಿಂದ ವೇಳಾಪಟ್ಟಿ

ಗಮನಿಸಿದರೆ, ಕ್ರಿಕೆಟ್ ನಡೆಯುತ್ತಿರುವಾಗ ವರ್ಷಕ್ಕೆ 45 ದಿನ ಕೂಡ ಸಿಗುವುದಿಲ್ಲ. ಐಪಿಎಲ್ ಮುಗಿದ ಬಳಿಕ ಬಿಡುವು ಇರುತ್ತದೆ. ಆಗ ದೇಶಿ ಕ್ರಿಕೆಟ್ ಕೂಡ ಇರುವುದಿಲ್ಲ ಎಂದು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ.

‘ದೇಶದ ಕ್ರಿಕೆಟ್ ಋತು ಅಕ್ಟೋಬರ್‌ನಲ್ಲಿ ಆರಂಭವಾಗಿ ಮಾರ್ಚ್‌ವರೆಗೆ ಇರುತ್ತದೆ. ಎಲ್ಲಾ ಮಾದರಿಯಲ್ಲಿ ಆಡದ ಆಟಗಾರರು, ದೇಶಿ ಕ್ರಿಕೆಟ್ ಟೂರ್ನಿಗಳಲ್ಲಿ ಆಡಬಹುದು. ವೈಯಕ್ತಿಕವಾಗಿ ಹೇಳುವುದಾದರೆ, 2019ರಿಂದ ಟೆಸ್ಟ್ ಕ್ರಿಕೆಟ್ ನಿಯಮಿತವಾಗಿ ಆಡುತ್ತಿದ್ದೇನೆ. ನನಗೆ ಸಾಕಷ್ಟು ಬಿಡುವೇ ಸಿಗುತ್ತಿಲ್ಲ. ಸತತವಾಗಿ ಅಂತರರಾಷ್ಟ್ರೀಯ ಕ್ರಿಕೆಟ್ ಆಡಿದಲ್ಲಿ ದಣಿವಾರಿಸಿಕೊಳ್ಳಲು ಸಮಯ ಬೇಕಾಗುತ್ತದೆ’ ಎಂದರು.

ಕರ್ನಾಟಕ ತಂಡಕ್ಕೆ ರಾಹುಲ್ ಅಲಭ್ಯ?: ಮೊಣಗೈ ನೋವಿನಿಂದ ಬಳಲುತ್ತಿರುವ ಕೆ.ಎಲ್. ರಾಹುಲ್ ಅವರು ಗುರುವಾರ ಇಲ್ಲಿ ಆರಂಭವಾಗುವ ರಣಜಿ ಟ್ರೋಫಿಯ ಪಂಜಾಬ್ ವಿರುದ್ಧದ ಕರ್ನಾಟಕದ ಪಂದ್ಯಕ್ಕೆ ಅಲಭ್ಯರಾಗುವ ಸಾಧ್ಯತೆಯಿದೆ.

ಬಿಸಿಸಿಐ ವೈದ್ಯಕೀಯ ತಂಡದ ಮೇಲ್ವಿಚಾರಣೆಯಲ್ಲಿರುವ ರಾಹುಲ್, ಪಂಜಾಬ್ ವಿರುದ್ಧದ ಪಂದ್ಯಕ್ಕೆ ಸಂಪೂರ್ಣ ಚೇತರಿಸಿಕೊಳ್ಳುವುದು ಅನುಮಾನ. ಆದರೆ, ಇದೇ 30ರಿಂದ ನಡೆಯುವ ಹರಿಯಾಣ ವಿರುದ್ಧದ ಪಂದ್ಯಕ್ಕೆ ಲಭ್ಯವಾಗಲಿದ್ದಾರೆ ಎಂದು ಮೂಲಗಳು ಪಿಟಿಐಗೆ ತಿಳಿಸಿವೆ.

ಹೊರಗುಳಿದ ಕೊಹ್ಲಿ: ಕುತ್ತಿಗೆ ನೋವಿನ ಕಾರಣದಿಂದ ಭಾರತದ ಸ್ಟಾರ್ ಬ್ಯಾಟರ್ ವಿರಾಟ್ ಕೊಹ್ಲಿ ಅವರು ಇದೇ 23ರಿಂದ ನಡೆಯುವ ರಣಜಿ ಟ್ರೋಫಿಯ ಸೌರಾಷ್ಟ್ರ ವಿರುದ್ಧದ ದೆಹಲಿ ಪಂದ್ಯದಿಂದ ಹೊರಗುಳಿಯಲಿದ್ದಾರೆ.

ದೆಹಲಿ ಆಯ್ಕೆ ಸಮಿತಿಯು ಈ ಹಿಂದೆ 22 ಸಂಭವನೀಯರ ತಂಡಕ್ಕೆ ಕೊಹ್ಲಿ ಅವರನ್ನು ಆಯ್ಕೆ ಮಾಡಿತ್ತು. ಆದರೆ, ಕೆ.ಪಿ. ಭಾಸ್ಕರ್ ನೇತೃತ್ವದ ಸಮಿತಿಯು ಶುಕ್ರವಾರ ತಂಡವನ್ನು

ಆಯ್ಕೆ ಮಾಡಿದ್ದು, ಅದರಲ್ಲಿ ಕೊಹ್ಲಿ ಹೆಸರಿಲ್ಲ. ದೆಹಲಿ ಜಿಲ್ಲಾ ಕ್ರಿಕೆಟ್ ಸಂಸ್ಥೆ ಅಧ್ಯಕ್ಷ ರೋಹನ್ ಜೇಟ್ಲಿ ಅವರು ಕೊಹ್ಲಿ ಅವರ ಲಭ್ಯತೆಯ ಬಗ್ಗೆ ದೃಢೀಕರಣ ಪಡೆಯಲು ಕಾಯುತ್ತಿದ್ದರಿಂದ ತಂಡವನ್ನು ಅಧಿಕೃತವಾಗಿ ಪ್ರಕಟಿಸಿಲ್ಲ.

ಸುನೀಲ್ ಚೆಟ್ರಿ ಗೋಲು, ಬಿಎಫ್‌ಸಿಗೆ ತಪ್ಪಿದ ಸೋಲು

ಹೈದರಾಬಾದ್ (ಪಿಟಿಐ): ಮಾಜಿ ಅಂತರರಾಷ್ಟ್ರೀಯ ತಾರೆ ಸುನೀಲ್ ಚೆಟ್ರಿ ಅವರು ಈ ಋತುವಿನ ಹತ್ತನೇ ಗೋಲನ್ನು ಗಳಿಸಿದರು. ಈ ಗೋಲಿನ ನೆರವಿನಿಂದ ಬೆಂಗಳೂರು ಎಫ್‌ಸಿ ತಂಡ ಶನಿವಾರ ನಡೆದ ಐಎಸ್‌ಎಲ್ ಪಂದ್ಯದಲ್ಲಿ ಹೈದರಾಬಾದ್ ವಿರುದ್ಧ 1–1 ಡ್ರಾ ಮಾಡಿಕೊಳ್ಳುವಲ್ಲಿ ಯಶಸ್ವಿ ಆಯಿತು.

ದೇವೇಂದ್ರ ಮುರಗಾಂವಕರ್ 21ನೇ ನಿಮಿಷ ಆತಿಥೇಯ ತಂಡಕ್ಕೆ ಮುನ್ನಡೆ ಒದಗಿಸಿದರು. 78ನೇ ನಿಮಿಷ ಚೆಟ್ರಿ ಅವರ ಗೋಲು ಬಿಎಫ್‌ಸಿಗೆ ಒಂದು ಪಾಯಿಂಟ್ ಪಡೆಯಲು ನೆರವಾಯಿತು.

40 ವರ್ಷ ವಯಸ್ಸಿನ ಚೆಟ್ರಿ ಐಎಸ್‌ಎಲ್‌ನ ಒಂದೇ ಋತುವಿನಲ್ಲಿ ಎರಡನೇ ಬಾರಿ ಹತ್ತು ಅಥವಾ ಹೆಚ್ಚು ಗೋಲು ಹೊಡೆದಂತಾಗಿದೆ. 2017–18ರಲ್ಲಿ ಅವರು 14 ಗೋಲುಗಳನ್ನು ಗಳಿಸಿದ್ದರು. ವಿರಾಮದ ನಂತರ ಬಿಎಫ್‌ಸಿ ನಾಲ್ಕು ಬದಲಾವಣೆಗಳನ್ನು ಮಾಡಿತು.

ಚಾಂಪಿಯನ್ಸ್ ಟ್ರೋಫಿಗೆ ಭಾರತ ತಂಡದ ಆಯ್ಕೆ • ಮೊದಲ ಬಾರಿ ಸ್ಥಾನ ಪಡೆದ ಯಶಸ್ವಿ ಜೈಸ್ವಾಲ್

ಶಮಿ ಪುನರಾಗಮನ, ಬೂಮ್ರಾಗೂ ಸ್ಥಾನ

ಮುಖ್ಯಾಂಶಗಳು
- ಶುಭಮನ್ ಗಿಲ್ ಉಪನಾಯಕ
- ತಂಡದಲ್ಲಿ ಕೆ.ಎಲ್.ರಾಹುಲ್
- ಸಿರಾಜ್, ಸಂಜು ಸ್ಯಾಮ್ಸನ್‌ಗೂ ಕೊಕ್

ಬಿಸಿಸಿಐ ಆಯ್ಕೆ ಸಮಿತಿ ಅಧ್ಯಕ್ಷ ಅಜಿತ್ ಅಗರ್‌ಕರ್ ಮತ್ತು ಭಾರತ ತಂಡದ ನಾಯಕ ರೋಹಿತ್ ಶರ್ಮಾ –ಎಎಫ್‌ಪಿ ಚಿತ್ರ

ಮುಂಬೈ (ಪಿಟಿಐ): ಪ್ರಮುಖ ವೇಗದ ಬೌಲರ್ ಜಸ್‌ಪ್ರೀತ್ ಬೂಮ್ರಾ ಅವರಿಗೆ ಐಸಿಸಿ ಚಾಂಪಿಯನ್ಸ್ ಟ್ರೋಫಿ ಏಕದಿನ ಕ್ರಿಕೆಟ್ ಟೂರ್ನಿಗೆ ಶನಿವಾರ ಪ್ರಕಟಿಸಲಾದ ಭಾರತ ತಂಡದಲ್ಲಿ ಸ್ಥಾನ ನೀಡಲಾಗಿದೆ. ಫಿಟ್ನೆಸ್ ಮೇಲೆ ಅವರ ಲಭ್ಯತೆ ಅವಲಂಬಿಸಿದೆ. ಪ್ರತಿಭಾನ್ವಿತ ಆರಂಭ ಆಟಗಾರ ಯಶಸ್ವಿ ಜೈಸ್ವಾಲ್ ಮೊದಲ ಬಾರಿಗೆ ಏಕದಿನ ತಂಡದಲ್ಲಿ ಸ್ಥಾನ ಪಡೆದಿದ್ದಾರೆ.

ವೇಗದ ಬೌಲರ್ ಮೊಹಮ್ಮದ್ ಶಮಿ ಕೂಡ ಒಂದು ವರ್ಷದ ನಂತರ ತಂಡಕ್ಕೆ ಮರಳಿದ್ದಾರೆ. ಇತ್ತೀಚಿನ ಆಸ್ಟ್ರೇಲಿಯಾ ಪ್ರವಾಸದ ಕೊನೆಯ ಟೆಸ್ಟ್ (ಸಿಡ್ನಿ) ವೇಳೆ ಬೂಮ್ರಾ ಬೆನ್ನುನೋವಿಗೆ ಒಳಗಾಗಿದ್ದರು. ಆದರೆ ಅಜಿತ್ ಅಗರಕರ್ ನೇತೃತ್ವದ ಆಯ್ಕೆ ಸಮಿತಿಯು 31 ವರ್ಷ ವಯಸ್ಸಿನ ಬೂಮ್ರಾ ಅವರನ್ನು ಇಂಗ್ಲೆಂಡ್ ವಿರುದ್ಧದ ತವರಿನಲ್ಲಿ ನಡೆಯುವ ಏಕದಿನ ಸರಣಿ ಮತ್ತು ಚಾಂಪಿಯನ್ಸ್ ಟ್ರೋಫಿ ತಂಡಕ್ಕೆ ಸೇರ್ಪಡೆ ಮಾಡಿದೆ.

ಅಗ್ರ ಕ್ರಮಾಂಕದ ಆಟಗಾರ ಶುಭಮನ್ ಗಿಲ್ ಅವರನ್ನು ಉಪನಾಯಕರನ್ನಾಗಿ ನೇಮಕ ಮಾಡಲಾಗಿದೆ. ತಂಡದಲ್ಲಿ ವೇಗದ ಬೌಲರ್ ಮೊಹಮ್ಮದ್ ಸಿರಾಜ್ ಅವರಿಗೆ ಸ್ಥಾನ ನೀಡಲಾಗಿಲ್ಲ.

ತಂಡದ ನಾಯಕತ್ವ ವಹಿಸಿರುವ ರೋಹಿತ್ ಶರ್ಮಾ ಅವರು ಬೂಮ್ರಾ ಅವರ ಆಯ್ಕೆಯ ಬಗ್ಗೆ ಹೇಳಿದ್ದಿಷ್ಟು– ‘ಅನುಭವಿಗಳ ತಂಡದಲ್ಲಿ ಸಿರಾಜ್ ಅವರಷ್ಟೇ ಇಲ್ಲ. ತಂಡವನ್ನು ಸಾಕಷ್ಟು ಯೋಚಿಸಿ ಆಯ್ಕೆ ಮಾಡಿದ್ದೇವೆ. ಬೂಮ್ರಾ ಅವರು ಆಡುತ್ತಾರೆಯೇ ಎನ್ನುವುದು ನಮಗೆ ಖಚಿತವಿಲ್ಲ. ಆರಂಭದಲ್ಲಿ ದಾಳಿಗಿಳಿಯುವ ಮತ್ತು ಕೊನೆಯಲ್ಲಿ ಬೌಲಿಂಗ್ ಮಾಡಬಲ್ಲ ಒಬ್ಬ ಬೌಲರ್ ಆಯ್ಕೆ ನಮಗೆ ಇರಬೇಕಿತ್ತು.’

ಅನುಭವಿ ವೇಗಿ ಶಮಿ ಮತ್ತು ಎಡಗೈ ವೇಗದ ಬೌಲರ್ ಅರ್ಷದೀಪ್ ಸಿಂಗ್ ಅವರು ಬೂಮ್ರಾ ಅವರಿಗೆ ಬೆಂಬಲ ನೀಡಬಲ್ಲರು ಎಂದು ರೋಹಿತ್ ವಿಶ್ವಾಸ ವ್ಯಕ್ತಪಡಿಸಿದರು.

ಶಮಿ ಅವರು 2023ರ ಏಕದಿನ ವಿಶ್ವಕಪ್ ಬಳಿಕ ಮೊದಲ ಬಾರಿ ತಂಡಕ್ಕೆ ಮರಳಿದ್ದರೆ. ಅವರು ದೇಶಿ ಕ್ರಿಕೆಟ್ ಟೂರ್ನಿಗಳಲ್ಲಿ (ರಣಜಿ ಟ್ರೋಫಿ, ಸೈಯ್ಯದ್ ಮುಷ್ತಾಕ್ ಅಲಿ ಟ್ರೋಫಿ, ವಿಜಯ್ ಹಜಾರೆ ಟ್ರೋಫಿ) ಉತ್ತಮ ಪ್ರದರ್ಶನ ನೀಡಿದ್ದಾರೆ. ಲಯದ ಉತ್ತುಂಗಕ್ಕೆ ಅವರು ಇನ್ನೂ ತಲುಪಬೇಕಿದೆ.

ಜೈಸ್ವಾಲ್‌ಗೆ ಅವಕಾಶ: ಆಸ್ಟ್ರೇಲಿಯಾ ವಿರುದ್ಧ ಟೆಸ್ಟ್ ಸರಣಿಯಲ್ಲಿ ಉತ್ತಮ ಪ್ರದರ್ಶನ ನೀಡಿದ್ದು ಯಶಸ್ವಿ ಜೈಸ್ವಾಲ್ ಪಾಲಿಗೆ ಅವಕಾಶದ ಬಾಗಿಲು ತೆರೆದಿದೆ. ಅಗ್ರ ಕ್ರಮಾಂಕದಲ್ಲಿ ಎಡಗೈ ಆಟಗಾರನಾಗಿರುವುದೂ ಅವರಿಗೆ ಸಕಾರಾತ್ಮಕ ಅಂಶವಾಗಿದೆ.

ಆಸ್ಟ್ರೇಲಿಯಾ ವಿರುದ್ಧ ಟೆಸ್ಟ್‌ಗೆ ಪದಾರ್ಪಣೆ ಮಾಡಿದ್ದ ಆಲ್‌ರೌಂಡರ್ ಹರ್ಷಿತ್ ರಾಣಾ ಅವರನ್ನು ಇಂಗ್ಲೆಂಡ್ ವಿರುದ್ಧ ಮೂರು ಪಂದ್ಯಗಳ ಏಕದಿನ ಸರಣಿಗೆ ಮಾತ್ರ ಆಯ್ಕೆ ಮಾಡಲಾಗಿದೆ.

ಪಂತ್‌ಗೆ ಹೊಣೆ: ರಿಷಬ್ ಪಂತ್ ಅವರು ಎರಡು ವರ್ಷಗಳಲ್ಲಿ ಕೇವಲ ಒಂದು ಏಕದಿನ ಪಂದ್ಯ ಆಡಿದ್ದಾರೆ. ಶ್ರೀಲಂಕಾ ವಿರುದ್ಧ ಹೋದ ವರ್ಷ ಆ ಪಂದ್ಯ ಆಡಿದ್ದರು. ಆದರೆ ಆಯ್ಕೆಗಾರರು ಅವರನ್ನು ಮೊದಲ ಆಯ್ಕೆಯ ವಿಕೆಟ್ ಕೀಪರ್ ಆಗಿ ತಂಡಕ್ಕೆ ಆಯ್ಕೆ ಮಾಡಿದ್ದಾರೆ. ಬ್ಯಾಟರ್–ವಿಕೆಟ್ ಕೀಪರ್, ಕನ್ನಡಿಗ ಕೆ.ಎಲ್. ರಾಹುಲ್ ಅವರೂ ಸ್ಥಾನ ಪಡೆದಿದ್ದಾರೆ.

ಕರುಣ್‌ಗೆ ಸ್ಥಾನವಿಲ್ಲ: ಪ್ರಸ್ತುತ ವಿಜಯ್ ಹಜಾರೆ ಟ್ರೋಫಿ ಏಕದಿನ ಟೂರ್ನಿಯಲ್ಲಿ ರನ್‌ಗಳ ಹೊಳೆಯನ್ನೇ ಹರಿಸಿದ ಕರುಣ್ ನಾಯರ್ ಅವರಿಗೆ ಸ್ಥಾನ ನೀಡಲಾಗಿಲ್ಲ. ‘ಕೆಲವು ಆಟಗಾರರಿಗೆ ಸ್ಥಾನ ಸಿಗುವುದಿಲ್ಲ. ಇದು ದುರದೃಷ್ಟಕರ. ಇಲ್ಲಿ ಎಲ್ಲರನ್ನೂ ಸಂತುಷ್ಟಗೊಳಿಸಲು ಆಗುವುದಿಲ್ಲ’ ಎಂದು ರೋಹಿತ್ ಶರ್ಮಾ ಹೇಳಿದರು.

‘ಅಂತಿಮವಾಗಿ, ನಾವು ಸಾಧ್ಯವಾದಷ್ಟು ಉತ್ತಮ ಮತ್ತು ವಿಭಿನ್ನ ಪರಿಸ್ಥಿತಿಯಲ್ಲಿ ಪಂದ್ಯ ಗೆಲ್ಲಿಸಿಕೊಡುವ ತಂಡ ಆಯ್ಕೆ ಮಾಡಬೇಕಾಗುತ್ತದೆ. ಈಗ ಇರುವ ಆಟಗಾರರಿಗೆ ಅದು ಸಾಧ್ಯವಾಗಬಲ್ಲದು’ ಎಂದು ರೋಹಿತ್ ವಿವರಿಸಿದರು.

ಭಾರತ ತಂಡ: ರೋಹಿತ್ ಶರ್ಮಾ (ನಾಯಕ), ಶುಭಮನ್ ಗಿಲ್ (ಉಪ ನಾಯಕ), ವಿರಾಟ್ ಕೊಹ್ಲಿ, ಶ್ರೇಯಸ್ ಅಯ್ಯರ್, ಕೆ.ಎಲ್.ರಾಹುಲ್, ಹಾರ್ದಿಕ್ ಪಾಂಡ್ಯ, ಅಕ್ಷರ್ ಪಟೇಲ್, ವಾಷಿಂಗ್ಟನ್ ಸುಂದರ್, ಕುಲದೀಪ್ ಯಾದವ್, ಜಸ್‌ಪ್ರೀತ್ ಬೂಮ್ರಾ, ಮೊಹಮ್ಮದ್ ಶಮಿ, ಅರ್ಷದೀಪ್ ಸಿಂಗ್, ಯಶಸ್ವಿ ಜೈಸ್ವಾಲ್, ರಿಷಭ್ ಪಂತ್, ರವೀಂದ್ರ ಜಡೇಜ ಮತ್ತು ಹರ್ಷಿತ್ ರಾಣಾ (ಇಂಗ್ಲೆಂಡ್ ವಿರುದ್ಧ ಸರಣಿಗೆ ಮಾತ್ರ).

2 ಪಂದ್ಯಗಳಿಗೆ ಬೂಮ್ರಾ ಅಲಭ್ಯ?



ಬೂಮ್ರಾ

ಮುಂಬೈ (ಪಿಟಿಐ): ಜಸ್‌ಪ್ರೀತ್ ಬೂಮ್ರಾ ಅವರು ಇಂಗ್ಲೆಂಡ್ ವಿರುದ್ಧ ಏಕದಿನ ಕ್ರಿಕೆಟ್ ಸರಣಿಯ ಮೊದಲ ಎರಡು ಪಂದ್ಯಗಳಿಗೆ ಫಿಟ್ ಆಗುವುದು ಅನುಮಾನವಾಗಿರುವ ಕಾರಣ, ಪರ್ಯಾಯವಾಗಿ ಹರ್ಷಿತ್ ರಾಣಾ ಅವರನ್ನು ಸೇರ್ಪಡೆ ಮಾಡಲಾಗಿದೆ ಎಂದು ಆಯ್ಕೆ ಸಮಿತಿ ಮುಖ್ಯಸ್ಥ ಅಜಿತ್ ಅಗರಕರ್ ಹೇಳಿದರು.

ಬೂಮ್ರಾ ಅವರ ದೈಹಿಕ ಸಾಮರ್ಥ್ಯ ಸ್ಥಿತಿಗತಿ ತಿಳಿದುಕೊಳ್ಳಲು ವೈದ್ಯಕೀಯ ತಂಡದ ವರದಿಗೆ ಕಾಯಲಾಗುತ್ತಿದೆ ಎಂದರು. ಆದರೆ ಚಾಂಪಿಯನ್ಸ್ ಟ್ರೋಫಿಗೆ ಪೂರ್ವಭಾವಿಯಾಗಿ ನಡೆಯುವ ಏಕದಿನ ಸರಣಿಯಲ್ಲಿ ಆಡುವ ತಂಡದಲ್ಲಿ ಬೂಮ್ರಾ ಅವರ ಹೆಸರು ಇದೆ.

ಸಾತ್ವಿಕ್–ಚಿರಾಗ್ ಸವಾಲು ಅಂತ್ಯ

ನವದೆಹಲಿ (ಪಿಟಿಐ): ಭಾರತದ ಅಗ್ರಮಾನ್ಯ ಡಬಲ್ಸ್ ಜೋಡಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರು ಇಂಡಿಯಾ ಓಪನ್ ಸೂಪರ್ 750 ಬ್ಯಾಡ್ಮಿಂಟನ್ ಟೂರ್ನಿಯ ಸೆಮಿಫೈನಲ್ ಪಂದ್ಯದಲ್ಲಿ ಸೋಲನುಭವಿಸಿದರು.

ಶನಿವಾರ ನಡೆದ ಈ ಪಂದ್ಯದಲ್ಲಿ ಮಲೇಷ್ಯಾದ ಗೋಹ್ ತ್ಸೆ ಫೀ–ನೂರ್ ಇಝ್ಝುದ್ದೀನ್ ಜೋಡಿ 21–18, 21–14ರಲ್ಲಿ ನೇರ ಆಟಗಳಿಂದ ಆತಿಥೇಯ ದೇಶದ ಜೋಡಿಯನ್ನು ಸೋಲಿಸಿದರು. ವಿಶ್ವ ಕ್ರಮಾಂಕಪಟ್ಟಿಯಲ್ಲಿ ಮೂರನೇ ಸ್ಥಾನದಲ್ಲಿರುವ ಮಲೇಷ್ಯಾದ ಜೋಡಿ ಕೇವಲ 37 ನಿಮಿಷಗಳಲ್ಲಿ ಜಯಶಾಲಿಯಾಯಿತು. ಕಳೆದ ವಾರ ಮಲೇಷ್ಯಾ ಓಪನ್ ಸೂಪರ್ 1000 ಟೂರ್ನಿಯಲ್ಲೂ ಭಾರತದ ಜೋಡಿ ಸೆಮಿಫೈನಲ್‌ನಲ್ಲಿ ಹೊರಬಿದ್ದಿತ್ತು.

ಕೋಲ್ಕತ್ತಕ್ಕೆ ಬಂದಿಳಿದ ಆಟಗಾರರು

ಟಿ20 ಸರಣಿ ವೇಳಾಪಟ್ಟಿ

ದಿನಾಂಕ	ಪಂದ್ಯ	ಸ್ಥಳ
ಜ.22	ಮೊದಲ ಪಂದ್ಯ	ಕೋಲ್ಕತ್ತ
ಜ.25	ಎರಡನೇ ಪಂದ್ಯ	ಚೆನ್ನೈ
ಜ.28	ಮೂರನೇ ಪಂದ್ಯ	ರಾಜಕೋಟ್
ಜ.31	ನಾಲ್ಕನೇ ಪಂದ್ಯ	ಪುಣೆ
ಫೆ.2	ಐದನೇ ಪಂದ್ಯ	ಮುಂಬೈ

ಕೋಲ್ಕತ್ತ (ಪಿಟಿಐ): ವಿಶ್ವ ಚಾಂಪಿಯನ್ ಭಾರತ ಮತ್ತು ಪ್ರವಾಸಿ ಇಂಗ್ಲೆಂಡ್ ತಂಡದ ಆಟಗಾರರು, ಬುಧವಾರ ಆರಂಭವಾಗಲಿರುವ ಟಿ20 ಸರಣಿಯ ಮೊದಲ ಪಂದ್ಯ ಆಡಲು ಶನಿವಾರ ಪ್ರತ್ಯೇಕ ಬ್ಯಾಚ್‌ಗಳಲ್ಲಿ ಇಲ್ಲಿಗೆ ಬಂದಿಳಿದರು.

ಸುಮಾರು ಮೂರು ವರ್ಷಗಳ ನಂತರ ಇದೇ ಮೊದಲ ಬಾರಿ ಈಡನ್ ಗಾರ್ಡನ್‌ನಲ್ಲಿ ಟಿ20 ಅಂತರರಾಷ್ಟ್ರೀಯ ಪಂದ್ಯ ನಡೆಯುತ್ತಿದ್ದು ಕ್ರಿಕೆಟ್ ಜ್ವರ ಏರುತ್ತಿದೆ.

ಆಲ್‌ರೌಂಡರ್ ಲಿಯಾಮ್ ಲಿವಿಂಗ್‌ಸ್ಟೋನ್ ಇಲ್ಲಿಗೆ ತಲುಪಿದ ಮೊದಲ ಆಟಗಾರ ಎನಿಸಿದರು. ಅವರು ಎಸ್‌ಎ ಟಿ20 ಲೀಗ್‌ನಲ್ಲಿ ಭಾಗವಹಿಸಿದ್ದು ದಕ್ಷಿಣ ಆಫ್ರಿಕಾದಿಂದ ನೇರವಾಗಿ ಇಲ್ಲಿಗೆ ಬಂದಿಳಿದರು.

ದುಬೈನಲ್ಲಿ ತರಬೇತಿಯಲ್ಲಿದ್ದ ಜೋಸ್ ಬಟ್ಲರ್ ಬಳಗದ ಇತರ ಆಟಗಾರರು ಸಂಜೆ ಬಂದಿಳಿದರು.

ಭಾರತ ತಂಡದ ಆಟಗಾರರೂ ತವರು ಊರಿನಿಂದ ಇಲ್ಲಿಗೆ ತಲುಪಿದರು. ಉದಯೋನ್ಮುಖ ಆಟಗಾರರಾದ ನಿತೀಶ್ ಕುಮಾರ್ ರೆಡ್ಡಿ ಮತ್ತು ರಿಂಕು ಸಿಂಗ್ ಸಂಜೆ ತಲುಪಿದರು. ನಾಯಕ ಸೂರ್ಯಕುಮಾರ್ ಯಾದವ್ ಅವರು ತಿಲಕ್ ವರ್ಮಾ, ಹೆಡ್ ಕೋಚ್ ಗೌತಮ್ ಗಂಭೀರ್ ಮತ್ತು ಉಳಿದ ಆಟಗಾರರು ನಂತರ ಬಂದಿಳಿದರು.

ಪಂದ್ಯಕ್ಕೆ ಮುನ್ನ ಎರಡೂ ತಂಡಗಳು ಮೂರು ಬಾರಿ ನೆಟ್ ಪ್ರಾಕ್ಟೀಸ್‌ನಲ್ಲಿ ತೊಡಗಲಿವೆ.

ಕರ್ನಾಟಕ ಕ್ರೀಡಾಕೂಟ: ಶೂಟಿಂಗ್‌ನಲ್ಲಿ ಜೊನಾಥನ್, ಪ್ರಿಯಾಗೆ ಚಿನ್ನ;

ವೇಟ್‌ಲಿಫ್ಟಿಂಗ್: ದಕ್ಷಿಣ ಕನ್ನಡ ಪಾರಮ್ಯ

• ವಿಕ್ರಂ ಕಾಂತಿಕೆರೆ

ಪುರುಷರ ವೇಟ್‌ಲಿಫ್ಟಿಂಗ್ 73 ಕೆಜಿ ವಿಭಾಗದಲ್ಲಿ ಚಿನ್ನ ಗೆದ್ದ ಪ್ರಜ್ವಲ್ (ಮಧ್ಯ), ಬೆಳ್ಳಿ ಗೆದ್ದ ಫಕೀರ್ ಗೌಡ ಪಾಟೀಲ (ಎಡ) ಮತ್ತು ಕಂಚಿನ ಪದಕ ಗಳಿಸಿದ ನಿಶಿಲ್

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯ ಮೂಡುಬಿದಿರೆಯ ಆಳ್ವಾಸ್ ಮತ್ತು ಉಜಿರೆಯ ಎಸ್‌ಡಿಎಂ ಕಾಲೇಜು ವಿದ್ಯಾರ್ಥಿಗಳು ಕರ್ನಾಟಕ ಕ್ರೀಡಾಕೂಟದ ವೇಟ್‌ಲಿಫ್ಟಿಂಗ್‌ನಲ್ಲಿ ಪಾರಮ್ಯ ಮೆರೆದರು. ಶನಿವಾರ ನಗರದ ಬಿ.ಆರ್. ಅಂಬೇಡ್ಕರ್ ಭವನದಲ್ಲಿ ನಡೆದ ಪುರುಷರ ಮತ್ತು ಮಹಿಳೆಯರ ವಿಭಾಗಗಳ ಬಹುತೇಕ ಪದಕಗಳನ್ನು ಈ ಕಾಲೇಜುಗಳ ವಿದ್ಯಾರ್ಥಿಗಳು ತಮ್ಮದಾಗಿಸಿಕೊಂಡರು.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕರ್ನಾಟಕ ಒಲಿಂಪಿಕ್ ಸಂಸ್ಥೆ ಮತ್ತು ದಕ್ಷಿಣ ಕನ್ನಡ-ಉಡುಪಿ ಜಿಲ್ಲಾಡಳಿತ ಆಯೋಜಿಸಿರುವ ಕೂಟದ ಪುರುಷರ 73 ಕೆಜಿ ವಿಭಾಗದಲ್ಲಿ ಎಸ್‌ಡಿಎಂ ಕಾಲೇಜಿನ ಪ್ರಜ್ವಲ್ 273 ಕೆಜಿ ಭಾರ ಎತ್ತಿ ಚಿನ್ನ ಗೆದ್ದುಕೊಂಡರು. ರಾಷ್ಟ್ರೀಯ ಜೂನಿಯರ್ ಮಾಜಿ ಚಾಂಪಿಯನ್ ಆಗಿರುವ ಅವರು ಕ್ಲೀನ್ ಆ್ಯಂಡ್ ಜರ್ಕ್‌ನಲ್ಲಿ 152 ಕೆಜಿ ಮತ್ತು ಸ್ನ್ಯಾಚ್‌ನಲ್ಲಿ 121 ಕೆಜಿ ಸಾಧನೆ ಮಾಡಿದರು. 242 ಕೆಜಿ ಸಾಧನೆಯೊಂದಿಗೆ 67 ಕೆಜಿ ವಿಭಾಗದ ಚಿನ್ನ ಆಳ್ವಾಸ್‌ನ ಚಿರಂಜೀವಿ ಗೆದ್ದುಕೊಂಡರು.

ಫಲಿತಾಂಶಗಳು: ವೇಟ್‌ಲಿಫ್ಟಿಂಗ್: ಪುರುಷರು: 89 ಕೆಜಿ: ಅಭಿ ಎ (ಎಸ್‌ಡಿಎಂ)-1. ಭಾರ: 240ಕೆಜಿ (110+130), ಜೀವನ್ (ಮೈಸೂರು)-2, ಅಶ್ವಿನ್ (ಆಳ್ವಾಸ್)-3; 81 ಕೆಜಿ: ಶರತ್ ಟಿ.ಎಂ (ಎಸ್‌ಡಿಎಂ)-1. ಭಾರ: 234 ಕೆಜಿ (101+133), ಪ್ರಥಮ್ (ಮಂಗಳ ಥ್ರೋವರ್ಸ್)-2, ರಿತಿಕ್ (ಎಸ್‌ಡಿಎಂ)-3; 73 ಕೆಜಿ: ಪ್ರಜ್ವಲ್ (ಎಸ್‌ಡಿಎಂ)-1. ಭಾರ: 273 ಕೆಜಿ (121+152), ಫಕೀರ್ ಗೌಡ ಪಾಟೀಲ (ಭದ್ರಾವತಿ)-2, ನಿಶಿಲ್ (ಮಂಗಳ)-3; 67 ಕೆಜಿ: ಚಿರಂಜೀವಿ ಆರ್ (ಆಳ್ವಾಸ್)-1. ಭಾರ: 242 (102+140), ದೇವೇಂದ್ರ (ಸಂಜೀವಿ ಶೆಟ್ಟಿ ಸ್ಪೋರ್ಟ್ಸ್ ಕ್ಲಬ್)-2, ಮೋಹನ್ ಬಿ.ಎನ್ (ಸಂಜೀವಿ ಶೆಟ್ಟಿ)-3. ಮಹಿಳೆಯರು: 87+ಕೆಜಿ: ನಿವೇತಾ (ಡಿವೈಇಎಸ್ ಬೆಂಗಳೂರು)-1.ಭಾರ: 175 ಕೆಜಿ (75+100), ಸಿತಾರ (ಆಳ್ವಾಸ್)-2, ಕ್ಲಾರಿಸಾ ಏಂಜೆಲ್ (ಡಿಸಿಸಿ ಮಂಗಳೂರು)-3; 87ಕೆಜಿ: ಉಷಾ ಎಸ್.ಆರ್ (ಆಳ್ವಾಸ್)-1. ಭಾರ: 190 (84+106), ಸ್ವಸ್ತಿಕಾ (ಡಿವೈಇಎಸ್ ಬೆಳಗಾವಿ)-2, ಚುಹಾನ (ಮಂಗಳ)-3; 81 ಕೆಜಿ: ತೇಜಸ್ವಿನಿ ಪೂಜಾರಿ (ಎಸ್‌ಡಿಎಂ)-1. ಭಾರ: 150 (64+86), ರಶ್ಮಿತಾ (ಮಂಗಳ)-2, ಮಾನಸ (ಆಳ್ವಾಸ್)-3; 76 ಕೆಜಿ: ತನುಶ್ರೀ (ಆಳ್ವಾಸ್)-1. ಭಾರ: 190 (84+106), ವಿತಶ್ರೀ (ಆಳ್ವಾಸ್)-2, ಸುಷ್ಮಿತಾ (ಜೈನ್ ಕಾಲೇಜು)-3; 71 ಕೆಜಿ: ಸೀಮಾ ಅಜಯ್‌ಕಾಂತ್ (ಆಳ್ವಾಸ್)-1. ಭಾರ: 140 ಕೆಜಿ (64+76), ಸಂಗೀತಾ ಎ.ಎಂ (ಎಸ್‌ಡಿಎಂ)-2, ಮಲ್ಲಮ್ಮ ಕಣಬೂರು (ಆಳ್ವಾಸ್)-3; 64 ಕೆಜಿ: ಅನುಷಾ (ಆಳ್ವಾಸ್)-1. ಭಾರ: 150 ಕೆಜಿ (65+85), ಬ್ಯೂಲಾ ಪಿ.ಟಿ (ಎಸ್‌ಪಿಸಿ ಪುತ್ತೂರು)-2, ಸಾನಿಕಾ ಗೌಡ (ಎಸ್‌ಡಿಎಂ)-3; 55 ಕೆಜಿ: ಮೋನಿಶಾ (ಆಳ್ವಾಸ್)-1. ಭಾರ: 142 ಕೆಜಿ (58+84), ಇವಾಂಜೆಲಿನ್ (ಡಿವೈಇಎಸ್ ಬೆಂಗಳೂರು)-2, ಸಂಜನಾ ಕುಲಾಲ್ (ಮಂಗಳ)-3; 49 ಕೆಜಿ: ಸ್ವಪ್ನಾ ವೈ.ಜೆ (ಎಸ್‌ಡಿಎಂ)-1. ಭಾರ: 162 ಕೆಜಿ (71+91), ಸಮೀಕ್ಷಾ (ಡಿವೈಇಎಸ್ ಬೆಳಗಾವಿ)-2, ಐಶ್ವರ್ಯಾ (ಮಂಗಳ ಥ್ರೋವರ್ಸ್)-3.

ಟೇಬಲ್ ಟೆನಿಸ್: ಪ್ರಶಾಂತಿ, ಅರ್ಣಾಗೆ ಚಿನ್ನ

ಮಣಿಪಾಲದಲ್ಲಿ ನಡೆದ ಟೇಬಲ್ ಟೆನಿಸ್‌ನ ಮಹಿಳೆಯರ ಡಬಲ್ಸ್ ವಿಭಾಗದಲ್ಲಿ ಮಂಗಳೂರಿನ ಪ್ರಶಾಂತಿ ಶೆಟ್ಟಿ ಮತ್ತು ಅರ್ಣಾ ಸದೋತ್ರ ಚಾಂಪಿಯನ್ ಆದರು. ಫೈನಲ್‌ನಲ್ಲಿ ಈ ಜೋಡಿ 3–2ರಲ್ಲಿ ಅನನ್ಯಾ ಎಚ್.ಪಿ ಮತ್ತು ದೃಷ್ಟಿ ಮೋರೆ ಜೋಡಿಯನ್ನು ಮಣಿಸಿತು. ಸೆಮಿಫೈನ್‌ನಲ್ಲಿ ಮೈಸೂರಿನ ನಿಹಾರಿಕಾ ಮತ್ತು ಕೌಸರ್ ವಿರುದ್ಧ 3–0ಯಿಂದ ಅವರು ಗೆದ್ದಿದ್ದರು. ಅನನ್ಯಾ ಮತ್ತು ದೃಷ್ಟಿ ಜೋಡಿ ಧಾರವಾಡದ ಸಹನಾ ಕುಲಕರ್ಣಿ ಮತ್ತು ವಿಜಯಲಕ್ಷ್ಮಿ ವಿರುದ್ಧ 3–1ರಲ್ಲಿ ಗೆದ್ದಿತು.

ಆರ್ಚರಿ: ಎರಡು ಚಿನ್ನ ಗೆದ್ದ ರಘು

ಯಾದಗಿರಿಯ ರಘು ಮಣಿಪಾಲದಲ್ಲಿ ನಡೆದ ಆರ್ಚರಿಯಲ್ಲಿ 2 ಚಿನ್ನ ಗೆದ್ದುಕೊಂಡರು. ಪುರುಷರ 50 ಮತ್ತು 30 ಮೀಟರ್ಸ್ ವಿಭಾಗದಲ್ಲಿ ಅವರು ಈ ಸಾಧನೆ ಮಾಡಿದರು.

ಫಲಿತಾಂಶಗಳು: ಪುರುಷರ 50 ಮೀ: ರಘು (ಯಾದಗಿರಿ)–1. ಪಾಯಿಂಟ್ಸ್: 290, ಮಲ್ಲಿಕಾರ್ಜುನ (ಯಾದಗಿರಿ)–2, ವಿಠ್ಠಲ್ ಪಿ (ಬೆಂಗಳೂರು)–3;

ಮಹಿಳೆಯರ 50 ಮೀ: ಶೋಭಾ ಎಲ್.ಡಿ (ಬೆಂಗಳೂರು)–1. ಪಾಯಿಂಟ್ಸ್: 265, ಪ್ರೇಮಾ ಯು (ಬೆಂಗಳೂರು)–2, ಭಾಗ್ಯಶ್ರೀ (ಯಾದಗಿರಿ)–3; 30 ಮೀ: ಪ್ರೇಮಾ ಯು (ಬೆಂಗಳೂರು)–1. ಪಾಯಿಂಟ್ಸ್: 273, ಶೋಭಾ ಎಲ್.ಡಿ (ಬೆಂಗಳೂರು)–2 ಭಾಗ್ಯಶ್ರೀ (ಯಾದಗಿರಿ)–3;

30 ಮೀ: ರಘು (ಯಾದಗಿರಿ)–1. ಪಾಯಿಂಟ್ಸ್: 297, ದೇವರಾಜ್ (ರಾಯಚೂರು)–2, ವಿಜಯ ಪಾಟೀಲ (ಬೆಂಗಳೂರು)–3.

ಶೂಟಿಂಗ್: ಪುರುಷರು: 10 ಮೀ ಏರ್ ಪಿಸ್ತೂಲ್: ಜೊನಾಥನ್ ಗವಿನ್ ಆ್ಯಂಟನಿ-1 (ಪಾಯಿಂಟ್ಸ್: 577), ಪವನ್ ರಾಜ್–2, ರಾಹುಲ್ ಕೆ-3; ಮಹಿಳೆಯರು: 10 ಮೀ ಏರ್ ಪಿಸ್ತೂಲ್: ಪ್ರಿಯಾ ಮುರಳೀಧರ್–1 (ಪಾಯಿಂಟ್ಸ್: 573), ಐಶ್ವರ್ಯಾ ಬಾಳೆಹೊಸೂರು–2, ಅವಂತಿಕಾ ಮಧು–3; ಮಿಶ್ರ ವಿಭಾಗ: ಪುರುಷರ 10 ಮೀ ಏರ್ ಪಿಸ್ತೂಲ್: ನಿಸರ್ಗ ಎಚ್.ಎಸ್, ಇಮ್ರೋಜ್ ಅಹಮ್ಮದ್–1. ಪಾಯಿಂಟ್ಸ್: 572, ಅವಂತಿಕಾ ಮಧು, ಡ್ಯಾರೆನ್ ಡಾನ್–2, ವ್ಯೋಮಿಕಾ ಕೃತಿ, ಸಾತ್ವಿಕ್ ಗುಪ್ತಾ–3; 10 ಮೀ ಏರ್ ಪಿಸ್ತೂಲ್: ಪುರುಷರ ತಂಡ ವಿಭಾಗ: ತುಷಾರ್ ಟಿ.ಆರ್, ಧ್ಯಾನ್ ಟಿ.ಎಂ, ನಿಶಾಂತ್ ಜಮದಗ್ನಿ–1, ಅಪೂರ್ವಾ ವಿ, ಸಾತ್ವಿಕ್ ಗುಪ್ತಾ, ಇಮ್ರೋಜ್–2, ರಾಹುಲ್, ರಕ್ಷಿತ್–3.

ಕೊಕ್ಕೊ ವಿಶ್ವಕಪ್: ಫೈನಲ್‌ಗೆ ಭಾರತ ತಂಡಗಳು

ಭಾರತ (ನೀಲಿ ಪೋಷಾಕು) ಮತ್ತು ದಕ್ಷಿಣ ಆಫ್ರಿಕಾ ತಂಡಗಳ ನಡುವೆ ಮಹಿಳಾ ಸೆಮಿಫೈನಲ್ ಪಂದ್ಯದ ದೃಶ್ಯ

ನವದೆಹಲಿ (ಪಿಟಿಐ): ನಿರೀಕ್ಷೆಯಂತೆ ಗೆಲುವಿನ ನಾಗಲೋಟ ಮುಂದುವರಿಸಿರುವ ಆತಿಥೇಯ ಭಾರತದ ಪುರುಷರ ಮತ್ತು ಮಹಿಳೆಯರ ತಂಡಗಳು ಇಲ್ಲಿ ನಡೆಯುತ್ತಿರುವ ಕೊಕ್ಕೊ ವಿಶ್ವಕಪ್ ಟೂರ್ನಿಯಲ್ಲಿ ಫೈನಲ್ ಪ್ರವೇಶಿಸಿವೆ.

ನವದೆಹಲಿಯ ಇಂದಿರಾ ಗಾಂಧಿ ಒಳಾಂಗಣ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಸೆಮಿಫೈನಲ್‌ನಲ್ಲಿ ಪುರುಷರ ತಂಡವು 62–42ರಿಂದ ದಕ್ಷಿಣ ಆಫ್ರಿಕಾ ತಂಡವನ್ನು ಮಣಿಸಿತು. ಫೈನಲ್‌ನಲ್ಲಿ ನೇಪಾಳ ತಂಡವನ್ನು ಎದುರಿಸಲಿದೆ. ಮತ್ತೊಂದು ಸೆಮಿಫೈನಲ್‌ನಲ್ಲಿ ನೇಪಾಳ ತಂಡವು 72–20ರಿಂದ ಇರಾನ್ ತಂಡವನ್ನು ಸೋಲಿಸಿತು.

ಮಹಿಳೆಯರ ತಂಡವು 66–16ರಿಂದ ದಕ್ಷಿಣ ಆಫ್ರಿಕಾ ತಂಡವನ್ನು ಸೋಲಿಸಿತು. ಫೈನಲ್‌ನಲ್ಲಿ ನೇಪಾಳ ತಂಡವನ್ನು ಎದುರಿಸಲಿದೆ. ಮತ್ತೊಂದು ನಾಲ್ಕರ ಘಟ್ಟದ ಪಂದ್ಯದಲ್ಲಿ ನೇಪಾಳ 89–18ರಿಂದ ಉಗಾಂಡ ತಂಡವನ್ನು ಮಣಿಸಿತು.

ಈ ಮೊದಲ ವಿಶ್ವಕಪ್‌ನ ಫೈನಲ್ ಪಂದ್ಯಗಳು ಭಾನುವಾರ ನಡೆಯಲಿವೆ.